
ಶನಿವಾರ, ಜನವರಿ 27, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 27 | ಪುಟ 24
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಸಂವಿಧಾನದ
ನೆರಳಿನಲ್ಲಿ
ಆತ್ಮಗೌರವದ ಬದುಕು
ಕಟ್ಟಿಕೊಳ್ಳುತ್ತ...



ಒಳ ಪುಟಗಳು



ಚಿನಕುರಳಿ

ಪ್ರಕಾಶ್ ಶೆಟ್ಟಿ



ಹೊರಬಿತ್ತು ನಿಗಮ–ಮಂಡಳಿಯ ಮೊದಲ ಕಂತು • 2 ವರ್ಷವಷ್ಟೇ ಅವಕಾಶ

34 ಮಂದಿಗೆ ಸಂಪುಟ 'ಸಿರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ನಾಯಕರ ಮಧ್ಯೆ 'ಸಂಘರ್ಷ'ಕ್ಕೆ ಕಾರಣವಾಗಿದ್ದ ನಿಗಮ–ಮಂಡಳಿಗಳ ಅಧ್ಯಕ್ಷ ಸ್ಥಾನದ ಪಟ್ಟಿ ಕೊನೆಗೂ ಮುಕ್ತಿ ಕಂಡಿದ್ದು, 34 ಶಾಸಕರಿಗೆ ಅಧ್ಯಕ್ಷ ಸ್ಥಾನದ ಜತೆಗೆ ಸಂಪುಟ ದರ್ಜೆಯ ಸಚಿವರಿಗೆ ನೀಡುವ ಸ್ಥಾನ ಹಾಗೂ ಸೌಲಭ್ಯಗಳನ್ನು ನೀಡಲಾಗಿದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಸರ್ಕಾರಿ ರಜಾದಿನವಾದ ಶುಕ್ರವಾರ (ಜ.26) ಈ ಕುರಿತ ಆದೇಶ ಹೊರಡಿಸಿದೆ. ಅಧ್ಯಕ್ಷರ ಕಾರ್ಯನಿರ್ವಹಣೆಯ ಆದೇಶ ಹೊರಡಿಸುವಂತೆ ನಿಗಮ–ಮಂಡಳಿಗಳಿಗೆ ಸಂಬಂಧಿಸಿದ ಇಲಾಖೆಗಳಿಗೆ ಸೂಚಿಸಲಾಗಿದೆ.

ಪಟ್ಟಿ ಹೊರಬಿದ್ದ ಬೆನ್ನಲ್ಲೇ, ಇಬ್ಬರು ಶಾಸಕರು ಅಸಮಾಧಾನ ಹೊರಹಾಕಿದ್ದಾರೆ. ನಿಗಮ–ಮಂಡಳಿ ಒಪ್ಪಿಕೊಂಡವರಿಗೆ 16ನೇ ವಿಧಾನಸಭೆ ಅವಧಿಯಲ್ಲಿ ಸಚಿವಗಿರಿ ಸಿಗುವುದಿಲ್ಲ ಎಂದು ಹೇಳಲಾಗಿತ್ತು. ಹೀಗಾಗಿ, ಕೆಲವು ಶಾಸಕರು ತಮಗೆ ನೀಡಿದ 'ಸಚಿವಗರಿ'ಯನ್ನು ನಿರಾಕರಿಸುವ ಸಾಧ್ಯತೆಯೂ ಇದೆ ಎಂದು ಹೇಳಲಾಗುತ್ತಿದೆ.

ನಿಗಮ–ಮಂಡಳಿಯ ಅಧ್ಯಕ್ಷ ಹುದ್ದೆಯು ಮುಂದಿನ ಎರಡು ವರ್ಷ ಅಥವಾ ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತದೆ ಎಂದು ಆದೇಶ ಉಲ್ಲೇಖಿಸಿದೆ. ಅಂದರೆ, ಎರಡು ವರ್ಷದ ಬಳಿಕ ಸಂಪುಟ ಪುನಾರಚನೆ ಹಾಗೂ ನಿಗಮ–ಮಂಡಳಿಗಳಿಗೆ ಹೊಸದಾಗಿ ನೇಮಕ ಮಾಡುವ ಲೆಕ್ಕಾಚಾರವೂ ಇದರ ಹಿಂದಿದೆ ಎಂದೂ ಹೇಳಲಾಗುತ್ತಿದೆ.

ಸಚಿವ ಸ್ಥಾನವೇ ಬೇಕು ಎಂದು ಪಟ್ಟು ಹಿಡಿದಿದ್ದ ಹಲವು ಶಾಸಕರಿಗೆ ಅಧ್ಯಕ್ಷ ಹಾಗೂ ಸಚಿವರ ಸ್ಥಾನಮಾನ ನೀಡುವ ಮೂಲಕ 'ಓಲೈಕೆ'ಯ ಯತ್ನವನ್ನು ಕಾಂಗ್ರೆಸ್ ಮಾಡಿದೆ. ಅರಸೀಕೆರೆ ಶಾಸಕ ಕೆ.ಎಂ. ಶಿವಲಿಂಗೇಗೌಡ, ಮುದ್ದೇಬಿಹಾಳದ ಅಪ್ಪಾಜಿ ನಾಡಗೌಡ, ಭದ್ರಾವತಿಯ ಬಿ.ಕೆ.ಸಂಗಮೇಶ್ವರ, ಚಾಮರಾಜ ನಗರದ ಸಿ.ಪುಟ್ಟರಂಗಶೆಟ್ಟಿ, ಶಾಂತಿನಗರದ ಎನ್.ಎ.ಹ್ಯಾರಿಸ್, ಹೊಸದುರ್ಗದ ಬಿ.ಜಿ.ಗೋವಿಂದಪ್ಪ ಸೇರಿದಂತೆ ಹಲವರು ಸಚಿವ ಸ್ಥಾನದ ಬೇಡಿಕೆ ಇಟ್ಟಿದ್ದರು. ಇವರೆಲ್ಲರನ್ನೂ 'ಲಾಭದಾಯಕ'ವಾದ ಪ್ರಮುಖ ನಿಗಮ–ಮಂಡಳಿಗಳಿಗೆ ನೇಮಕ ಮಡಲಾಗಿದೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತ ಪಡೆದು ಅಧಿಕಾರಕ್ಕೆ ಬಂದಿತ್ತು. 135 ಸ್ಥಾನ ಗೆದ್ದು ಅಧಿಕಾರ ಹಿಡಿದಿದ್ದರಿಂದಾಗಿ, ಸಚಿವ ಸ್ಥಾನದ ಆಕಾಂಕ್ಷಿಗಳ ಪಟ್ಟಿ ದೊಡ್ಡದಿತ್ತು.

4ನೇ ಪುಟ ನೋಡಿ


ಬಿ.ಕೆ.ಸಂಗಮೇಶ್ವರ


ಸಿ.ಎಸ್‌.ನಾಡಗೌಡ


ಕನೀಜ್ ಫಾತಿಮಾ


ಎಂ.ರೂಪಕಲಾ

ಸುಬ್ಬಾರೆಡ್ಡಿ, ಸೈಲ್ ಅಸಮಾಧಾನ

ಬಾಗೇಪಲ್ಲಿ ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ಹಾಗೂ ಕಾರವಾರ ಶಾಸಕ ಸತೀಶ್ ಸೈಲ್ ತಮಗೆ ನೀಡಿದ ನಿಗಮಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಸುಬ್ಬಾರೆಡ್ಡಿ ಅವರಿಗೆ ಕರ್ನಾಟಕ ರಾಜ್ಯ ಬೀಜ ನಿಗಮ ಹಾಗೂ ಸೈಲ್ ಅವರಿಗೆ ಕರ್ನಾಟಕ ಮಾರ್ಕೆಟಿಂಗ್ ಕನ್ಸಲ್ಟೆಂಟ್ ಆ್ಯಂಡ್ ಏಜೆನ್ಸಿಸ್‌ನ ಅಧ್ಯಕ್ಷ ಸ್ಥಾನ ನೀಡಲಾಗಿತ್ತು.

ಯಾವ ಜಾತಿಗೆ ಎಷ್ಟು?	
ಲಿಂಗಾಯತ	09
ಒಕ್ಕಲಿಗ	07
ಎಸ್‌ಟಿ ನಾಯಕ	06
ಎಸ್‌ಸಿ	04
ಕುರುಬ	03
ಉಪ್ಪಾರ	01
ಈಡಿಗ	01
ಮೊಗವೀರ	01
ಮುಸ್ಲಿಂ	02

ಯತ್ನಾಳ ಒಡೆತನದ ಕಾರ್ಖಾನೆ: ಪರಿಸರ ನಿಯಮ ಉಲ್ಲಂಘನೆ ಆರೋಪ

ಕಾರ್ಖಾನೆ ಮುಚ್ಚಲು ನೋಟಿಸ್

• ಚಿರಂಜೀವಿ ಕುಲಕರ್ಣಿ

ಬೆಂಗಳೂರು: ಬಿಜೆಪಿ ಮುಖಂಡರ ಮಾಲೀಕತ್ವದ ಸಕ್ಕರೆ ಕಾರ್ಖಾನೆ ಒಂದು ವರ್ಷದಿಂದಲೂ ಪರಿಸರ ನಿಯಮಾವಳಿ ಉಲ್ಲಂಘನೆ ಮಾಡಿರುವುದು ಪತ್ತೆಯಾಗಿದ್ದು, ಕಾರ್ಖಾನೆ ಮುಚ್ಚುವಂತೆ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ನೋಟಿಸ್ ಜಾರಿಗೊಳಿಸಿದೆ.

ಅಲ್ಲದೇ ಕಾರ್ಖಾನೆಗಳ ನೋಂದಣಿಗೆ ಸಹಕರಿಸಿದ ಅಧಿಕಾರಿಗಳ ವಿರುದ್ಧವೂ ಕ್ರಿಮಿನಲ್ ಪ್ರಕರಣ ದಾಖಲಿಸಲು ಕೆಎಸ್‌ಪಿಸಿಬಿ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ. ಕಾರ್ಖಾನೆ ಪರಿಶೀಲನೆ ವೇಳೆ ಅವೈಜ್ಞಾನಿಕ ನಿರ್ವಹಣೆ ಸೇರಿದಂತೆ ಹಲವು ಗಂಭೀರ ಲೋಪಗಳು ಪತ್ತೆಯಾಗಿವೆ ಎಂದು ಮೂಲಗಳು ತಿಳಿಸಿವೆ.


ಯತ್ನಾಳ

2022ರ ನವೆಂಬರ್‌ನಲ್ಲಿ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ಮಾಲೀಕತ್ವದಲ್ಲಿ ಕಲಬುರಗಿಯ ಚಿಂಚೋಳಿಯಲ್ಲಿ ಸ್ಥಾಪಿಸಲು ಉದ್ದೇಶಿಸಿದ್ದ, ಸಿದ್ದಶ್ರೀ ಸೌಹಾರ್ದ ಸಹಕಾರ ಸಕ್ಕರೆ ಕಾರ್ಖಾನೆಗೆ ಮಂಡಳಿ ಅನುಮತಿ ನೀಡಿತ್ತು. ಈ ಕಾರ್ಖಾನೆಗೆ ಮಾಜಿ ಸಚಿವ ಹಾಗೂ ಬಿಜೆಪಿ ಮುಖಂಡ ಬಳ್ಳಾರಿಯ ಬಿ.ಶ್ರೀರಾಮುಲು ನಿರ್ದೇಶಕ.

ಕೆಎಸ್‌ಪಿಸಿಬಿಯು ಸಕ್ಕರೆ ಕಾರ್ಖಾನೆಗೆ ಕೆಲವು ಷರತ್ತು ವಿಧಿಸಿ ಅನುಮತಿ ನೀಡಿತ್ತು. ಆದರೆ, ಕಳೆದ ವರ್ಷ ಮಂಡಳಿ ಪ್ರಾದೇಶಿಕ ವಿಭಾಗದ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದಾಗ ಅನುಮತಿ ಪಡೆಯದೇ ಬಾಯ್ಲರ್ ಆರಂಭ, ಕಬ್ಬು ಅರೆಯುವಿಕೆ, ತ್ಯಾಜ್ಯ ಸಂಸ್ಕರಣಾ ಘಟಕವು ನಿರ್ಮಾಣ ಹಂತದಲ್ಲಿದ್ದರೂ ಅನುಮತಿ ಪಡೆಯದೇ ಡಿಸ್ಟಿಲರಿ ಘಟಕವನ್ನು ಸ್ಥಾಪಿಸಿದ್ದು ಕಂಡುಬಂದಿತ್ತು.

7ನೇ ಪುಟ ನೋಡಿ



ಸಮಾಜಮುಖಿ 'ವಿನಯ ಮಾರ್ಗ'

ಪ್ರಜಾವಾಣಿ

ಆತ್ಮತೃಪ್ತಿಗೆ ಸಮಾಜಸೇವೆ; ಅಭಿವೃದ್ಧಿಗೆ ರಾಜಕಾರಣ

ಇನ್‌ಸೈಟ್ಸ್ ಐಎಎಸ್ ಸಂಸ್ಥೆಯ ಸಂಸ್ಥಾಪಕ ಜಿ.ಬಿ. ವಿನಯಕುಮಾರ್ ಮೂಲತಃ ದಾವಣಗೆರೆ ಜಿಲ್ಲೆಯವರು. ಸಾವಿರಾರು ಯುವಕರ ಕನಸುಗಳ ಸಾಕಾರಕ್ಕೆ, ಗುರಿತಲುಪುವುದಕ್ಕೆ ನೆರವಾಗುತ್ತಿದ್ದಾರೆ. ಯುಪಿಎಸ್‌ಸಿ ಮತ್ತು ಕೆಪಿಎಸ್‌ಸಿ ಆಯೋಜಿಸುವ ಐಎಎಸ್, ಐಪಿಎಸ್, ಐಎಫ್‌ಎಸ್, ಕೆಎಎಸ್ ಹಾಗೂ ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಯುವಕರನ್ನು ಅಣಿಗೊಳಿಸುತ್ತ ಯಶಸ್ಸಿನ ಒಂದೊಂದೇ ಮೆಟ್ಟಿಲನ್ನು ಹತ್ತುವುದಕ್ಕೆ ಪ್ರೋತ್ಸಾಹ ನೀಡುತ್ತಿದ್ದಾರೆ. ಗ್ರಾಮೀಣ ಹಿನ್ನೆಲೆಯ, ಬಡತನದಲ್ಲಿ ಹುಟ್ಟಿ ಬೆಳೆದಿರುವ ಇವರು ಈಗ ರಾಜಕೀಯ ರಂಗವನ್ನೂ ಪ್ರವೇಶಿಸಿದ್ದು, ದಾವಣಗೆರೆ ರಾಜಕೀಯ ವಲಯದಲ್ಲಿ ಸಂಚಲನವನ್ನೇ ಮೂಡಿಸಿದ್ದಾರೆ. ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರಂತೆ ಪಾದಯಾತ್ರೆ ಮೂಲಕ ಜನರ ಹೃದಯದ ಹತ್ತಿರಕ್ಕೆ ಸಾಗುತ್ತಿರುವ ವಿನಯಕುಮಾರ್, ದಾವಣಗೆರೆ ಲೋಕಸಭೆ ಕ್ಷೇತ್ರದಿಂದ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸುವ ಆಕಾಂಕ್ಷೆ ಹೊಂದಿದ್ದಾರೆ. ಭವಿಷ್ಯದ ಕುರಿತ ತಮ್ಮ ಚಿಂತನೆ, ಆಲೋಚನೆ, ಮುಂದಿನ ಗುರಿಯ ಕುರಿತು ಈ ಸಂದರ್ಶನದಲ್ಲಿ ಮುಕ್ತವಾಗಿ ಹರಟಿದ್ದಾರೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

● ಸಮಾಜದ ಒಳಿತಿಗಾಗಿಯೇ ಇರುವ ಸಾಮಾಜಿಕ ಕಾರ್ಯದ ಬಗ್ಗೆ ಏನು ಹೇಳುತ್ತೀರಿ?

ಸಮಾಜಸೇವೆ ಮುಖ್ಯವಾಗಿ ಆತ್ಮತೃಪ್ತಿಗೆ ಸಂಬಂಧಿಸಿದ್ದು. ನಮ್ಮ ಬಳಿ ಇರುವುದನ್ನು ಸಮಾಜದ ಕಟ್ಟಕಡೆಯ ವ್ಯಕ್ತಿಗೆ ಮೀಸಲಿಡಬೇಕು. ಅದು ನಮ್ಮ ತಂದೆ– ತಾಯಿ ಹೇಳಿಕೊಟ್ಟಂತಹ ಸತ್ಯ. ಬಡವರ ಮಕ್ಕಳು ತರಬೇತಿಯಲ್ಲಿ ಉಚಿತ, ರಿಯಾಯಿತಿ ದರದ ಸೀಟ್ ಕೇಳಿದರೆ ಕೊಡಬೇಕು. ಸಮಾಜದಿಂದ ಪಡೆದಿದ್ದನ್ನೇ ಸಮಾಜಕ್ಕೆ ಕೊಡುವುದರಲ್ಲಿ ಅರ್ಥವಿದೆ. ನಾನು ನವೋದಯ ವಿದ್ಯಾಲಯದಲ್ಲಿ ಓದಿದವನು. ಸರ್ಕಾರಕ್ಕೆ ಜನರು ಕಟ್ಟಿದ ತೆರಿಗೆ ಹಣದಲ್ಲಿ ನಾನೂ ಉಚಿತ ಶಿಕ್ಷಣ ಪಡೆದಿದ್ದೇನೆ. ಅದನ್ನು ಸಮಾಜಕ್ಕೆ ವಾಪಸ್ ನೀಡಬೇಕು ಎಂಬುದು ನನ್ನ ತತ್ವ. ಪ್ರತಿಯೊಬ್ಬರಿಗೂ ಸಾಮಾಜಿಕ ಜವಾಬ್ದಾರಿ ಇರಬೇಕು ಎಂಬುದು ನನ್ನ ನಂಬಿಕೆ. ಸಮಾಜದ ಬಾಂಧವ್ಯ ಗಟ್ಟಿಯಾಗಬೇಕೆಂದರೆ ನಮ್ಮಲ್ಲಿ ಬೇರೊಬ್ಬರಿಗೆ ಕೊಡುವ ಮನಸ್ಸಿರಬೇಕು. ಜಮ್ಮು ಮತ್ತು ಕಾಶ್ಮೀರದಲ್ಲಿ ತರಬೇತಿ ಸಂಸ್ಥೆ ತೆರೆದು ಉಚಿತ ಅವಕಾಶ ನೀಡಿದ್ದೇನೆ.

● ನಿಮ್ಮ ಸಂಸ್ಥೆಯ ಬಗ್ಗೆ ಜಮ್ಮು ಮತ್ತು ಕಾಶ್ಮೀರದಲ್ಲಿ ಜನರ ಪ್ರತಿಕ್ರಿಯೆ ಹೇಗಿದೆ?

ಜಮ್ಮು ಮತ್ತು ಕಾಶ್ಮೀರದಲ್ಲಿ ಅತ್ಯಂತ ಸಕಾರಾತ್ಮಕ ಪ್ರತಿಕ್ರಿಯೆ ದೊರೆತಿದೆ. ಅಲ್ಲಿನ ಹೆಣ್ಣುಮಕ್ಕಳಿಗೂ, ಸೈನಿಕರ ಮಕ್ಕಳಿಗೂ ಉಚಿತ ತರಬೇತಿ ಸಿಗುತ್ತಿದೆ. ಕಳೆದ ವರ್ಷದ ಕೆಎಎಸ್(ಕಾಶ್ಮೀರ)ಫಲಿತಾಂಶದಲ್ಲಿ ಟಾಪ್ 10ರಲ್ಲಿ ಅಲ್ಲಿನವರು ಸ್ಥಾನ ಪಡೆಯುವಂತಾಗಿದೆ. ನಾನು ಅಲ್ಲೂ ಯುಪಿಎಸ್‌ಸಿ ತರಬೇತಿ ಪಡೆಯುತ್ತಿರುವವರ ವಲಯದಲ್ಲಿ ಹೆಸರು ಪಡೆದಿದ್ದೇನೆ. ಈಶಾನ್ಯದ ಮಣಿಪುರದಲ್ಲಿ 200 ಸ್ಪರ್ಧಾರ್ಥಿಗಳಿಗೆ ಉಚಿತ ಕೋಚಿಂಗ್ ನೀಡಲಾಗುತ್ತಿದೆ. ಅಲ್ಲಿಂದಲೂ ನೂರಾರು ಯುವಕರು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ಸು ಗಳಿಸುವಂತಾಗಿದೆ.

● ನಿಮ್ಮ ಬಾಲ್ಯ, ಶಿಕ್ಷಣದ ಬಗ್ಗೆ?

ನಾನು ಬಡತನದ ಹಿನ್ನೆಲೆಯ ಕುಟುಂಬದಿಂದ ಬಂದವನು. ನವೋದಯ ವಿದ್ಯಾಲಯದಲ್ಲಿ ಪ್ರವೇಶ ದೊರೆಯಿತು. ಚಹಾ, ಹಾಲಿನ ಸೌಲಭ್ಯ ನಮಗೆ ಇರಲಿಲ್ಲ. ಹಾಗಂತ ಸ್ವೇಚ್ಛೆಗೆ ಅವಕಾಶವಿತ್ತು. ಓದುವುದಕ್ಕೂ, ಓಡಾಡುವುದಕ್ಕೂ ಯಾವುದೇ ರೀತಿಯ ನಿರ್ಬಂಧ ಇರಲಿಲ್ಲ. ಸ್ವಾತಂತ್ರ್ಯವನ್ನು ಸಾಕಷ್ಟು ಆಸ್ವಾದಿಸಿದ್ದೇನೆ. ನವೋದಯ ಶಾಲೆಯಲ್ಲೂ ಓದುವ ಹವ್ಯಾಸಕ್ಕೆ ಪ್ರೋತ್ಸಾಹ ದೊರೆಯಿತು.

● ಇನ್‌ಸೈಟ್ಸ್ ಐಎಎಸ್ ಅಕಾಡೆಮಿ ಆರಂಭ ಹೇಗಾಯಿತು?

ನಾನು ಜಿಲ್ಲಾಧಿಕಾರಿ ಆಗಬೇಕು ಎಂಬ ಗುರಿ ಇಟ್ಟುಕೊಂಡಿದ್ದೆ. ಕಥೆ, ಕಾದಂಬರಿ, ದೇಶ ವಿದೇಶಗಳ ಲೇಖಕರ ಕೃತಿಗಳನ್ನು ನಮ್ಮ ತಂದೆಯವರ ನೆರವಿನಿಂದ ಓದಿದೆ. 8ನೇ ತರಗತಿಯಲ್ಲಿದ್ದಾಗಲೇ ನಾನು ಗುಂಟರ್ ಗ್ರಾಸ್ ರಚಿಸಿದ 'ಟಿನ್ ಡ್ರಂ' ಪುಸ್ತಕ ಓದಿದ್ದೆ. ಅಂಥ ಕೃತಿಗಳನ್ನು ಓದಿದ್ದರಿಂದ ಇನ್ನೊಬ್ಬರಿಗೆ ಕೈಯೆತ್ತಿ ಕೊಡುವ ಮನೋಭಾವ ಮೂಡಿತು. ಯುಪಿಎಸ್‌ಸಿ ಪರೀಕ್ಷೆಯಲ್ಲಿ ಕೇವಲ ಎರಡು ಅಂಕಗಳ ಅಂತರದಲ್ಲಿ ಐಎಎಸ್ ಹುದ್ದೆ ಕೈತಪ್ಪಿತು. ಮುಂದೆ ಸ್ಪರ್ಧಾತ್ಮಕ ಪರೀಕ್ಷೆ ಬರೆದು ಮೈಸೂರು ಜಿಲ್ಲೆಯಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ಆಗಿ ಎರಡು ವರ್ಷ ಸೇವೆ ಸಲ್ಲಿಸಿದ್ದೆ. ಮನೆಗಳ ಮಂಜೂರಾತಿ, ಪರಿಶೀಲನೆ ಕುರಿತು ಸುಧಾರಣೆ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ಜಿಪಿಎಸ್ ಟ್ಯಾಗಿಂಗ್‌ಗೆ ಸಲಹೆ ನೀಡಿದ್ದೆ. ಗ್ರಾಮೀಣ ಪ್ರದೇಶದವರಿಗೆ ಸಮರ್ಪಕವಾಗಿ ನೀರು ಪೂರೈಸಿದರೆ ಮಾತ್ರ ಜನರು ಶೌಚಾಲಯಗಳನ್ನು ಬಳಸುತ್ತಾರೆ. ಸುಮ್ಮಸುಮ್ಮನೆ ಶೌಚಾಲಯ ಕಟ್ಟಿಸುವುದರಲ್ಲಿ ಅರ್ಥವಿಲ್ಲ ಎಂಬ ಸಲಹೆಯನ್ನೂ ನೀಡಿದ್ದೆ. ಪಿಡಿಒ ಆಗಿದ್ದಾಗಿನ ಅನುಭವ ನನಗೆ ಯುಪಿಎಸ್‌ಸಿ ಸಂದರ್ಶನದಲ್ಲಿ ನೆರವಿಗೆ ಬಂತು. ಆದರೆ, ಮುಖ್ಯ ಪರೀಕ್ಷೆಯಲ್ಲಿ ಸ್ವಲ್ಪ ಕಡಿಮೆ ಅಂಕ ಬಂದಿದ್ದು ಅಡ್ಡಿಯಾಯಿತು. ಐಎಎಸ್ ಅಧಿಕಾರಿ ಆಗದಿದ್ದರೂ ಪರವಾಗಿಲ್ಲ. ಐಎಎಸ್ ಅಧಿಕಾರಿ ಆಗುವವರಿಗೆ ಸೂಕ್ತ ತರಬೇತಿ ಕೊಡಬೇಕು ಎಂದು ತೀರ್ಮಾನಿಸಿ ಇನ್‌ಸೈಟ್ಸ್ ಐಎಎಸ್ ಅಕಾಡೆಮಿ ಆರಂಭಿಸಿದೆ.

● ಸಾಹಿತ್ಯ ಮತ್ತಿತರ ಕೃತಿಗಳ ಓದು ಸ್ಪರ್ಧಾತ್ಮಕ ಪರೀಕ್ಷೆಗೆ ಅಣಿಯಾಗುವವರಿಗೆ ಎಷ್ಟರ ಮಟ್ಟಿಗೆ ನೆರವಾಗುತ್ತವೆ?

ಸ್ಪರ್ಧಾತ್ಮಕ ಪರೀಕ್ಷೆಯನ್ನು ಆಯೋಜಿಸುವ ವಿಧಾನ ಈಗೀಗ ಬದಲಾಗಿದೆ. ಸಾಮಾನ್ಯ ಜ್ಞಾನ, ಪುಸ್ತಕದ ಜ್ಞಾನಕ್ಕೂ ಹೊರತಾಗಿ ವಿಶ್ಲೇಷಣಾತ್ಮಕ ಮತ್ತು ವಿಮರ್ಶಾತ್ಮಕ ದೃಷ್ಟಿಕೋನ ಮತ್ತು ವಿಚಾರಧಾರೆಯನ್ನು ಅವಲಂಬಿಸಿದೆ. ಜೀವನದ ಅನುಭವ, ಯೋಚನಾ ಲಹರಿ, ಅನಿಶ್ಚಿತತೆಯನ್ನು ಎದುರಿಸುವ ಛಾತಿ ಹೊಂದಿರುವುದೂ ಮುಖ್ಯ ವೈಫಲ್ಯವನ್ನು ಎದುರಿಸಲು ಧೈರ್ಯ ಮುಖ್ಯ. ಸಕಾರಾತ್ಮಕ ಚಿಂತನೆ ಅಗತ್ಯ. ಇಂದಿನ ಶಿಕ್ಷಣವು ವಿದ್ಯಾರ್ಥಿಯನ್ನು ಚಿಂತನೆಗೆ ಹಚ್ಚುತ್ತಿಲ್ಲ. ಅಂಕಗಳ ಹಿಂದೆ ಓಡುವುದನ್ನು ಮಾತ್ರ ಕಲಿಸುತ್ತಿದೆ. ಪದವಿಪೂರ್ವ ಶಿಕ್ಷಣ ಹಂತದಲ್ಲಿನ ವಿಜ್ಞಾನ ವಿಷಯದ ಕಲಿಕೆ ಐಐಟಿ, ನೀಟ್, ಸಿಇಟಿ ಪರೀಕ್ಷೆಗಳ ಹಿಂದೆ ಓಡುವುದನ್ನೇ ಕಲಿಸುತ್ತಿದೆ. ಜೀವನವನ್ನು ಎದುರಿಸುವುದನ್ನು ಕಲಿಸುತ್ತಿಲ್ಲ. ಪ್ರಾಥಮಿಕ, ಪ್ರೌಢಶಿಕ್ಷಣದ ಹಂತದಲ್ಲೂ ನೈತಿಕತೆಯನ್ನು ಕಲಿಸಲಾಗುತ್ತಿಲ್ಲ. ಇಂಥ ಎಲ್ಲ ನ್ಯೂನತೆಗಳನ್ನು ಮೀರಿ ಚಿಂತಿಸಬಲ್ಲ ಮನಸ್ಥಿತಿಯನ್ನು ಸಾಹಿತ್ಯದ ಓದಿನಿಂದ ಪಡೆಯಬಹುದು.

● ಅಭಿವೃದ್ಧಿಗೆ ಸಂಬಂಧಿಸಿದಂತೆ ನಿಮ್ಮ ವ್ಯಾಖ್ಯಾನ?

ಅಭಿವೃದ್ಧಿ ಅಂದರೆ ರಸ್ತೆ, ಸೇತುವೆ, ಕಟ್ಟಡ ಅಲ್ಲ. ಸ್ಮಾರ್ಟ್ ಸಿಟಿ ಅಲ್ಲ. ಪ್ರತಿ ವ್ಯಕ್ತಿಯೂ ಸ್ವಂತ ಕಾಲ ಮೇಲೆ ನಿಲ್ಲಬೇಕು. ಅದಕ್ಕೆ ಸಮರ್ಪಕ ಉದ್ಯೋಗ ಬೇಕು. ಅಂಥ ಉದ್ಯೋಗ ಸೃಷ್ಟಿಗೆ ಸಂಸ್ಥೆಗಳನ್ನು ಹುಟ್ಟುಹಾಕುವುದು ಅಗತ್ಯ. ಶಿಕ್ಷಣ ಮತ್ತು ಉದ್ಯೋಗಕ್ಕೆ ಆದ್ಯತೆ ದೊರೆಯಬೇಕು. ಹರಪನಹಳ್ಳಿಯಂಥ ಊರ ಬಳಿ ಐಐಟಿ ಸಂಸ್ಥೆ ಬಂದರೆ ಸುತ್ತಮುತ್ತಲೂ ಪೂರಕ ಸಂಸ್ಥೆಗಳು ತಲೆ ಎತ್ತುತ್ತವೆ. ಸಮಗ್ರ ಕ್ರೀಡಾ ಸಂಕೀರ್ಣ ತಲೆ ಎತ್ತಿದರೆ ಅಕ್ಕಪಕ್ಕದಲ್ಲಿ ಕ್ರೀಡಾ ಪರಿಕರಗಳ ಪೂರೈಕೆದಾರರು ಹುಟ್ಟಿಕೊಳ್ಳುತ್ತಾರೆ. ಅದರಿಂದ ಉದ್ಯೋಗ ಸೃಷ್ಟಿ ಆಗುತ್ತದೆ. ದಾವಣಗೆರೆಯಲ್ಲಿ ಅಂಥ ಪ್ರಯತ್ನಗಳೇ ನಡೆದಿಲ್ಲ. ಗ್ರಾಮೀಣ ಮಟ್ಟದಲ್ಲಿ ಸಮಗ್ರ ಶಿಕ್ಷಣ ಸಿಗುವಂತಾಗಬೇಕು. ಕೌಶಲ ಇದ್ದಲ್ಲಿ ಕೈಗಾರಿಕೆ ತಾನೇ ಹುಡುಕಿಕೊಂಡು ಬರುತ್ತದೆ. ಅನೇಕ ಸಂಸ್ಥೆಗಳು ಇದ್ದಿದ್ದರಿಂದಲೇ ಬೆಂಗಳೂರನ್ನು ಕೈಗಾರಿಕೆಗಳು ಹುಡುಕಿಕೊಂಡು ಬಂದವು. ಅಂಥ ಕೌಶಲ ಅಭಿವೃದ್ಧಿ ಆಗಬೇಕು. ದಾವಣಗೆರೆಯ ಸಂಸ್ಥೆಗಳು ಕೂಡಾ ವಿಶ್ವದರ್ಜೆ ಮಟ್ಟಕ್ಕೆ ಬೆಳೆಯಬೇಕು.



● ನೀವು ರಾಜಕಾರಣವನ್ನು ಆಯ್ಕೆ ಮಾಡಿಕೊಂಡಿದ್ದು ಏಕೆ?

ರಾಜಕಾರಣ ಎಂದರೆ ಒಂದರ್ಥದಲ್ಲಿ ಒಂದು ರೀತಿಯ ಸಮಾಜಸೇವೆ. ರಾಜಕೀಯ ಎರಡು ಬಗೆಯಲ್ಲಿದೆ. ಒಂದು ಅಧಿಕಾರದ ರಾಜಕಾರಣ ಇನ್ನೊಂದು ಅಭಿವೃದ್ಧಿಪರ ರಾಜಕಾರಣ. ನಾನು ಅಭಿವೃದ್ಧಿ ಪರ ರಾಜಕಾರಣವನ್ನು ನಂಬಿದವನು. ಅಧಿಕಾರದಲ್ಲಿ ಇಲ್ಲದೆಯೇ ಸಶಸಕ್ತರಾಗಿ ಇರಬಹುದು. ಅದಕ್ಕೆ ಜನಬೆಂಬಲ ಮುಖ್ಯ. ಜನಬೆಂಬಲ ಇರುವವರ ಧ್ವನಿಯಲ್ಲಿ ವಿಶಿಷ್ಟವಾದ ಅಧಿಕಾರ ಇರುತ್ತದೆ. ಜನಬೆಂಬಲ ಇದ್ದರೆ ಶಾಸಕ, ಸಂಸದ ಆಗಬೇಕೆಂದೇನೂ ಇಲ್ಲ. ಸಂಸತ್ ಸದಸ್ಯ ಸ್ಥಾನವು ಶಿಸ್ತಿನ ಚೌಕಟ್ಟಿನಲ್ಲಿ ಕೆಲಸ ಮಾಡಲು ಇರುವ ಒಂದು ಸಾಧನ. ಜನರ ಮಧ್ಯೆ ಇರುವುದೇ ಒಂದು ರೀತಿಯ ಅಧಿಕಾರ. ಅವರ ಬೆಂಬಲ ಇಲ್ಲದಿದ್ದರೆ ಯಾವುದೇ ಅಧಿಕಾರ ಇದ್ದರೂ ಪ್ರಯೋಜನವಿಲ್ಲ. ರಾಜಕಾರಣವನ್ನು ನಾನು ಭಿನ್ನವಾಗಿ ನೋಡುತ್ತೇನೆ. ಅಂತೆಯೇ ಈಗ ಕ್ಷೇತ್ರವ್ಯಾಪಿ ಪಾದಯಾತ್ರೆ ಮಾಡುತ್ತಿದ್ದೇನೆ. ಜನರನ್ನು ಅರಿಯುವುದು, ಅವರ ಸಮಸ್ಯೆಯನ್ನು ಅರಿಯುವುದು ನನ್ನ ಈ ಯಾತ್ರೆಯ ಮೂಲ ಉದ್ದೇಶ. ಅದು ಟಿಕೆಟ್‌ಗೋಸ್ಕರ ಅಲ್ಲ. ಅದು ಜನರಿಗೆ ಹತ್ತಿರವಾಗುವ ಪರಿ.



● ನಿಮ್ಮ ರಾಜಕೀಯ ಕಾರ್ಯಕ್ಷೇತ್ರಕ್ಕೆ ದಾವಣಗೆರೆಯನ್ನೇ ಆಯ್ಕೆ ಮಾಡಿದ್ದು ಏಕೆ?

ಇದು ನನ್ನ ಸ್ವಂತ ಊರು. ಹುಟ್ಟಿ ಬೆಳೆದಿದ್ದೇನೆ ಎಂಬ ಭಾವನಾತ್ಮಕತೆ ಇದೆ. ಜೊತೆಗೆ ರಾಜ್ಯದ ಮಧ್ಯಭಾಗ. ದೊಡ್ಡದೊಡ್ಡ ಸಂಸ್ಥೆಗಳನ್ನು ಹುಟ್ಟುಹಾಕುವುದಕ್ಕೂ ಇಲ್ಲಿ ವಿಪುಲ ಅವಕಾಶಗಳಿವೆ. ಲಾಂಗ್‌ಟರ್ಮ್ ಆಲೋಚನೆ ಇಟ್ಟುಕೊಂಡು ಕೆಲಸ ಮಾಡಿದರೆ ಇದು ಸಾಧ್ಯ.

● ಅಧಿಕಾರಕ್ಕೆ ಜೋತು ಬೀಳುವ ಇತರ ರಾಜಕಾರಣಿಗಿಂತ ನೀವು ಹೇಗೆ ಭಿನ್ನ?

ನನ್ನ ದೃಷ್ಟಿಕೋನವೇ ಭಿನ್ನ. ಇಲ್ಲೇ ಹುಟ್ಟಿ ಬೆಳೆದವರಿಗೆ ಇಲ್ಲಿನ ರಾಜಕಾರಣ ದೈತ್ಯವಾದದ್ದು, ಅದನ್ನು ಮೀರಿ ಬೇರೆಯವರು ಬೆಳೆಯಲಾಗದು. ಟಿಕೆಟ್ ಪಡೆಯಲೂ ಆಗದು. ಅನುಮತಿಯೂ ಸಿಗದು ಎಂಬ ಭಾವನೆ ಸಾಮಾನ್ಯವಾಗಿದೆ. ಸಾಮಾನ್ಯರನ್ನು ಅಸಾಮಾನ್ಯರನ್ನಾಗಿ ಮಾಡುವುದು ಅಂದರೆ ಇನ್ನೊಬ್ಬರನ್ನು ಬೆಳೆಸುವುದೇ ರಾಜಕಾರಣದ ಉದ್ದೇಶವಾಗಬೇಕು. ನನ್ನ ಗುರಿಯೂ ಅದೇ. ರಾಜಕೀಯವು ವ್ಯಾಪಾರ, ವಹಿವಾಟಿಗೆ ಬಳಕೆ ಆಗಬಾರದು. ನಾನು ಅಂಥ ವ್ಯಾಪಾರವನ್ನೂ ಹೊಂದಿಲ್ಲ. ಅಂಥದ್ದಕ್ಕೆ ಬಳಸಿಕೊಳ್ಳಲೂ ಹೋಗಲ್ಲ. ನನ್ನ ಉದ್ದೇಶ ದಿನದ 24 ಗಂಟೆಯನ್ನೂ ಜನಸೇವೆಗೆ ಮೀಸಲಿಡಬೇಕೆಂಬುದಾಗಿದೆ. ಅಭಿವೃದ್ಧಿಯೇ ನನ್ನ ಚಿಂತನೆ.

● ಇತ್ತೀಚಿನ ದಿನಗಳಲ್ಲಿ ಪ್ರಭಾವಿತ ಜನಾದೇಶ ಬರುತ್ತಿದೆ. ಇಂಥ ಪ್ರಕ್ರಿಯೆ ಸಜ್ಜನ ರಾಜಕಾರಣಿಗಳಿಗೂ ಮಾರಕ ಆಗುವುದಿಲ್ಲವೇ?

ಇತ್ತೀಚಿನ ಒಂದೆರಡು ಚುನಾವಣೆಗಳ ಫಲಿತಾಂಶ ಈ ರೀತಿ ಬಂದಿದೆ. ಹೀಗಿದ್ದಾಗ ಯಾರೂ ಏನೂ ಮಾಡಲಾಗದು. ಜಗತ್ತಿನಲ್ಲಿ ಜನಪ್ರಿಯ ನೇತಾರರು ಇದ್ದಾರೆ. ಅವರ ಕಾರ್ಯತಂತ್ರವು ಜನರನ್ನು ಭಾವನಾತ್ಮಕವಾಗಿ ಪ್ರಭಾವಿಸುವುದು. ಅದಕ್ಕಾಗಿ ಕೆಲವು ಘಟನಾವಳಿಗಳನ್ನು ಉದಾಹರಣೆ ಸಮೇತ ಬಳಸಿಕೊಳ್ಳುವುದು ನಡೆಯುತ್ತದೆ. ಅದಕ್ಕೆ ಪುಲ್ವಾಮಾ, ರಾಮಮಂದಿರ ಮತ್ತಿತರ ಘಟನೆಗಳು ನಿದರ್ಶನ. ಆದರೂ, ಕೆಲವೆಡೆ ವ್ಯಕ್ತಿಗತ ವರ್ಚಸ್ಸಿಗೆ ಬೆಲೆ ಇದೆ. ಪ್ರಾದೇಶಿಕ ಪಕ್ಷಗಳು ಪ್ರಬಲವಾಗಿರುವ ತಮಿಳುನಾಡು, ಒಡಿಶಾ, ತೆಲಂಗಾಣಗಳಲ್ಲಿ ಜನರು ಯಾರ ಪ್ರಭಾವಕ್ಕೂ ಒಳಗಾಗದೇ ಮತ ಚಲಾಯಿಸಿದ್ದಾರೆ. ಈಗಲೂ ಜನರು ಅಂಥ ಮೋಡಿಗೆ ಒಳಗಾಗದಿರಲಿ ಎಂದುಕೊಂಡೇ ಪಾದಯಾತ್ರೆ ಹಮ್ಮಿಕೊಂಡಿದ್ದೇನೆ. ಮುಂಚಿತವಾಗಿಯೇ ಜನರ ಹತ್ತಿರ ಹೋಗಿ ಕೆಲಸ ಮಾಡಿದಲ್ಲಿ ಜನಬೆಂಬಲ ಅತ್ಯಗತ್ಯ. ಸ್ಥಳೀಯವಾದ ಪ್ರಬಲ ನಾಯಕತ್ವ ಇದ್ದರೆ ಪ್ರಭಾವಿತ ಜನಾದೇಶಕ್ಕೆ ಅವಕಾಶ ದೊರೆಯುವುದಿಲ್ಲ.

● ಪಕ್ಷ ರಾಜಕಾರಣಕ್ಕೆ ಮಹತ್ವ ಇದೆಯೇ? ಜನಾನುರಾಗಿ ವ್ಯಕ್ತಿತ್ವ ಹೊಂದಿದ್ದರೆ ಪಕ್ಷ ಅನಿವಾರ್ಯವೇ?

ವ್ಯಕ್ತಿಪೂಜೆಯಿಂದ ಪ್ರಜಾಪ್ರಭುತ್ವ ಮಂಕಾಗುತ್ತದೆ ಎಂದು ಡಾ.ಅಂಬೇಡ್ಕರ್ ಹೇಳಿದ್ದಾರೆ. ಏನೂ ಕೆಲಸ ಮಾಡದವರು ಪ್ರಭಾವಿಗಳ ಹೆಸರನ್ನು ಬಳಕೆ ಮಾಡಿಕೊಳ್ಳುತ್ತಾರೆ. ಗೆದ್ದರೆ ಪ್ರಭಾವಿಗಳು ಕಾರಣ. ಸೋತರೆ ಇವರೇ ಕಾರಣ ಎಂಬ ಮಾತುಗಳೂ ಕೇಳಿಬರುತ್ತವೆ. ಸ್ಥಳೀಯವಾಗಿಯೂ ಪ್ರತಿಭೆಗಳು ಇವೆ. ಜನರು ಸ್ಥಳೀಯ ಪ್ರತಿಭೆಗಳಿಗೆ ಮಹತ್ವ ನೀಡುತ್ತಾರೆ.

● ಕಾಂಗ್ರೆಸ್ ತತ್ವಾದರ್ಶಗಳು ನಿಮಗೆ ಹೊಂದಾಣಿಕೆ ಆಗುತ್ತದೆಯೇ?

ಹೌದು ಅದೊಂದು ಜಾತ್ಯತೀತ ಮತ್ತು ಪ್ರಜಾಪ್ರಭುತ್ವದ ತತ್ವದಲ್ಲಿ ಸಾಗುತ್ತಿರುವ ಪಕ್ಷ. ಸಮಾನತೆಯನ್ನು ಸಾರುವಂಥ ಈ ಪಕ್ಷದ ಸಿದ್ಧಾಂತ ನನಗೆ ಸಂಪೂರ್ಣ ಒಪ್ಪಿತ.

● ನಿಮಗೆ ಜನ ಯಾಕೆ ಮತ ಹಾಕಬೇಕು?

ಜನಸಾಮಾನ್ಯನೊಬ್ಬ ರಾಜಕೀಯವಾಗಿ ಬೆಳೆಯಬಲ್ಲ ಎಂಬುದನ್ನು ಜನರು ನನ್ನನ್ನು ಗೆಲ್ಲಿಸುವ ಮೂಲಕ ಸಾಬೀತುಪಡಿಸಬೇಕಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇಂಥ ಬೆಳವಣಿಗೆ ಕಂಡುಬರದಿದ್ದರೆ ಮತ್ತೆ ಅಧಿಕಾರವು ಉಳ್ಳವರ ಪಾಲಾಗುತ್ತದೆ. ಶ್ರೀಸಾಮಾನ್ಯನಿಗೆ ಕಟ್ಟಕಡೆಯ ವ್ಯಕ್ತಿಯ ಬಗ್ಗೆ ಸ್ಪಂದಿಸುವುದು ನನ್ನ ಗುಣ. ಪಕ್ಷಾತೀತವಾಗಿ ನೆರವು ನೀಡುವುದು ನನ್ನ ಗುರಿ. ದಾವಣಗೆರೆಯಲ್ಲಿ ಕಾಂಗ್ರೆಸ್‌ನಲ್ಲಿ ಹೊಸ ಆಕಾಂಕ್ಷಿಗಳೇ ಇರಲಿಲ್ಲ. ನಾನು ಬಂದ ಮೇಲೆ ಕಾಂಗ್ರೆಸ್‌ನಲ್ಲೂ, ಬಿಜೆಪಿಯಲ್ಲೂ ಆಕಾಂಕ್ಷಿಗಳು ಹುಟ್ಟಿಕೊಂಡಿದ್ದಾರೆ. ವಿನಯಕುಮಾರ್ ಬಂದ ಮೇಲೆ ಬೇರೆಯವರೂ ಬರುವಂತಾಯಿತು. ಜನಸಾಮಾನ್ಯನೂ ಇಂಥ ಕನಸು ಕಾಣಬಹುದು ಎಂಬುದಕ್ಕೆ ನಾನೇ ನಿದರ್ಶನ. ನಾನು ಸಂಸತ್ ಪ್ರವೇಶಿಸಿದರೆ ಗ್ರಾಮ ಪಂಚಾಯಿತಿ ಸದಸ್ಯರನ್ನೆಲ್ಲ ಕರೆದಯ್ದು ಅಲ್ಲಿನ ಕಲಾಪವನ್ನು ಅವಲೋಕಿಸುವಂತಾಗಬೇಕು. ಆಗ ಅವರ ದೃಷ್ಟಿಕೋನ ಮತ್ತು ಆತ್ಮವಿಶ್ವಾಸ ಬದಲಾಗುತ್ತದೆ. ಕಟ್ಟಕಡೆಯ ವ್ಯಕ್ತಿಯಲ್ಲೂ ಆತ್ಮವಿಶ್ವಾಸ ಮೂಡಿಸಬೇಕೆಂದೇ ನಾನು ರಾಜಕೀಯ ಪ್ರವೇಶಿಸಿದ್ದೇನೆ.

● ಯುವಜನರಿಗೆ, ಇಂದಿನ ಪೀಳಿಗೆಗೆ ನೀವು ಏನು ಹೇಳಲು ಬಯಸುತ್ತೀರಿ?

ಯುವಕರು ಗೌರವವನ್ನೂ, ವೇಗವನ್ನೂ, ಗುಣಮಟ್ಟವನ್ನೂ, ಅವಕಾಶವನ್ನೂ ನಿರೀಕ್ಷಿಸುತ್ತಾರೆ. ಅವರು ಮಹತ್ವಾಕಾಂಕ್ಷಿಗಳಾಗಿದ್ದಾರೆ. ಹಳ್ಳಿಗಳಲ್ಲಿರುವ, ಓದದೇ ಇರುವ ಯುವಕನೂ ಮಹಾತ್ವಾಕಾಂಕ್ಷಿಯಾಗಿದ್ದಾನೆ. ಅದು ಅವರಲ್ಲಿನ ಒಳ್ಳೆಯ ಗುಣ. ಸಮಾಜ ಅದಕ್ಕೆ ಸ್ಪಂದಿಸುವ ಮೂಲಕ ಶಿಕ್ಷಣ ಮತ್ತು ಅವಕಾಶಗಳ ಮೂಲಕ ಪ್ರೇರೇಪಿಸಬೇಕು. ಅದಕ್ಕೆ ಯಾವ ನಾಯಕ ಪೂರಕವಾದ ವಾತಾವರಣ ನಿರ್ಮಿಸುತ್ತಾನೋ ಅಂಥವರಿಗೆ ಮನ್ನಣೆ ಸಿಗಬೇಕು.

● ಭ್ರಷ್ಟಾಚಾರ ಮತ್ತು ಜಾತಿ ವ್ಯವಸ್ಥೆ ಮಾರಕ. ಈ ಬಗ್ಗೆ ನಿಮ್ಮ ಅನಿಸಿಕೆ?

ಸಾಮಾಜಿಕವಾಗಿ ಶ್ರೇಣೀಕೃತ ವ್ಯವಸ್ಥೆ ಸರಿಯಿಲ್ಲ. ಜನ ಅಂಥ ಮನಸ್ಥಿತಿಯಿಂದ ದೂರವಿರಬೇಕು. ಭ್ರಷ್ಟಾಚಾರವೂ ಸಮಾಜಕ್ಕೆ ಮಾರಕವಾದದ್ದು.



ಸಮಸ್ಯೆ ಅರಿಯಲು 'ವಿನಯ ನಡಿಗೆ ಹಳ್ಳಿಯ ಕಡೆಗೆ'

ದಾವಣಗೆರೆ ಜಿಲ್ಲೆಯ ಜಗಳೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಚಿಕ್ಕಉಜಿನಿ ಗಡಿಗ್ರಾಮದಿಂದ 2023 ಡಿಸೆಂಬರ್ 18ರಂದು ಆರಂಭವಾದ ವಿನಯ್‌ಕುಮಾರ್ ಅವರ 'ವಿನಯ ನಡಿಗೆ ಹಳ್ಳಿಯ ಕಡೆಗೆ' ಪಾದಯಾತ್ರೆ 2024ರ ಜನವರಿ 18ರವರೆಗೆ ನಡೆಯಿತು. 200ಕ್ಕೂ ಹೆಚ್ಚು ಹಳ್ಳಿಗಳ ವ್ಯಾಪ್ತಿಯಲ್ಲಿ ಅಂದಾಜು 650 ಕಿ.ಮೀ.ವರೆಗೆ ಪಾದಯಾತ್ರೆ ಮಾಡಿದ್ದು ಕ್ಷೇತ್ರದ ಜನರಲ್ಲಿ ಮಿಂಚಿನ ಸಂಚಾರ ಮೂಡಿಸಿದ್ದು ಗಮನಾರ್ಹ.

ಜಿಲ್ಲೆಯ ಜಗಳೂರು, ಹರಿಹರ, ಹೊನ್ನಾಳಿ, ಚನ್ನಗಿರಿ, ಮಾಯಕೊಂಡ ಮತ್ತು ದಾವಣಗೆರೆ ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲದೇ ವಿಜಯನಗರ ಜಿಲ್ಲೆಯ ಹರಪನಹಳ್ಳಿಯಲ್ಲೂ ಪಾದಯಾತ್ರೆ ಕೈಗೊಂಡಿದ್ದು ಯಶಸ್ಸು ಕಂಡಿದೆ. ಪಾದಯಾತ್ರೆ ಸಂದರ್ಭದಲ್ಲಿ ಯುವಕರೊಂದಿಗೆ ಸಂವಾದ, ಶಾಲಾ–ಕಾಲೇಜುಗಳಿಗೆ ಭೇಟಿ, ಅಲ್ಲಲ್ಲಿ ಯುವಕರು ಆಯೋಜಿಸಿದ್ದ ಕ್ರೀಡೆಗಳಲ್ಲಿ ಭಾಗಿ, ಕೆಲ ರೈತರ ಹೊಲಗಳಿಗೆ ಭೇಟಿ ನೀಡಿ ಅವರೊಂದಿಗೆ ಮಾತುಕತೆ, ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡುವ ಉದ್ದೇಶ ಈ ಪಾದಯಾತ್ರೆಯದಾಗಿತ್ತು. ಆ ಮೂಲಕ ಅದನ್ನು ಈಡೇರಿಸಿದ ತೃಪ್ತಿ ಇದೆ ಎನ್ನುತ್ತಾರೆ ವಿನಯ್‌ಕುಮಾರ್.

ಕುಣಿಬೆಳಕೆರೆ ಅಜ್ಜಿಗೆ ನೆರವು

ವಿನಯ್‌ಕುಮಾರ್ ಅವರು ಜ.9ರಂದು ಪಾದಯಾತ್ರೆ ನಡೆಸುತ್ತಿದ್ದ ಸಂದರ್ಭದಲ್ಲಿ ಅವರಿಗೆ ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ಕುಣಿಬೆಳಕೆರೆ ಗ್ರಾಮದ ವಯೋವೃದ್ಧೆ ಗಿರಿಜಮ್ಮ ಅವರು ತೆವಳಿಕೊಂಡು ಸಾಗುತ್ತಿದ್ದ ಹಾಗೂ ಬಡತನದಲ್ಲಿದ್ದ ವಿಷಯ ತಿಳಿದು ತಮ್ಮ ಸಹಾಯಕರೊಬ್ಬರನ್ನು ಅಜ್ಜಿಯ ಬಳಿಗೆ ಕಳಿಸಿ ಅವರಿಗೆ ಹಣಕಾಸಿನ ನೆರವು ನೀಡಿದ್ದೂ ಅಲ್ಲದೇ ಅವರಿಗೆ ಬೇಕಾದ ಎಲ್ಲಾ ಸಹಾಯ ನೀಡಿದ್ದು ಜನರ ಮೆಚ್ಚುಗೆ ಗಳಿಸಿದೆ.

2,000 ಅಂಗವಿಕಲರಿಗೆ ನೆರವು

ಪಾದಯಾತ್ರೆಗೂ ಮುನ್ನ ಮತ್ತು ಪಾದಯಾತ್ರೆ ವೇಳೆ 'ವಿನಯ ಮಾರ್ಗ' ಟ್ರಸ್ಟ್ ವತಿಯಿಂದ ವಿನಯ್‌ಕುಮಾರ್ ಅವರು ಜಿಲ್ಲೆಯ 2,000 ಅಂಗವಿಕಲರಿಗೆ ವೀಲ್‌ಚೇರ್, ವಾಕಿಂಗ್ ಸ್ಟಿಕ್, ವಾಕರ್, ಶ್ರವಣಯಂತ್ರಗಳನ್ನು ನೀಡಿದ್ದಾರೆ.

ಆಟೊ, ಗೂಡ್ಸ್, ಲಾರಿ ಚಾಲಕರಿಗೆ ಸಮವಸ್ತ್ರ ಮತ್ತು ಅವರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಿದ್ದಾರೆ. ಅಲ್ಲದೇ ಇಂತಹ ಚಾಲಕರ ಮಕ್ಕಳಿಗೆ ಮುಂದೆ ಸ್ಪರ್ಧಾತ್ಮಕ ತರಬೇತಿ ಬಯಸಿದಲ್ಲಿ ತಮ್ಮ ಇನ್‌ಸೈಟ್ಸ್ ಅಕಾಡೆಮಿಯಿಂದ ಸಹಾಯ ಹಸ್ತ ಚಾಚುವ ಭರವಸೆಯನ್ನೂ ನೀಡಿದ್ದಾರೆ. ಇಂತಹ ಹಲವು ಸಮಾಜಮುಖಿ ಕಾರ್ಯಕ್ರಮಗಳ ಮೂಲಕ ಕ್ಷೇತ್ರದ ಜನರ ಮೆಚ್ಚುಗೆಗೆ ಅವರು ಪಾತ್ರರಾಗಿದ್ದಾರೆ.



ಅಂಗವಿಕಲರಿಗೆ ವೀಲ್‌ಚೇರ್ ವಿತರಿಸಿದ ಜಿ.ಬಿ. ವಿನಯ್‌ಕುಮಾರ್

ವೈಚಾರಿಕತೆ, ಸಾಮಾಜಿಕ ಬದ್ಧತೆಯ 'ವಿನಯ'

ವಿನಯ್‌ಕುಮಾರ್ ಅವರದು ಮೃಧು ಮಾತು. ಆ ಮಾತಿನಲ್ಲೂ ಛಾಟಿ ಏಟು ಕೊಡುವಂತಹ ವೈಚಾರಿಕತೆ. ಅದರಲ್ಲೂ ತನ್ನ ವಿಚಾರಗಳಿಗೆ ಅಂಟಿಕೊಳ್ಳುವ ಬದ್ಧತೆ, ಸಮಾಜ ಬದಲಾಗಬೇಕು ಎನ್ನುವುದು ಅವರ ತುಡಿತ. ಅದಕ್ಕಾಗಿ ಯುವಕರು ಚೆನ್ನಾಗಿ ಕಲಿಯಬೇಕು, ಕಲಿತು ಸಮಾಜಮುಖಿಯಾಗಬೇಕು, ಆ ಮೂಲಕ ಅಬಿವೃದ್ಧಿ ಹೊಂದಬೇಕು ಎನ್ನುವ ಅವರ ಕಳಕಳಿ ನಿಜಕ್ಕೂ ಭಿನ್ನ, ವಿಭಿನ್ನ.

ಯಾವುದೂ ಏಕಾಏಕಿಯಾಗಿ ಬರುವುದಿಲ್ಲ ಎನ್ನುವ ಅವರ ಅನುಭವದ ಮಾತು ಇತರರಿಗೆ ಮಾದರಿ. ಒಬ್ಬ ವಿದ್ಯಾರ್ಥಿ ತನ್ನ ಮಾತೃಭಾಷೆಯಲ್ಲಿ ಶಿಕ್ಷಣವನ್ನು ಕಲಿಯುತ್ತಾನೆ. ಆದರೆ ಆತ ಉತ್ತಮವಾಗಿ ಓದಬೇಕಾದರೆ ಕೇವಲ ಕನ್ನಡವಷ್ಟೇ ಅಲ್ಲ, ಇಂಗ್ಲಿಷ್ ಭಾಷೆಯನ್ನು ಚೆನ್ನಾಗಿ ಕಲಿಯಬೇಕು. ಅದರ ಮೇಲೆ ಅವರು ಹಿಡಿತ ಹೊಂದಿರಬೇಕು ಎನ್ನುವುದು ಅವರ ಪ್ರಬಲವಾದ ನಂಬಿಕೆ. ವಿಜ್ಞಾನ, ಗಣಿತವನ್ನೂ ಚೆನ್ನಾಗಿ ಅರಿಯಬೇಕು ಎಂಬುದು ಇವರ ಆಸೆ. ಆದರೆ ಅವರು ಪಾದಯಾತ್ರೆ ನಡೆಸಿದ ಸಂದರ್ಭದಲ್ಲಿ ಶಾಲೆ ಕಾಲೇಜುಗಳಿಗೆ ಭೇಟಿ ನೀಡಿದ ಕಡೆಗೆಲ್ಲಾ ಈ ಮೂರು ವಿಷಯಗಳಲ್ಲಿ ವಿದ್ಯಾರ್ಥಿಗಳು ಹಿಂದೆ ಬಿದ್ದಿದ್ದಾರೆ ಎನ್ನುವುದು ಅವರ ನೋವು.

ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣದಲ್ಲಿ ಈ ಮೂರು ವಿಷಯದಲ್ಲಿ ತರಬೇತಿ ಪಡೆದ ಶಿಕ್ಷಕರನ್ನು ನೇಮಕ ಮಾಡಿಕೊಂಡು ಅವರಿಂದ ಶಿಕ್ಷಣ ಕೊಡಿಸಬೇಕು ಎನ್ನುವುದು ಅವರ ವಿಚಾರಗಳಲ್ಲೊಂದು.



ದಾವಣಗೆರೆಯ ಜಿಲ್ಲೆಯಾದ್ಯಂತ ಪಾದಯಾತ್ರೆ ಹೊರಟಿರುವುದು



ವೃದ್ಧರಿಗೆ ಅಗತ್ಯವಾದ ಪರಿಕರಗಳನ್ನು ಉಚಿತವಾಗಿ ನೀಡುತ್ತಿರುವುದು



ಶಾಲಾ ಮಕ್ಕಳೊಂದಿಗೆ ಬೆರೆತ ಸುಮಧರ ಕ್ಷಣಗಳು

ತರಬೇತುದಾರರಿಗೆ ಸಲಹೆ

ಅತ್ಯಂತ ಜನಪ್ರಿಯ ಮತ್ತು ಹೆಚ್ಚು ಬೇಡಿಕೆಯಿರುವ ದೈನಂದಿನ ಉತ್ತರ ಬರೆಯುವ ಅಭ್ಯಾಸ, ಕೋರ್ ಬ್ಯಾಚ್ (1-2016 ರ ರ‍್ಯಾಂಕ್ ಪಡೆಯಲಾಗಿದೆ) ಮತ್ತು ಮೆಂಟರ್‌ಶಿಪ್ ಉಪಕ್ರಮಗಳು ಕೋಚಿಂಗ್ ಸಂಸ್ಥೆಗಳು ಸ್ತಬ್ಧವಾಗಿದ್ದ ಸಮಯದಲ್ಲಿ ಮತ್ತು ಅದರ ವಿದ್ಯಾರ್ಥಿಗಳಿಗೆ ನೀಡಲು ಹೊಸದೇನೂ ಇಲ್ಲದ ಸಮಯದಲ್ಲಿ ವಿನಯ್‌ಕುಮಾರ್ ಅವರು ಅದರ ಪ್ರವರ್ತಕರಾದರು.

ತನ್ನಲ್ಲಿ ನಂಬಿಕೆಯಿರುವ ಆಕಾಂಕ್ಷಿಗಳಿಗೆ ಸರಿಯಾದ ಮತ್ತು ಪ್ರಾಮಾಣಿಕ ಮಾರ್ಗದರ್ಶನ ನೀಡುವುದರಲ್ಲಿ ಅವರು ಪರಿಣತಿ ಪಡೆದಿದ್ದಾರೆ. ಆಕಾಂಕ್ಷಿಗಳ ವೈಯಕ್ತಿಕ ಸಾಮರ್ಥ್ಯ ಮತ್ತು ದೌರ್ಬಲ್ಯಗಳ ಆಧಾರದ ಮೇಲೆ ಈ ಮಾರ್ಗದರ್ಶನವನ್ನು ಅವರು ನೀಡುತ್ತಾ ಬಂದಿರುವುದು ವಿಶೇಷ. ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವ ಅವರ ಸಾಮರ್ಥ್ಯ ವಿಭಿನ್ನವಾಗಿರುವುದು ಮತ್ತೊಂದು ವಿಶೇಷ.

ವಿದ್ಯಾರ್ಥಿಗಳ ಅಗತ್ಯತೆಗಳ ಬಗ್ಗೆ ಸೂಕ್ಷ್ಮತೆ, ವಿನಮ್ರತೆ, ಉತ್ಸಾಹಭರಿತ ಕಠಿಣ ಪರಿಶ್ರಮ, ಅವರ ಪ್ರಶಂಸನೀಯ ಗುಣಗಳಾಗಿವೆ. ಆಕಾಂಕ್ಷಿಗಳಿಗೆ ಮಾರ್ಗದರ್ಶನ ನೀಡುವುದರ ಹೊರತಾಗಿ, ಸಾಮಾನ್ಯ ಅಧ್ಯಯನ, ಪತ್ರಿಕೆಗಳ ಪ್ರಬಂಧಗಳು, ಸಮ ವ್ಯಕ್ತಿತ್ವ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳ ಅಂಕಗಳನ್ನು ಹೆಚ್ಚಿಸಲು ಸಹಾಯ ಮಾಡುವಲ್ಲಿ ಅವರು ಪರಿಣತರು.

ಜಿ.ಬಿ. ವಿನಯ್‌ಕುಮಾರ್ ಅವರ ನಾಯಕತ್ವದ ಒಳನೋಟ, ಐಎಎಸ್ ಆಕಾಂಕ್ಷಿಗಳ ಮಾನಸಿಕ ಆರೋಗ್ಯವನ್ನು ಖಚಿತಪಡಿಸಿಕೊಳ್ಳಲು ಮಾನಸಿಕ ಚಿಕಿತ್ಸಕ ಗುಣ ಮತ್ತು ಮೈಂಡ್‌ಸೆಟ್ ತರಬೇತುದಾರರನ್ನು ಹೊಂದಿರುವವರ ಪೈಕಿ ಅವರು ದೇಶದಲ್ಲಿ ಮೊದಲನೆಯವರಾಗಿ ಕಾಣಸಿಗುತ್ತಾರೆ.

ಐಎಎಸ್ ಶಾಖೆಗಳು ಎಲ್ಲೆಲ್ಲಿ ?

ಬೆಂಗಳೂರು, ಮೈಸೂರು, ದೆಹಲಿ, ಲಕ್ನೋ, ಶ್ರೀನಗರ, ಧಾರವಾಡ ಮತ್ತು ಹೈದರಾಬಾದ್‌ಗಳಲ್ಲಿ ಇನ್‌ಸೈಟ್ಸ್ ಐಎಎಸ್ ಅಕಾಡೆಮಿಯ ಶಾಖೆಗಳಿದ್ದು, ವಿನಯ್‌ಕುಮಾರ್ ಅವರ ಮಾರ್ಗದರ್ಶನದಲ್ಲಿ ಸಾವಿರಾರು ವಿದ್ಯಾರ್ಥಿಗಳು ಮಾರ್ಗದರ್ಶನ ಪಡೆಯುತ್ತಿದ್ದಾರೆ.

ಆಫ್‌ಲೈನ್ ವಿದ್ಯಾರ್ಥಿಗಳ ಹೊರತಾಗಿ ವಿನಯ್‌ಕುಮಾರ್ ಅವರು ತಮ್ಮ ವೆಬ್‌ಸೈಟ್, ಟೆಲಿಗ್ರಾಂ ಮತ್ತು ಯೂಟ್ಯೂಬ್ ಚಾನೆಲ್‌ಗಳಲ್ಲಿ ನಿಯಮಿತ ಲೇಖನಗಳು, ವಿಡಿಯೊಗಳು, ವೆಬಿನಾರ್ ಗಳು ಮತ್ತು ಇನ್‌ಸ್ಟಾಕ್ಲಾಸ್‌ಗಳ ಮೂಲಕ ಲಕ್ಷಾಂತರ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ.

ತಮ್ಮ ತರಬೇತಿ ಸಂಸ್ಥೆ ಮೂಲಕ ಉತ್ತಮ ಆಡಳಿತವನ್ನು ಕೊಡುವ ವ್ಯಕ್ತಿಗಳನ್ನು ತಯಾರು ಮಾಡುವುದರ ಜೊತೆಗೆ ತಾನೇ ಒಬ್ಬ ಜನಪ್ರತಿನಿಧಿಯಾಗಿ ರೂಪುಗೊಂಡರೆ ಆ ಮೂಲಕ ಇನ್ನೂ ಉತ್ತಮ ಆಡಳಿತ ನೀಡಬಹುದು. ತನ್ನ ಕನಸುಗಳನ್ನು ಸಾಕಾರಗೊಳಿಸಲು ಏಕೆ ಪ್ರಯತ್ನ ಮಾಡಬಾರದು ಎಂಬ ಅನಿಸಿ ಅವರಲ್ಲಿ ರಾಜಕೀಯದ ಬೀಜ ಮೊಳಕೆಯೊಡೆಯಿತು.

ಬುದ್ಧಿಮತ್ತೆ, ವಿಚಾರಗಳು, ಕನಸುಗಳು, ಮತ್ತು ಅಭಿವೃದ್ಧಿಯ ಕಳಕಳಿಯ ಎಲ್ಲಾ ವಿಚಾರಗಳನ್ನು ಸಾರ್ವಜನಿಕವಾಗಿ ವ್ಯಕ್ತಪಡಿಸುವ ಮೂಲಕ ತನ್ನ ದಾರಿ ಯಾವುದು ಎನ್ನುವುದನ್ನು ಬಿಚ್ಚಿಡುತ್ತಾ ಬಂದರು. ಕೇವಲ ಐದಾರು ತಿಂಗಳಲ್ಲಿಯೇ ತನ್ನ ನಡೆ, ನುಡಿಗಳಿಂದ ವಿಚಾರಗಳಿಂದ ದೇಶದ ಗಮನ ಸೆಳೆಯುವಲ್ಲಿ, ಕಾಂಗ್ರೆಸ್ ಪಕ್ಷದ ಉನ್ನತಮಟ್ಟದ ನಾಯಕರ ಗಮನಸೆಳೆಯುವಲ್ಲಿ ವಿನಯ್‌ಕುಮಾರ್ ಯಶಸ್ವಿಯಾಗಿದ್ದಾರೆ. ತಮ್ಮ ಕುಲಗುರುಗಳಲ್ಲಿ ಮತ್ತು ನಾಡಿನ ದೊರೆಗಳ ಮೂಲಕ ತನಗೆ ಟಿಕೆಟ್ ಕೊಡಿ ಎಂದು ಮನವಿ ಮಾಡಿಕೊಂಡಿದ್ದಾರೆ. ಈ ನಿಟ್ಟಿನಲ್ಲಿ ಅವರು ಜಿಲ್ಲೆಯಾದ್ಯಂತ ಪಾದಯಾತ್ರೆ ಹಮ್ಮಿಕೊಂಡು, ಅದನ್ನು ಪೂರೈಸಿದ್ದಾರೆ.

ತಮ್ಮ ಸರಳ ನಡೆ ನುಡಿಯಿಂದ ಜನರ ಪ್ರೀತಿ ವಿಶ್ವಾಸ ಗಳಿಸುವತ್ತ ಹೆಜ್ಜೆ ಹಾಕುತ್ತಿರುವ ವಿನಯ್‌ಕುಮಾರ್ ಅವರು ತಾನು ಜನರ ಮಧ್ಯದಲ್ಲಿರಬೇಕು, ಅವರ ಕಷ್ಟಸುಖಗಳಲ್ಲಿ ಭಾಗಿಯಾಗಬೇಕು. ಜಿಲ್ಲೆಗೆ ಏನಾದರೂ ಕೊಡುಗೆ ಕೊಡಬೇಕು. ಐಐಟಿಯಂಥ ಸಂಸ್ಥೆಯನ್ನು ಸ್ಥಾಪನೆ ಮಾಡಬೇಕು. ಕ್ರೀಡಾ ಅಕಾಡೆಮಿ, ಹೊಸ ಕೈಗಾರಿಕೆಗಳ ಸ್ಥಾಪನೆಯಂತಹ ಕನಸುಗಳನ್ನು ಅವರು ಕಂಡಿದ್ದು, ಇವುಗಳನ್ನು ಸಾಕಾರ ಮಾಡುವ ಚಿಂತನೆಯಲ್ಲಿ ಮಂಥನದಲ್ಲಿ ತೊಡಗಿಸಿಕೊಂಡಿದ್ದಾರೆ.

ಬಾಲ್ಯ, ಶಿಕ್ಷಣ

ಜಿ.ಬಿ. ವಿನಯ್‌ಕುಮಾರ್ ಅವರು ದಾವಣಗೆರೆ ಸಮೀಪದ ಕಕ್ಕರಗೊಳ್ಳ ಗ್ರಾಮದವರು. ಚಿತ್ರದುರ್ಗದ ಜವಾಹರ್ ನವೋದಯ ವಿದ್ಯಾಲಯದಲ್ಲಿ ಶಿಕ್ಷಣವನ್ನು ಪಡೆದಿರುವ ಅವರು, ಜೆನೆಟಿಕ್ಸ್‌ನಲ್ಲಿ ಪದವಿ ಪೂರ್ಣಗೊಳಿಸಿದ್ದಾರೆ. ಮೈಸೂರಿನಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ(PDO)ಯಾಗಿ ಎರಡು ವರ್ಷ ಸೇವೆ ಸಲ್ಲಿಸಿದ್ದಾರೆ.

ಈ ಅವಧಿಯಲ್ಲಿ ಕೆಲಸ ಮಾಡುತ್ತಿದ್ದಾಗ ತಾವು ಗಳಿಸಿದ ವಿದ್ಯೆ ಮತ್ತು ಜ್ಞಾನವನ್ನು ಜನರಿಗೆ ಹಂಚಬೇಕೆಂಬ ತೀರ್ಮಾನಕ್ಕೆ ಬಂದರು. ಈ ಕಾರಣಕ್ಕಾಗಿ ಅವರು ಪಿಡಿಒ ಕೆಲಸಕ್ಕೆ ರಾಜೀನಾಮೆ ನೀಡಿದರು. ಅತಿ ಕಡಿಮೆ ಅಂಕಗಳಿಂದ ಐಎಎಸ್ ಪರೀಕ್ಷೆ ಪಾಸಾಗುವುದನ್ನು ತಪ್ಪಿಸಿಕೊಂಡರು. ಹಾಗಂತ ಅವರು ಸುಮ್ಮನೇ ಕೂರಲಿಲ್ಲ.

ಐಎಎಸ್ ಆಕಾಂಕ್ಷಿಗಳಿಗೆ ಮಾರ್ಗದರ್ಶನ ನೀಡಲು ತಮ್ಮ ಆನ್‌ಲೈನ್ ಉಪಕ್ರಮಗಳನ್ನು ಆರಂಭಿಸಿದರು. ಈ ಆನ್‌ಲೈನ್ ಉಪಕ್ರಮವೇ ಇಂದು www.insightsonindia.com ಯುಪಿಎಸ್‌ಸಿ ತಯಾರಿಗಾಗಿ ಭಾರತದ ಪ್ರಮುಖ ವೆಬ್‌ಸೈಟ್ ಆಗಿ ಇಂದು ಹೊರಹೊಮ್ಮಿದೆ.

ಪಾದಯಾತ್ರೆಗೆ ರಾಹುಲ್ ಗಾಂಧಿ ಪ್ರೇರಣೆ

ಹಲವು ಸಾಧನೆ ಮಾಡಿದ ಈ ಯುವನಾಯಕನಿಗೆ ಪಾದಯಾತ್ರೆ ಮಾಡಬೇಕೆಂದು ಪ್ರೇರಣೆ ನೀಡಿದ್ದು, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಕೈಗೊಂಡಿದ್ದ 'ಭಾರತ್ ಜೋಡೋ' ಯಾತ್ರೆ.

ಕಳೆದ ವಿಧಾನಸಭೆ ಚುನಾವಣೆಯಲ್ಲಿ ತಮ್ಮ ವಿಶೇಷ ಮಾತುಗಾರಿಕೆ ಹಾಗೂ ಸಾಧನೆಗಳಿಂದ ಶಾಸಕರಾಗಿ ಆಯ್ಕೆಯಾದ ಪ್ರದೀಪ್ ಈಶ್ವರ್ ಕೂಡಾ ಪ್ರೇರಣೆ ಎನ್ನುವ ಅವರು, ತಮ್ಮ ರಾಜಕೀಯ ಗುರುವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕಾಣುತ್ತಾರೆ. ಅವರ ಸರ್ವಗುಣಗಳು ಇವರಿಗೆ ಸದಾ ಮಾದರಿ. ಈ ಎಲ್ಲಾ ಅಂಶಗಳು ಅವರನ್ನು ರಾಜಕೀಯದತ್ತ ಒಲವು ಮೂಡಿಸುವಲ್ಲಿ ಪ್ರಭಾವ ಬೀರಿವೆ.

ರಾಹುಲ್ ಗಾಂಧಿ ಅವರು 3,500 ಕಿ.ಮೀ. ಪಾದಯಾತ್ರೆ ಮಾಡುವ ಮೂಲಕ ಜನರ ನಾಡಿ ಮಿಡಿತವನ್ನು ಅರಿಯುವ ಪ್ರಯತ್ನ ಮಾಡಿದಂತೆ ವಿನಯ್‌ಕುಮಾರ್ ಅವರೂ ದಾವಣಗೆರೆ ಲೋಕಸಭಾ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗುವತ್ತ ಹೆಜ್ಜೆ ಹಾಕಿದ್ದು ಒಂದು ನೂತನ ಅನುಭವವನ್ನು ನೀಡಿದೆ.



ಪಾದಯಾತ್ರೆಯ ಸಂದರ್ಭದಲ್ಲಿ ಗ್ರಾಮದ ಹಿರಿಯ ಮುಖಂಡರ ಸಮ್ಮುಖದಲ್ಲಿ ತಮ್ಮ ಉದ್ದೇಶ ಕುರಿತು ಮಾತನಾಡಿದರು

ಶನಿವಾರ, ಜನವರಿ 27, 2024 | ₹ 7.00 |

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿವ ವೇಷಧಾರಿ

ಅಯೋಧ್ಯೆಯ ಲತಾ ಮಂಗೇಶ್ಕರ್ ಚೌಕ್‌ನಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕಲಾವಿದರೊಬ್ಬರು ಶಿವನ ವೇಷ ಧರಿಸಿ ಪಾಲ್ಗೊಂಡಿದ್ದರು



'ಭಾರತ-ಫ್ರಾನ್ಸ್ ಹಲವು ಒಪ್ಪಂದ' 11

ಸುಯೇಜ್ ಕಾಲುವೆ: ಸರಕು ಸಾಗಣೆ ಶೇ 45ರಷ್ಟು ಕುಸಿತ 10

ಮಂಡ್ಯ ಕ್ಷೇತ್ರದಿಂದ ಎಚ್.ಡಿ.ದೇವೇಗೌಡ ಕುಟುಂಬ ಸ್ಪರ್ಧೆ ಸಾಧ್ಯತೆ

ಎಚ್‌ಡಿಕೆ– ಸುಮಲತಾ ಮಧ್ಯೆ ಸ್ನೇಹ ಸೂತ್ರ? 7

ಬಿಹಾರ ರಾಜಕೀಯ ಬೆಳವಣಿಗೆ • ಕಾಂಗ್ರೆಸ್, ಆರ್‌ಜೆಡಿ ಮೇಲೆ ಮುನಿಸು: ಮತ್ತೆ ಎನ್‌ಡಿಎ ಕಡೆ ಚಿತ್ತ?

ಕೌತುಕ ಮೂಡಿಸಿದ ನಿತೀಶ್ ನಡೆ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಬಿಹಾರದ ಮೈತ್ರಿ ರಾಜಕಾರಣವು ಅತ್ಯಂತ ಕುತೂಹಲಕರ ಘಟ್ಟದಲ್ಲಿ ಬಂದು ನಿಂತಿದೆ. ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಮಹಾಘಟಬಂಧನ್‌ನಲ್ಲಿಯೇ ಮುಂದುವರಿಯುತ್ತಾರೋ ಅಥವಾ ಅದನ್ನು ತ್ಯಜಿಸಿ, ಬಿಜೆಪಿಯೊಂದಿಗೆ ಕೈ ಜೋಡಿಸಿ ಅಧಿಕಾರದಲ್ಲಿ ಉಳಿಯುತ್ತಾರೋ ಎಂಬ ಕೌತುಕ ಮುಂದುವರಿದಿದೆ.

ಇದರ ನಡುವೆಯೇ, ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರೊಂದಿಗೆ ಮಾತನಾಡಲು ನಿತೀಶ್ ನಿರಾಕರಿಸಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ನಿತೀಶ್ ಅವರನ್ನು ಸಮಾಧಾನಪಡಿಸಲು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಕಾಂಗ್ರೆಸ್ ನಾಯಕರು ಪ್ರಯತ್ನಿಸಿದರು. ಸೋನಿಯಾ ಗಾಂಧಿ ಮತ್ತು ನಿತೀಶ್ ನಡುವೆ ದೂರವಾಣಿ ಮೂಲಕ ಮಾತುಕತೆ ಸಾಧ್ಯವಾಗಿಸಲು ನಡೆಸಿದ ಪ್ರಯತ್ನ ಫಲ ಕೊಡಲಿಲ್ಲ ಎಂದು ಮೂಲಗಳು ತಿಳಿಸಿವೆ. ಕಾಂಗ್ರೆಸ್‌ನ ಪ್ರಯತ್ನ ವಿಳಂಬವಾಯಿತು ಎಂದು ಜೆಡಿಯು ಮೂಲಗಳು ಪ್ರತಿಕ್ರಿಯಿಸಿವೆ.


ಗಣರಾಜ್ಯೋತ್ಸವ ದಿನದಂದು ಬಿಹಾರದಲ್ಲಿನ ರಾಜಕೀಯ ಕ್ಷಣಕ್ಕೊಂದು ತಿರುವು ಪಡೆದುಕೊಂಡಂತೆ ಭಾಸವಾಯಿತು. ನಾನಾ ರೀತಿಯ ಊಹಾಪೋಹ, ವದಂತಿಗಳು ಹರಿದಾಡಿದವು. ಇನ್ನೇನು ನಿತೀಶ್ ಅವರು ಬಿಜೆಪಿಯೊಂದಿಗೆ ಕೈಜೋಡಿಸಲು ಭಾನುವಾರವೇ ದಿನ ನಿಗದಿಯಾಗಿದೆ ಎಂಬ ಮಾತುಗಳೆಲ್ಲ ಕೇಳಿಬಂದವು. ಇದಕ್ಕಾಗಿ ಪಕ್ಷಗಳು ತಮ್ಮ ಶಾಸಕರನ್ನು ಒಂದೆಡೆ ಸೇರಿಸುವ ಕಸರತ್ತನ್ನೂ ಆರಂಭಿಸಿವೆ ಎಂದೂ ತಿಳಿದುಬಂದಿತ್ತು. ಆದರೆ, ಈ ಬೆಳವಣಿಗೆಗಳ ಬಗ್ಗೆ ಪಕ್ಷಗಳಿಂದ ಯಾವುದೇ ಅಧಿಕೃತ ಹೇಳಿಕೆಗಳು ಮಾತ್ರ ಹೊರಬೀಳಲಿಲ್ಲ.

'ಎಲ್ಲವೂ ಸರಿಯಿದೆ': ಇದಕ್ಕೆ ಪ್ರತಿಕ್ರಿಯಿಸಿದ್ದ ಜೆಡಿಯು ಬಿಹಾರದ ರಾಜ್ಯ ಘಟಕದ ಅಧ್ಯಕ್ಷ ಉಮೇಶ್ ಸಿಂಗ್ ಕುಶ್ವಾಹ, 'ಮಹಾಘಟಬಂಧನ್‌ನಲ್ಲಿ ಎಲ್ಲವೂ ಸರಿಯಿದೆ. ಹರಡುತ್ತಿರುವುದೆಲ್ಲ ವದಂತಿಗಳು. ಅವುಗಳಲ್ಲಿ ಸತ್ಯಾಂಶವಿಲ್ಲ' ಎಂದು ಸಮಜಾಯಿಷಿ ನೀಡಿದರು. ಸೀಟು ಹಂಚಿಕೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಅಗತ್ಯವಿದೆ ಎಂದು ಹೇಳಿದರು.

ಆರ್‌ಜೆಡಿ ಸಂಸದ ಮನೋಜ್ ಕೆ. ಝಾ ಅವರು, 'ನಿತೀಶ್ ಕುಮಾರ್ ಅವರೇ ಈ ಗೊಂದಲಗಳಿಗೆ ಆದಷ್ಟು ಬೇಗ ತೆರೆ ಎಳೆಯುತ್ತಾರೆ' ಎಂದು ತಿಳಿಸಿದರು.

ನಿತೀಶ್‌ಗೆ ಯಾಕೆ ಮುನಿಸು?

ಲೋಕಸಭಾ ಚುನಾವಣೆ ಬಳಿಕ ಮುಖ್ಯಮಂತ್ರಿ ಸ್ಥಾನವನ್ನು ನಿತೀಶ್ ಅವರು ತೇಜಸ್ವಿ ಅವರಿಗೆ ಬಿಟ್ಟುಕೊಡಬೇಕು ಎಂದು ಈ ಹಿಂದೆ ಮಾತುಕತೆ ಆಗಿತ್ತು ಎನ್ನಲಾಗಿದೆ.



ಆದರೆ, ಅದಕ್ಕೀಗ ನಿತೀಶ್ ಅವರಿಗೆ ಮನಸ್ಸಿದ್ದಂತಿಲ್ಲ. ಅಲ್ಲದೆ, 'ಇಂಡಿಯಾ' ಮೈತ್ರಿಕೂಟದ ಸಂಚಾಲಕ ಸ್ಥಾನ ಸೇರಿದಂತೆ ಇತರ ವಿಷಯಗಳಿಂದಾಗಿ ನಿತೀಶ್ ಮುನಿಸಿಕೊಂಡಿರಬಹುದು ಎಂದೂ ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಇದನ್ನು ಅಲ್ಲಗಳೆದಿರುವ ಜೆಡಿಯು ಮೂಲಗಳು, 'ಇಂಡಿಯಾ' ಮೈತ್ರಿಕೂಟದ ಜೊತೆಗಿನ ಸಂವಹನ ಸ್ಥಗಿತವಾಗಿದೆ ಎಂದಿವೆ. ಆರ್‌ಜೆಡಿ ಮತ್ತು ಕಾಂಗ್ರೆಸ್ ಒಗ್ಗೂಡಿ ನಿತೀಶ್ ಅವರನ್ನು ಅಧಿಕಾರದಿಂದ ಕೆಳಗಿಳಿಸಲು ಮುಂದಾದರೆ ತನ್ನ ಹಿತಾಸಕ್ತಿ ಕಾಪಾಡಿಕೊಳ್ಳುವುದು ಹೇಗೆ ಎಂಬುದು ಜೆಡಿಯುಗೆ ತಿಳಿದಿದೆ. ಹಿಂದೆಯೂ ಬಿಜೆಪಿ, ತನ್ನ ರಾಜಕೀಯ ಭವಿಷ್ಯಕ್ಕೆ ಬೆದರಿಕೆಯೊಡ್ಡಿದಾಗ ಅದು ಎನ್‌ಡಿಎ ತೊರೆದು ಆರ್‌ಜೆಡಿಯೊಂದಿಗೆ ಮೈತ್ರಿ ಮಾಡಿಕೊಂಡಿದ್ದನ್ನು ಮರೆಯಬಾರದು ಎಂದೂ ಹೇಳಿವೆ.

'ಎನ್‌ಡಿಎ ಬಾಗಿಲು ಮುಚ್ಚಿಲ್ಲ'

'ರಾಜಕೀಯದಲ್ಲಿ ಎಂದಿಗೂ ಶಾಶ್ವತವಾಗಿ ಬಾಗಿಲು ಮುಚ್ಚುವುದಿಲ್ಲ. ಸಮಯ ಬಂದಾಗ ಬಾಗಿಲು ತೆರೆಯುತ್ತದೆ. ಇದನ್ನು ಹೈಕಮಾಂಡ್ ನಿರ್ಧರಿಸುತ್ತದೆ' ಎಂದು ಮಾಜಿ ಉಪ ಮುಖ್ಯಮಂತ್ರಿ, ಬಿಜೆಪಿ ನಾಯಕ ಸುಶೀಲ್ ಕುಮಾರ್ ಮೋದಿ ಅವರು ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದರು. ಈ ಮೂಲಕ ಅವರು ಎನ್‌ಡಿಎ ಮೈತ್ರಿ ಸೇರಲು ಜೆಡಿಯು ಬಂದರೆ ಸ್ವಾಗತಿಸುವ ಸಂದೇಶವನ್ನು ರವಾನಿಸಿದರು.

ಇದಕ್ಕೆ ಪೂರಕವಾಗಿ, 'ಬಿಹಾರದಲ್ಲಿ ಮಹಾಘಟಬಂಧನ್ ಸರ್ಕಾರವು ಹಾಗೆಯೇ ಉಳಿಯುವುದಿಲ್ಲ. ನಿತೀಶ್ ಕುಮಾರ್ ಅವರು ಮಿತ್ರಪಕ್ಷಗಳಾದ ಕಾಂಗ್ರೆಸ್ ಮತ್ತು ಆರ್‌ಜೆಡಿಯನ್ನು ಗುರಿಯಾಗಿಸಿಕೊಂಡೇ ವಂಶ ರಾಜಕಾರಣದ ಕುರಿತು ಹೇಳಿಕೆ ನೀಡಿದ್ದಾರೆ' ಎಂದು ಹಿಂದೂಸ್ತಾನ್ ಅವಾಮ್ ಮೋರ್ಚಾದ ನಾಯಕರೂ ಆಗಿರುವ ಮಾಜಿ ಮುಖ್ಯಮಂತ್ರಿ ಜಿತನ್ ರಾಮ್ ಮಾಂಝಿ ಹೇಳಿಕೆ ನೀಡಿದರು. 'ಬಿಹಾರದ ರಾಜಕೀಯ ವಾತಾವರಣದ ಬಗ್ಗೆ ಹೆಚ್ಚಿಗೆ ಹೇಳಲು ಏನೂ ಇಲ್ಲ. ವಂಶಾಡಳಿತದ ರಾಜಕೀಯಕ್ಕೆ ಸಂಬಂಧಿಸಿದಂತೆ ನಿತೀಶ್ ಅವರು ಹೇಳಿಕೆ ನೀಡಿದ ಬಳಿಕವೂ ಅವರೆಲ್ಲ ಒಗ್ಗಟ್ಟಾಗಿ ಉಳಿಯುತ್ತಾರೆ ಎಂದು ನೀವು ಭಾವಿಸುತ್ತೀರಾ' ಎಂದು ಅವರು ಸುದ್ದಿಗಾರರನ್ನೇ ಪ್ರಶ್ನಿಸಿದರು.

ಊಹಾಪೋಹಕ್ಕೆ ಕಾರಣ ಏನು?

ಪಟ್ನಾದಲ್ಲಿ ನಡೆದ ಗಣರಾಜ್ಯೋತ್ಸವ ಸಮಾರಂಭದಲ್ಲಿ ಮುಖ್ಯಮಂತ್ರಿ ನಿತೀಶ್ ಕುಮಾರ್ ಮತ್ತು ಉಪ ಮುಖ್ಯಮಂತ್ರಿ ತೇಜಸ್ವಿ ಅವರು ದೂರದಲ್ಲಿ ಕುಳಿತಿದ್ದರು. ಇದು ಸರ್ಕಾರದ ಮೈತ್ರಿ ಪಕ್ಷಗಳ ನಡುವೆ ಬಿಕ್ಕಟ್ಟು ಮೂಡಿರಬಹುದು ಎಂಬುದನ್ನು ಬಿಂಬಿಸಿತು. ನಂತರ ರಾಜ್ಯಪಾಲರು ಆಯೋಜಿಸಿದ್ದ ಚಹಾ ಕೂಟದಲ್ಲಿ ನಿತೀಶ್ ಅವರು ಪಾಲ್ಗೊಂಡಿದ್ದರೆ, ಉಪ ಮುಖ್ಯಮಂತ್ರಿ ಗೈರಾಗಿದ್ದರು. ಈ ಎರಡೂ ಬೆಳವಣಿಗೆಗಳು ಬಿಹಾರದ ರಾಜಕೀಯದಲ್ಲಿ ಊಹಾಪೋಹ ತೀವ್ರಗೊಳ್ಳುವಂತೆ ಮಾಡಿದವು.



ನವದೆಹಲಿಯ ಕರ್ತವ್ಯಪಥದಲ್ಲಿ ಕೇಂದ್ರ ಕೈಗಾರಿಕಾ ಭದ್ರತಾ ಪಡೆಯ (ಸಿಐಎಸ್‌ಎಫ್) ಮಹಿಳಾ ಸಿಬ್ಬಂದಿ ಶುಕ್ರವಾರ ಪಥಸಂಚಲನ ನಡೆಸಿದರು –ಪಿಟಿಐ ಚಿತ್ರ

ಕರ್ತವ್ಯಪಥದಲ್ಲಿ ನಾರಿಶಕ್ತಿ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ರಾಷ್ಟ್ರ ರಾಜಧಾನಿ ದೆಹಲಿಯ ಕರ್ತವ್ಯಪಥದಲ್ಲಿ ಶುಕ್ರವಾರ ನಡೆದ 75ನೇ ಗಣರಾಜ್ಯೋತ್ಸವ ಕಾರ್ಯಕ್ರಮವು ದೇಶದ ಮಹಿಳೆಯರ ಸೇನಾ ಸಾಮರ್ಥ್ಯ ಮತ್ತು ಸಾಂಸ್ಕೃತಿಕ ಸಮೃದ್ಧಿಯ ಪ್ರದರ್ಶನಕ್ಕೆ ವೇದಿಕೆಯಾಯಿತು. ವೈವಿಧ್ಯಮಯವಾದ ಕಾರ್ಯಕ್ರಮವನ್ನು 75 ಸಾವಿರಕ್ಕೂ ಹೆಚ್ಚು ಜನರು ಕಣ್ತುಂಬಿಕೊಂಡರು.

ರಾಷ್ಟ್ರಪತಿಯವರ ಸಾಂಪ್ರದಾಯಿಕ ಬಳಕೆಯ ಸಾರೋಟನ್ನು ನಾಲ್ಕು ದಶಕಗಳ ಬಳಿಕ ಈ ಬಾರಿ ಬಳಸಿದ್ದು ವಿಶೇಷವಾಗಿತ್ತು. ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಗಣರಾಜ್ಯೋತ್ಸವ ಕಾರ್ಯಕ್ರಮದ ಮುಖ್ಯ ಅತಿಥಿ ಇಮ್ಯಾನುವೆಲ್ ಮ್ಯಾಕ್ರನ್ ಅವರು ಈ ಸಾರೋಟಿನಲ್ಲಿ ಬಂದರು. ಅತಿಥಿಗಳು ಕುಳಿತುಕೊಳ್ಳುವ ವೇದಿಕೆಯನ್ನು 1,900 ಕೈಮಗ್ಗದ ಸೀರೆಗಳನ್ನು ಬಳಸಿಕೊಂಡು ವರ್ಣಮಯವಾಗಿ ಅಲಂಕರಿಸಲಾಗಿತ್ತು.

ಗಣರಾಜ್ಯೋತ್ಸವ ಪಥಸಂಚಲನದ ಇತಿಹಾಸದಲ್ಲಿಯೇ ಈ ಬಾರಿ ಮಹಿಳೆಯರ ಭಾಗವಹಿಸುವಿಕೆ ಗರಿಷ್ಠವಾಗಿತ್ತು.

11 ನೇ ಪುಟ ನೋಡಿ

ಆನೇಕಲ್‌ವರೆಗೂ ಮೆಟ್ರೊ

ಪ್ರಜಾವಾಣಿ ವಾರ್ತೆ

ಆನೇಕಲ್ : ಆನೇಕಲ್ ಭಾಗಕ್ಕೆ ಮೆಟ್ರೊ ವಿಸ್ತರಿಸುವ ನಿಟ್ಟಿನಲ್ಲಿ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲಾಗುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ತಿಳಿಸಿದರು.

ಇಲ್ಲಿನ ಎಎಸ್‌ಬಿ ಮೈದಾನದಲ್ಲಿ ‘ಸಂವಿಧಾನ ಜಾಗೃತಿ ಜಾಥಾ’ಕ್ಕೆ ಶುಕ್ರವಾರ ಚಾಲನೆ ನೀಡಿ ಮಾತನಾಡಿದರು.

ಮೇಕೆದಾಟು ಯೋಜನೆ ಕುರಿತು ಪ್ರತಿಕ್ರಿಯಿಸಿದ ಅವರು, ‘ಈ ವಿಚಾರವಾಗಿ ಚರ್ಚಿಸಲು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಫೆ.1ಕ್ಕೆ ಪೂರ್ವಭಾವಿ ಸಭೆ ನಡೆಸುತ್ತಿದೆ. ಈ ಯೋಜನೆಯಲ್ಲಿ ಮುಳುಗಡೆಯಾಗಲಿರುವ ಅರಣ್ಯ ಪ್ರದೇಶಕ್ಕೆ ಬದಲಿಯಾಗಿ ಕಂದಾಯ ಭೂಮಿಯನ್ನೇ ನೀಡಲಾಗುವುದು. ಇದಕ್ಕಾಗಿ ಭೂಮಿ ಗುರುತಿಸಲಾಗುತ್ತಿದೆ’ ಎಂದು ಅವರು ಹೇಳಿದರು.

ಬೆಂಗಳೂರು– ತುಮಕೂರು ನಡುವೆ ಮೆಟ್ರೊ

ತುಮಕೂರು: ಬೆಂಗಳೂರು– ತುಮಕೂರು ನಡುವೆ ಮೆಟ್ರೊ ಯೋಜನೆಯನ್ನು ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ನಿರ್ಮಿಸಲು ಉದ್ದೇಶಿಸಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ ಅವರು ಇಲ್ಲಿ ಶುಕ್ರವಾರ ತಿಳಿಸಿದರು.

‘ಸಂಪರ್ಕ ವ್ಯವಸ್ಥೆ ಸುಧಾರಿಸಿದರೆ ಬೆಂಗಳೂರು ಮೇಲಿನ ಒತ್ತಡ ಕಡಿಮೆ ಮಾಡಬಹುದು. ಇದಕ್ಕಾಗಿ ತುಮಕೂರಿಗೆ ಮೆಟ್ರೊ ವಿಸ್ತರಣೆಗೆ ಉದ್ದೇಶಿಸಿದ್ದು, ಈಗಾಗಲೇ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲಾಗುತ್ತಿದೆ’ ಎಂದರು.

ಮೆಟ್ರೋ ರೈಲು ಮಾರ್ಗದ ಕಾಮಗಾರಿಗೆ ಸರ್ಕಾರ ಹಣ ಕೊಡಬೇಕಿಲ್ಲ. ಕೇಂದ್ರ ಹಾಗೂ ರಾಜ್ಯ ಸರ್ಕಾರ ಒಪ್ಪಿಗೆ ಕೊಟ್ಟರೆ ಸಾಕು. ಈ ಯೋಜನೆಯಲ್ಲಿ ಹಣ ಹೂಡಿಕೆ ಮಾಡಲು ಸಾಕಷ್ಟು ಕಂಪನಿಗಳು ಮುಂದೆ ಬಂದಿವೆ. ಖಾಸಗಿ ಸಹಭಾಗಿತ್ವದಲ್ಲಿ ಯೋಜನೆ ಕಾರ್ಯಗತ ಮಾಡಲಾಗುವುದು ಎಂದರು.

ಬಿಟ್ ಕಾಯಿನ್ ಅಕ್ರಮ: ಎಸ್‌ಐಟಿ ತನಿಖೆ ● ಹ್ಯಾಕರ್ ಶ್ರೀಕಿಗೆ ಲ್ಯಾಪ್‌ಟಾಪ್ ಕೊಡಿಸಿ ಕೃತ್ಯ

ಜಾಲತಾಣ ಹ್ಯಾಕ್ ಮಾಡಿಸಿದ್ದ ಇನ್‌ಸ್ಪೆಕ್ಟರ್‌ಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಟ್ ಕಾಯಿನ್ ಅಕ್ರಮ ಪ್ರಕರಣದಲ್ಲಿ ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕಿ ಅಲಿಯಾಸ್ ಶ್ರೀಕೃಷ್ಣನನ್ನು ಬಂಧಿಸಿ ವಿಚಾರಣೆಗಾಗಿ ಕಸ್ಟಡಿಗೆ ಪಡೆದಿದ್ದ ಸಿಸಿಬಿ ಪೊಲೀಸರು, ಆತನನ್ನು ಬಳಸಿಕೊಂಡು ವಿವಿಧ ಜಾಲತಾಣ ಹಾಗೂ ಸರ್ವರ್‌ಗಳನ್ನು ಹ್ಯಾಕ್ ಮಾಡಿಸಿ ಹಣ ದೋಚಿರುವ ಸಂಗತಿ ಎಸ್‌ಐಟಿ ತನಿಖೆಯಿಂದ ಗೊತ್ತಾಗಿದೆ.

ಆರೋಪಿಗಳ ಜೊತೆ ಸೇರಿ ಅಕ್ರಮ ಎಸಗಿದ್ದ ಹಾಗೂ ಸಾಕ್ಷ್ಯ ನಾಶಪಡಿಸಿರುವ ಆರೋಪದಡಿ ಸಿಸಿಬಿ ತಾಂತ್ರಿಕ ವಿಭಾಗದ ಇನ್‌ಸ್ಪೆಕ್ಟರ್ ಡಿ.ಎಂ. ಪ್ರಶಾಂತ್‌ಬಾಬು ಹಾಗೂ ಎಚ್‌ಎಸ್‌ಆರ್ ಲೇಔಟ್‌ನಲ್ಲಿರುವ ಜಿಸಿಐಡಿ ಟೆಕ್ನಾಲಜೀಸ್ ಕಂಪನಿಯ ಕಾರ್ಯನಿರ್ವಾಹಕ ಅಧಿಕಾರಿ ಸಂತೋಷ್‌ಕುಮಾರ್ ಅವರನ್ನು ಬಂಧಿಸಿರುವ ಎಸ್‌ಐಟಿ ಅಧಿಕಾರಿಗಳು, ಅವರಿಬ್ಬರ ವಿಚಾರಣೆ ಮುಂದುವರಿಸಿದ್ದಾರೆ.

ಪ್ರಕರಣದ ತನಿಖಾಧಿಕಾರಿಗಳೂ ಆಗಿದ್ದ, ಇನ್‌ಸ್ಪೆಕ್ಟರ್‌ಗಳಾದ ಲಕ್ಷ್ಮಿಕಾಂತಯ್ಯ, ಚಂದ್ರಾಧರ್, ಶ್ರೀಧರ್ ಕೆ. ಪೂಜಾರ್ ವಿರುದ್ಧವೂ ಪ್ರಕರಣ ದಾಖಲಾಗಿದೆ. ವಿಚಾರಣೆಗೆ ಹಾಜರಾಗುವಂತೆ ಮೂವರಿಗೂ ನೋಟಿಸ್ ನೀಡಲಾಗಿದೆ.

ಬಿಟ್ ಕಾಯಿನ್ ವಂಚನೆಗೆ ಸಂಬಂಧಪಟ್ಟಂತೆ ಕಾಟನ್‌ಪೇಟೆ, ಅಶೋಕನಗರ ಹಾಗೂ ಬೆಂಗಳೂರು ಸೈಬರ್ ಕ್ರೈಂ ಠಾಣೆಯಲ್ಲಿ 2020ರಲ್ಲಿ ಪ್ರತ್ಯೇಕವಾಗಿ ಮೂರು ಪ್ರಕರಣಗಳು ದಾಖಲಾಗಿದ್ದವು. ಶ್ರೀಕಿಯನ್ನು ವಿಚಾರಣೆಗಾಗಿ ಕಸ್ಟಡಿಗೆ ಪಡೆದಿದ್ದ ಅಂದಿನ ಇನ್‌ಸ್ಪೆಕ್ಟರ್‌ಗಳಾದ ಲಕ್ಷ್ಮಿಕಾಂತಯ್ಯ, ಶ್ರೀಧರ್ ಪೂಜಾರ ಹಾಗೂ ಚಂದ್ರಾಧರ್, ಆತನನ್ನು ಬಳಸಿಕೊಂಡು ಹಲವು ಅಕ್ರಮ ಎಸಗಿರುವ ಬಗ್ಗೆ ಎಸ್‌ಐಟಿ ಅಧಿಕಾರಿಗಳು ತಾಂತ್ರಿಕ ಪುರಾವೆಗಳನ್ನು ಸಂಗ್ರಹಿಸಿದ್ದಾರೆ.

ಸಿಐಡಿ ಠಾಣೆ:ಪೊಲೀಸರ ವಿರುದ್ಧವೇ ಮೊದಲ ಎಫ್‌ಐಆರ್

ವಿಶೇಷ ಪ್ರಕರಣಗಳಲ್ಲಿ ಎಫ್‌ಐಆರ್ ದಾಖಲಿಸಿಕೊಳ್ಳಲು ಸಿಐಡಿಗೆ ಠಾಣೆ ಮಾನ್ಯತೆ ನೀಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದ ಬೆನ್ನಲ್ಲೇ ಬಿಟ್ ಕಾಯಿನ್ ಪ್ರಕರಣದಲ್ಲಿ ಸಿಸಿಬಿ ಪೊಲೀಸರ ವಿರುದ್ಧವೇ ಮೊದಲ ಎಫ್‌ಐಆರ್ ದಾಖಲಾಗಿದೆ. ಸಿಐಡಿಗೆ ಪೊಲೀಸ್ ಠಾಣೆ ಸ್ಥಾನಮಾನ ನೀಡುವಂತೆ ಕೋರಿ ರಾಜ್ಯ ಪೊಲೀಸ್ ಮಹಾನಿರ್ದೇಶಕರ (ಡಿಜಿ–ಐಜಿಪಿ) ಮೂಲಕ ರಾಜ್ಯ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿತ್ತು. ಇದಕ್ಕೆ ಕೆಲ ದಿನಗಳ ಹಿಂದೆಯೇ ಅನುಮತಿ ಲಭ್ಯವಾಗಿದೆ.

‘ಬಿಟ್ ಕಾಯಿನ್ ಪ್ರಕರಣದ ತನಿಖೆ ನಡೆಸಿರುವ ಎಸ್‌ಐಟಿ ಅಧಿಕಾರಿಗಳು, ಸಿಸಿಬಿ ಇನ್‌ಸ್ಪೆಕ್ಟರ್‌ಗಳ ವಿರುದ್ಧ ದೂರು ನೀಡಿದ್ದರು. ದೂರು ಆಧರಿಸಿ ನಾಲ್ವರು ಇನ್‌ಸ್ಪೆಕ್ಟರ್ ಹಾಗೂ ಸೈಬರ್ ತಜ್ಞ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಇದರ ತನಿಖೆಯನ್ನು ಎಸ್‌ಐಟಿ ಅಧಿಕಾರಿ ಮುಂದುವರಿಸಲಿದ್ದಾರೆ’ ಎಂದು ಸಿಐಡಿ ಮೂಲಗಳು ಹೇಳಿವೆ.

ಅಮೆಜಾನ್ ಸರ್ವರ್ ಹ್ಯಾಕ್: ‘ಆರೋಪಿ ಶ್ರೀಕಿ, ಅಮೆಜಾನ್ ಕಂಪನಿಯ ಸರ್ವರ್ ಹ್ಯಾಕ್ ಮಾಡಿರುವುದು ಗೊತ್ತಾಗಿದೆ. ಇದರ ಸಾಕ್ಷ್ಯಗಳನ್ನು ಸಿಸಿಬಿ ಪೊಲೀಸರು ನಾಶಪಡಿಸಿರುವುದು ಗೊತ್ತಾಗಿದೆ’ ಎಂದು ಮೂಲಗಳು ಹೇಳಿವೆ.

ಅತಿಥಿಗೃಹದಲ್ಲಿ ಅಕ್ರಮ ಬಂಧನ: ‘ಕೆಂಪೇಗೌಡ ನಗರ ಠಾಣೆಯಲ್ಲಿ 2020ರಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಶ್ರೀಕಿಯನ್ನು ಕಸ್ಟಡಿಗೆ ಪಡೆದಿದ್ದ ಅಂದಿನ ಸಿಸಿಬಿ ಇನ್‌ಸ್ಪೆಕ್ಟರ್ ಶ್ರೀಧರ್ ಪೂಜಾರ(ಸದ್ಯ ಡಿವೈಎಸ್‌ಪಿ), 2020ರ ನ. 14ರಿಂದ 17ರವರೆಗೆ ಬೆಂಗಳೂರು ನಗರ ಸಶಸ್ತ್ರ ಮೀಸಲು ಪಡೆಯ ಅತಿಥಿ ಗೃಹದ ಕೊಠಡಿಯಲ್ಲಿ ಅಕ್ರಮ ಬಂಧನದಲ್ಲಿರಿಸಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಬಿಟ್ ಕಾಯಿನ್ ವಿನಿಮಯ ಮಾಡುತ್ತಿದ್ದ ರಾಬಿನ್ ಆನ್‌ಲೈನ್ ಸರ್ವೀಸ್ ಕಂಪನಿ ಮಾಲೀಕ ರಾಬಿನ್ ಖಂಡೇಲ್‌ವಾಲಾನನ್ನು ಸಹ ನ. 14ರಿಂದ 30ರವರೆಗೆ ಅತಿಥಿ ಗೃಹದ ಕೊಠಡಿ ಹಾಗೂ ಸಿಸಿಬಿ ಕಚೇರಿಯಲ್ಲಿ ಅಕ್ರಮವಾಗಿ ಇರಿಸಿಕೊಂಡಿದ್ದರು’ ಎಂದು ಮೂಲಗಳು ಹೇಳಿವೆ.

ಮಧ್ಯವರ್ತಿ ಪ್ರಶಾಂತ್: ‘ಪ್ರಶಾಂತ್ ಬಾಬು ಜಿಸಿಐಡಿ ಟೆಕ್ನಾಲಜೀಸ್ ಕಂಪನಿಯ ಕಾರ್ಯನಿರ್ವಾಹಕ ಅಧಿಕಾರಿ ಸಂತೋಷ್‌ಕುಮಾರ್ ಜೊತೆ ಒಡನಾಟ ಹೊಂದಿದ್ದರು. ಬಿಟ್ ಕಾಯಿನ್ ಪ್ರಕರಣದ ತನಿಖಾಧಿಕಾರಿಗಳಿಗೆ ಸಂತೋಷ್ ಕುಮಾರ್ ಅವರನ್ನು ಪರಿಚಯ ಮಾಡಿಕೊಟ್ಟು ಮಧ್ಯವರ್ತಿ ಕೆಲಸ ಮಾಡಿದ್ದರು’ ಎಂದು ಮೂಲಗಳು ತಿಳಿಸಿವೆ.

‘₹ 60 ಸಾವಿರ ಮೌಲ್ಯದ ಲ್ಯಾಪ್‌ಟಾಪ್ ಅಕ್ರಮವಾಗಿ ಖರೀದಿಸಿದ್ದ ಪ್ರಶಾಂತ್ ಬಾಬು, ಅದನ್ನು ಹ್ಯಾಕರ್ ಶ್ರೀಕಿಗೆ ಕೊಟ್ಟಿದ್ದರು. ಆತನಿಂದ ಹಲವು ಜಾಲತಾಣ ಹಾಗೂ ಸರ್ವರ್‌ಗಳನ್ನು ಹ್ಯಾಕ್ ಮಾಡಿಸಿ ಹಣ ವರ್ಗಾಯಿಸಿಕೊಂಡಿದ್ದಾರೆ. ಕ್ರಿಪ್ಟೊ ಕರೆನ್ಸಿ ವ್ಯವಹಾರ ನಡೆಸುವ ಸಂಸ್ಥೆಗಳ ಸರ್ವರ್‌ಗಳ ಹಲವು ಖಾತೆಗಳನ್ನು ಅಕ್ರಮವಾಗಿ ಪ್ರವೇಶಿಸಿ, ಹಣ ವರ್ಗಾವಣೆ ಮಾಡಿಕೊಂಡಿರುವುದಕ್ಕೆ ಪುರಾವೆಗಳು ಲಭ್ಯವಾಗಿವೆ’ ಎಂದು ಮೂಲಗಳು ಹೇಳಿವೆ.

‘ಶ್ರೀಕಿ ಮೂಲಕ ಹಲವು ಖಾತೆಗಳ ಯೂಸರ್ ನೇಮ್ ಹಾಗೂ ಪಾಸ್‌ವರ್ಡ್ ಬದಲಾಯಿಸಲಾಗಿದೆ. ಪ್ರಕರಣದ ತನಿಖೆ ನಡೆಸುವ ವರಿಗೆ ಯಾವುದೇ ಸಾಕ್ಷ್ಯ ಲಭ್ಯವಾಗದಂತೆ, ಎಲ್ಲವನ್ನೂ ಅಳಿಸಿ ಹಾಕಿರುವುದು ಗೊತ್ತಾಗಿದೆ’ ಎಂದು ಮೂಲಗಳು ತಿಳಿಸಿವೆ.

ಹಿರಿಯ ಅಧಿಕಾರಿ, ರಾಜಕಾರಣಿಗಳ ವಿಚಾರಣೆ: ‘ಪ್ರಕರಣದಲ್ಲಿ ಪೊಲೀಸ್ ಇಲಾಖೆಯ ಕೆಲ ಹಿರಿಯ ಅಧಿಕಾರಿಗಳು ಹಾಗೂ ಕೆಲ ರಾಜಕಾರಣಿಗಳು ಭಾಗಿಯಾಗಿರುವ ಅನುಮಾನವಿದೆ. ಎಲ್ಲರಿಗೂ ನೋಟಿಸ್ ನೀಡಿ, ವಿಚಾರಣೆ ನಡೆಸಲು ಚಿಂತನೆ ನಡೆದಿದೆ’ ಎಂದು ಮೂಲಗಳು ಹೇಳಿವೆ.

ಅಪಘಾತ: ಯುವತಿ ಸಾವು

ರಾಮನಗರ: ನಗರದ ಹೊರವಲಯದ ನೇಟಸ್ ಶಾಲೆ ಬಳಿ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಶುಕ್ರವಾರ ಬೆಳಿಗ್ಗೆ ಕಾರೊಂದು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿದ್ದರಿಂದ ಯುವತಿಯೊಬ್ಬಳು ಮೃತಪಟ್ಟಿದ್ದು, 6 ಮಂದಿ ಗಾಯಗೊಂಡಿದ್ದಾರೆ. ತಮಿಳುನಾಡಿನ ಕಾಂಜೀವರಂ ಜಿಲ್ಲೆಯ ವರ್ಷಾ (17) ಮೃತ ಯುವತಿ.

ದಿನೇಶ್ ಕುಮಾರ್, ಪತ್ನಿ ಯುವರಾಣಿ, ಶರ್ಮಾನ್, ಕೆ.ರಮೇಶ್, ಗೀತಾ ಹಾಗೂ ಗಣೇಶ್ ಗಾಯಾಳುಗಳು. ಈ ಪೈಕಿ, ಶರ್ಮಾನ್ ಸ್ಥಿತಿ ಗಂಭೀರವಾಗಿದೆ ಎಂದು ರಾಮನಗರ ಸಂಚಾರ ಠಾಣೆ ಪೊಲೀಸರು ತಿಳಿಸಿದ್ದಾರೆ.

ರಜೆ ಇದ್ದಿದ್ದರಿಂದಾಗಿ ಕುಟುಂಬದವರು ಮೈಸೂರು ಪ್ರವಾಸ ಕೈಗೊಂಡಿದ್ದರು. ರಾತ್ರಿ ಕಾಂಜೀವರಂನಿಂದ ಕಾರಿನಲ್ಲಿ ಹೊರಟಿದ್ದರು. ವೇಗವಾಗಿ ಕಾರು ಚಾಲನೆ ಮಾಡುತ್ತಿದ್ದ ಚಾಲಕ ಬೆಳಿಗ್ಗೆ 4ರ ಸುಮಾರಿಗೆ ನಿದ್ರೆ ಮಂಪರಿನಲ್ಲಿ ರಸ್ತೆ ವಿಭಜಕ್ಕೆ ಗುದ್ದಿದ್ದಾನೆ. ವರ್ಷಾ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕಾರು ನಜ್ಜುಗುಜ್ಜಾಗಿದೆ ಎಂದು ಹೇಳಿದರು.

ಹಸುಗೂಸು ಪತ್ತೆ: ಇಲಿ, ಹೆಗ್ಗಣ ಕಚ್ಚಿ ಗಾಯ

ಬೆಂಗಳೂರು: ತಿಲಕ್‌ನಗರ ಠಾಣೆ ವ್ಯಾಪ್ತಿಯಲ್ಲಿ ತಲೆ ಹಾಗೂ ಮೈ ಮೇಲೆ ಗಾಯಗೊಂಡ ಸ್ಥಿತಿಯಲ್ಲಿ ಒಂದು ದಿನದ ಹಸುಗೂಸು ಪತ್ತೆಯಾಗಿದ್ದು, ಅದನ್ನು ರಕ್ಷಿಸಿರುವ ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದಾರೆ.

‘ಆರ್‌ಬಿಐ ಬಡಾವಣೆಯಲ್ಲಿರುವ ಎರಡು ಕಟ್ಟಡಗಳ ನಡುವಿನ ಜಾಗದಲ್ಲಿ ಹಸುಗೂಸು ಪತ್ತೆಯಾಗಿದೆ. ಇಲಿ ಹಾಗೂ ಹೆಗ್ಗಣಗಳು ಕಚ್ಚಿದ್ದರಿಂದ ಮಗು ಗಾಯಗೊಂಡಿದೆ. ಆಸ್ಪತ್ರೆಗೆ ಸೇರಿಸಲಾಗಿದೆ. ಹಸುಗೂಸು ಪತ್ತೆ ಸಂಬಂಧ ಪ್ರಕರಣವೂ ದಾಖಲಾಗಿದೆ’ ಎಂದು ಸ್ಥಳೀಯರೊಬ್ಬರು ಹೇಳಿದರು.

‘ಬುಧವಾರ ರಾತ್ರಿ ಮಗು ಅಳುತ್ತಿದ್ದ ಶಬ್ದ ಕೇಳಿಸಿತ್ತು. ಅನುಮಾನಗೊಂಡು ಪರಿಶೀಲನೆ ನಡೆಸಿದಾಗ ಮಗು ಪತ್ತೆಯಾಯಿತು. ಆಗ ತಾನೇ ಜನಿಸಿದ್ದ ಮಗುವನ್ನು ಯಾರೋ ಎಸೆದು ಹೋಗಿದ್ದಾರೆ. ಅವರು ಯಾರು ಎಂಬುದು ಗೊತ್ತಾಗಿಲ್ಲ. ಪೊಲೀಸರು ಸಿ.ಸಿ.ಟಿ.ವಿ ಕ್ಯಾಮೆರಾ ಪರಿಶೀಲನೆ ನಡೆಸುತ್ತಿದ್ದಾರೆ. ‘ಹಸುಗೂಸು ಇದ್ದ ಜಾಗದಲ್ಲಿ ಇಲಿಗಳು ಹಾಗೂ ಹೆಗ್ಗಣಗಳು ಓಡಾಡುತ್ತವೆ. ಹಸುಗೂಸಿನ ತಲೆ ಹಾಗೂ ಮೈಗೆಲ್ಲ ಕಚ್ಚಿವೆ. ಮಗುವಿನ ಜೀವಕ್ಕೆ ಅಪಾಯವಿಲ್ಲವೆಂದು ವೈದ್ಯರು ಹೇಳಿದ್ದಾರೆ’ ಎಂದು ಸ್ಥಳೀಯರು ತಿಳಿಸಿದರು.

ಗುಂಡಿಕ್ಕಿ ಮಗನ ಹತ್ಯೆ: ತಂದೆ ಬಂಧನ

ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ಕೃತ್ಯ ● ಗುಪ್ತಾಂಗದ ಬಳಿ ತಾಗಿದ್ದ ಗುಂಡು

ಪ್ರಜಾವಾಣಿ ವಾರ್ತೆ


ಸುರೇಶ್


ನರ್ತನ್

ಬೆಂಗಳೂರು: ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ನರ್ತನ್ ಬೋಪಣ್ಣ (35) ಅವರನ್ನು ಗುಂಡಿಕ್ಕಿ ಹತ್ಯೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ತಂದೆ ಸುರೇಶ್ (58) ಅವರನ್ನು ಪೊಲೀಸರು ಬಂಧಿಸಿದ್ದಾರೆ.

‘ಕರೇಕಲ್ಲು ಪ್ರದೇಶದ 2ನೇ ಅಡ್ಡರಸ್ತೆಯಲ್ಲಿರುವ ಮನೆಯಲ್ಲಿ ಗುರುವಾರ ಮಧ್ಯಾಹ್ನ ಈ ಕೃತ್ಯ ನಡೆದಿದೆ. ಗುಪ್ತಾಂಗದ ಬಳಿ ಗುಂಡು ತಾಗಿ ತೀವ್ರ ಗಾಯಗೊಂಡಿದ್ದ ನರ್ತನ್ ಬಸವೇಶ್ವರನಗರದ ಆಸ್ಪತ್ರೆಯಲ್ಲಿ ಸಂಜೆ ಮೃತಪಟ್ಟಿದ್ದಾರೆ. ಕೊಲೆ ಪ್ರಕರಣ ದಾಖಲಿಸಿಕೊಂಡು ತಂದೆ ಸುರೇಶ್‌ನನ್ನು ಸೆರೆ ಹಿಡಿಯಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಮಡಿಕೇರಿಯ ಸುರೇಶ್, ಪತ್ನಿ ಹಾಗೂ ಇಬ್ಬರು ಮಕ್ಕಳ ಜೊತೆ ಮಂಗಳೂರಿನಲ್ಲಿ ಹಲವು ವರ್ಷ ವಾಸವಿದ್ದ. ಮಕ್ಕಳ ವಿದ್ಯಾಭ್ಯಾಸಕ್ಕೆಂದು ಕೆಲ ವರ್ಷಗಳ ಹಿಂದೆಯಷ್ಟೇ ಬೆಂಗಳೂರಿಗೆ ಸ್ಥಳಾಂತರಗೊಂಡಿದ್ದ. ಇತ್ತೀಚೆಗೆ ಮಗಳನ್ನು ಮದುವೆ ಮಾಡಿಕೊಟ್ಟಿದ್ದ. ಪತ್ನಿ ಹಾಗೂ ಮಗನ ಜೊತೆ ಸುರೇಶ್ ಸದ್ಯ ವಾಸವಿದ್ದ’ ಎಂದು ತಿಳಿಸಿದರು.

‘ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ಪತ್ನಿ ಹಾಸಿಗೆ ಹಿಡಿದಿದ್ದರು. ಕೆಲ ಬ್ಯಾಂಕ್‌ಗಳಲ್ಲಿ ಭದ್ರತಾ ಸಿಬ್ಬಂದಿ ಕೆಲಸ ಮಾಡುತ್ತಿದ್ದ ಸುರೇಶ್, ಇತ್ತೀಚೆಗೆ ಕೆಲಸ ಬಿಟ್ಟಿದ್ದ. ಡಿಪ್ಲೊಮಾ ಪದವೀಧರ ನರ್ತನ್ ಎಲ್ಲಿಯೋ ಕೆಲಸಕ್ಕೆ ಹೋಗುತ್ತಿರಲಿಲ್ಲ. ತಾಯಿ ಆರೈಕೆ ಮಾಡುತ್ತಿದ್ದರು’ ಎಂದು ಹೇಳಿದರು.

ಹಣದ ವಿಚಾರಕ್ಕೆ ಗಲಾಟೆ: ‘ಆರೋಪಿ ಸುರೇಶ್, ಮದ್ಯವ್ಯಸನಿ ಎಂಬುದು ಗೊತ್ತಾಗಿದೆ. ನಿತ್ಯವೂ ಕುಡಿಯುತ್ತಿದ್ದ ಸುರೇಶ್, ಹಣ ಸಾಲದಿದ್ದಾಗ ಮನೆಯಲ್ಲಿ ಗಲಾಟೆ ಮಾಡುತ್ತಿದ್ದ. ಹಣ ನೀಡುವಂತೆ ಮಗನನ್ನು ಒತ್ತಾಯಿಸುತ್ತಿದ್ದ. ಇದೇ ವಿಚಾರಕ್ಕೆ ಜಗಳ ಆಗುತ್ತಿತ್ತು’ ಎಂದು ಪೊಲೀಸರು ತಿಳಿಸಿದರು.

‘ಗುರುವಾರ ಮಧ್ಯಾಹ್ನವೂ ತಂದೆ ಸುರೇಶ್ ಹಾಗೂ ಮಗ ನರ್ತನ್ ಬೋಪಣ್ಣ ನಡುವೆ ಜಗಳ ಶುರುವಾಗಿತ್ತು. ತಂದೆಯನ್ನು ಕೊಠಡಿಯಲ್ಲಿ ಕೂಡಿ ಹಾಕಿದ್ದ ಮಗ, ಹೊರಗಿನಿಂದ ಬೀಗ ಹಾಕಿದ್ದರು. ಅದೇ ಕೊಠಡಿಯಲ್ಲಿ ಪರವಾನಗಿ ಬಂದೂಕು ಇತ್ತು. ಆರೋಪಿ ಸುರೇಶ್, ಅದೇ ಬಂದೂಕಿನಿಂದ ಬಾಗಿಲಿಗೆ ಗುಂಡು ಹೊಡೆದಿದ್ದರು. ಹೊರಗಿದ್ದ ನರ್ತನ್ ಅವರ ಗುಪ್ತಾಂಗಕ್ಕೆ ಗುಂಡು ತಾಗಿ, ರಕ್ತ ಸೋರಲಾರಂಭಿಸಿತ್ತು’ ಎಂದು ಹೇಳಿದರು.

‘ಸಹೋದರಿಗೆ ಕರೆ ಮಾಡಿದ್ದ ನರ್ತನ್, ಗುಂಡು ತಾಗಿದ್ದ ವಿಷಯ ತಿಳಿಸಿದ್ದರು. ಸಹೋದರಿಯ ಸಂಬಂಧಿಕರು ಸ್ಥಳಕ್ಕೆ ಬಂದು ನರ್ತನ್ ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಿದ್ದರು’ ಎಂದು ತಿಳಿಸಿದರು.

3ನೇ ಮಹಡಿಯಿಂದ ಬಿದ್ದಿದ್ದ ಬಾಲಕಿ ಸಾವು

ಬೆಂಗಳೂರು: ಹೆಣ್ಣೂರು ಠಾಣೆ ವ್ಯಾಪ್ತಿಯಲ್ಲಿರುವ ಡೆಲ್ಲಿ ಪ್ರೀ ಸ್ಕೂಲ್ ಕಟ್ಟಡದ ಮೂರನೇ ಮಹಡಿಯಿಂದ ಬಿದ್ದು ಗಾಯಗೊಂಡಿದ್ದ ಬಾಲಕಿ ಜಿಯಾ ಅನ್ನಾ(4) ಆಸ್ಪತ್ರೆಯಲ್ಲಿ ಗುರುವಾರ ಮೃತಪಟ್ಟಿದ್ದಾರೆ.

‘ನಗರದ ಕಂಪನಿಯೊಂದರ ಸಾಫ್ಟ್‌ವೇರ್ ಎಂಜಿನಿಯರ್ ಜಿಟೊ ಟಾಮಿ ಜೋಸೆಫ್ ಮತ್ತು ಬಿನಿಟೊ ಥಾಮಸ್ ದಂಪತಿ ಮಗಳಾಗಿದ್ದ ಜಿಯಾ ಅನ್ನಾಳನ್ನು ಕಲ್ಯಾಣನಗರದ ಚೆಳ್ಳಿಕೆರೆಯಲ್ಲಿರುವ ಡೆಲ್ಲಿ ಪ್ರೀ ಸ್ಕೂಲ್ ಡೇ ಕೇರ್ ಕೇಂದ್ರಕ್ಕೆ ಸೇರಿಸಲಾಗಿತ್ತು’ ಎಂದು ಪೊಲೀಸರು ಹೇಳಿದರು.

‘ಜಿಯಾ ಅನ್ನಾ ಜ. 22ರಂದು ಮಧ್ಯಾಹ್ನ ಮೂರನೇ ಮಹಡಿಯಲ್ಲಿ ಆಟವಾಡುತ್ತಿದ್ದಳು. ಇದೇ ಸಂದರ್ಭದಲ್ಲಿ ಆಯತಪ್ಪಿ ಬಿದ್ದಿದ್ದಳು. ತೀವ್ರ ಗಾಯಗೊಂಡಿದ್ದ ಅವಳನ್ನು ಹೆಬ್ಬಾಳದ ಆಸ್ಪತ್ರೆಗೆ ಸೇರಿಸಲಾಗಿತ್ತು. ಅದೇ ಆಸ್ಪತ್ರೆಯಲ್ಲಿ ಜಿಯಾ ಅನ್ನಾ ಮೃತಪಟ್ಟಿದ್ದಾಳೆ’ ಎಂದು ತಿಳಿಸಿದರು.

ಶಾಲೆ ವಿರುದ್ಧ ಎಫ್‌ಐಆರ್: ‘ಆಯತಪ್ಪಿ ಬಿದ್ದಿದ್ದ ವಿಷಯ ಮುಚ್ಚಿಟ್ಟಿದ್ದ ಶಾಲೆ ಸಿಬ್ಬಂದಿ, ಮಗು ಆರೋಗ್ಯದಲ್ಲಿ ಏರುಪೇರಾಗಿರುವುದಾಗಿ ಪೋಷಕರಿಗೆ ತಿಳಿಸಿದ್ದರು. ಆದರೆ, ಆಸ್ಪತ್ರೆಗೆ ಬಂದಾದ ನಿಜ ಸಂಗತಿ ಗೊತ್ತಾಗಿತ್ತು. ಪೋಷಕರು ನೀಡಿದ್ದ ದೂರಿನಡಿ ನಿರ್ಲಕ್ಷ್ಯ ಆರೋಪದಡಿ ಶಾಲೆ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ಕೆಇಎ ಪರೀಕ್ಷೆ: ಚಾರ್ಜ್‌ಶೀಟ್ ಸಲ್ಲಿಕೆ

ಕಲಬುರಗಿ: ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ವಿವಿಧ ನಿಗಮ ಮಂಡಳಿಗಳಲ್ಲಿನ ಹುದ್ದೆಗಳಿಗೆ ಅಕ್ಟೋಬರ್‌ನಲ್ಲಿ ನಡೆಸಿದ್ದ ಪರೀಕ್ಷೆ ವೇಳೆ ಬ್ಲೂಟೂತ್ ಬಳಸಿ ಅಕ್ರಮ ಎಸಗಿದ್ದ ಪ್ರಕರಣ ಕುರಿತು ಸಿಐಡಿ ಅಧಿಕಾರಿಗಳು 370 ಪುಟಗಳ ಚಾರ್ಜ್‌ಶೀಟ್ ಸಲ್ಲಿಸಿದ್ದಾರೆ.

ಮೂರನೇ ಜೆಎಂಎಫ್‌ಸಿ ಕೋರ್ಟ್‌ಗೆ ಸಲ್ಲಿಸಿದ್ದು, ಆರೋಪಿಗಳಾದ ಲಕ್ಷ್ಮಿಪುತ್ರ ತಳವಾರ, ಶೈಲಶ್ರೀ ಹಾಗೂ ಗಂಗಾಧರ್ ಅವರ ವಿರುದ್ಧ ದೋಷಾರೋಪ ಹೊರಿಸಲಾಗಿದೆ. ಇಲ್ಲಿನ ವಿ.ವಿ. ಠಾಣೆಯಲ್ಲಿ ದಾಖಲಿಸಿದ್ದ ಪ್ರಕರಣ ಕುರಿತು ಸಿಐಡಿ ತನಿಖೆ ನಡೆಸಿತ್ತು.

ಪ್ರಮುಖ ಆರೋಪಿ ಆರ್.ಡಿ. ಪಾಟೀಲ ವಿರುದ್ಧವೂ ಪ್ರಕರಣ ದಾಖಲಾಗಿದ್ದು, ಇನ್ನಷ್ಟು ವಿಚಾರಣೆ ಬಾಕಿ ಇರುವುದರಿಂದ ಸದ್ಯಕ್ಕೆ ಪಾಟೀಲ ವಿರುದ್ಧ ದೋಷಾರೋಪ ಪಟ್ಟಿಯನ್ನು ಸಲ್ಲಿಸಿಲ್ಲ ಎಂದು ಸಿಐಡಿ ಮೂಲಗಳು ತಿಳಿಸಿವೆ.

ಚಿತ್ರಾವಳಿ



ಇನ್ಫೊಸಿಸ್ ಪ್ರತಿಷ್ಠಾನ ಮತ್ತು ಭಾರತೀಯ ವಿದ್ಯಾಭವನ ಆಯೋಜಿಸಿರುವ ‘ಫ್ಯೂಷನ್ ಸಂಗೀತ ಮತ್ತು ನೃತ್ಯೋತ್ಸವ’ದಲ್ಲಿ ಶುಕ್ರವಾರ ‘ರಾಗ್ ರಂಗ್’ ಫ್ಯೂಷನ್ ಕಾರ್ಯಕ್ರಮದಲ್ಲಿ ಪ್ರವೀಣ್ ಗೋಡ್ಖಿಂಡಿ ಹಾಗೂ ಶದಜ್ ಗೋಡ್ಖಿಂಡಿ ಕೊಳಲುವಾದನ ಪ್ರಸ್ತುತಪಡಿಸಿದರು. ಡ್ರಮ್– ಪ್ರಕಾಶ್ ಹಾಗೂ ಕೀಬೋರ್ಡ್ – ವಿ. ಉಮೇಶ್ ಸಾಥ್ ನೀಡಿದರು —ಪ್ರಜಾವಾಣಿ ಚಿತ್ರ



ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ಕರಿಸಂದ್ರ ವಾರ್ಡ್‌ನ ಜಯನಗರ 7ನೇ ಬಡಾವಣೆಯಲ್ಲಿ ಬನಶಂಕರಿ ದೇವಿ ಬ್ರಹ್ಮರಥೋತ್ಸವದ ಪ್ರಯುಕ್ತ ಆಯೋಜಿಸಲಾಗಿದ್ದ ಕುಸ್ತಿ ಪಂದ್ಯಾವಳಿಗೆ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ಚಾಲನೆ ನೀಡಿದರು

ಖಾಸಗಿ ಬಸ್ ಚಾಲಕರ ಪರವಾನಗಿ ರದ್ದತಿಗೆ ಪ್ರಸ್ತಾವ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಮದ್ಯ ಕುಡಿದು ಬಸ್ ಚಲಾಯಿಸುತ್ತಿದ್ದ 9 ಚಾಲಕರನ್ನು ಪತ್ತೆ ಮಾಡಿರುವ ಸಂಚಾರ ಪೊಲೀಸರು, ಅವರೆಲ್ಲರ ಚಾಲನಾ ಪರವಾನಗಿ ರದ್ದುಪಡಿಸಲು ಸಾರಿಗೆ ಇಲಾಖೆಗೆ ಪ್ರಸ್ತಾವ ಸಲ್ಲಿಸಿದ್ದಾರೆ.

ಪಾನಮತ್ತರಾಗಿ ವಾಹನ ಚಾಲನೆ ಮಾಡುವುದರಿಂದ ನಗರದಲ್ಲಿ ಅಪಘಾತಗಳು ಸಂಭವಿಸುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಪೊಲೀಸರು, ಪಾನಮತ್ತ ಚಾಲಕರ ಪತ್ತೆಗಾಗಿ ವಿಶೇಷ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಮೆಜೆಸ್ಟಿಕ್, ಯಶವಂತಪುರ ಹಾಗೂ ಇತರೆ ಪ್ರದೇಶಗಳಲ್ಲಿ ಗುರುವಾರ ರಾತ್ರಿ 8 ಗಂಟೆಯಿಂದ 11.30 ಗಂಟೆಯವರೆಗೆ ಕಾರ್ಯಾಚರಣೆ ನಡೆಸಿದ ಪೊಲೀಸರು, ಖಾಸಗಿ ಬಸ್‌ಗಳ 881 ಚಾಲಕರನ್ನು ತಪಾಸಣೆಗೆ ಒಳಪಡಿಸಿದರು. ಈ ಪೈಕಿ 9 ಚಾಲಕರು ಮದ್ಯ ಕುಡಿದಿದ್ದು ಕಂಡುಬಂತು.

‘ನಗರದಿಂದ ಹೊರ ಜಿಲ್ಲೆ ಹಾಗೂ ರಾಜ್ಯಗಳಿಗೆ ಹೋಗುವ ಖಾಸಗಿ ಬಸ್‌ಗಳ ಚಾಲಕರು ಮದ್ಯ ಕುಡಿದು ಚಾಲನೆ ಮಾಡುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ವಿಶೇಷ ಕಾರ್ಯಾಚರಣೆ ನಡೆಸಿದಾಗ 9 ಚಾಲಕರು ಸಿಕ್ಕಿಬಿದ್ದರು. ಇವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಜೊತೆಗೆ, ಎಲ್ಲರ ಚಾಲನಾ ಪರವಾನಗಿ ರದ್ದುಪಡಿಸಲು ಕ್ರಮ ಕೈಗೊಳ್ಳಲಾಗಿದೆ’ ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಎಂ.ಎನ್. ಅನುಚೇತ್ ತಿಳಿಸಿದರು.

‘2023ರಲ್ಲಿ ಖಾಸಗಿ ಬಸ್‌ಗಳಿಂದ 24 ಕಡೆ ಅಪಘಾತಗಳು ಸಂಭವಿಸಿದ್ದು, ಸಾವು–ನೋವುಗಳು ಉಂಟಾಗಿವೆ. ರಸ್ತೆ ಸುರಕ್ಷತೆ ಹೆಚ್ಚಿಸಲು ಇಂಥ ವಿಶೇಷ ಕಾರ್ಯಾಚರಣೆ ಮುಂದುವರಿಸಲಾಗುವುದು’ ಎಂದರು.


ನಗರದಲ್ಲಿ ಇಂದು

ಸದ್ಗುರು ಶ್ರೀ ತ್ಯಾಗರಾಜ ಸ್ವಾಮಿಗಳ ಆರಾಧನೆ–ರಾಷ್ಟ್ರೀಯ ಸಂಗೀತೋತ್ಸವ: ಶಾಸ್ತ್ರೀಯ ಸಂಗೀತಗಾರರಿಂದ ಸಂಗೀತ ಕಛೇರಿ, ಆಯೋಜನೆ: ಸದ್ಗುರು ಶ್ರೀ ತ್ಯಾಗಬ್ರಹ್ಮ ಆರಾಧನಾ ಕೈಂಕರ್ಯ ಟ್ರಸ್ಟ್, ಸ್ಥಳ: ಶೃಂಗೇರಿ ಶಂಕರ ಮಠದ ಆವರಣ, ಚಾಮರಾಜಪೇಟೆ, ಬೆಳಿಗ್ಗೆ 10

ಭರತನಾಟ್ಯ ರಂಗಪ್ರವೇಶ: ಶ್ವೇತಾ ವಿಜಯ್, ಅತಿಥಿಗಳು: ಶೀಲಾ ಚಂದ್ರಶೇಖರ್, ಆರ್ ಎಸ್. ದಿಲೀಪ್, ಆಯೋಜನೆ: ನಿತ್ಯ ಲಹರಿ ಕಲಾ ಕೇಂದ್ರ ಟ್ರಸ್ಟ್, ಸ್ಥಳ: ರವೀಂದ್ರ ಕಲಾ ಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಲೋಕಸಭೆ ಚುನಾವಣೆ ಬಗ್ಗೆ ದುಂಡು ಮೇಜಿನ ಸಭೆ: ಅಧ್ಯಕ್ಷತೆ: ಮುಹಮ್ಮದ್ ಸಲೀಂ ಎಂಜಿನಿಯರ್, ಭಾಷಣಕಾರರು: ತ್ರಿಲೋಚನ್ ಶಾಸ್ತ್ರಿ, ಅರವಿಂದ್ ನರೇನ್, ಶಿವಸುಂದರ್, ಆಯೋಜನೆ: ಫೋರಂ ಫಾರ್ ಡೆಮಾಕ್ರಸಿ ಆ್ಯಂಡ್ ಕಮ್ಯುನಲ್ ಅಮಿಟಿ ಕರ್ನಾಟಕ ವಿಭಾಗ, ಸ್ಥಳ: ಬಿಇಎಫ್‌ಟಿ ಹಾಲ್, ದಾರುಸ್ಸಲಾಂ ಕಟ್ಟಡ, ಕ್ವೀನ್ಸ್ ರಸ್ತೆ, ಬೆಳಿಗ್ಗೆ 10

ಫೋರ್ಟಿಸ್ ಕ್ಯಾನ್ಸರ್ ಶೃಂಗಸಭೆ: ಮುಖ್ಯ ಅತಿಥಿ: ದಿನೇಶ್ ಗುಂಡೂರಾವ್, ಗೌರವ ಅತಿಥಿಗಳು: ಡಾ. ಪ್ರೇಮ್ ಕುಮಾರ್ ನಾಯರ್, ಡಾ. ಅಶುತೋಷ್ ರಘುವಂಶಿ, ಅಧ್ಯಕ್ಷತೆ: ಡಾ. ನಿತಿ ಕೃಷ್ಣ ರೈಝಾದ, ಆಯೋಜನೆ: ಫೋರ್ಟಿಸ್, ಸ್ಥಳ: ದಿ ಶೆರ್ಟನ್ ಗ್ರ್ಯಾಂಡ್ ಬೆಂಗಳೂರು, ಬ್ರಿಗೇಡ್ ಗೇಟ್ ವೇ, ಬೆಳಿಗ್ಗೆ 11.30


ರವಿಶಂಕರ ಗುರೂಜಿ

‘ಶ್ರೀ ಶ್ರೀ ಪ್ರಶಸ್ತಿ’ ಪ್ರದಾನ ಸಮಾರಂಭ: **ಸಾನ್ನಿಧ್ಯ:** ಶ್ರೀ ಶ್ರೀ ರವಿಶಂಕರ ಗುರೂಜಿ, ಮುಖ್ಯ ಅತಿಥಿಗಳು: ಸುಭಾಷ್ ಸರ್ಕಾರ್, ರಾಮಲಿಂಗಾರೆಡ್ಡಿ, ಆಯೋಜನೆ ಹಾಗೂ ಸ್ಥಳ: ಆರ್ಟ್ ಆಫ್ ಲಿವಿಂಗ್ ಅಂತರರಾಷ್ಟ್ರೀಯ ಕೇಂದ್ರ, ಬೆಳಿಗ್ಗೆ 10.30

2015ನೇ ಫಲಪುಷ್ಪ ಪ್ರದರ್ಶನದ ಬಹುಮಾನ ವಿತರಣೆ: ಶಮ್ಲಾ ಇಕ್ಬಾಲ್, ಅಶೋಕ್, ದೊಡ್ಡಣ್ಣ, ಡಾಲಿ ಧನಂಜಯ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ತೋಟಗಾರಿಕೆ ಇಲಾಖೆ, ಸ್ಥಳ: ತೋಟಗಾರಿಕೆ ಮಾಹಿತಿ ಕೇಂದ್ರ, ಲಾಲ್‌ಬಾಗ್, ಮಧ್ಯಾಹ್ನ 2.30

‘ನಕ್ಷತ್ರಗಳಿಗೂ ಅನಿಮಿಯಾ’ ವಿಶೇಷ ಉಪನ್ಯಾಸ: ಬಿ.ಎಸ್. ಶೈಲಜಾ, ಆಯೋಜನೆ ಹಾಗೂ ಸ್ಥಳ: ಜವಾಹರ್ ಲಾಲ್ ನೆಹರು ತಾರಾಲಯ, ಸಂಜೆ 4.30

‘ಕರುನಾಡ ಬೀಡು ಮನದುಂಬಿ ಹಾಡು’ ಗೀತ ನಮನ: ಉದ್ಘಾಟನೆ: ನ್ಯಾ.ಆರ್. ದೇವ್‌ದಾಸ್, ಮುಖ್ಯ ಅತಿಥಿಗಳು: ವಿವೇಕ್ ಸುಬ್ಬಾರೆಡ್ಡಿ, ಸುಂದರ್ ರಾಜ್, ಟಿ.ಜಿ. ರವಿ, ರಾಮಕೃಷ್ಣ, ಕೆ. ಕಲ್ಯಾಣ್, ಹರೀಶ್ ಎಂ.ಟಿ., ವಿರೇನ್ ಕೇಶವ್, ಶ್ರೀಲಕ್ಷ್ಮಿ, ಎಂ.ಟಿ. ನಾಣಯ್ಯ, ಆಯೋಜನೆ: ತರಂಗ್ ಕ್ರಿಯೇಟರ್ಸ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4.30

ಮೇದಾರ ಕೇತಯ್ಯಗಳ ಜಯಂತಿ: ಉದ್ಘಾಟನೆ: ಎಸ್. ಪಿನಾಕಪಾಣಿ, ‘ಸತ್ಯ ಶುದ್ಧತೆಯ ಅನಾವರಣ ಮೇದರ ಕೇತಯ್ಯಗಳು’ ವಿಷಯದ ಬಗ್ಗೆ ಉಪನ್ಯಾಸ: ಲೀಲಾ ವಿ. ದೇಸಾಯಿ, ಗಮಕ: ಸರ್ವಾಣಿ ಯೋಗೇಶ್, ಅಧ್ಯಕ್ಷತೆ: ಚನ್ನಮಲ್ಲಯ್ಯ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಬಸವ ಬೆಳಕು, ದೊಡ್ಡಬಸ್ತಿ ರಸ್ತೆ, ಕಲ್ಯಾಣ ಗೃಹನಿರ್ಮಾಣ ಸಹಕಾರ ಸಂಘ ಬಡಾವಣೆ, ಸಂಜೆ: 5

‘ಶ್ರೀ ರಾಮಾನುಜ ವೈಭವಂ’ ಸಂಗೀತ ನೃತ್ಯ ರೂಪಕ: ಆಯೋಜನೆ: ಯದುಗಿರಿ ಯತಿರಾಜ ಮಠ, ಕಲಾಪ್ರೇಮಿ ಫೌಂಡೇಶನ್, ಸಂಗೀತ ಸಂಭ್ರಮ, ಸ್ಥಳ: ಸೇವಾ ಸದನ ಸಭಾಂಗಣ, ಎಂ.ಎಲ್.ಎ. ಕಾಲೇಜು ಎದುರು, 14ನೇ ಕ್ರಾಸ್, ಮಲ್ಲೇಶ್ವರ, ಸಂಜೆ 5.30

20ನೇ ಸಂಗೀತ ಮತ್ತು ನೃತ್ಯ ಉತ್ಸವ 2024: ಪಿಟೀಲು ಜುಗಲ್‌ಬಂದಿ: ಮೈಸೂರು ಮಂಜುನಾಥ್, ಸುಮಂತ್ ಮಂಜುನಾಥ್, ಮೃದಂಗ: ನೈವೇಲಿ ವೆಂಕಟೇಶ್, ಖಂಜಿರ: ಗುರು ಪ್ರಸನ್ನ, ಆಯೋಜನೆ: ಇಂದಿರಾನಗರ ಸಂಗೀತ ಸಭಾ, ಸ್ಥಳ: ಪುರಂದರ ಭವನ, 8ನೇ ಮುಖ್ಯ ರಸ್ತೆ, ಹೆಚ್‌ಎಎಲ್ 2ನೇ ಹಂತ, ಸಂಜೆ 5.30

‘ಬೆಳತನಕ ಬೇಂದ್ರೆ’ ಸಂವಾದ, ಕೃತಿ ಬಿಡುಗಡೆ: ಆಯೋಜನೆ: ಚೇತನ ಫೌಂಡೇಶನ್ ಕರ್ನಾಟಕ, ಅಕ್ಷರ ಚಪ್ಪರ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಸ್ಥೆ, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ರಾತ್ರಿ 9.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in







ನಗರದ ಮಾಣೆಕ್‌ಷಾ ಮೈದಾನದಲ್ಲಿ ಶುಕ್ರವಾರ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಉತ್ತರಹಳ್ಳಿಯ ಕರ್ನಾಟಕ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು ಮಹಾನಾಯಕ ಡಾ. ಬಿ. ಆರ್ ಅಂಬೇಡ್ಕರ್ ನೃತ್ಯ ನಾಟಕ ಪ್ರದರ್ಶಿಸಿದರು (ಎಡ ಚಿತ್ರ). ನಗರದ ಉತ್ತರ ಹೆಗ್ಗನಹಳ್ಳಿಯ ಕರ್ನಾಟಕ ಪಬ್ಲಿಕ್ ಶಾಲೆಯ ಮಕ್ಕಳು 'ಈ ದೇಶವು ನಮಗಾಗಿಯೇ ಎಂದೆಂದಿಗೂ' ಎಂಬ ಹಾಡಿಗೆ ಸಾಮೂಹಿಕ ನೃತ್ಯ ಪ್ರದರ್ಶಿಸಿದರು (ಮಧ್ಯದ ಚಿತ್ರ). ಪ್ಯಾರಾ ಮಿಲಿಟರಿ ಪಡೆಯ ಯೋಧರು ವಿಶೇಷ ಅಣಕು ರಕ್ಷಣಾ ಕಾರ್ಯಾಚರಣೆ ಪ್ರದರ್ಶಿಸಿದರು — ಪ್ರಜಾವಾಣಿ ಚಿತ್ರಗಳು: ಪ್ರಶಾಂತ್ ಎಚ್‌.ಜಿ.

ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಮೈನವಿರೇಳಿಸಿದ ಬೈಕ್ ಸಾಹಸ, 'ಕಳರಿಪಯಟ್ಟು' ಸಮರ

ಗಣತಂತ್ರದ ಸಂಭ್ರಮ: ಎಲ್ಲೆಡೆ ಹಾರಿದ ತ್ರಿವರ್ಣ ಧ್ವಜ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಳರಿಪಯಟ್ಟು' ಸಮರ ಕಲೆ ಹಾಗೂ ಬೈಕ್‌ಗಳಸಾಹಸಪ್ರದರ್ಶನ75ನೇಗಣರಾಜ್ಯೋತ್ಸವದಲ್ಲಿ ಭಾಗವಹಿಸಿದ್ದವರ ಮೈನವಿರೇಳಿಸುವಂತೆ ಮಾಡಿದವು.

ನಗರದ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಬಿಬಿಎಂಪಿ, ಬೆಂಗಳೂರು ನಗರ ಜಿಲ್ಲಾಡಳಿತ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕ್ಯಾಪ್ಟನ್ ಜಿ. ಬಾಸ್ಕೊ ರಾಜಾಸಿಂಗ್ ಕಾಮರಾಜ್ ನೇತೃತ್ವದ ಬೈಕ್‌ಗಳ ಸಾಹಸ, ಹವಾಲ್ದಾರ್ ಅನೀಶ್ ಥಾಮಸ್ ತಂಡದ 'ಕಳರಿಪಯಟ್ಟು' ಪ್ರದರ್ಶನಗ ಳನ್ನು ಜನರು ಆಶ್ಚರ್ಯಚಕಿತರಾಗಿ ವೀಕ್ಷಿಸಿದರು.

16 ಮಂದಿ ಬೈಕ್‌ಗಳನ್ನೇರಿ ನಡೆಸಿದ ಸೀಜರ್ ಕ್ರಾಸಿಂಗ್, ಡೈಮಂಡ್ ಕ್ರಾಸಿಂಗ್, ಒನ್ ಲೆಗ್ ರೈಡಿಂಗ್, ಸೈಡ್ ಬ್ಯಾಲೆನ್ಸಿಂಗ್‌ನಂತಹ ಕಸರತ್ತು, ಉರಿಯುತ್ತಿದ್ದ ಬೆಂಕಿಯ ವೃತ್ತದ ಮಧ್ಯೆ ಬೈಕ್ ಸಾಗಿದಾಗ, ಬೈಕ್‌ಗಳನ್ನೇ ಬಳಸಿ ಪಿರಮಿಡ್ ಮಾದರಿ ನಿರ್ಮಿಸಿ, ರಾಷ್ಟ್ರಧ್ವಜ ಬೀಸುತ್ತಾ ಸಾಗಿದ ದೃಶ್ಯಗಳಿಗೆ ಜನರು ಎದ್ದು ನಿಂತು ಚಪ್ಪಾಳೆ ತಟ್ಟಿ ಪ್ರೋತ್ಸಾಹಿಸಿದರು.

ಎಂಇಜಿ ಕೇಂದ್ರ ತಂಡದ ಕತ್ತಿವರಸೆ, ಕುಸ್ತಿಯ ಪಟ್ಟುಗಳು ಹಾಗೂ ಎಸ್‌ಎಫ್ ವಿಶೇಷ ತಂಡದ ಜೇಮ್ಸ್ ಅವರ ತಂಡ ನಡೆಸಿಕೊಟ್ಟ ಅಡಗು ತಾಣಗಳಲ್ಲಿ ಹೊಕ್ಕು ದಾಳಿ ಮಾಡುವ ಸಾಹಸಗಳಿಗೆ ಪ್ರೇಕ್ಷಕರು ಬೆರಗಾದರು.

ಧ್ವಜಾರೋಹಣದ ನಂತರ ನಡೆದ ಆಕರ್ಷಕ ಪಥಸಂಚಲನ, ಮಿಲಿಟರಿ ಬ್ಯಾಂಡ್ ಹಿಮ್ಮೇಳ, ಯೋಧರ ಸಾಹಸ ಪ್ರದರ್ಶನಗಳು ಗಮನ ಸೆಳೆದವು. ಗಡಿ ಭದ್ರತಾ ಪಡೆ, ಕೇಂದ್ರೀಯ ಮೀಸಲು ಪೊಲೀಸ್ ಪಡೆ, ಕರ್ನಾಟಕ ಕೈಗಾರಿಕಾ ಭದ್ರತಾ ಪಡೆ, ಬೆಂಗಳೂರು ನಗರ ಸಂಚಾರ ಪೊಲೀಸ್, ರಾಷ್ಟ್ರೀಯ ಸೇವಾ ಯೋಜನೆ ಸೇರಿ 30 ತುಕಡಿಗಳು ಭಾಗವಹಿಸಿದ್ದವು.

ಕೇರಳ ಪೊಲೀಸ್ ತಂಡ ಹಾಗೂ ಬೆಂಗಳೂರಿನ ಶ್ವಾನದಳ ಪಾಲ್ಗೊಂಡಿದ್ದು ವಿಶೇಷವಾಗಿತ್ತು.

ಸ್ವಾತಂತ್ರ್ಯ ಪೂರ್ವದಲ್ಲೇ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಶ್ರಮಿಸಿದ, ಆಧುನಿಕ ಭಾರತದ ಮೊದಲ ಶಿಕ್ಷಕಿ ಸಾವಿತ್ರಿ ಬಾ ಫುಲೆ ಅವರ ಜೀವನ ಚರಿತ್ರೆ ಸಾರುವ ಕಥೆಯನ್ನು ಬೆಂಗಳೂರು ದಕ್ಷಿಣದ ಪಿಳ್ಳಣ್ಣ ಗಾರ್ಡನ್‌ನ ಬಿಬಿಎಂಪಿ ಸಂಯುಕ್ತ ಪದವಿಪೂರ್ವ ಕಾಲೇಜಿನ 700 ಮಕ್ಕಳು ನೃತ್ಯರೂಪಕದಲ್ಲಿ ಕಟ್ಟಿಕೊಟ್ಟರು. ಆ ಮೂಲಕ ಸಾವಿತ್ರಿ ಬಾ ಫುಲೆ ಅವರಿಗೆ ನಮನ ಸಲ್ಲಿಸಿದರು.

ಬೆಂಗಳೂರು ಉತ್ತರದ ಹೆಗ್ಗನಹಳ್ಳಿ ಕರ್ನಾಟಕ ಪಬ್ಲಿಕ್ ಶಾಲೆಯ 700 ವಿದ್ಯಾರ್ಥಿಗಳು ಪ್ರದರ್ಶಿಸಿದ 'ಈ ದೇಶವು ನಮಗಾಗಿಯೇ ಎಂದೆಂದಿಗೂ' ನೃತ್ಯರೂಪಕ ದೇಶ ಭಕ್ತಿಯ ಹಲವು ಹಂತಗಳನ್ನು ಅನಾವರಣಗೊಳಿಸಿತು.

ದೇಶಭಕ್ತಿ ಗೀತೆ, ನೃತ್ಯಗಳು

75ನೇ ಗಣರಾಜ್ಯೋತ್ಸವದ ಅಂಗವಾಗಿ ಶುಕ್ರವಾರ ನಗರದಾದ್ಯಂತ ಶಾಲಾ, ಕಾಲೇಜುಗಳಲ್ಲಿ, ಸಂಘ ಸಂಸ್ಥೆಗಳಲ್ಲಿ, ಉದ್ಯಾನ, ಆಟೊ ನಿಲ್ದಾಣ ಗಳಲ್ಲಿ, ವಿವಿಧ ಕಚೇರಿಗಳಲ್ಲಿ, ತ್ರಿವರ್ಣ ಧ್ವಜಗಳು ಹಾರಾಡಿದವು.

ಸಂವಿಧಾನದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳು ಸಹ ನಡೆದವು.

ಬಿಎಂಟಿಸಿ: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಗಣರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು.

ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್ ಆರ್. ಧ್ವಜಾರೋಹಣ ಮಾಡಿದರು. ಮಹಾತ್ಮ ಗಾಂಧೀಜಿ ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಸ್ವಾತಂತ್ರ್ಯ ಹೋರಾಟಗಾರ ಸಂಗೊಳ್ಳಿ ರಾಯಣ್ಣರ ಭಾವಚಿತ್ರಕ್ಕೆ ನಮನ ಸಲ್ಲಿಸಲಾಯಿತು. ಬಿಎಂಟಿಸಿ ನಿರ್ದೇಶಕಿ (ಭದ್ರತಾ ಮತ್ತು ಜಾಗೃತ) ಕಲಾ ಕೃಷ್ಣಸ್ವಾಮಿ, ನಿರ್ದೇಶಕಿ (ಮಾಹಿತಿ ಮತ್ತು ತಂತ್ರಜ್ಞಾನ) ಶಿಲ್ಪಾ ಎಂ. ಭಾಗವಹಿಸಿದ್ದರು.

ಗೋವಿಂದರಾಜನಗರ: ಇಲ್ಲಿನ ವಿಧಾನಸಭಾ ಕ್ಷೇತ್ರದ ಬಿಜೆಪಿ ಕಚೇರಿಯಲ್ಲಿ ಗಣರಾಜ್ಯೋತ್ಸವ ಮತ್ತು ಸಂಗೊಳ್ಳಿ ರಾಯಣ್ಣ ಪುಣ್ಯಸ್ಮರಣೆ ಕಾರ್ಯಕ್ರಮ ನಡೆಯಿತು.

ಮಾಜಿ ಸಚಿವ ವಿ.ಸೋಮಣ್ಣ, ಬಿಜೆಪಿ ಮುಖಂಡ ಅರುಣ್ ಸೋಮಣ್ಣ, ಮಂಡಲ ಬಿಜೆಪಿ ಅಧ್ಯಕ್ಷ ವಿಶ್ವನಾಥ ಗೌಡ, ಮಹಿಳಾ ಘಟಕದ ಅಧ್ಯಕ್ಷೆ ರತ್ನಮ್ಮ, ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ರವೀಂದ್ರ, ಮೋಹನ್ ಕುಮಾರ್, ಬಾಬಿ, ವೆಂಕಟೇಶ್, ದಾಸೇಗೌಡ, ಪಲ್ಲವಿ ಚನ್ನಪ್ಪ, ರಾಜೇಶ್ವರಿ ಬೆಳಗೊಡ್, ರೂಪಾ ಲಿಂಗೇಶ್, ಜಯರತ್ನ ಭಾಗವಹಿಸಿದ್ದರು.

ಕೆಪಿಸಿಸಿ ಕಚೇರಿ: ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿ ಕಚೇರಿ ಆವರಣದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಧ್ವಜಾರೋಹಣ ನೆರವೇರಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಕಾಂಗ್ರೆಸ್ ಮುಖಂಡರು ಭಾಗಿಯಾಗಿದ್ದರು.

ರಾಜಭವನ: ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ರಾಜಭವನದ ಅಂಗಳದಲ್ಲಿರುವ ಮಹಾತ್ಮ ಗಾಂಧೀಜಿ ಮತ್ತು ಸಂವಿಧಾನ ಶಿಲ್ಪಿ ಡಾ ಬಿ.ಆರ್. ಅಂಬೇಡ್ಕರ್ ಪ್ರತಿಮೆಗಳಿಗೆ ಪುಷ್ಪನಮನ ಸಲ್ಲಿಸಿದರು.

'ಸಂವಿಧಾನವೇ ಶ್ರೇಷ್ಠ'

ಸಂವಿಧಾನವು ಎಲ್ಲ ಧರ್ಮಗ್ರಂಥಗಳಿಗಿಂತ ಶ್ರೇಷ್ಠ ಎಂದು ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಗಣರಾಜ್ಯೋತ್ಸವದ ಪ್ರಯುಕ್ತ ಬಿಜೆಪಿ ರಾಜ್ಯ ಕಾರ್ಯಾಲಯ 'ಜಗನ್ನಾಥ ಭವನ'ದಲ್ಲಿ ಧ್ವಜಾರೋಹಣ ನೆರವೇರಿಸಿದ ನಂತರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸುನೀಲ್ ಕುಮಾರ್, ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿ ರಾಜೇಶ್ ಜಿ.ವಿ., ವಿಧಾನಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ, ಶಾಸಕ ದಿನಕರ್ ಶೆಟ್ಟಿ, ವಿಧಾನಪರಿಷತ್ ಮಾಜಿ ಸದಸ್ಯ ಎಂ.ಡಿ. ಲಕ್ಷ್ಮೀನಾರಾಯಣ, ದೆಹಲಿ ಮಾಜಿ ವಿಶೇಷ ಪ್ರತಿನಿಧಿ ಶಂಕರಗೌಡ ಪಾಟೀಲ್ ಉಪಸ್ಥಿತರಿದ್ದರು.



ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಬೆಂಗಳೂರಿನ ಎಂಇಜಿ ಪಡೆಯ ಯೋಧರು 'ಕಳರಿಪಯಟ್ಟು' ಪ್ರದರ್ಶಿಸಿದರು



ಎಎಸ್‌ಸಿ ಯೋಧರಿಂದ ಬೈಕ್ ಸಾಹಸ ಪ್ರದರ್ಶನ — ಚಿತ್ರ: ಎಸ್‌.ಕೆ.ದಿನೇಶ್

ತೆರಿಗೆ: ರಿಯಾಯಿತಿ ನೀಡಲು ಪ್ರಸ್ತಾವ

ಬಿಬಿಎಂಪಿ ವ್ಯಾಪ್ತಿಯಲ್ಲಿ ತೆರಿಗೆ ಪಾವತಿಸದಿರುವವರನ್ನು, ಪಾವತಿಸುವಂತೆ ಮಾಡಲು ಎರಡು ರಿಯಾಯಿತಿಗಳನ್ನು ನೀಡುವ ಪ್ರಸ್ತಾವ ಇದೆ ಎಂದು ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಬಿಬಿಎಂಪಿ ಆವರಣದಲ್ಲಿ ಗಣರಾಜ್ಯೋತ್ಸವ ಆಚರಿಸಿದ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ದಂಡದ ಮೊತ್ತದಲ್ಲಿ ಮತ್ತು ಬಡ್ಡಿಯಲ್ಲಿ ರಿಯಾಯಿತಿ ನೀಡಲು ಕಾನೂನು ತಿದ್ದುಪಡಿ ಮಾಡುವ ಪ್ರಸ್ತಾವವನ್ನು ಬಿಬಿಎಂಪಿಯಿಂದ ಸರ್ಕಾರಕ್ಕೆ ಕಳುಹಿಸಲಾಗಿದೆ ಎಂದು ಮಾಹಿತಿ ನೀಡಿದರು.

ಆಡಳಿತಗಾರ ರಾಕೇಶ್ ಸಿಂಗ್, ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ಹರೀಶ್ ಕುಮಾರ್, ಶಿವಾನಂದ್ ಕಲ್ಕೆರೆ, ಪ್ರೀತಿ ಗೆಹಲೋತ್, ಪೂರ್ವ ವಲಯ ಆಯುಕ್ತ ಸ್ನೇಹಲ್, ಉಪ ಆಯುಕ್ತ ಮಂಜುನಾಥ ಸ್ವಾಮಿ ಉಪಸ್ಥಿತರಿದ್ದರು.

ಬೆಳ್ಳಿ ಪದಕ ಪ್ರದಾನ

ಗಣರಾಜ್ಯೋತ್ಸವ ಪ್ರಯುಕ್ತ ಕೆಎಸ್‌ಆರ್‌ಟಿಸಿ ಕೇಂದ್ರ ಕಚೇರಿಯಲ್ಲಿ ಧ್ವಜಾರೋಹಣ, ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರಗಳಿಗೆ ಪುಷ್ಪನಮನ ಸಲ್ಲಿಸಲಾಯಿತು. ಏಳು ವರ್ಷಗಳಿಂದ ಅಪಘಾತ ರಹಿತವಾಗಿ ಬಸ್ ಚಾಲನೆ ಮಾಡಿದ ಚಾಲಕರಿಗೆ ಬೆಳ್ಳಿ ಪದಕ ಹಾಗೂ ನಗದು ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್, ನಿರ್ದೇಶಕಿ (ಸಿಬ್ಬಂದಿ ಮತ್ತು ಜಾಗೃತ) ಕೆ.ನಂದಿನಿ ದೇವಿ ಹಾಜರಿದ್ದರು.

ಪೌರಕಾರ್ಮಿಕ ಮಹಿಳೆಯಿಂದ ಧ್ವಜಾರೋಹಣ

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರ ಶಾಸಕರ ಕಚೇರಿಯಲ್ಲಿ ಪೌರ ಕಾರ್ಮಿಕ ಮಹಿಳೆ ಧ್ವಜಾರೋಹಣ ನೆರವೇರಿಸಿದರು.

ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರಾಗಿ ಜಿಲ್ಲಾ ಕೇಂದ್ರದಲ್ಲಿ ಧ್ವಜಾರೋಹಣ ನೆರವೇರಿಸಿ ಗೌರವ ವಂದನೆ ಸ್ವೀಕರಿಸಿದ ಸಚಿವರು, ಸ್ವಕ್ಷೇತ್ರದಲ್ಲಿ ತಮ್ಮ ಅನುಪಸ್ಥಿತಿಯಲ್ಲಿ ಪೌರ ಕಾರ್ಮಿಕರಿಂದ ಧ್ವಜರೋಹಣ ಕಾರ್ಯ ನೆರವೇರಿಸಲು ಅವಕಾಶ ಕಲ್ಪಿಸಿ ಕೊಟ್ಟಿದ್ದರು.

ದಿನೇಶ್ ಗುಂಡೂರಾವ್ ಅವರ ಪುತ್ರಿ ಅನನ್ಯ ರಾವ್ ಧ್ವಜವಂದನೆ ಸಲ್ಲಿಸಿದರು. ಪೌರ ಕಾರ್ಮಿಕರನ್ನು ಸನ್ಮಾನಿಸಲಾಯಿತು.

ಜಾತ್ಯತೀತ, ಸಮಸಮಾಜ ನಿರ್ಮಾಣದ ಆಶಯ

'ಜಾತ್ಯತೀತ ಮತ್ತು ಸಮ ಸಮಾಜದ ನಿರ್ಮಾಣ ಗಣರಾಜ್ಯ ಹಾಗೂ ಸಂವಿಧಾನದ ಆಶಯ. ಈ ಆಶಯಕ್ಕೆ ತಕ್ಕಂತೆ ದೇಶ ಪ್ರಗತಿ ಸಾಧಿಸುತ್ತಿದೆಯೇ ಎಂಬ ಬಗ್ಗೆ ಅವಲೋಕಿಸಬೇಕಾದ ಅಗತ್ಯವಿದೆ. ಈ ಆಶಯಗಳಿಗೆ ತಕ್ಕಂತೆ ನಾವು ಕೆಲಸ ಮಾಡಬೇಕು' ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ತಿಳಿಸಿದರು.

ಬೆಸ್ಕಾಂ ನಿಗಮ ಕಚೇರಿಯಲ್ಲಿ ಧ್ವಜಾರೋಹಣವನ್ನು ನೆರವೇರಿಸಿ ಮಾತನಾಡಿದರು. ಬೆಸ್ಕಾಂ ನಿರ್ದೇಶಕ (ಹಣಕಾಸು) ದರ್ಶನ್ ಜೆ., ನಿರ್ದೇಶಕ (ತಾಂತ್ರಿಕ) ಎಚ್.ಜೆ. ರಮೇಶ್., ಪ್ರಧಾನ ವ್ಯವಸ್ಥಾಪಕ (ಸಂಗ್ರಹಣೆ) ಶಿವಪ್ರಕಾಶ್, ಪ್ರಧಾನ ವ್ಯವಸ್ಥಾಪಕರಾದ ಪಾಲನೇತ್ರಾ, ಎಸ್.ಸಿ. ರಾಮಕೃಷ್ಣಪ್ಪ, ಉಪಪ್ರಧಾನ ವ್ಯವಸ್ಥಾಪಕ (ಕ್ಯುಎಸ್ ಆ್ಯಂಡ್ ಎಸ್) ರವೀಂದ್ರ, ಮುಖ್ಯ ಗುಮಾಸ್ತ ಅವೀನ್ ಉಪಸ್ಥಿತರಿದ್ದರು.

ಪ್ರಮುಖ ರಸ್ತೆಗಳಲ್ಲಿ ವಾಹನ ದಟ್ಟಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪ್ರಮುಖ ಮಾರ್ಗಗಳಲ್ಲಿ ಶುಕ್ರವಾರ ಬೆಳಿಗ್ಗೆಯಿಂದಲೂ ವಾಹನ ದಟ್ಟಣೆ ತೀವ್ರವಾಗಿತ್ತು. ಇದರಿಂದ ವಾಹನ ಸವಾರರು ಹೈರಾಣಾದರು.

ಮೂರು ದಿನ ರಜೆಯಿದ್ದ ಕಾರಣಕ್ಕೆ ಜನರು ಊರು ಹಾಗೂ ಪ್ರವಾಸಿ ಕೇಂದಗಳತ್ತ ಹೊರಟರು. ತುಮಕೂರು ರಸ್ತೆ, ಮೈಸೂರು ರಸ್ತೆ, ಬಳ್ಳಾರಿ ರಸ್ತೆಯಲ್ಲಿ ವಿಪರೀತ ದಟ್ಟಣೆ ಕಂಡುಬಂತು. ನೆಲಮಂಗಲದ ಟೋಲ್ ಬಳಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಟೋಲ್ ದಾಟಲು ಸಾಕಷ್ಟು ಸಮಯ ಹಿಡಿಯಿತು ಎಂದು ಸವಾರರು ಹೇಳಿದರು.

ಟಿ.ದಾಸರಹಳ್ಳಿ, ಜಾಲಹಳ್ಳಿ ಕ್ರಾಸ್, ಪೀಣ್ಯ, ಗೊರಗುಂಟೆಪಾಳ್ಯ ಜಂಕ್ಷನ್‌ನಲ್ಲಿ ಉದ್ದಕ್ಕೂ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಮೈಸೂರು ರಸ್ತೆಯಲ್ಲೂ ವಾಹನಗಳ ಸಾಲಾಗಿ ನಿಂತಿದ್ದು ಕಂಡುಬಂತು.

ಪೀಣ್ಯ ಇಂಡಸ್ಟ್ರಿಯ ಮೆಟ್ರೊ ನಿಲ್ದಾಣದಿಂದ ನಾಗಸಂದ್ರವರೆಗೂ ಶುಕ್ರವಾರ ಮೆಟ್ರೊ ಸಂಚಾರ ಇರಲಿಲ್ಲ. ತುಮಕೂರು ರಸ್ತೆಯಲ್ಲಿ ವಾಹನ ದಟ್ಟಣೆ ತೀವ್ರಗೊಳ್ಳಲು ಇದು ಸಹ ಕಾರಣವಾಗಿತ್ತು. ಉತ್ತರ ಭಾಗದ ಬಡಾವಣೆ ಜನರು ಮೆಜೆಸ್ಟಿಕ್‌ನತ್ತ ಬರಲು ಪರದಾಡಿದರು. ಹಾಸನ, ತುಮಕೂರು, ಚಿತ್ರದುರ್ಗ, ದಾವಣಗೆರೆಯಿಂದ ಬಸ್‌ನಲ್ಲಿ ಬಂದು ಮೆಟ್ರೊ ಹತ್ತಲು ನಾಗಸಂದ್ರದಲ್ಲಿ ಇಳಿದ ಪ್ರಯಾಣಿಕರು ಪರದಾಡಿದರು. ಮತ್ತೆ ಅಲ್ಲಿಂದ ಯಶವಂತಪುರ– ಗೊರಗುಂಟೆಪಾಳ್ಯಕ್ಕೆ ಬಿಎಂಟಿಸಿ ಬಸ್‌ನಲ್ಲಿ ಬಂದು ಮೆಟ್ರೊದಲ್ಲಿ ಸಂಚರಿಸಿದ್ದು ಕಂಡುಬಂತು.

ಲಾಲ್‌ಬಾಗ್‌ನಲ್ಲಿ ಫಲಪುಷ್ಪ ಪ್ರದರ್ಶನ ನಡೆಯುತ್ತಿದ್ದು, ಇದರ ವೀಕ್ಷಣೆಗೆ ಹೆಚ್ಚಿನ ಜನರು ಬಂದಿದ್ದರು. ಲಾಲ್‌ಬಾಗ್ ಸುತ್ತಮುತ್ತ ಹೆಚ್ಚಿನ ಜನರು ಕಂಡುಬಂದರು. ಸಾವಿರಾರು ವಾಹನಗಳು ಬಂದ ಕಾರಣಕ್ಕೆ ಪಾರ್ಕಿಂಗ್ ಮಾಡಲು ಸಮಸ್ಯೆ ಎದುರಾಗಿತ್ತು.

ರಿಚ್ಮಂಡ್ ವೃತ್ತ, ಕಾರ್ಪೊರೇಷನ್ ವೃತ್ತ, ರೆಸಿಡೆನ್ಸಿ ರಸ್ತೆ, ಮೆಜೆಸ್ಟಿಕ್, ಕೆ.ಆರ್. ವೃತ್ತ ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ದಟ್ಟಣೆ ಕಂಡುಬಂತು. ದಟ್ಟಣೆಯಲ್ಲಿ ಸಿಲುಕಿ ಜನರು ಸುಸ್ತಾದರು. ಚಿಕ್ಕಪೇಟೆಯಲ್ಲಿ ಖರೀದಿಗೆ ಅಪಾರ ಸಂಖ್ಯೆಯಲ್ಲಿ ಗ್ರಾಹಕರು ಬಂದಿದ್ದರು.

'ದೇಶದ ಏಳಿಗೆಗೆ ಸಹಕರಿಸಿ'

ಪ್ರಜಾವಾಣಿ ವಾರ್ತೆ

ಯಲಹಂಕ: 'ಬಿ.ಆರ್. ಅಂಬೇಡ್ಕರ್ ಅವರು ವಿಶ್ವದಲ್ಲೇ ಅತ್ಯಂತ ಶ್ರೇಷ್ಠವಾದ ಸಂವಿಧಾನ ರಚಿಸಿ, ಭಾರತೀಯರಿಗೆ ಅರ್ಪಣೆ ಮಾಡಿದ ಈ ದಿನ, ನಮ್ಮೆಲ್ಲರಿಗೂ ಸಂಭ್ರಮದ ದಿನವಾಗಿದೆ' ಎಂದು ಶಾಸಕ ಎಸ್.ಆರ್.ವಿಶ್ವನಾಥ್ ಹೇಳಿದರು.

ತಾಲ್ಲೂಕು ಆಡಳಿತ ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯ ಆಶ್ರಯದಲ್ಲಿ ಉಪ ನಗರದ ಹೊಯ್ಸಳ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ 75ನೇ ಗಣರಾಜ್ಯೋತ್ಸವದಲ್ಲಿ ಅವರು ಮಾತನಾಡಿದರು.

'ದೇಶದ ಬಗ್ಗೆ ಪ್ರೇಮ, ಗೌರವ ಹಾಗೂ ಸಮರ್ಪಣಾ ಮನೋಭಾವ ಬೆಳೆಸಿಕೊಂಡು ದೇಶದ ಏಳಿಗೆಗೆ ಸಹಕರಿಸಬೇಕು' ಎಂದರು.

ತಹಶೀಲ್ದಾರ್ ಅನಿಲ್ ಕುಮಾರ್ ಅರೋಲಿಕರ್ ಧ್ವಜಾರೋಹಣ ನೆರವೇರಿಸಿದರು.

ಪೊಲೀಸ್, ಎನ್‌ಸಿಸಿ, ಭಾರತ ಸೇವಾದಳ ಸ್ಕೌಟ್ ಆ್ಯಂಡ್ ಗೈಡ್ಸ್, ವಿದ್ಯಾರ್ಥಿಗಳು ಹಾಗೂ ವಾದ್ಯಗೋಷ್ಠಿ ತಂಡಗಳಿಂದ ಆಕರ್ಷಕ ಪಥಸಂಚಲನ ನಡೆಯಿತು.

ವಿವಿಧ ಶಾಲೆಗಳ 3 ಸಾವಿರಕ್ಕೂ ಹೆಚ್ಚು ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಸಂವಿಧಾನದ ಮಹತ್ವ ತಿಳಿಸಬೇಕು: ಜೋಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದಲ್ಲಿರುವ ಬಹುತೇಕರಿಗೆ ಭಾರತ ಸಂವಿಧಾನದ ಪ್ರಮುಖ ಲಕ್ಷಣಗಳು ಮತ್ತು ಅದರ ಮಹತ್ವ ತಿಳಿದಿಲ್ಲ. ಆದ್ದರಿಂದ ಸಂವಿಧಾನದ ಮಹತ್ವವನ್ನು ಎಲ್ಲರಿಗೂ ತಿಳಿಸುವ ಕೆಲಸವಾಗಬೇಕು' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ ತಿಳಿಸಿದರು.

ಕಸಾಪ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 75ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

'ನಮ್ಮ ದೇಶದಲ್ಲಿ ಸ್ವಾತಂತ್ರ್ಯೋತ್ಸವ ಮತ್ತು ಗಣರಾಜ್ಯೋತ್ಸವಗಳೆರಡೂ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ದಿನಗಳಾಗಿವೆ. ಸಮೀಕ್ಷೆಯೊಂದರ ಪ್ರಕಾರ ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ 2ರಷ್ಟು ಜನರು ಮಾತ್ರ ಗಣರಾಜ್ಯೋತ್ಸವಕ್ಕಿಂತ ಮುಂಚೆ ಹುಟ್ಟಿದವರಾಗಿದ್ದಾರೆ. ಇದರಿಂದಾಗಿ ಹೆಚ್ಚಿನ ಜನರಿಗೆ ಸಂವಿಧಾನದ ಮಹತ್ವ ತಿಳಿದಿಲ್ಲ. ದೇಶದ ಆಡಳಿತವು ಸಂವಿಧಾನಕ್ಕೆ ತಕ್ಕಂತೆಯೇ ಇರಬೇಕೆಂದು ಕೇಶವಾನಂದ ಭಾರತಿ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ಹೇಳಿದೆ' ಎಂದರು.

ಪರಿಷತ್ತಿನ ಕಾರ್ಯದರ್ಶಿಗಳಾದ ಪದ್ಮಿನಿ ನಾಗರಾಜು, ನೇ.ಭ.ರಾಮಲಿಂಗಶೆಟ್ಟಿ ಹಾಗೂ ಕೋಶಾಧ್ಯಕ್ಷ ಬಿ.ಎಂ.ಪಟೇಲ್ ಪಾಂಡು ಪಾಲ್ಗೊಂಡಿದ್ದರು.

ಪುಣ್ಯ ಸಂಸ್ಮರಣೆಯಲ್ಲಿ ಸಿದ್ದರಾಮಯ್ಯ ಹೇಳಿಕೆ

ಪಿತೂರಿಗೆ ಸಂಗೊಳ್ಳಿ ರಾಯಣ್ಣ ಬಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ವಾತಂತ್ರ ಪ್ರೇಮಿ, ದೇಶ ಪ್ರೇಮಿ ಸಂಗೊಳ್ಳಿ ರಾಯಣ್ಣನನ್ನು ಬ್ರಿಟಿಷರಿಗೆ ಇಲ್ಲಿಯವರೇ ಕುತಂತ್ರದಿಂದ ಹಿಡಿದುಕೊಟ್ಟಿದ್ದರು. ಬ್ರಿಟಿಷರು 400 ವರ್ಷ ಭಾರತವನ್ನು ಆಳಲು ಕೂಡಾ ಇಂಥ ಪಿತೂರಿಯೇ ಕಾರಣ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಗರದಲ್ಲಿ ಶುಕ್ರವಾರ ನಡೆದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪುಣ್ಯ ಸಂಸ್ಮರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ ರಾಯಣ್ಣ ಹೆಸರಿಡಲು ಕೇಂದ್ರಕ್ಕೆ ಶಿಫಾರಸು ಮಾಡಲಾಗಿದೆ. ಕೆಂಪೇಗೌಡ, ರಾಯಣ್ಣ, ಬಸವಣ್ಣ, ಕುವೆಂಪು, ಕನಕದಾಸ, ಮಹಾತ್ಮಗಾಂಧಿ, ವಿವೇಕಾನಂದರು ಸಹಿತ ಎಲ್ಲ ಮಹಾತ್ಮರ ಆಶಯಗಳು ಸ್ಫೂರ್ತಿಯಾಗಬೇಕು ಎನ್ನುವ ಕಾರಣಕ್ಕೆ ಈ ಮಹಾತ್ಮರ ಹೆಸರುಗಳನ್ನು ಬೇರೆ ಬೇರೆ ವಿಮಾನ ನಿಲ್ದಾಣಗಳಿಗೆ ಇಡಲಾಗುತ್ತಿದೆ' ಎಂದರು.



ನಗರದಲ್ಲಿ ಶುಕ್ರವಾರ ನಡೆದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪುಣ್ಯ ಸಂಸ್ಮರಣೆ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಎಚ್‌.ಎಂ.ರೇವಣ್ಣ, ಆದಿ ಚುಂಚನಗಿರಿ ಸಂಸ್ಥಾನದ ನಿರ್ಮಲಾನಂದನಾಥ ಸ್ವಾಮೀಜಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಚರ್ಚೆಯಲ್ಲಿ ತೊಡಗಿರುವುದು ಕಂಡು ಬಂತು

'ಮಹಾತ್ಮರ ಆಶಯಗಳು ನಾಶ ಆಗಬೇಕು. ಸಂವಿಧಾನ ಇರಬಾರದು. ಅಸಮಾನತೆ ಮುಂದುವರಿಯಬೇಕು. ಯಾರೋ ದುಡಿದಿದ್ದನ್ನು ತಾವು ಕುಳಿತು ತಿನ್ನಬೇಕು ಎಂದು ಬಯಸುವವರೇ ನಮ್ಮ ಸಂವಿಧಾನ ಬದಲಾಯಿಸುವ ಹುನ್ನಾರ ನಡೆಸುತ್ತಿದ್ದಾರೆ' ಎಂದು ಆರೋಪಿಸಿದರು.

'ಸಮಾಜದ ಬದಲಾವಣೆಗೆ ಒಪ್ಪದ, ಸಮಾನ ಅವಕಾಶಗಳನ್ನು ಒಪ್ಪದ, ಅಸಮಾನತೆಯನ್ನು ಪೋಷಿಸುವ ಜನರು ಈಗಲೂ ನಮ್ಮ ನಡುವೆ ಇದ್ದಾರೆ. ಇಂಥವರು ಬಹಳ ಅಪಾಯಕಾರಿ' ಎಂದು ಎಚ್ಚರಿಸಿದರು.

ಆದಿ ಚುಂಚನಗಿರಿ ಸಂಸ್ಥಾನದ ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿಗಳಾದ ಗೋವಿಂದರಾಜು, ನಸೀರ್ ಅಹಮದ್, ಮಾಜಿ ಸಚಿವ ಎಚ್‌.ಎಂ.ರೇವಣ್ಣ ಉಪಸ್ಥಿತರಿದ್ದರು.







1. ಬೆಂಗಳೂರಿನ ಫೀಲ್ಡ್ ಮಾರ್ಷಲ್ ಮಾಣೆಕ್‌ಷಾ ಪರೇಡ್ ಮೈದಾನದಲ್ಲಿ ಶುಕ್ರವಾರ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಬೆಂಗಳೂರಿನ ಪಿಳ್ಳಣ್ಣ ಗಾರ್ಡನ್‌ನ ಬಿಬಿಎಂಪಿ ಸಂಯುಕ್ತ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳು 'ಅಕ್ಷರದವ್ವ ಸಾವಿತ್ರಿಬಾಯಿ ಫುಲೆ' ಸಾಮೂಹಿಕ ನೃತ್ಯ ಪ್ರದರ್ಶನ ಮಾಡಿದರು – ಚಿತ್ರ/ ಪ್ರಶಾಂತ್ ಎಚ್‌.ಜಿ.
2. ಕಲಬುರಗಿಯ ಪೊಲೀಸ್ ಪರೇಡ್ ಮೈದಾನದಲ್ಲಿ ಹಾಕಿಕೊಂಡು ಬಂದಿದ್ದ ಕೋಳಿ ವೇಷ ವಿದ್ಯಾರ್ಥಿನಿಯರ ಗಮನ ಸೆಳೆಯಿತು – ಚಿತ್ರ/ತಾಜುದ್ದೀನ್ ಆಜಾದ್ 3. ದಕ್ಷಿಣ ಕನ್ನಡ ಜಿಲ್ಲೆ ಮೂಡುಬಿದಿರೆ ಆಳ್ವಾಸ್ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ 30 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು

ಬರ ಪರಿಹಾರಕ್ಕೆ ತುರ್ತುಕ್ರಮ: ಗಣರಾಜ್ಯೋತ್ಸವ ಸಮಾರಂಭದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಹೇಳಿಕೆ

'ಗ್ಯಾರಂಟಿಯಿಂದ ಜನರ ಬದುಕು ಸುಧಾರಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದು ಗ್ಯಾರಂಟಿ ಯೋಜನೆಗಳ ಸಮರ್ಪಕ ಅನುಷ್ಠಾನದಿಂದಾಗಿ ಸಾಮಾನ್ಯ ಜನರ ಬದುಕಿನ ಮಟ್ಟದಲ್ಲಿ ಸುಧಾರಣೆ ಕಾಣುತ್ತಿದೆ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಹೇಳಿದರು.

ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 75ನೇ ಗಣರಾಜ್ಯೋತ್ಸವ ಸಮಾರಂಭದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ಐದು ಗ್ಯಾರಂಟಿಗಳನ್ನು ಜಾರಿಗೊಳಿಸುವುದಾಗಿ ಸರ್ಕಾರ ಭರವಸೆ ನೀಡಿತ್ತು. ಕೊಟ್ಟ ಮಾತಿನಂತೆ ಎಲ್ಲಾ ಐದು ಗ್ಯಾರಂಟಿಗಳೂ ಅನುಷ್ಠಾನಗೊಂಡಿವೆ ಎಂದು ಹೇಳಿದರು. ಬರ ಪರಿಹಾರ ಕ್ರಮಗಳನ್ನು ಕೈಗೊಳ್ಳಲು ರಾಜ್ಯ ಸರ್ಕಾರ ರಾಷ್ಟ್ರೀಯ ವಿಪತ್ತು ನಿಧಿಯಿಂದ ಅನುದಾನ ಕೋರಲಾಗಿದೆ. ತಕ್ಷಣದ ಪರಿಹಾರವಾಗಿ 30 ಲಕ್ಷ ರೈತರಿಗೆ ₹580 ಕೋಟಿ ಬಿಡುಗಡೆ ಮಾಡಲಾಗುತ್ತಿದೆ ಎಂದು ತಿಳಿಸಿದರು.



ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಂದ ಗೌರವ ವಂದನೆ ಸ್ವೀಕಾರ –ಪ್ರಜಾವಾಣಿ ಚಿತ್ರ

ಮೇಕೆದಾಟು ಸಮತೋಲನ ಜಲಾಶಯ ಹಾಗೂ ಕುಡಿಯುವ ನೀರಿನ ಯೋಜನೆಯನ್ನು ತ್ವರಿತವಾಗಿ ಅನುಷ್ಠಾನಗೊಳಿಸಲು ಭೂಸ್ವಾಧೀನ ಪ್ರಕ್ರಿಯೆ ಚುರುಕುಗೊಳಿಸಲಾಗಿದೆ. ರಾಜ್ಯದ ನೀರಾವರಿ ಯೋಜನೆಗಳಿಗೆ ಒತ್ತು ನೀಡಲಾಗಿದೆ. ಮೇಕೆದಾಟು ಯೋಜನೆಗೆ ಬಳಸಿಕೊಳ್ಳುವ ಅರಣ್ಯಕ್ಕೆ ಪರ್ಯಾಯ ಭೂಮಿ ಹಸ್ತಾಂತರಿಸಲು ಕ್ರಮ ಕೈಗೊಳ್ಳಲಾಗಿದೆ. ಎತ್ತಿನಹೊಳೆ ಯೋಜನೆಯ ಮೊದಲನೇ ಹಂತದ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿವೆ. ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತದ ಕಾಮಗಾರಿಗಾಗಿ ಭೂಸ್ವಾಧೀನ, ಪುನರ್ವಸತಿ ಪ್ರಕ್ರಿಯೆಗಳು ವೇಗ ಪಡೆದಿವೆ. ನೀರಾವರಿ ಯೋಜನೆಗಳಿಗೆ 2023ರ ಅಂತ್ಯದವರೆಗೆ ₹9223.24 ಕೋಟಿ ವ್ಯಯಿಸಲಾಗಿದೆ ಎಂದು ವಿವರಿಸಿದರು.

ಬೆಂಗಳೂರಿನ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲು ಪ್ರಮುಖ ರಸ್ತೆಗಳಿಗೆ ₹2 ಸಾವಿರ ಕೋಟಿ ವೆಚ್ಚದಲ್ಲಿ ವೈಟ್‌ಟಾಪಿಂಗ್ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ. ಆಯ್ದ ಸ್ಥಳಗಳಲ್ಲಿ ಸುರಂಗ ರಸ್ತೆಗಳನ್ನು ನಿರ್ಮಿಸಲು ಯೋಜನೆ ರೂಪಿಸಲಾಗಿದ್ದು, ಪ್ರಾಯೋಗಿಕವಾಗಿ 2 ಕಿ.ಮೀ ರಸ್ತೆ ನಿರ್ಮಾಣಕ್ಕೆ ಸಮಗ್ರ ಯೋಜನಾ ವರದಿ ಸಿದ್ಧಪಡಿಸಲಾಗುತ್ತಿದೆ ಎಂದು ತಿಳಿಸಿದರು.

ದೇಶದ ಸಾಫ್ಟ್‌ವೇರ್ ರಫ್ತಿನಲ್ಲಿ ಕರ್ನಾಟಕದ ಕೊಡುಗೆ ಶೇ 42ರಷ್ಟಿದೆ. ಮಾಹಿತಿ ತಂತ್ರಜ್ಞಾನ ವಲಯದ ಬದಲಾಗುತ್ತಿರುವ ಅಗತ್ಯತೆಗಳಿಗೆ ಅನುಗುಣವಾಗಿ ಸರ್ಕಾರ ತನ್ನ ನೀತಿಗಳನ್ನು ಪರಿಷ್ಕರಿಸುತ್ತಾ ಸಾಗಿದೆ. ಹಾಗಾಗಿ, ಇಂದು ಕರ್ನಾಟಕ ದೇಶದ ಗಮನ ಸೆಳೆಯುತ್ತಿದೆ ಎಂದು ಹೇಳಿದರು.

ಸಿ.ಎಂ ಸಿದ್ದರಾಮಯ್ಯ, ಬೆಂಗಳೂರು ನಗರ ಜಿಲ್ಲಾಧಿಕಾರಿ ಕೆ.ಎ.ದಯಾನಂದ, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಉಪಸ್ಥಿತರಿದ್ದರು.

ಕೋಮುವಾದದ ಹುಟ್ಟಡಗಿಸಲು ಸನ್ನದ್ಧ: ಸಿದ್ದರಾಮಯ್ಯ

'ವಿಧಾನಸಭಾ ಚುನಾವಣೆಯಲ್ಲಿ ಕನ್ನಡಿಗರು ನೀಡಿರುವ ಜನಮತದಲ್ಲಿ, ಸಂವಿಧಾನದ ಆಶಯವಾದ ಜಾತ್ಯತೀತ ಸಮಾಜದ ರಕ್ಷಣೆಯ ಸಂದೇಶವೂ ಇದೆ ಎನ್ನುವುದನ್ನು ನಮ್ಮ ಸರ್ಕಾರ ಅರ್ಥ ಮಾಡಿಕೊಂಡಿದೆ. ನಮ್ಮ ಸರ್ಕಾರ ಕೋಮುವಾದಿ ಶಕ್ತಿಗಳ ಹುಟ್ಟಡಗಿಸಲು ಸರ್ವಸನ್ನದ್ಧವಾಗಿದೆ' ಎಂದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಗಣರಾಜ್ಯೋತ್ಸವ ಸಂದೇಶ ನೀಡಿರುವ ಅವರು, 'ನಮ್ಮ ನಡೆ ಅಭಿವೃದ್ಧಿ ಕಡೆಗೆ ಸಾಗುತ್ತಿದ್ದರೂ ನಮ್ಮ ಕನಸಿನ ಭಾರತದ ಗುರಿಯನ್ನು ತಲುಪಲು ಸಾಧ್ಯವಾಗಿಲ್ಲ ಎನ್ನುವುದನ್ನು ವಿಷಾದದಿಂದಲೇ ಒಪ್ಪಬೇಕಾಗಿದೆ. ಅಭಿವೃದ್ಧಿ ದಾರಿಯಲ್ಲಿ ಹೊಸ ಸವಾಲುಗಳು ಎದುರಾಗಿವೆ. ಮುಖ್ಯವಾಗಿ ಇತ್ತೀಚೆಗೆ ಹೆಡೆ ಎತ್ತಿರುವ ಕೋಮುವಾದ, ನಮ್ಮ ಜಾತ್ಯತೀತ ಸಮಾಜಕ್ಕೆ ಅಪಾಯವನ್ನುಂಟು ಮಾಡುವ ಆತಂಕವನ್ನು ಅನುಭವಿಸುತ್ತಿದ್ದೇವೆ' ಎಂದಿದ್ದಾರೆ.

'ಧಾರ್ಮಿಕ ರಾಷ್ಟ್ರೀಯತೆ ಮೂಲಕ ದೇಶವನ್ನು ಕಟ್ಟಲು ಸಾಧ್ಯವಿಲ್ಲ. ಧಾರ್ಮಿಕ ರಾಷ್ಟ್ರೀಯತೆಯು ಬಹುಧರ್ಮ, ಬಹುಭಾಷೆ ಮತ್ತು ಬಹುಸಂಸ್ಕೃತಿಯನ್ನು ಪ್ರತಿಪಾದಿಸುವ ಪ್ರಜಾಪ್ರಭುತ್ವಕ್ಕೆ ಮಾರಕವಾದುದು' ಎಂದು ಹೇಳಿದ್ದಾರೆ.

'ಸಮಾಜವನ್ನು ಧರ್ಮಗಳ ಆಧಾರದಲ್ಲಿ ವಿಭಜಿಸುವ ಹುನ್ನಾರಕ್ಕೆ ಜನತೆ ಬಲಿಯಾಗಬಾರದು. ಚುನಾಯಿತ ಸರ್ಕಾರ ಇಲ್ಲವೇ ಜನಪ್ರತಿನಿಧಿಗಳು ತಮ್ಮ ವೈಫಲ್ಯವನ್ನು ಮುಚ್ಚಿ ಹಾಕಲು ಜಾತಿ–ಧರ್ಮಗಳಂತಹ ಭಾವನಾತ್ಮಕ ವಿಷಯಗಳನ್ನು ದುರ್ಬಳಕೆ ಮಾಡುವುದು ಪ್ರಜಾಪ್ರಭುತ್ವದ ಆಶಯಗಳಿಗೆ ವಿರುದ್ಧವಾದುದು ಮತ್ತು ಸಂವಿಧಾನಕ್ಕೆ ಬಗೆವ ದ್ರೋಹವಾಗಿದೆ' ಎಂದಿದ್ದಾರೆ.

ಗ್ರಾ.ಪಂ. ಅಧ್ಯಕ್ಷೆ ಕಾಲಿಗೆ ಗುಂಡೇಟು

ಇಂಡಿ(ವಿಜಯಪುರ): ತಾಲ್ಲೂಕಿನ ಹಿರೇರೂಗಿ ಗ್ರಾಮ ಪಂಚಾಯಿತಿ ಆವರಣದಲ್ಲಿ ಶುಕ್ರವಾರ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಕುಶಾಲತೋಪು (ಗಾಳಿಯಲ್ಲಿ ಗುಂಡು) ಹಾರಿಸುವ ವೇಳೆ ಆಕಸ್ಮಿಕವಾಗಿ ಗುಂಡು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಸೋಮವ್ವ ಹೊಸಮನಿ ಅವರ ಕಾಲಿಗೆ ತಗುಲಿ, ತೀವ್ರವಾಗಿ ಗಾಯಗೊಂಡಿದ್ದಾರೆ.

ಧ್ವಜಾರೋಹಣವಾದ ಕೂಡಲೇ ಕನ್ನಡಪರ ಸಂಘಟನೆಯ ಮುಖಂಡ ಮಲ್ಲು ಗಿಣ್ಣಿ ಗಾಳಿಯಲ್ಲಿ ಗುಂಡು ಹಾರಿಸಿದ್ದಾರೆ. ಬಳಿಕ ಬಂದೂಕನ್ನು ಕೆಳಗಿಳಿಸುವಾಗ, ಆಕಸ್ಮಿಕವಾಗಿ ಹಾರಿದ ಮತ್ತೊಂದು ಗುಂಡು ಸೋಮವ್ವ ಹೊಸಮನಿ ಅವರ ಮೊಣಕಾಲಿಗೆ ತಗುಲಿದೆ. ಅವರನ್ನು ತಕ್ಷಣವೇ ವಿಜಯಪುರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತು.

'ಗಣರಾಜ್ಯೋತ್ಸವ ವೇಳೆ ಗಾಳಿಯಲ್ಲಿ ಗುಂಡು ಹಾರಿಸುವ ಸಂಪ್ರದಾಯ ಗ್ರಾಮದಲ್ಲಿ ಮೊದಲಿನಿಂದ ಇದೆ. ಆಕಸ್ಮಿಕವಾಗಿ ಗುಂಡು ನನಗೆ ತಗುಲಿದೆ. ಇದರ ಹಿಂದೆ ದುರುದ್ದೇಶವಿಲ್ಲ. ಇದನ್ನು ವಿವಾದ ಮಾಡುವ ಅಗತ್ಯವಿಲ್ಲ. ಊರಿನಲ್ಲಿ ನಾವೆಲ್ಲ ಒಂದೇ ತಾಯಿ ಮಕ್ಕಳಂತೆ ಇದ್ದೇವೆ. ನಮ್ಮ ನಡುವೆ ಯಾವುದೇ ದ್ವೇಷವಿಲ್ಲ, ಗುಂಡು ಹಾರಿಸಿದವ ನನ್ನ ಮಗನಿದ್ದಂತೆ' ಎಂದು ಸೋಮವ್ವ ಹೊಸಮನಿ ತಿಳಿಸಿದರು.

ಇಂಡಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ ಎಂದು ಪಿಎಸ್‌ಐ ಸೋಮೇಶ ಗೆಜ್ಜಿ ತಿಳಿಸಿದ್ದಾರೆ.

ಕಮಲದ ಹೂವು ಪ್ರದರ್ಶಿಸಿದ್ದಕ್ಕೆ ಶಾಸಕ ಶಿವಲಿಂಗೇಗೌಡ ಆಕ್ಷೇಪ

ಹಾಸನ: ಅರಸೀಕೆರೆಯಲ್ಲಿ ಶುಕ್ರವಾರ ನಡೆದ ಗಣರಾಜ್ಯೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮದ ವೇಳೆ ಶಾಲಾ ಮಕ್ಕಳು ಕಮಲದ ಹೂವನ್ನು ಪ್ರದರ್ಶಿಸಿದ್ದಕ್ಕೆ ಶಾಸಕ ಕೆ.ಎಂ. ಶಿವಲಿಂಗೇಗೌಡ ಆಕ್ಷೇಪ ವ್ಯಕ್ತಪಡಿಸಿದರು.

ಮಕ್ಕಳು ಎಲ್ಲ ರಾಷ್ಟ್ರೀಯ ಚಿಹ್ನೆಗಳನ್ನು ಬಳಸಿಕೊಂಡು ನೃತ್ಯ ಮಾಡುತ್ತಿದ್ದರು. ಕಮಲವನ್ನು ಗಮನಿಸಿದ ಶಾಸಕರು, 'ಅದು ಬಿಜೆಪಿ ಪಕ್ಷದ ಚಿಹ್ನೆ. ಏಕೆ ಹಾಕಿದ್ದೀರಿ, ತೆಗೆಯಿರಿ ಎಂದು ಶಿಕ್ಷಕಿ ವಿರುದ್ಧ ಸಿಟ್ಟಿಗೆದ್ದರು.

'ಅದು ರಾಷ್ಟ್ರೀಯ ಹೂವು ಸರ್ ಅದಕ್ಕೆ ಬಳಸಿದ್ದೇವೆ. ಅದರ ಜೊತೆಗೆ ಎಲ್ಲ ರಾಷ್ಟ್ರೀಯ ಚಿಹ್ನೆಗಳಿವೆ' ಎಂದು ಶಿಕ್ಷಕಿ ಸಮಜಾಯಿಷಿ ನೀಡಲು ಮುಂದಾದರು. ಇದರಿಂದ ಮತ್ತಷ್ಟು ಕೆರಳಿದ ಶಾಸಕರು, 'ಏಯ್ ಏನ್ ಗೊತ್ತು ನಿಮಗೆ? ಇನ್ನೇನ್ ಉದ್ಧಾರ ಮಾಡ್ತೀರಾ ಮಕ್ಕಳನ್ನ' ಎಂದು ಕೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಶಿಕ್ಷಕಿ, 'ಈ ರೀತಿ ಮಾತಾಡುವುದು ಸರಿಹೋಗಲ್ಲ ಸರ್' ಎಂದು ಹೇಳಿದರು. 'ನನಗೇ ಎದುರು ಮಾತಾಡ್ತಿಯಾ, ನಿನಗೆ ನೋಟಿಸ್ ನೀಡಬೇಕಾಗುತ್ತೆ' ಎಂದು ಶಾಸಕರು ಎಚ್ಚರಿಕೆ ನೀಡಿದರು. ಅವರಿಬ್ಬರ ನಡುವೆ ಮಾತಿಗೆ ಮಾತು ಬೆಳೆಯುತ್ತಿದ್ದಂತೆಯೇ, ಸ್ಥಳೀಯ ಮುಖಂಡರು ಮಧ್ಯಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದರು.

ಶಿವಲಿಂಗೇಗೌಡರ ನಡೆಯ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ತೀವ್ರ ಚರ್ಚೆಯಾಗುತ್ತಿದೆ.

ರಾಜ್ಯಪಾಲರ ಎದುರು ನುಗ್ಗಿದ ಉದ್ಯೋಗಾಕಾಂಕ್ಷಿ!

ಸಮರ ಕಲೆ 'ಕಳರಿಪಯಟ್ಟು' ಪ್ರದರ್ಶನ ಮುಗಿಯುತ್ತಿದ್ದಂತೆ ರಾಜ್ಯಪಾಲರ ಎದುರಿನ ವೇದಿಕೆ ಬಳಿ ನುಗ್ಗಿದ ಉದ್ಯೋಗಾಂಕ್ಷಿ ಪರಶುರಾಮ್ ಕರ್ನಾಟಕ ಲೋಕ ಸೇವಾ ಆಯೋಗದ ವಿರುದ್ಧ ಘೋಷಣೆ ಕೂಗಿದರು.

ಕೆಪಿಎಸ್‌ಸಿ ನೇಮಕಾತಿ ಪ್ರಕ್ರಿಯೆಗಳು ವಿಳಂಬವಾಗುತ್ತಿವೆ. ಇದರಿಂದ ಸಾವಿರಾರು ನಿರುದ್ಯೋಗಿಗಳು ಅವಕಾಶ ವಂಚಿತರಾಗುತ್ತಿದ್ದಾರೆ. ಅಧಿಸೂಚನೆ ಹೊರಡಿಸಿ ಎರಡು–ಮೂರು ವರ್ಷಗಳಾದರೂ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳುವುದೇ ಇಲ್ಲ. ಪ್ರತಿ ನೇಮಕಾತಿಯನ್ನೂ ಕಾಲಮಿತಿಯ ಒಳಗೆ ತ್ವರಿತವಾಗಿ ಪೂರ್ಣಗೊಳಿಸಿ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಬೇಕು ಎಂಬ ಮನವಿ ಪತ್ರವನ್ನು ರಾಜ್ಯಪಾಲರತ್ತ ಎಸೆದರು.

ತಕ್ಷಣ ಅವರನ್ನು ವಶಕ್ಕೆ ಪಡೆದ ಪೊಲೀಸರು, ಮೈದಾನದಿಂದ ಹೊರಕ್ಕೆ ಕರೆದುಕೊಂಡು ಹೋದರು.



32 ಸಂತ್ರಸ್ತರ ಕುಟುಂಬದವರಿಗೆ ಫೆಬ್ರುವರಿ 1ರಿಂದ ಉದ್ಯೋಗ

ಚಾಮರಾಜನಗರ: 'ನಗರದ ಕೋವಿಡ್ ಆಸ್ಪತ್ರೆಯಲ್ಲಿ 2021ರ ಮೇ 2ರಂದು ಆಮ್ಲಜನಕ ಸಕಾಲದಲ್ಲಿ ಪೂರೈಕೆಯಾಗದೆ ಮೃತಪಟ್ಟ 32 ಮಂದಿಯ ಕುಟುಂಬದ ಸದಸ್ಯರಿಗೆ ಉದ್ಯೋಗ ನೀಡಲಾಗುವುದು' ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಘೋಷಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣ ದಲ್ಲಿ ಶುಕ್ರವಾರ ನಡೆದ ಗಣರಾಜ್ಯೋತ್ಸವ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ಅವರು, 'ಸಂತ್ರಸ್ತರ ಕುಟುಂಬದವರು ಫೆ.1ರಿಂದ ಜಿಲ್ಲೆಯಲ್ಲಿ ಕೆಲಸ ಮಾಡಬಹುದು. ಸಂಬಂಧಿಸಿದವರು ಜಿಲ್ಲಾಧಿಕಾರಿ ಕಚೇರಿ ಸಂಪರ್ಕಿಸಬೇಕು. ಮುಂದಿನ ದಿನಗಳಲ್ಲಿ ಅವರಿಗೆ ಹೆಚ್ಚು ಅವಕಾಶ ನೀಡಲಾಗುವುದು' ಎಂದರು.

ಹೊರಗುತ್ತಿಗೆ ಆಧಾರದಲ್ಲಿ ಕೆಲಸ: ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, 'ದುರ್ಘಟನೆ ಸಂಭವಿಸಿದ ಸಂದರ್ಭದಲ್ಲಿ ಅಧಿಕಾರದಲ್ಲಿ ಇಲ್ಲದಿದ್ದರೂ ಪಕ್ಷದ ಮುಖಂಡರು ಸಂತ್ರಸ್ತ ಕುಟುಂಬದವರನ್ನು ಭೇಟಿಯಾಗಿ ಧೈರ್ಯ ತುಂಬಿದ್ದರು. ಪಕ್ಷದಿಂದ ಪರಿಹಾರವನ್ನೂ ನೀಡಲಾಗಿತ್ತು. ಅಧಿಕಾರಕ್ಕೆ ಬಂದರೆ ಸರ್ಕಾರಿ ಕೆಲಸ ನೀಡುವ ಭರವಸೆಯನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ವಿಧಾನಸಭೆಯ ವಿರೋಧಪಕ್ಷದ ನಾಯಕರಾಗಿದ್ದ ಸಿದ್ದರಾಮಯ್ಯ ನೀಡಿದ್ದರು. ಪ್ರತಿ ಕುಟುಂಬದ ಒಬ್ಬರು ಸದಸ್ಯರಿಗೆ ಸರ್ಕಾರಿ ಕಾಯಂ ಉದ್ಯೋಗ ನೀಡುವಂತೆ ಜಿಲ್ಲಾಡಳಿತ ಪ್ರಸ್ತಾವ ಸಲ್ಲಿಸಿದೆ' ಎಂದರು.

'ಆ ವಿಷಯದಲ್ಲಿ ನಿರ್ಧಾರ ಕೈಗೊಳ್ಳಲು ಇನ್ನೂ ಸಮಯ ಬೇಕು. ಆದರೆ, ಕುಟುಂಬದವರಿಗೆ ಉದ್ಯೋಗ ಕೊಡಿಸುವಂತೆ ಒತ್ತಡ ಇದೆ. ಆದ್ದರಿಂದ ಈಗ ತಾತ್ಕಾಲಿಕವಾಗಿ ಹೊರಗುತ್ತಿಗೆ ಆಧಾರದಲ್ಲಿ ಜಿಲ್ಲಾಡಳಿತ ಉದ್ಯೋಗ ನೀಡಲಿದೆ' ಎಂದು ಹೇಳಿದರು.

> ನಾನು ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದೆ. ಕಾರಣಾಂತರದಿಂದ ಕೈಬಿಟ್ಟರು. ಆಗಲೇ ನನಗೆ ಯಾವುದೇ ನಿಗಮ ಮಂಡಳಿ ಅಧ್ಯಕ್ಷ ಸ್ಥಾನ ಬೇಡ ಎಂದು ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಅವರಿಗೆ ಪತ್ರ ಸಹ ನೀಡಿದ್ದೆ. ಆದರೂ, ಏಕೆ ಕೊಟ್ಟರೊ ಗೊತ್ತಿಲ್ಲ. ಯಾವುದೇ ಕಾರಣಕ್ಕೂ ಜವಾಬ್ದಾರಿ ವಹಿಸಿಕೊಳ್ಳುವುದಿಲ್ಲ
>
> **ಎಸ್‌.ಎನ್‌.ಸುಬ್ಬಾರೆಡ್ಡಿ,** ಬಾಗೇಪಲ್ಲಿ ಶಾಸಕ

> ಎಂಸಿಎ ಹುದ್ದೆಯನ್ನು ಪಕ್ಷದ ಹಿರಿಯ ಕಾರ್ಯಕರ್ತರಿಗೆ ನೀಡಲು ಕೋರಿದ್ದೆ. ನನಗೆ ಅದೇ ಹುದ್ದೆ ಕೊಡಲಾಗಿದ್ದು, ಸದ್ಯಕ್ಕೆ ಒಪ್ಪಲ್ಲ. ತಿರಸ್ಕರಿಸುವ ನಿರ್ಧಾರವನ್ನೂ ಕೈಗೊಂಡಿಲ್ಲ. ಎರಡು ದಿನಗಳ ಬಳಿಕ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಅವರನ್ನು ಭೇಟಿಯಾಗಿ ಚರ್ಚಿಸಿ ಬಳಿಕ ಸೂಕ್ತ ನಿರ್ಣಯ ಕೈಗೊಳ್ಳುವೆ
>
> **ಸತೀಶ ಸೈಲ್,** ಕಾರವಾರ ಶಾಸಕ


ನಿಗಮ – ಮಂಡಳಿ ಅಧ್ಯಕ್ಷರ ಪಟ್ಟಿ

ಹಂಪನಗೌಡ ಬಾದರ್ಲಿ	ಕೈಗಾರಿಕಾ ಮೂಲಸೌಕರ್ಯ ಅಭಿವೃದ್ಧಿ ನಿಗಮ
ಅಪ್ಪಾಜಿ ನಾಡಗೌಡ	ಕರ್ನಾಟಕ ಸೋಪ್ಸ್ ಮತ್ತು ಡಿಟರ್ಜೆಂಟ್
ರಾಜು ಕಾಗೆ	ವಾಯವ್ಯ ಸಾರಿಗೆ
ಎಚ್‌.ವೈ.ಮೇಟಿ	ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರ
ಎಸ್‌.ಆರ್‌.ಶ್ರೀನಿವಾಸ	ರಾಜ್ಯ ರಸ್ತೆ ಸಾರಿಗೆ ನಿಗಮ
ಬಿ.ಎನ್‌.ಶಿವಣ್ಣನವರ್	ಅರಣ್ಯ ಅಭಿವೃದ್ಧಿ ನಿಗಮ
ಬಿ.ಜಿ.ಗೋವಿಂದಪ್ಪ	ಆಹಾರ ಮತ್ತು ನಾಗರಿಕ ಸರಬರಾಜು
ಎಚ್‌.ಸಿ.ಬಾಲಕೃಷ್ಣ	ರಾಜ್ಯ ರಸ್ತೆ ಅಭಿವೃದ್ಧಿ ನಿಗಮ
ಜಿ.ಎಸ್‌.ಪಾಟೀಲ	ಖನಿಜ ಅಭಿವೃದ್ಧಿ ನಿಗಮ
ಎನ್‌.ಎ.ಹ್ಯಾರಿಸ್	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಮಹಾಂತೇಶ್ ಕೌಜಲಗಿ	ರಾಜ್ಯ ಹಣಕಾಸು ಸಂಸ್ಥೆ
ಸಿ.ಪುಟ್ಟರಂಗ ಶೆಟ್ಟಿ	ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್
ಜಿ.ಟಿ.ಪಾಟೀಲ	ಹಟ್ಟಿ ಚಿನ್ನದ ಗಣಿ
ರಾಜಾ ವೆಂಕಟಪ್ಪ ನಾಯಕ್	ರಾಜ್ಯ ಉಗ್ರಾಣ ನಿಗಮ
ಬಿ.ಕೆ.ಸಂಗಮೇಶ್ವರ	ಗ್ರಾಮೀಣ ಮೂಲಸೌಕರ್ಯಗಳ ಅಭಿವೃದ್ಧಿ ನಿಗಮ
ಕೆ.ಎಂ.ಶಿವಲಿಂಗೇಗೌಡ	ಕರ್ನಾಟಕ ಗೃಹ ಮಂಡಳಿ
ಅಬ್ಬಯ್ಯ ಪ್ರಸಾದ್	ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ
ಬೇಳೂರು ಗೋಪಾಲಕೃಷ್ಣ	ಅರಣ್ಯ ಕೈಗಾರಿಕೆ ನಿಗಮ
ಎಸ್‌.ಎನ್‌.ನಾರಾಯಣ ಸ್ವಾಮಿ	ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ
ಟಿ.ರಘುಮೂರ್ತಿ	ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ
ರಮೇಶ್ ಬಂಡಿಸಿದ್ದೇಗೌಡ	ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ
ಬಿ.ಶಿವಣ್ಣ	ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಎಸ್‌.ಎನ್‌.ಸುಬ್ಬಾರೆಡ್ಡಿ	ರಾಜ್ಯ ಬೀಜ ನಿಗಮ
ವಿನಯ್ ಕುಲಕರ್ಣಿ	ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ
ಅನಿಲ್ ಚಿಕ್ಕಮಾದು	ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್
ಬಸವನಗೌಡ ದದ್ದಲ್	ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ
ಕನೀಜ್ ಫಾತಿಮಾ	ರೇಷ್ಮೆ ಉದ್ದಿಮೆಗಳ ನಿಗಮ
ವಿಜಯಾನಂದ ಕಾಶಪ್ಪನವರ್	ಕರ್ನಾಟಕ ಕ್ರೀಡಾ ಪ್ರಾಧಿಕಾರ
ಟಿ.ಡಿ.ರಾಜೇಗೌಡ	ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ
ರೂಪಕಲಾ ಎಂ	ಕರಕುಶಲ ಕೈಗಾರಿಕಾ ಅಭಿವೃದ್ಧಿ ನಿಗಮ
ಸತೀಶ್ ಸೈಲ್	ಮಾರ್ಕೆಟಿಂಗ್ ಕನ್ಸಲ್ಟೆಂಟ್ ಆ್ಯಂಡ್ ಏಜೆನ್ಸೀಸ್
ಶರತ್ ಬಚ್ಚೇಗೌಡ	ವಿದ್ಯುನ್ಮಾನ ಅಭಿವೃದ್ಧಿ ನಿಗಮ
ಜೆ.ಎಂ.ಗಣೇಶ್	ಕೈಮಗ್ಗ ಅಭಿವೃದ್ಧಿ ನಿಗಮ
ಬಸವನಗೌಡ ತುರುವಿಹಾಳ್	ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ

34 ಮಂದಿಗೆ ಸಂಪುಟ 'ಸಿರಿ'

ಒಂದನೇ ಪುಟದಿಂದ

ಸಚಿವಗಿರಿ ಕೈತಪ್ಪಿದ ಶಾಸಕರ ಅಸಮಾಧಾನ ತಣಿಸಲು ನಿಗಮ–ಮಂಡಳಿಗಳಿಗೆ ನೇಮಕ ಮಾಡುವ ಭರವಸೆ ನೀಡುತ್ತಾ ಬರಲಾಗಿತ್ತು.



ಶಿವಲಿಂಗೇಗೌಡ

32ರಿಂದ 35 ಶಾಸಕರಿಗೆ ಅವಕಾಶ ನೀಡುವ ಕುರಿತು ಚರ್ಚೆ ನಡೆದಿತ್ತು. ಸಾಕಷ್ಟು ಸಮಯದ ನಂತರ ಪಟ್ಟಿ ಸಿದ್ಧಪಡಿಸಲಾಗಿತ್ತು. ಶಾಸಕರ ಜತೆಗೇ ಪಕ್ಷದ ಕಾರ್ಯಕರ್ತರಿಗೂ ಅವಕಾಶ ನೀಡ ಬೇಕು ಎಂದು ರಾಹುಲ್ ಗಾಂಧಿ ಸೂಚಿಸಿದ್ದರಿಂದ ಮತ್ತೆ ವಿಳಂಬವಾಗಿತ್ತು.

ಕೆಲ ದಿನಗಳ ಹಿಂದೆಯಷ್ಟೇ ಶಾಸಕರು ಹಾಗೂ ಪಕ್ಷದ ಕಾರ್ಯಕರ್ತರನ್ನು ಒಳಗೊಂಡ ಪಟ್ಟಿ ಸಿದ್ಧಪಡಿಸಲಾಗಿತ್ತು. ಆದರೆ, ಮುಖ್ಯಮಂತ್ರಿ ಹಾಗೂ ಸಚಿವರ ಗಮನಕ್ಕೆ ತರದೆ ಕೆಲ ಹೆಸರು ಸೇರ್ಪಡೆಯಾಗಿವೆ ಎಂಬ ಅಸಮಾಧಾನ ಸ್ಫೋಟವಾದ ಕಾರಣ ಪಟ್ಟಿ ತಡೆಹಿಡಿಯಲಾಗಿತ್ತು. ಪಟ್ಟಿ ಸಿದ್ಧಪಡಿಸುವ ಮುನ್ನ ತಮ್ಮ ಅಭಿಪ್ರಾಯ ಕೇಳಿಲ್ಲ ಎಂದು ಗೃಹ ಸಚಿವ ಜಿ.ಪರಮೇಶ್ವರ, ಸಹಕಾರ ಸಚಿವ ಕೆ.ಎನ್. ರಾಜಣ್ಣ ಸೇರಿದಂತೆ ಹಲವರು ಅಸಮಾಧಾನ ವ್ಯಕ್ತಪಡಿಸಿದ್ದರು. 17ಕ್ಕೂ ಹೆಚ್ಚು ಸಚಿವರು ತಮ್ಮ ಇಲಾಖೆ ವ್ಯಾಪ್ತಿಯ ನಿಗಮ–ಮಂಡಳಿಗಳಿಗೆ ತಮ್ಮನ್ನು ಕೇಳದೇ ನೇಮಕ ಮಾಡುತ್ತಿರುವುದು ಸರಿಯಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದ್ದರು. ಹೈಕಮಾಂಡ್ ಹಸ್ತಕ್ಷೇಪದ ಬಗ್ಗೆ ಸಿಡಿದೆದ್ದಿದ್ದರು.

ಗಣರಾಜ್ಯೋತ್ಸವದ ದಿನ ಬೆಂಗಳೂರಿಗೆ ಬಂದಿದ್ದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಜತೆ ಸಿ.ಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಚರ್ಚೆ ನಡೆಸಿದರು. ಅದಾದ ಬಳಿಕ ನೇಮಕಾತಿ ಆದೇಶ ಹೊರಬಿದ್ದಿದೆ.

74 ಮಂದಿಗೆ ಸಂಪುಟ ದರ್ಜೆ!

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಸೇರಿ ಸಂಪುಟದಲ್ಲಿ 34 ಸಚಿವರು ಇದ್ದಾರೆ. ವಿಧಾನಸಭೆಯ ಐವರು ಹಾಗೂ ಪರಿಷತ್ತಿನ ಮೂವರು ಸದಸ್ಯರಿಗೆ ರಾಜಕೀಯ ಕಾರ್ಯದರ್ಶಿ, ಸಲಹೆಗಾರರು, ಅಧ್ಯಕ್ಷ ಇಂತಹ ಸ್ಥಾನ ನೀಡಿ ಸಚಿವ ದರ್ಜೆ ಸ್ಥಾನ–ಸೌಲಭ್ಯ ನೀಡಲಾಗಿದೆ. ಇವರಲ್ಲದೇ, ಇಬ್ಬರು ಸಲಹೆಗಾರರಿಗೆ ಇದೇ ಸೌಲಭ್ಯಗಳಿವೆ. ಈ 10 ಜನರ ಜತೆಗೆ ಈಗ ನಿಗಮ ಮಂಡಳಿಗಳಿಗೆ ನೇಮಕವಾಗಲಿರುವ 34 ಶಾಸಕರಿಗೂ ಸಂಪುಟ ದರ್ಜೆಯ ಸೌಲಭ್ಯ ನೀಡಲಾಗಿದೆ. ಹೀಗಾಗಿ, ಒಟ್ಟು 74 ಮಂದಿಗೆ ಸಚಿವ ದರ್ಜೆಯ ಸೌಲಭ್ಯ ನೀಡಿದಂತಾಗುತ್ತದೆ.

ಹೊಸಬರಿಗಿಲ್ಲ ಅವಕಾಶ

ನಿಗಮ–ಮಂಡಳಿಗಳ ನೇಮಕದಲ್ಲಿ ಹಿರಿಯ ಶಾಸಕರು ಹಾಗೂ ಚುನಾವಣೆ ಹೊತ್ತಿಗೆ ಕಾಂಗ್ರೆಸ್ ಸೇರಿದ್ದ ವಲಸಿಗರಿಗೆ ಮಣೆ ಹಾಕಲಾಗಿದೆ. ಮೊದಲ ಬಾರಿ ಶಾಸಕರಾದವರಿಗೆ ಹಾಗೂ ವಿಧಾನ ಪರಿಷತ್‌ನ ಯಾವ ಸದಸ್ಯರಿಗೂ ಅವಕಾಶ ನೀಡಿಲ್ಲ. ನಿಗಮ–ಮಂಡಳಿಗಳ ನೇಮಕಾತಿಗೆ ಸಿದ್ಧಪಡಿಸಿದ್ದ ಕಾರ್ಯಕರ್ತರ ಪಟ್ಟಿ ಸೋರಿಕೆಯಾಗಿತ್ತು. ಆದರೆ, ಬಿಡುಗಡೆಯಾದ ಪಟ್ಟಿಯಲ್ಲಿ ಶಾಸಕರ ಹೆಸರುಗಳಷ್ಟೇ ಇವೆ.

ಡಿಸಿಎಂಗೂ ಸಲಹೆಗಾರ?

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ವಿವಿಧ ಸಲಹೆಗಾರರನ್ನು ನೇಮಕ ಮಾಡಿದಂತೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಹಾನಗಲ್ ಶಾಸಕ ಶ್ರೀನಿವಾಸ ಮಾನೆ ಅವರನ್ನು ರಾಜಕೀಯ ಸಲಹೆಗಾರರನ್ನಾಗಿ ನೇಮಕ ಮಾಡುವ ಸಾಧ್ಯತೆ ಇದೆ.

ಸೋರಿಕೆಯಾದ ಪಟ್ಟಿಯಲ್ಲಿ ಮಾನೆ ಹೆಸರು ಇತ್ತು. ಅವರಿಗೆ ಡಿಸಿಎಂ ರಾಜಕೀಯ ಸಲಹೆಗಾರರ ಸ್ಥಾನ ನೀಡಲಾಗಿತ್ತು. ಶುಕ್ರವಾರದ ಆದೇಶದಲ್ಲಿ ಅವರ ಹೆಸರಿಲ್ಲ.

ಶ್ರೀರಾಮನ ವಿಗ್ರಹಕ್ಕಾಗಿ ಟ್ರಸ್ಟ್‌ಗೆ ಪತ್ರ: ಶಾಸಕ ಇಕ್ಬಾಲ್ ಹುಸೇನ್

ಪ್ರಜಾವಾಣಿ ವಾರ್ತೆ



ರಾಮನಗರ: 'ಅಯೋಧ್ಯೆ ರಾಮಮಂದಿರದಲ್ಲಿ ಪ್ರತಿಷ್ಠಾಪಿಸಲು ಸಿದ್ಧವಾಗಿದ್ದ ಶ್ರೀರಾಮನ ಮೂರ್ತಿಗಳಲ್ಲಿ ಉಳಿದ ಎರಡು ಮೂರ್ತಿಗಳಲ್ಲಿ ಶಿಲ್ಪಿ ಗಣಪತಿ ಭಟ್ ಅವರ ಕೆತ್ತನೆಯ ಮೂರ್ತಿಯನ್ನು ರಾಮನಗರದಲ್ಲಿ ನಿರ್ಮಿಸಲಿರುವ ರಾಮಮಂದಿರದಲ್ಲಿ ಪ್ರತಿಷ್ಠಾಪಿಸುವ ಚಿಂತನೆ ಇದೆ. ಇದಕ್ಕಾಗಿ ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ಗೆ ಪತ್ರ ಬರೆಯಲಾಗುವುದು' ಎಂದು ಶಾಸಕ ಎಚ್‌.ಎ.ಇಕ್ಬಾಲ್ ಹುಸೇನ್ ಹೇಳಿದರು.

ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿದ ಅವರು, 'ಸೂಕ್ಷ್ಮವಾದ ಈ ವಿಷಯ ಕುರಿತು ಶಿಲ್ಪಿಯವರ ಜೊತೆಗೆ ಚರ್ಚಿಸಲಾಗಿದೆ' ಎಂದು ಅವರು ತಿಳಿಸಿದರು.

'ದೇವರಿಗಿಂತ ಯಾವುದೂ ದೊಡ್ಡದಿಲ್ಲ. ಮಂದಿರಕ್ಕಾಗಿ ಬೆಟ್ಟದಲ್ಲಿ ಜಾಗ ಗುರುತಿಸಲು ಸೂಚಿಸಿದ್ದೇವೆ. ಬಜೆಟ್‌ನಲ್ಲಿ ಮಂದಿರಕ್ಕಾಗಿ ಹಣ ಮೀಸಲಿಡಲು ಮುಖ್ಯಮಂತ್ರಿ ಮತ್ತು ಪ್ರವಾಸೋದ್ಯಮದ ಸಚಿವರಿಗೂ ಮನವಿ ಮಾಡಿದ್ದೇವೆ. ರಾಮನ ನಿಜವಾದ ಭಕ್ತರಾದ ನಾವು ರಾಮಮಂದಿರ ನಿರ್ಮಾಣ ಮತ್ತು ರಾಮೋತ್ಸವ ಮಾಡುವುದು ಖಚಿತ' ಎಂದು ಅವರು ಮಾಹಿತಿ ನೀಡಿದರು.

'ಬೆಟ್ಟದಲ್ಲಿ ಈಗಾಗಲೇ ಪಟ್ಟಾಭಿರಾಮನ ದೇವಸ್ಥಾನವಿದೆ. ಅಲ್ಲಿ ಪೂಜೆ ಸೇರಿದಂತೆ ವಿವಿಧ ಧಾರ್ಮಿಕ ಚಟುವಟಿಕೆ ನಡೆಯುತ್ತಿದೆ. ಮಂದಿರ ನಿರ್ಮಾಣದಿಂದ ಅಲ್ಲಿನ ಪರಿಸರಕ್ಕೆ ತೊಂದರೆಯಾಗುವುದಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಬರ್ಮುಡ, ಜೀನ್ಸ್‌ಗೆ ನಿರ್ಬಂಧ, ಇನ್ನು ಮುಂದೆ ಪಂಚೆ ತೊಡುವುದು ಕಡ್ಡಾಯ

ವಿರೂಪಾಕ್ಷ ದೇವಸ್ಥಾನ: ವಸ್ತ್ರಸಂಹಿತೆ ಜಾರಿ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಮುಜರಾಯಿ ಇಲಾಖೆಗೆ ಒಳಪಟ್ಟ ಹಂಪಿಯ ವಿರೂಪಾಕ್ಷ ದೇವಸ್ಥಾನದಲ್ಲಿ ಶುಕ್ರವಾರದಿಂದ ವಸ್ತ್ರಸಂಹಿತೆ ಜಾರಿಗೆ ಬಂದಿದೆ. ಬರ್ಮುಡ, ಜೀನ್ಸ್ ಚಡ್ಡಿ ಧರಿಸಿ ಬಂದವರು ಇನ್ನು ಮುಂದೆ ಪಂಚೆ ತೊಡುವುದು ಕಡ್ಡಾಯ ಆಗಿದೆ.

ಪ್ರವಾಸಿ ತಾಣವೂ ಆದ ಹಂಪಿಗೆ ಸಾವಿರಾರು ಮಂದಿ ವಿದೇಶಿಯರು ಸಹ ಬರುತ್ತಾರೆ. ಅವರು ಹೆಚ್ಚಾಗಿ ತುಂಡು ಉಡುಗೆಯಲ್ಲಿ ಬರುತ್ತಿದ್ದು, ಇದರಿಂದ ದೇವಸ್ಥಾನದ ಪಾವಿತ್ರ್ಯಕ್ಕೆ ಧಕ್ಕೆ ಉಂಟಾಗುತ್ತಿದೆ ಎಂಬ ದೂರು ಕೇಳಿಬಂದಿತ್ತು. ಹೀಗಾಗಿ ವಸ್ತ್ರಸಂಹಿತೆ ಜಾರಿಗೆ ತರಲಾಗಿದೆ. ಮಹಿಳೆಯರು ಸಹ ತುಂಡುಡುಗೆಯಲ್ಲಿ ಬಂದರೆ ಮೇಲೆ ಶಲ್ಯ ತೊಡಬೇಕಾಗಿದೆ. ಕೊಡುವ ವಸ್ತ್ರಕ್ಕೆ ಸದ್ಯ ಶುಲ್ಕ ಪಡೆಯುತ್ತಿಲ್ಲ. ದೇವರ ದರ್ಶನ ಮಾಡಿದ ಬಳಿಕ ವಸ್ತ್ರವನ್ನು ವಾಪಸ್ ಪಡೆದುಕೊಳ್ಳುವ ವ್ಯವಸ್ಥೆ ಮಾಡಲಾಗಿದೆ.



ಹಂಪಿಯ ವಿರೂಪಾಕ್ಷ ದೇವಸ್ಥಾನದ ಪ್ರವೇಶ ದ್ವಾರದಲ್ಲಿ ಶುಕ್ರವಾರ ಜಿಲ್ಲಾಧಿಕಾರಿ ಎಂ.ಎಸ್‌.ದಿವಾಕರ್ ಅವರು ಪ್ರವಾಸಿಯೊಬ್ಬರಿಗೆ ಪಂಚೆ ಉಡಿಸಿ ದೇವರ ದರ್ಶನಕ್ಕೆ ಕಳುಹಿಸಿದರು –ಪ್ರಜಾವಾಣಿ ಚಿತ್ರ

'ಪ್ರವಾಸಕ್ಕೆ ಬರುವವರು ದೇವಸ್ಥಾನಕ್ಕೆ ಭೇಟಿ ನೀಡುವಾಗ, ಭಕ್ತಿ ಭಾವನೆ ಉದ್ದೀಪನೆಯ ಉಡುಪು ಧರಿಸಿ ದೇವರ ದರ್ಶನ ಪಡೆಯಬೇಕು. ಈ ಸದುದ್ದೇಶದಿಂದ ವಿಶೇಷ ಕ್ರಮ ವಹಿಸಿದ್ದೇವೆ' ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದರು.

'100ಕ್ಕೂ ಹೆಚ್ಚು ದೇಗುಲಗಳಲ್ಲಿ ವಸ್ತ್ರಸಂಹಿತೆ'

ಮಂಗಳೂರು: 'ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 100ಕ್ಕೂ ಹೆಚ್ಚು ಮುಜರಾಯಿಯೇತರ ದೇವಸ್ಥಾನಗಳಲ್ಲಿ ವಸ್ತ್ರಸಂಹಿತೆ ಕಡ್ಡಾಯಗೊಳಿಸಲು ದೇವಾಲಯಗಳ ವಿಶ್ವಸ್ಥರು ಒಪ್ಪಿದ್ದಾರೆ. ಹಂತ ಹಂತವಾಗಿ ಜಾರಿಗೊಳಿಸಲಾಗುವುದು' ಎಂದು ಕರ್ನಾಟಕ ದೇವಸ್ಥಾನ– ಮಠ ಮತ್ತು ಧಾರ್ಮಿಕ ಸಂಸ್ಥೆಗಳ ಮಹಾಸಂಘದ ಸಂಯೋಜಕ ಮೋಹನ ಗೌಡ ಹೇಳಿದರು.

ಶುಕ್ರವಾರ ಇಲ್ಲಿ ನಡೆದ ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ದೇವಸ್ಥಾನಗಳ ಅಧಿವೇಶನ ಪರಿಷತ್ತು ಸಭೆಯಲ್ಲಿ ಅವರು ಮಾತನಾಡಿದರು.

ದೇವಾಲಯಗಳು ಹಿಂದೂಗಳ ಪವಿತ್ರ ಕ್ಷೇತ್ರಗಳು. ಇಲ್ಲಿಗೆ ಬರುವಾಗ ಅಸಭ್ಯ ಉಡುಪು ಧರಿಸಿ ಬಂದರೆ ಪಾವಿತ್ರ್ಯ ಹಾಳಾಗುತ್ತದೆ. ಹೀಗಾಗಿ, ವಸ್ತ್ರಸಂಹಿತೆ ಕಡ್ಡಾಯಕ್ಕೆ ನಿರ್ಧರಿಸಲಾಗಿದೆ. ವಸ್ತ್ರಸಂಹಿತೆ ಕುರಿತು ಮಂಗಳಾರತಿ ಸಮಯದಲ್ಲಿ ತಿಳಿವಳಿಕೆ ನೀಡಲಾಗುವುದು' ಎಂದರು.

ಜಿಲ್ಲೆಯ ವಿವಿಧ ದೇವಸ್ಥಾನಗಳ 200ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದ ಸಭೆಯಲ್ಲಿ ಸ್ವೀಕರಿಸಿದ ಪ್ರಮುಖ ನಿರ್ಣಯಗಳು:

- ದೇವಸ್ಥಾನಗಳ ಜಾತ್ರೆ, ಉತ್ಸವ ಇತ್ಯಾದಿ ಸಂದರ್ಭಗಳಲ್ಲಿ ಅನ್ಯಮತೀಯರಿಗೆ ವ್ಯಾಪಾರ, ವಹಿವಾಟು ನಡೆಸಲು ಅವಕಾಶ ನೀಡಬಾರದು.
- ಮುಜರಾಯಿ ಇಲಾಖೆಯಡಿ ಬರುವ ದೇವಸ್ಥಾನಗಳಿಂದ ಸಂಗ್ರಹವಾಗುವ ಕಾಮನ್ ಪೂಲ್ ನಿಧಿಯನ್ನು ಹಿಂದೂ ಧಾರ್ಮಿಕ ಉದ್ದೇಶಕ್ಕೆ ಮಾತ್ರ ಬಳಸಬೇಕು.
- ರಾಜ್ಯದ ಅನೇಕ ದೇವಸ್ಥಾನಗಳು ಸರ್ಕಾರದ ನಿಯಂತ್ರಣದಲ್ಲಿದ್ದು, ಅವುಗಳನ್ನು ಸರ್ಕಾರದ ಹಿಡಿತದಿಂದ ಮುಕ್ತಗೊಳಿಸಬೇಕು.

ಅಂಬೇಡ್ಕರ್ ಪೂಜೆಗೆ ಬರಲ್ಲ ಎಂದ ವಿದ್ಯಾರ್ಥಿಗೆ ಥಳಿತ

ಕಲಬುರಗಿ: ನಗರದ ಹೈಕೋರ್ಟ್ ಬಳಿ ಇರುವ ಸರ್ಕಾರಿ ಹಾಸ್ಟೆಲ್‌ನಲ್ಲಿ ಅಂಬೇಡ್ಕರ್ ಪೂಜೆಗೆ ಬರಲು ನಿರಾಕರಿಸಿದ ವಿದ್ಯಾರ್ಥಿಯೊಬ್ಬನ ಮೇಲೆ ಹಲ್ಲೆ ನಡೆಸಿದ 15–20 ವಿದ್ಯಾರ್ಥಿಗಳಿರುವ ಗುಂಪು, ಆತನ ಬಟ್ಟೆ ಬಿಚ್ಚಿಸಿ, ಕೈಯಲ್ಲಿ ಅಂಬೇಡ್ಕರ್ ಭಾವಚಿತ್ರ ಕೊಟ್ಟು ಮೆರವಣಿಗೆ ನಡೆಸಿದ ಘಟನೆ ಗುರುವಾರ ನಡೆದಿದ್ದು, ಪ್ರಕರಣ ದಾಖಲಾಗಿದೆ.

ಜಿಲ್ಲೆಯ ಕಮಲಾಪುರ ತಾಲ್ಲೂಕಿನ ತಾಂಡಾವೊಂದರ 17 ವರ್ಷದ ವಿದ್ಯಾರ್ಥಿ ಹಲ್ಲೆಗೊಳಗಾಗಿದ್ದಾನೆ. ನಗರದ ಖಾಸಗಿ ಕಾಲೇಜಿನಲ್ಲಿ ಪಿಯುಸಿ ಓದುತ್ತಿರುವ ವಿದ್ಯಾರ್ಥಿಯ ಪೋಷಕರು ಮುಂಬೈನ ಕೆಲಸ ಮಾಡುತ್ತಿದ್ದಾರೆ. ಮೂರ್ನಾಲ್ಕು ವಾರಗಳಿಂದ ಪ್ರತಿ ಭಾನುವಾರ ಅಂಬೇಡ್ಕರ್ ಭಾವಚಿತ್ರಕ್ಕೆ ವಸತಿ ನಿಲಯದಲ್ಲಿ ಪೂಜೆ ಮಾಡಲಾಗುತ್ತಿತ್ತು. ಈ ಭಾನುವಾರ ಕೆಲಸ ಇರುವುದರಿಂದ ಪೂಜೆಗೆ ಬರಲು ಆಗುವುದಿಲ್ಲ ಎಂದು ಆತ ಹೇಳಿದ್ದಕ್ಕೆ ಹಲ್ಲೆ ನಡೆಸಿದ್ದಾರೆ ವಿದ್ಯಾರ್ಥಿ ತಂದೆ ದೂರಿನಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿಯ ಮೆರವಣಿಗೆ ನಡೆಸಿದ ವಿಡಿಯೊ ಮಾಡಲಾಗಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.



ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟ

(ದಲಿತ, ಹಿಂದುಳಿದ, ಆದಿವಾಸಿ, ಅಲೆಮಾರಿ, ಅಲ್ಪಸಂಖ್ಯಾತ ಮತ್ತು ಜನಪರ ಸಂಘಟನೆಗಳು)

ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ(ರಿ.)

ಇವರ ಸಂಯುಕ್ತ ಆಶ್ರಯದಲ್ಲಿ



ಸಂವಿಧಾನ, ಸಾಮಾಜಿಕ ನ್ಯಾಯ, ಸಹಬಾಳ್ವೆ ಮತ್ತು ಸ್ವಾಭಿಮಾನದ ಸಂರಕ್ಷಣೆಗಾಗಿ

ಶೋಷಿತರ ಜಾಗೃತಿ ಸಮಾವೇಶ

ದಿನಾಂಕ: 28-01-2024 ಭಾನುವಾರ ಬೆಳಗ್ಗೆ 11 ಗಂಟೆಗೆ

ಸ್ಥಳ: ಶ್ರೀ ಮಾದಾರ ಚೆನ್ನಯ್ಯ ಪೀಠದ ಪಕ್ಕದ ಮೈದಾನ (ಬೆಂಗಳೂರು-ಪುಣೆ ಹಳೆ ರಾಷ್ಟ್ರೀಯ ಹೆದ್ದಾರಿ-04) ಚಿತ್ರದುರ್ಗ

ರಾಜ್ಯದ ಜನಪ್ರಿಯ ಮುಖ್ಯಮಂತ್ರಿಗಳಾದ

ಶ್ರೀ ಸಿದ್ದರಾಮಯ್ಯನವರು

ಮತ್ತು ಶೋಷಿತ ಸಮುದಾಯದ ಹಾಲಿ ಮಾಜಿ ಸಚಿವರು, ಸಂಸದರು, ಶಾಸಕರುಗಳು ಭಾಗವಹಿಸಲಿದ್ದಾರೆ.

ಹಕ್ಕೊತ್ತಾಯಗಳು :

- ಹೆಚ್. ಕಾಂತರಾಜು ವರದಿಯನ್ನು ರಾಜ್ಯ ಸರ್ಕಾರವು ಈ ಕೂಡಲೇ ಸ್ವೀಕರಿಸಿ, ಸಾರ್ವಜನಿಕರ ಚರ್ಚೆಗೆ ಬಿಟ್ಟು , ವರದಿಯನ್ನು ಅಂಗೀಕರಿಸಿ ಜಾರಿಗೋಳಿಸಬೇಕು.
- EWS ಶೇ.10% ಮೀಸಲಾತಿಯನ್ನು ರದ್ದು ಪಡಿಸುವಂತೆ ಒತ್ತಾಯಿಸುತ್ತದೆ.
- ಮಹಿಳಾ ರಾಜಕೀಯ ಮೀಸಲಾತಿಯಲ್ಲಿ ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗಗಳ ಮಹಿಳೆಯರಿಗೆ ಒಳ ಮೀಸಲಾತಿ ನೀಡಬೇಕು.
- ಲೋಕಸಭೆ ಮತ್ತು ವಿಧಾನ ಸಭೆಗಳಲ್ಲಿ ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರಿಗೆ ಮೀಸಲಾತಿ ನೀಡಬೇಕು
- ಮೀಸಲಾತಿ ಪ್ರಮಾಣ ಜನಸಂಖ್ಯೆಗೆ ಅನುಗುಣವಾಗಿ ಇರಬೇಕು.
- ಖಾಸಗಿ ಕ್ಷೇತ್ರದಲ್ಲಿ ಶೋಷಿತ ವರ್ಗಗಳಿಗೆ ಸೇರಿದವರ ಪ್ರಾತಿನಿಧ್ಯವನ್ನು ಖಾತರಿಪಡಿಸಿಕೊಳ್ಳಲು ಅಗತ್ಯವಿರುವ ಕಾನೂನು ರೂಪಿಸಬೇಕು.
- ಮುಸ್ಲಿಂ ಸಮುದಾಯದ ಸಾಮಾಜಿಕ ಮತ್ತು ಶೈಕ್ಷಣಿಕ, ಆರ್ಥಿಕ ಸಬಲೀಕರಣಕ್ಕಾಗಿ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿ ರಾಜೇಂದ್ರ ಸಾಚಾರ್ ರವರು ಸಲ್ಲಿಸಿರುವ ವರದಿಯನ್ನು ಕೂಡಲೇ ಅನುಷ್ಠಾನಗೋಳಿಸಬೇಕು.

- ಸಮಸ್ತ ಶೋಷಿತ ಸಮುದಾಯಗಳೇ ಬನ್ನಿ ಜಾಗೃತರಾಗೋಣ!!
- ಪುರೋಹಿತಶಾಹಿ ಸಮುದಾಯಗಳ ಅಧಿಕಾರದಾಟದಲ್ಲಿ ದಾಳಗಳಾಗದಿರೋಣ!!
- ಹಿಂದುಳಿದ, ದಲಿತ, ಅಲ್ಪಸಂಖ್ಯಾತ ಸಮುದಾಯಗಳಿಗೆ ರಾಜಕೀಯ-ಆರ್ಥಿಕ ಸಮಪಾಲು- ಸಮಬಾಳು ಕೇಳೋಣ!!

ಬನ್ನಿ ಭಾಗವಹಿಸಿ !! ನಮ್ಮ ಹಕ್ಕುಗಳಿಗಾಗಿ ಹೋರಾಡೋಣ !!

225 ಚದರ ಕಿಲೋ ಮೀಟರ್ | 110 ಹಳ್ಳಿಗಳ ವ್ಯಾಪ್ತಿ

₹4,515.11 ಕೋಟಿ ಒಟ್ಟು 110 ಹಳ್ಳಿಗಳ ಅಭಿವೃದ್ಧಿಗೆ ವ್ಯಯವಾಗುವ ಮೊತ್ತ

₹1,574.64 ಕೋಟಿ ಬಿಬಿಎಂಪಿಯಿಂದ ಮೂಲಸೌಕರ್ಯಕ್ಕೆ ವೆಚ್ಚ

₹1,775.91 ಕೋಟಿ ಜಲಮಂಡಳಿಯಿಂದ ಒಳಚರಂಡಿ ಮಾರ್ಗ, ಎಸ್‌ಟಿಪಿ ಕಾಮಗಾರಿ

₹1,164.56 ಕೋಟಿ ಜಲಮಂಡಳಿಯಿಂದ ಕುಡಿಯುವ ನೀರು ಪೂರೈಕೆ ಕಾಮಗಾರಿಗಳಿಗೆ ವೆಚ್ಚ

ಬಿಬಿಎಂಪಿ ವ್ಯಾಪ್ತಿಗೆ ಸೇರಿದ 110 ಹಳ್ಳಿಗರಿಗೆ ದಶಕದಿಂದಲೂ ಸಿಗದ ಮೂಲಸೌಕರ್ಯ

ರಸ್ತೆ, ನೀರಾದ್ರೂ ಕೊಡ್ರಿ...

ಎಲ್ಲೆಲ್ಲಿ ಎಷ್ಟೆಷ್ಟು ಹಳ್ಳಿಗಳು? (ವಿಧಾನಸಭೆ ಕ್ಷೇತ್ರ)	ಮಹದೇವಪುರ	ಬೆಂಗಳೂರು ದಕ್ಷಿಣ	ಯಶವಂತಪುರ	ಕೆ.ಆರ್.ಪುರ	ಯಲಹಂಕ	ಬ್ಯಾಟರಾಯನಪುರ	ದಾಸರಹಳ್ಳಿ	ಆನೇಕಲ್
	31	27	19	11	8	8	5	1

ಭಾಷಣವೇ ಭೂಷಣ ಅಭಿವೃದ್ಧಿ ಗೌಣ

• ಆರ್. ಮಂಜುನಾಥ್




ಬೆಂಗಳೂರು: 'ಹಳ್ಳಿಯಾಗಿದ್ದಾಗಲೇ ಚೆನ್ನಾಗಿದ್ದೋ, ಕಾರ್ಪೊರೇಷನ್‌ಗೆ ನಮ್ಮನ್ನೇಕೆ ಸೇರಿಸಿದ್ರೋ ಗೊತ್ತಿಲ್ಲ. ಹೋಗಲಿ ಸೇರಿಸಿದ ಮೇಲೆ ನಮಗೆ ಬೇಕಾದ ಸವಲತ್ತು ಕೊಟ್ಟರೋ? ಅದೂ ಇಲ್ಲ... 15 ವರ್ಷದಿಂದ ಒಂದು ಚರಂಡಿ, ಒಂದು ರಸ್ತೆ ಮಾಡಿಕೊಡಲೂ ಇವರಿಗೆ ಆಗಿಲ್ಲ ಅಂದ್ರೆ ನಮಗೇಕೆ ಬೇಕು 'ಬಿಬಿಎಂಪಿ ಗರಿ....?'

ಬಿಬಿಎಂಪಿ ವ್ಯಾಪ್ತಿಗೆ ಸೇರಿರುವ 110 ಹಳ್ಳಿಗರ ಮಾತು, ಪ್ರಶ್ನೆಗಳಿವು. 'ಹಳ್ಳಿ ದಿಲ್ಲಿಯಾಗೋದೇನೂ ಬೇಡ, ಕನಿಷ್ಠ ರಸ್ತೆ, ಮೋರಿ, ಕುಡಿಯಲು ನೀರಾದ್ರೂ ಕೊಡಿ' ಎಂಬ ನಾಗರಿಕರ ಮೂಲ ಬೇಡಿಕೆಗೆ ಅಧಿಕಾರಸ್ಥರಿಂದ ದಶಕದಿಂದ ಸ್ಪಂದನೆ ಸಿಕ್ಕಿಲ್ಲ.

ಬೆಂಗಳೂರು ಮಹಾನಗರ ಪಾಲಿಕೆಯನ್ನು 2007ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ವಿಸ್ತರಿಸಿದ ಸಂದರ್ಭದಲ್ಲಿ ನಗರದ ಸುತ್ತಮುತ್ತಲಿನ ನಗರಸಭೆ, ಪುರಸಭೆ ಜೊತೆಗೆ 110 ಹಳ್ಳಿಗಳನ್ನೂ ಸೇರಿಸಿಕೊಳ್ಳಲಾಯಿತು. ದೇಶದ ನಾಲ್ಕನೇ ಅತಿದೊಡ್ಡ ಮಹಾನಗರ ಪಾಲಿಕೆ ಎಂಬ ಹೆಗ್ಗಳಿಕೆಗೆ ಈ ಸೇರ್ಪಡೆಯೂ ಕಾರಣ. ಆದರೆ ಈ ಪ್ರದೇಶಗಳಲ್ಲಿನ ಮೂಲಸೌಕರ್ಯ ಇಂದಿಗೂ ಮರೀಚಿಕೆಯಾಗಿಯೇ ಇದೆ.

'110 ಹಳ್ಳಿಗಳ ಅಭಿವೃದ್ಧಿಗೆ ಹಣ' ಎಂಬ ಘೋಷಣೆಗಳು 2007ರಿಂದಲೂ ಕೇಳಿಬರುತ್ತಲೇ ಇವೆ. ಬಿಬಿಎಂಪಿಯ 2008–09ನೇ ಬಜೆಟ್‌ನಿಂದಲೇ 'ಹಳ್ಳಿಗಳ ಅಭಿವೃದ್ಧಿ ಹಣ' ಎಂದು ಹಂಚಿಕೆ ಮಾಡಲಾಗುತ್ತಿದೆ. 'ಒಂದು ಕೋಟಿ ಒಂದು ಹಳ್ಳಿಗೆ' ವಿಶೇಷ ಯೋಜನೆಯಲ್ಲಿ 2015–16ನೇ ಸಾಲಿನಿಂದ 2018–19ನೇ ಸಾಲಿನವರೆಗೆ ₹300.40 ಕೋಟಿಯನ್ನು ಮೂಲಸೌಕರ್ಯ ಕಾಮಗಾರಿಗಳಿಗೆ ವೆಚ್ಚ ಮಾಡಲಾಗಿದೆ. 2019–20ನೇ ಸಾಲಿನ ನಂತರ ಸುಮಾರು ₹5 ಸಾವಿರ ಕೋಟಿ ವೆಚ್ಚ ಮಾಡಲಾಗುತ್ತಿದೆ ಎಂದು ಹೇಳಲಾಗುತ್ತಿದ್ದರೂ ಈ ಹಳ್ಳಿಗಳಲ್ಲಿ ಕನಿಷ್ಠ ರಸ್ತೆ, ಚರಂಡಿಯ ಸೌಕರ್ಯವೂ ಇಲ್ಲ ಎಂಬುದು ಬಹುತೇಕರ ದೂರು.

ಬಿಬಿಎಂಪಿ ರಸ್ತೆ, ಚರಂಡಿ ಹಾಗೂ ಜಲಮಂಡಳಿ ಹಾಳು ಮಾಡಿರುವ ರಸ್ತೆಯನ್ನು ಮರುಅಭಿವೃದ್ಧಿ ಮಾಡಲು ಸಾವಿರಾರು ಕೋಟಿ ವೆಚ್ಚ ಮಾಡುತ್ತಿದೆ. ಇನ್ನು ಜಲಮಂಡಳಿ, ಒಳಚರಂಡಿ ಮಾರ್ಗ, ಕುಡಿಯುವ ನೀರು ಒದಗಿಸಲು ಸುಮಾರು ₹3 ಸಾವಿರ ಕೋಟಿ ವೆಚ್ಚ ಮಾಡುತ್ತಿದೆ. ಇಷ್ಟೆಲ್ಲ ಕೋಟಿಗಳು ಕಾಗದ ಹಾಗೂ ಯೋಜನೆಯ ಅನುಷ್ಠಾನದ ಹೇಳಿಕೆಗಳಲ್ಲೇ ಉಳಿದಿದೆ. ಅಧಿಕಾರಿಗಳು ಆಗಾಗ್ಗೆ ಒಂದೊಂದು ಸಬೂಬು ಹೇಳಿಕೊಂಡು ಯೋಜನೆಗಳನ್ನು ಮುಂದೂಡುತ್ತಲೇ ಬಂದಿದ್ದಾರೆ. 110 ಗ್ರಾಮದ ಜನರು ಕನಿಷ್ಠ ಸೌಕರ್ಯವಿಲ್ಲದೆ ಹೈರಾಣರಾಗಿದ್ದಾರೆ.



ಕರಿಹೋಬನಹಳ್ಳಿಯಲ್ಲಿ ಡಾಂಬರು ಕಾಣದ ರಸ್ತೆ

ಬಿಬಿಎಂಪಿಯಿಂದ ಎಲ್ಲೆಲ್ಲಿ ಎಷ್ಟೆಷ್ಟು ವೆಚ್ಚ?
(2019–20ರಿಂದ 2022–23ರವರೆಗೆ)

ವಲಯ	ಗ್ರಾಮಗಳು	ಬಿಡುಗಡೆಯಾದ ಅನುದಾನ	ಒಟ್ಟು ವೆಚ್ಚ
ಬೊಮ್ಮನಹಳ್ಳಿ	28	₹175.5 ಕೋಟಿ	₹147.83 ಕೋಟಿ
ದಾಸರಹಳ್ಳಿ	5	₹65.48 ಕೋಟಿ	₹40.18 ಕೋಟಿ
ಮಹದೇವಪುರ	42	₹726.34 ಕೋಟಿ	₹599.77 ಕೋಟಿ
ರಾಜರಾಜೇಶ್ವರಿನಗರ	19	₹318 ಕೋಟಿ	₹253.50 ಕೋಟಿ
ಯಲಹಂಕ	16	₹177 ಕೋಟಿ	₹173.19 ಕೋಟಿ
ರಸ್ತೆ ಮೂಲಸೌಕರ್ಯ	-	₹112.32 ಕೋಟಿ	₹23.82 ಕೋಟಿ
ಒಟ್ಟು	110	₹1574.64 ಕೋಟಿ	₹1244.29 ಕೋಟಿ

ಬೆಂಗಳೂರು ದಕ್ಷಿಣ ಕ್ಷೇತ್ರ: ಸೌಮ್ಯಾ ಹೆಸರು ಶಿಫಾರಸು

ರಾಮನಗರ: 'ಬೆಂಗಳೂರು ದಕ್ಷಿಣ ಲೋಕಸಭೆ ಕ್ಷೇತ್ರದಿಂದ ಸ್ಪರ್ಧೆ ಮಾಡುವ ವಿಚಾರಕ್ಕೆ ಸಂಬಂಧಿಸಿದಂತೆ ಪುತ್ರಿ ಸೌಮ್ಯಾರೆಡ್ಡಿ ಅವರ ಹೆಸರನ್ನು ರಾಜ್ಯ ಕಾಂಗ್ರೆಸ್, ಹೈಕಮಾಂಡ್‌ಗೆ ಶಿಫಾರಸು ಮಾಡಿದೆ' ಎಂದು ರಾಮಲಿಂಗಾ ರೆಡ್ಡಿ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಜಯನಗರ ವಿಧಾನಸಭೆ ಚುನಾವಣೆ ಮರು ಮತ ಎಣಿಕೆಯಲ್ಲಿ ಅಧಿಕಾರಿಗಳಿಂದ ತಪ್ಪಾಗಿದೆ. ಈ ಬಗ್ಗೆ ಕಾನೂನು ಹೋರಾಟ ಮಾಡುತ್ತಿದ್ದು, ಸಾಬೀತಾದರೆ ಸೌಮ್ಯಾ ಅವರು ಮತ್ತೆ ಶಾಸಕಿಯಾಗುತ್ತಾರೆ' ಎಂದರು.

'ದಕ್ಷಿಣದಿಂದ ಸ್ಪರ್ಧಿಸುವಂತೆ 25 ವರ್ಷಗಳ ಹಿಂದೆ ನನಗೂ ಹೇಳಿದ್ದರು. ಆಗ ಸ್ಪರ್ಧೆಗೆ ನಿರಾಕರಿಸಿದ್ದೆ. ಈಗ, ನಾಲ್ಕೈದು ಯುವ ನಾಯಕರಿದ್ದು, ಅವರಲ್ಲೇ ಯಾರಿಗಾದರೂ ಅವಕಾಶ ಕೊಡಿ ಎಂದಿದ್ದೇನೆ' ಎಂದು ತಿಳಿಸಿದರು.

'ಪುಸ್ತಕ ಬಹುಮಾನ' ಪುಸ್ತಕಗಳ ಆಹ್ವಾನ

ಬೆಂಗಳೂರು: ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು 2022 ಹಾಗೂ 2023ನೇ ಸಾಲಿನ ಪುಸ್ತಕ ಬಹುಮಾನ ಯೋಜನೆಗೆ ಅನುವಾದಕರು ಹಾಗೂ ಪ್ರಕಾಶಕರಿಂದ ಪುಸ್ತಕಗಳನ್ನು ಆಹ್ವಾನಿಸಿದೆ.

2022ರ ಜ.1ರಿಂದ ಡಿ.31 ಹಾಗೂ 2023ರ ಜ.1ರಿಂದ ಡಿ.31ರ ಅವಧಿಯಲ್ಲಿ ಪ್ರಥಮಾವೃತ್ತಿಯಲ್ಲಿ ಪ್ರಕಟಗೊಂಡ ಅನುವಾದಿತ ಕೃತಿಗಳು ಹಾಗೂ ಅನುವಾದ ಅಧ್ಯಯನ ಕುರಿತ ಪುಸ್ತಕಗಳನ್ನು ಪರಿಗಣಿಸಲಾಗುತ್ತದೆ. ಕನ್ನಡದಿಂದ ಇತರ ಭಾಷೆಗೆ ಅಥವಾ ಇತರ ಭಾಷೆಯಿಂದ ಕನ್ನಡಕ್ಕೆ ಅನುವಾದಗೊಂಡ ಕೃತಿಗಳನ್ನು ಕಳುಹಿಸಬಹುದಾಗಿದೆ.

ಪ್ರತಿ ಪುಸ್ತಕದ ನಾಲ್ಕು ಪ್ರತಿಗಳನ್ನು ಮಾ.28ರೊಳಗೆ ರಿಜಿಸ್ಟ್ರಾರ್, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಜ್ಞಾನಭಾರತಿ, ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಂಗಳೂರು-560056 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಅಕಾಡೆಮಿಯ ರಿಜಿಸ್ಟ್ರಾರ್ ಈಶ್ವರ್ ಕು. ಮಿರ್ಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೂ.: 080 23183311

ಸುದ್ದಿ 2 ನಿಮಿಷ

'ಸಂವಿಧಾನ ಬದಲಿಸಲು ಯತ್ನ'

ಬೆಂಗಳೂರು: 'ಸಂವಿಧಾನ ತಿರುಚಲು, ಅದನ್ನು ಬದಲಿಸಬೇಕೆಂದು ಆರೆಸ್ಸೆಸ್ ಮತ್ತು ಬಿಜೆಪಿ ನಿರಂತರ ಯತ್ನ ಮಾಡುತ್ತಿವೆ. ದೇಶದ ಸ್ವಾಯತ್ತ ಸಂಸ್ಥೆಗಳನ್ನು ಒಂದೊಂದಾಗಿ ನಾಶ ಮಾಡುತ್ತಾ ಅವುಗಳ ಶಕ್ತಿಯನ್ನು ಕುಂದಿಸುವ ಕೆಲಸವನ್ನು ಬಿಜೆಪಿ ಮಾಡುತ್ತಿದೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ದೂರಿದರು.

ಕೆಪಿಸಿಸಿ ಕಚೇರಿಯಲ್ಲಿ ಶುಕ್ರವಾರ ನಡೆದ ಗಣರಾಜ್ಯೋತ್ಸವದಲ್ಲಿ ಮಾತನಾಡಿದ ಅವರು, 'ನಮ್ಮ ಸಂವಿಧಾನವು ಸಮಾನತೆ, ಭ್ರಾತೃತ್ವ, ಜಾತ್ಯತೀತತೆ, ನ್ಯಾಯ ತತ್ವಗಳಿಂದ ಕೂಡಿದೆ. ಸಂವಿಧಾನ ಅಸ್ತಿತ್ವದಲ್ಲಿ ಇರದಿದ್ದರೆ ನಾವು ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳಲು ಆಗುತ್ತಿರಲಿಲ್ಲ. ಅಂತಹ ಸಂವಿಧಾನವನ್ನೇ ಬದಲಿಸಲು ಬಿಜೆಪಿ ಮುಂದಾಗಿದೆ' ಎಂದರು.

'ಪ್ರಧಾನಿ ನರೇಂದ್ರ ಮೋದಿಯವರು ಆರೆಸ್ಸೆಸ್‌ನ ಕೈಗೊಂಬೆಯಾಗಿ ನಡೆದುಕೊಳ್ಳುತ್ತಿದ್ದು, ಅದರಿಂದ ನಮ್ಮ ದೇಶದ ನ್ಯಾಯಾಂಗಕ್ಕೆ, ಜಾತ್ಯತೀತತೆಗೆ ಪೆಟ್ಟು ಬೀಳುತ್ತಿದೆ. ಇಂದಿನ ಪರಿಸ್ಥಿತಿಯಲ್ಲಿ ನಮ್ಮ ಸಂವಿಧಾನ ಮತ್ತು ಪ್ರಜಾಪ್ರಭುತ್ವಕ್ಕೆ ಎರಡಕ್ಕೂ ಧಕ್ಕೆ ಇದೆ' ಎಂದು ಹೇಳಿದರು.

ಸ್ವಾತಂತ್ರ್ಯ ಬಂದಾಗಿನಿಂದ 2014ರವರೆಗೆ ಈ ದೇಶದ ಸಾಲ ₹ 55 ಲಕ್ಷ ಕೋಟಿ ಇತ್ತು. ಬಿಜೆಪಿ ಸರ್ಕಾರ 10 ವರ್ಷಗಳಲ್ಲಿ ₹ 150 ಲಕ್ಷ ಕೋಟಿ ಸಾಲ ಮಾಡಿದೆ ಎಂದು ಖರ್ಗೆ ಹೇಳಿದರು.

ಕಾರ್ಯಕ್ರಮದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಲ್ಗೊಂಡಿದ್ದರು.



ಅಂತರಗ್ರಹ ಕಾಂತಕ್ಷೇತ್ರ ಅಧ್ಯಯನ ಸಾಧನ ಸಕ್ರಿಯ

ಬೆಂಗಳೂರು: ಬಾಹ್ಯಾಕಾಶದಲ್ಲಿ ಕಡಿಮೆ ತೀವ್ರತೆಯ ಅಂತರಗ್ರಹ ಕಾಂತಕ್ಷೇತ್ರಗಳ ಅಧ್ಯಯನಕ್ಕಾಗಿ ಆದಿತ್ಯ ಎಲ್–1 ಉಪಗ್ರಹದ ಮೇಲೆ ಆರು ಮೀಟರ್ ಉದ್ದದ ಮ್ಯಾಗ್ನೆಟೋ ಮೀಟರ್ ಬೂಮ್ ಸಾಧನವನ್ನು ಯಶಸ್ವಿಯಾಗಿ ಸಕ್ರಿಯಗೊಳಿಸಲಾಗಿದೆ ಇಸ್ರೊ ತಿಳಿಸಿದೆ.

ಜನವರಿ 11 ರಂದೇ ಮ್ಯಾಗ್ನೆಟೋಮೀಟರ್ ಸಕ್ರಿಯಗೊಳಿಸುವ ಕಾರ್ಯ ನಡೆದಿದೆ. ಉದ್ದದ ಸಲಾಕೆ ಆಕಾರದಲ್ಲಿದ್ದ (ಬೂಮ್) ಮ್ಯಾಗ್ನೆಟೊಮೀಟರ್ 132 ದಿನಗಳಿಂದಲೂ ಆದಿತ್ಯ ಎಲ್–1 ಉಡಾವಣೆಗೊಂಡ ಮುಚ್ಚಿದ ಸ್ಥಿತಿಯಲ್ಲಿತ್ತು. ಅದು ಈಗ ಹೊರ ಚಾಚಿಕೊಂಡಿದೆ ಎಂದು ಇಸ್ರೊ ಹೇಳಿದೆ.

ಮ್ಯಾಗ್ನೆಟೋಮೀಟರ್ ಎರಡು ಅತ್ಯಂತ ನಿಖರ ಫ್ಲಕ್ಸ್‌ಗೇಟ್ ಸೆನ್ಸರ್‌ಗಳನ್ನು ಒಳಗೊಂಡಿದೆ. ಈ ಸೆನ್ಸರ್‌ಗಳು ಕಡಿಮೆ ತೀವ್ರತೆಯ ಅಂತರಗ್ರಹ ಕಾಂತಕ್ಷೇತ್ರಗಳನ್ನು ಅಧ್ಯಯನ ನಡೆಸಲಿವೆ ಎಂದಿದೆ.



ರಥೋತ್ಸವ ನಗರದ ಕನಕಪುರ ರಸ್ತೆಯಲ್ಲಿ ಗುರುವಾರ ಬನಶಂಕರಿ ದೇವಿಯ ರಥೋತ್ಸವ ಭಕ್ತ ಸಮೂಹದ ನಡುವೆ ವಿಜೃಂಭಣೆಯಿಂದ ನೆರವೇರಿತು. ಭಕ್ತರು ಉತ್ತತ್ತಿ, ಬಾಳೆ ಹಣ್ಣು ಎಸೆದು ಹರಕೆ ತೀರಿಸಿದರು

ಪ್ರಜಾವಾಣಿ ಚಿತ್ರ

'ಸಂವಿಧಾನ ಹತ್ತಿಕ್ಕುವ ಪ್ರಯತ್ನ'

'ದೇಶ– ಸಂವಿಧಾನ ಉಳಿಸಿ' ರಾಜ್ಯಮಟ್ಟದ ಜಾಗೃತಿ ಸಮಾವೇಶದಲ್ಲಿ ಕಳವಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದಲ್ಲಿ ಜಾತಿಪದ್ಧತಿ ಇನ್ನೂ ಜೀವಂತವಾಗಿದ್ದು, ಅಸ್ಪೃಶ್ಯತಾ ಆಚರಣೆಗಳೂ ತಾಂಡವವಾಡುತ್ತಿವೆ' ಎಂದು ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ ಕಳವಳ ವ್ಯಕ್ತಪಡಿಸಿದರು.

ನಗರದಲ್ಲಿ ಶುಕ್ರವಾರ ರಿಪಬ್ಲಿಕ್ ಪಾರ್ಟಿ ಆಫ್ ಇಂಡಿಯಾ–ಕರ್ನಾಟಕ ಹಾಗೂ ದಲಿತ ಸಂಘರ್ಷ ಸಮಿತಿ (ದಸಂಸ) ವತಿಯಿಂದ ಗಣರಾಜ್ಯೋತ್ಸವದ ಅಂಗವಾಗಿ 'ದೇಶ ಹಾಗೂ ಸಂವಿಧಾನ ಉಳಿಸಿ' ರಾಜ್ಯಮಟ್ಟದ ಪದಾಧಿಕಾರಿಗಳ ಜಾಗೃತಿ ಸಮಾವೇಶದಲ್ಲಿ ಅವರು ಮಾತನಾಡಿದರು.

'ದೇಶವು ಸರ್ವ ಸಮಾನತೆಯ ಪ್ರತೀಕವಾದ ಸಂವಿಧಾನವನ್ನು ಅಳವಡಿಸಿಕೊಂಡು 75 ವರ್ಷಗಳು ಕಳೆದಿವೆ. ಈಗಲೂ ಮೌಢ್ಯಾಚರಣೆಗಳು, ಜಾತಿ ವ್ಯವಸ್ಥೆಯಿದೆ. ಬಡತನವೂ ತೊಲಗಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಡಾ.ಬಿ.ಆರ್.ಅಂಬೇಡ್ಕರ್ ಅವರು ಜಾತ್ಯತೀತ ಹಾಗೂ ಧರ್ಮಾತೀತ ನೆಲೆಯಲ್ಲಿ ಸಂವಿಧಾನ ರೂಪಿಸಿ, ದೇಶದ ಪ್ರಗತಿಗೆ ಭದ್ರ ಬುನಾದಿ ಹಾಕಿದ್ದರು. ಆದರೆ, ಮನುವಾದಿ ಮನಸ್ಥಿತಿಗಳು ಅಂದಿನಿಂದ ಇಂದಿನವರೆಗೆ ಸಂವಿಧಾನ ವಿರೋಧಿ ಕೃತ್ಯಗಳ ಮೂಲಕ ಸಂವಿಧಾನವನ್ನು ಹತ್ತಿಕ್ಕುವ ಪ್ರಯತ್ನ ನಡೆಸುತ್ತಿದ್ದಾರೆ. ಅವರು ಎಷ್ಟೇ ಪ್ರಯತ್ನ ಪಡಲಿ. ಅದು ಸಾಧ್ಯವಾಗುವುದಿಲ್ಲ' ಎಂದು ಎಚ್ಚರಿಸಿದರು.

ಸಾಮಾಜಿಕ ಹೋರಾಟಗಾರ ಚೇತನ್ ಅಹಿಂಸಾ ಅವರು ಮಾತನಾಡಿ, 'ವಿಶ್ವಮಾನವ ಸಂದೇಶ ಸಾರಿದ ಬುದ್ಧ, ಬಸವ, ಕನಕ, ಕುವೆಂಪು ಅವರಂತಹ ದಾರ್ಶನಿಕರ ವಿಚಾರಧಾರೆಗಳು ಒಂದು ಪ್ರಾಂತ್ಯ, ಭಾಷೆ, ದೇಶಗಳಿಗೆ ಸೀಮಿತವಾಗದೆ ಜಾಗತಿಕ ಸಮಸ್ಯೆಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ಅನುಸಂಧಾನ ಆಗುವ ಅಗತ್ಯವಿದೆ' ಎಂದು ಪ್ರತಿಪಾದಿಸಿದರು.

'ತುಳಿತಕ್ಕೆ ಒಳಗಾದ ಸಮುದಾಯಗಳು ಒಂದಾಗಬೇಕೆಂದು ಸಂವಿಧಾನ ಶಿಲ್ಪಿ ಬಿ.ಆರ್.ಅಂಬೇಡ್ಕರ್ ಅವರು ಕನಸು ಕಂಡಿದ್ದರು. ಸಮಾನತೆ ಆಶಯದೊಂದಿಗೆ ಅಂಬೇಡ್ಕರ್ ಅವರು ಸಂವಿಧಾನ ರಚಿಸಿದ್ದರು. ಆದರೆ ಇಂದು ಕೆಲವು ವರ್ಗದಿಂದ ಬಿಕ್ಕಟ್ಟು ಎದುರಿಸುವಂತಾಗಿದೆ' ಎಂದು ಹೇಳಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ (ಭೀಮವಾದ) ರಾಜ್ಯ ಸಮಿತಿ ರಾಜ್ಯ ಸಂಚಾಲಕ ಆರ್.ಮೋಹನ್‌ರಾಜ್ ಮಾತನಾಡಿ, ಅಂಬೇಡ್ಕರ್ ಕಂಡ ಪ್ರಬುದ್ಧ ಭಾರತದ ಆಶಯ ಸಾಕಾರಗೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ರಾಜು ಎಂ., ಸ್ವಪ್ನ ಮೋಹನ್, ಶೇಖರ್ ಹಾವಂಜೆ, ಜಿ.ಶಿವಕುಮಾರ್, ಕೆ.ಎ.ಓಬಳೇಶ್, ಪರಶುರಾಮ್ ಹಾಜರಿದ್ದರು.



ಕರ್ನಾಟಕ ದಲಿತ ಸಂಘರ್ಷ ಸಮಿತಿಯು ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ (ಎಡದಿಂದ) ಸಮಿತಿಯ ರಾಜ್ಯ ಸಂಚಾಲಕ ಆರ್ ಮೋಹನ್‌ರಾಜ್, ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ ಹಾಗೂ ಸಾಮಾಜಿಕ ಹೋರಾಟಗಾರ ಚೇತನ್ ಅಹಿಂಸಾ ಭಾಗವಹಿಸಿದ್ದರು – ಪ್ರಜಾವಾಣಿ ಚಿತ್ರ

ಮೂರ್ನಾಲ್ಕು ತಿಂಗಳಲ್ಲಿ 13,200 ಕುಟುಂಬಗಳ ಮಾಹಿತಿ ಸಂಗ್ರಹ

ಕುಟುಂಬ ಆರೋಗ್ಯ ಸಮೀಕ್ಷೆ ತರಬೇತಿ ಪ್ರಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಅಧ್ಯಯನ ಸಂಸ್ಥೆಯ (ಐಎಸ್‌ಇಸಿ) ಜನಸಂಖ್ಯಾ ಸಂಶೋಧನಾ ಕೇಂದ್ರವು ಫೆ.23ರಿಂದ ರಾಜ್ಯದಲ್ಲಿ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (ಎನ್‌ಎಫ್‌ಎಚ್‌ಎಸ್–6) ಕೈಗೊಳ್ಳಲಿದೆ.

ಈ ಸಂಬಂಧ ಸಂಸ್ಥೆಯು 105 ಕ್ಷೇತ್ರ ಪರಿವೀಕ್ಷಕರಿಗೆ ತರಬೇತಿ ಪ್ರಾರಂಭಿಸಿದೆ. ಈ ತರಬೇತಿಯು ಫೆ.21ರವರೆಗೆ ನಡೆಯಲಿದೆ. ಬಳಿಕ ಮೂರರಿಂದ ನಾಲ್ಕು ತಿಂಗಳ ಅವಧಿಯಲ್ಲಿ ಮುಖ್ಯ ಸಮೀಕ್ಷೆ ನಡೆಯಲಿದೆ.

ನಗರದಲ್ಲಿ ಸಂಸ್ಥೆ ಹಮ್ಮಿಕೊಂಡ ತರಬೇತಿ ಕಾರ್ಯಕ್ರಮಕ್ಕೆ ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್ ಚಾಲನೆ ನೀಡಿ, ಮಾತನಾಡಿದರು. 'ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದ ನೀತಿಗಳನ್ನು ರೂಪಿಸಲು ಈ ಸಮೀಕ್ಷೆ ಸಹಕಾರಿಯಾಗಲಿದೆ. ಇದು ಮಹತ್ವದ ಸಮೀಕ್ಷೆಯಾಗಿದ್ದು, ಜನರ ಆರೋಗ್ಯದ ಸ್ಥಿತಿಗತಿಯೂ ತಿಳಿಯಲಿದೆ. ಈವರೆಗೆ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ 5 ಸುತ್ತುಗಳಲ್ಲಿ ನಡೆದಿದೆ. 6ನೇ ಸುತ್ತಿನ ಸಮೀಕ್ಷೆಯನ್ನು ಈಗ ಕೈಗೊಳ್ಳಲಾಗಿದೆ' ಎಂದು ಹೇಳಿದರು.

ಸಮೀಕ್ಷೆಯ ಯೋಜನಾ ನಿರ್ದೇಶಕ ಡಾ.ಸಿ.ಎಂ. ಲಕ್ಷ್ಮಣ, 'ಇದೇ ಮೊದಲ ಬಾರಿಗೆ ಕರ್ನಾಟಕವನ್ನು ಉತ್ತರ ಮತ್ತು ದಕ್ಷಿಣವೆಂದು ವಿಂಗಡಿಸಿ, ಸಮೀಕ್ಷೆ ನಡೆಸಲಾಗುತ್ತಿದೆ. ಉತ್ತರ ಭಾಗವನ್ನು ಗೋವಾಕ್ಕೆ ಸೇರ್ಪಡೆ ಮಾಡಲಾಗಿದೆ. ಸಮೀಕ್ಷೆಯಲ್ಲಿ ನೀರು, ನೈರ್ಮಲ್ಯ, ಅಡುಗೆ ಎಣ್ಣೆ, ಕೈತೊಳೆಯುವ ವ್ಯವಸ್ಥೆ ಸೇರಿ ಕುಟುಂಬಕ್ಕೆ ಸಂಬಂಧಿಸಿದ ವಿವಿಧ ಮಾಹಿತಿ ಹಾಗೂ ವೈಯಕ್ತಿಕ ಆರೋಗ್ಯ ಮಾಹಿತಿ ಸಂಗ್ರಹಿಸಲಾಗುತ್ತದೆ' ಎಂದು ತಿಳಿಸಿದರು.

'ರಾಜ್ಯದಲ್ಲಿ 26,400 ಕುಟುಂಬಗಳು ಸಮೀಕ್ಷೆಗೆ ಒಳಪಡಲಿವೆ. ಅವುಗಳಲ್ಲಿ ದಕ್ಷಿಣ ಕರ್ನಾಟಕ ವ್ಯಾಪ್ತಿಗೆ 15 ಜಿಲ್ಲೆಗಳಿಂದ 13,200 ಕುಟುಂಬಗಳು ಬರಲಿವೆ' ಎಂದು ಹೇಳಿದರು.

'ತಾಯಂದಿರ ಹಾಗೂ ಶಿಶು ಮರಣ, ಅಪೌಷ್ಟಿಕತೆ ಮತ್ತು ರಕ್ತ ಹೀನತೆ ತಗ್ಗಿಸಲು ಸಹ ಈ ಸಮೀಕ್ಷೆ ಪೂರಕವಾಗಲಿದೆ. ಈ ಸಮೀಕ್ಷೆಯು ರಾಜ್ಯದ ಜನರ ಆರೋಗ್ಯ ಸ್ಥಿತಿಗತಿಯನ್ನು ಸೂಚಿಸಲಿದೆ. ಆದ್ದರಿಂದ ಜನರು ಅಗತ್ಯ ಮಾಹಿತಿ ಒದಗಿಸಬೇಕು. ಕ್ಷೇತ್ರ ಪರಿವೀಕ್ಷಕರಿಗೆ ತರಬೇತಿ ಪೂರ್ಣಗೊಳಿಸಿದ ಬಳಿಕ ಮುಖ್ಯ ಸಮೀಕ್ಷೆ ಕೈಗೊಳ್ಳಲಾಗುವುದು' ಎಂದರು.

ಬಿಡಿಎಗೆ ಹ್ಯಾರಿಸ್, ಬಿಎಂಟಿಸಿಗೆ ಶಿವಣ್ಣ

ಪ್ರಜಾವಾಣಿ ವಾರ್ತೆ



ಹ್ಯಾರಿಸ್



ಬಿ. ಶಿವಣ್ಣ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧ್ಯಕ್ಷ ಸ್ಥಾನ ಅಧಿಕಾರಿಗಳ ಕೈಯಿಂದ ಜನಪ್ರತಿನಿಧಿಗಳ ಕೈಗೆ ಮತ್ತೆ ಬಂದಿದೆ. ಸರ್ಕಾರ ಬಿಡುಗಡೆ ಮಾಡಿರುವ ನಿಗಮ–ಮಂಡಳಿಗಳ ಅಧ್ಯಕ್ಷರ ಪಟ್ಟಿಯಲ್ಲಿ ಶಾಂತಿನಗರ ಶಾಸಕ ಎನ್.ಎ. ಹ್ಯಾರಿಸ್ ಅವರ ಹೆಸರು ಪ್ರಕಟಗೊಂಡಿದೆ.

ಬಿಜೆಪಿ ಆಡಳಿತದ ಕಾಲದಲ್ಲಿ ಆಗಿನ ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ಅಧ್ಯಕ್ಷರಾಗಿದ್ದರು. 2023ರಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ ವಿಶ್ವನಾಥ್ ರಾಜೀನಾಮೆ ನೀಡಿದ್ದರು. ಎನ್.ಎ. ಹ್ಯಾರಿಸ್, ಎಂ. ಕೃಷ್ಣಪ್ಪ, ಪ್ರಿಯಕೃಷ್ಣ ಸಹಿತ ಹಲವರು ಅಧ್ಯಕ್ಷ ಸ್ಥಾನಕ್ಕಾಗಿ ಆಗ ಪ್ರಯತ್ನಿಸಿದ್ದರು. ಆದರೆ, ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಜನಪ್ರತಿನಿಧಿಗಳಿಗೆ ಮಣೆ ಹಾಕುವ ಪದ್ಧತಿಯನ್ನು ಬಿಟ್ಟು, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಅವರನ್ನು ಅಧ್ಯಕ್ಷರನ್ನಾಗಿ ಮಾಡಿತ್ತು.

ಇದೀಗ ಎನ್.ಎ. ಹ್ಯಾರಿಸ್ ಹೆಸರು ಪ್ರಕಟವಾಗಿದೆ. ರಾಕೇಶ್ ಸಿಂಗ್ ಅವರ ಅಧಿಕಾರಾವಧಿ ಏಳು ತಿಂಗಳಿಗೆ ಕೊನೆಗೊಳ್ಳುತ್ತಿದೆ.

ಬಿಎಂಟಿಸಿಗೆ ಶಿವಣ್ಣ: ಬೆಂಗಳೂರು ಮಹಾನಗರ ಸಾರಿಗೆ ನಿಗಮದ (ಬಿಎಂಟಿಸಿ) ಅಧ್ಯಕ್ಷ ಸ್ಥಾನಕ್ಕೆ ಆನೇಕಲ್ ಶಾಸಕ ಬಿ. ಶಿವಣ್ಣ ಅವರ ಹೆಸರನ್ನು ಸರ್ಕಾರ ಪ್ರಕಟಿಸಿದೆ.

ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಎನ್.ಎ. ಹ್ಯಾರಿಸ್ ಬಿಎಂಟಿಸಿ ಅಧ್ಯಕ್ಷರಾಗಿದ್ದರು. ಸಮ್ಮಿಶ್ರ ಸರ್ಕಾರ ಕೊನೆಗೊಂಡು ಬಿಜೆಪಿ ಆಡಳಿತಕ್ಕೆ ಬಂದ ಬಳಿಕ ಕೆ.ಆರ್. ಪುರದ ಮಾಜಿ ಶಾಸಕ ನಂದೀಶ್ ರೆಡ್ಡಿ ಅವರನ್ನು ಅಧ್ಯಕ್ಷರನ್ನಾಗಿ ಮಾಡಿತ್ತು. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ಬಿಎಂಟಿಸಿ ಅಧ್ಯಕ್ಷ ಸ್ಥಾನ ಖಾಲಿಯಾಗಿತ್ತು.



ಶುಂಠಿ, ಅರಿಶಿನ ಪದಾರ್ಥಗಳು ಹಾಗೂ ವಿವಿಧ ತಳಿಗಳ ವಸ್ತುಪ್ರದರ್ಶನವನ್ನು ರೈತರು ವೀಕ್ಷಿಸಿದರು.

ಶುಂಠಿ ಬೆಳೆ ಕಾರ್ಯಾಗಾರ

ಯಲಹಂಕ: ವಿಜ್ಞಾನ ಮತ್ತು ರೈತರ ಅನುಭವಗಳು ಒಟ್ಟಾದಾಗ ಮಾತ್ರ ಕೃಷಿಯಲ್ಲಿ ಯಶಸ್ಸು ಕಾಣಲು ಸಾಧ್ಯ ಎಂದು ಬಾಗಲಕೋಟೆ ತೋಟಗಾರಿಕಾ ವಿಶ್ವವಿದ್ಯಾಲಯದ ಸಂಶೋಧನಾ ನಿರ್ದೇಶಕ ಎಚ್.ಪಿ. ಮಹೇಶ್ವರಪ್ಪ ಹೇಳಿದರು.

ಬಾಗಲಕೋಟೆ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ, ತೋಟಗಾರಿಕಾ ಮಹಾವಿದ್ಯಾಲಯ ಬೆಂಗಳೂರು ಹಾಗೂ ರಾಜ್ಯ ಸಂಬಾರ ಅಭಿವೃದ್ಧಿ ಮಂಡಳಿಯ ಜಂಟಿ ಆಶ್ರಯದಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ಶುಂಠಿ ಮತ್ತು ಅರಿಶಿನ ಬೆಳೆಗಳ ಕಾರ್ಯಾಗಾರದಲ್ಲಿ ಮಾತನಾಡಿದರು.

ರೈತರಿಗೆ ತಂತ್ರಜ್ಞಾನ, ತಳಿಗಳು ಹಾಗೂ ಬೆಳೆಯುವ ವಿಧಾನಗಳ ಬಗ್ಗೆ ಮಾಹಿತಿ ದೊರೆಯುತ್ತದೆ. ಆದರೆ, ಸಮಯಕ್ಕೆ ಮಾರುಕಟ್ಟೆಯ ಮಾಹಿತಿ ಲಭ್ಯವಾಗುವುದಿಲ್ಲ. ಈ ಸೌಲಭ್ಯ ದೊರೆತರೆ ರೈತರು ಕೃಷಿಯಲ್ಲಿ ಇನ್ನಷ್ಟು ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ ಎಂದರು.

ರಾಜ್ಯಾದ್ಯಂತ 800 ಡಯಾಲೈಸರ್ ಯಂತ್ರಗಳ ಅಳವಡಿಕೆಗೆ ಆರೋಗ್ಯ ಇಲಾಖೆ ಕ್ರಮ

ಏಕ ಬಳಕೆ ಡಯಾಲಿಸಿಸ್ ಸೇವೆ: ಇಂದು ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಇಲಾಖೆಯು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ರಾಜ್ಯದಾದ್ಯಂತ ಒಟ್ಟು 800 ಏಕ ಬಳಕೆಯ ಡಯಾಲೈಸರ್ ಯಂತ್ರಗಳ ಅಳವಡಿಕೆಗೆ ಯೋಜನೆ ರೂಪಿಸಿದ್ದು, ಈ ಯೋಜನೆಯಡಿ ಉಚಿತ ಡಯಾಲಿಸಿಸ್ ಸೇವೆಗೆ ಶನಿವಾರ ಚಾಲನೆ ಸಿಗಲಿದೆ.

ಇಲ್ಲಿನ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಈಗಾಗಲೇ 20 ಏಕ ಬಳಕೆಯ ಡಯಾಲೈಸರ್ ಯಂತ್ರಗಳನ್ನು ಅಳವಡಿಸಲಾಗಿದೆ. ಈ ಯಂತ್ರಗಳ ನೆರವಿನಿಂದ ಪ್ರತಿನಿತ್ಯ 72 ರೋಗಿಗಳಿಗೆ ಡಯಾಲಿಸಿಸ್ ಸೇವೆ ಒದಗಿಸಬಹುದಾಗಿದೆ. ಈ ಸೇವೆಗೆ ಶನಿವಾರ ಸಂಜೆ 5 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ.



ದಿನೇಶ್ ಗುಂಡೂರಾವ್

'ಜನಸಾಮಾನ್ಯರಿಗೆ ಸೋಂಕು ರಹಿತ ಡಯಾಲಿಸಿಸ್ ಸೇವೆ ಕಲ್ಪಿಸಲು ಕ್ರಮ ವಹಿಸಲಾಗಿದೆ. ಡಯಾಲಿಸಿಸ್ ಕೇಂದ್ರಗಳಲ್ಲಿ ಸೇವೆ ಪಡೆದುಕೊಳ್ಳುತ್ತಿರುವವರಿಗೆ ಸೋಂಕು ತಗಲುವ ಸಾಧ್ಯತೆಗಳಿದ್ದವು. ಆದ್ದರಿಂದ ಇಡೀ ಡಯಾಲಿಸಿಸ್ ವ್ಯವಸ್ಥೆಯನ್ನು ಸದೃಢಗೊಳಿಸಲು ಏಕ ಬಳಕೆಯ ಡಯಾಲೈಸರ್ ಯಂತ್ರಗಳನ್ನು ಅಳವಡಿಸಲಾಗುತ್ತಿದೆ. ಈ ಯಂತ್ರಗಳ ಅಳವಡಿಕೆ ಕಾರ್ಯ ಬಹುತೇಕ ಅಂತಿಮ ಘಟ್ಟ ತಲುಪಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

219 ಕೇಂದ್ರಗಳಲ್ಲಿ ಅಳವಡಿಕೆ: 'ರಾಜ್ಯದಲ್ಲಿ ಡಯಾಲಿಸಿಸ್ ಕೇಂದ್ರಗಳನ್ನು 219ಕ್ಕೆ ಹೆಚ್ಚಿಸಲಾಗಿದ್ದು, ಹೊಸದಾಗಿ 48 ತಾಲ್ಲೂಕುಗಳಲ್ಲಿ ಡಯಾಲಿಸಿಸ್ ಕೇಂದ್ರಗಳನ್ನ ಆರಂಭಿಸಲಾಗಿದೆ. ಈ ಕೇಂದ್ರಗಳಲ್ಲಿ ಡಯಾಲೈಸರ್ ಯಂತ್ರಗಳ ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ. ಬೆಂಗಳೂರು ವಿಭಾಗದ 57 ಡಯಾಲಿಸಿಸ್ ಕೇಂದ್ರಗಳಲ್ಲಿ 250 ಯಂತ್ರಗಳು, ಮೈಸೂರು ವಿಭಾಗದ 55 ಕೇಂದ್ರಗಳಲ್ಲಿ 222 ಯಂತ್ರಗಳು, ಬೆಳಗಾವಿ ವಿಭಾಗದ 62 ಕೇಂದ್ರಗಳಲ್ಲಿ 201 ಯಂತ್ರಗಳು, ಕಲಬುರಗಿ ವಿಭಾಗದ 45 ಕೇಂದ್ರಗಳಲ್ಲಿ 127 ಯಂತ್ರಗಳ ಅಳವಡಿಕೆ ಕಾರ್ಯ ಅಂತಿಮ ಘಟ್ಟಕ್ಕೆ ತಲುಪಿದೆ' ಎಂದು ಹೇಳಿದ್ದಾರೆ.

'ಶನಿವಾರದಿಂದ 475 ಏಕ ಬಳಕೆಯ ಡಯಾಲೈಸರ್‌ಗಳು ಕಾರ್ಯ ಆರಂಭಿಸಲಿದ್ದು, ರೋಗಿಗಳಿಗೆ ಸೋಂಕು ರಹಿತ ಡಯಾಲಿಸಿಸ್ ಸೇವೆ ಲಭ್ಯವಾಗಲಿದೆ. ಉಳಿದ ಕೇಂದ್ರಗಳಲ್ಲೂ ಒಂದು ತಿಂಗಳೊಳಗೆ ಸೇವೆ ಆರಂಭವಾಗಲಿದೆ' ಎಂದು ಮಾಹಿತಿ ನೀಡಿದ್ದಾರೆ.

'ಪ್ರತಿಯೊಂದು ಡಯಾಲಿಸಿಸ್ ಸೈಕಲ್‌ಗೆ ₹1,573 ವೆಚ್ಚವಾಗಲಿದ್ದು, ಸರ್ಕಾರವೇ ವೆಚ್ಚವನ್ನು ಭರಿಸುವ ಮೂಲಕ ರೋಗಿಗಳಿಗೆ ಉಚಿತವಾಗಿ ಆರೋಗ್ಯ ಸೇವೆ ಒದಗಿಸಲಿದೆ. 800 ಡಯಾಲೈಸರ್ ಯಂತ್ರಗಳಿಂದ ವಾರ್ಷಿಕ 7.20 ಲಕ್ಷ ಡಯಾಲಿಸಿಸ್ ಸೇವೆಗಳನ್ನು ಒದಗಿಸಲಾಗುತ್ತದೆ' ಎಂದು ಹೇಳಿದ್ದಾರೆ.

ಮುಖ್ಯಾಂಶಗಳು
- ಹೊಸದಾಗಿ 48 ತಾಲ್ಲೂಕುಗಳಲ್ಲಿ ಡಯಾಲಿಸಿಸ್ ಕೇಂದ್ರ ಆರಂಭ
- ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ 20 ಡಯಾಲೈಸರ್ ಯಂತ್ರಗಳ ಅಳವಡಿಕೆ

ಸಾಂಸ್ಕೃತಿಕ ಕ್ಷೇತ್ರದ ಪ್ರಮುಖರ ಆಗ್ರಹ

'ಪರಿಷ್ಕೃತ ಸರೋಜಿನಿ ಮಹಿಷಿ ವರದಿ ಮಂಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಷ್ಕೃತ ಸರೋಜಿನಿ ಮಹಿಷಿ ವರದಿಯನ್ನು ಇದೇ ಫೆಬ್ರವರಿಯಲ್ಲಿ ನಡೆಯಲಿರುವ ರಾಜ್ಯ ಬಜೆಟ್ ಅಧಿವೇಶನದಲ್ಲಿ ಮಂಡಿಸಿ, ಕಾನೂನು ಬಲ ತಂದು ಕೊಡಬೇಕು' ಎಂದು ಕನ್ನಡ ಪರ ಹೋರಾಟಗಾರರು ಹಾಗೂ ಸಾಂಸ್ಕೃತಿಕ ಕ್ಷೇತ್ರದ ಪ್ರಮುಖರು ಆಗ್ರಹಿಸಿದ್ದಾರೆ.

ಕನ್ನಡ ಗೆಳೆಯರ ಬಳಗ ಹಾಗೂ ಕರ್ನಾಟಕ ವಿಕಾಸ ರಂಗ ಜಂಟಿಯಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದೆ. ಇದಕ್ಕೆ ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ, ಸಾಹಿತಿ ದೊಡ್ಡರಂಗೇಗೌಡ, ಚಲನಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣ, ಲೇಖಕಿ ವಿಜಯಾ, ವಕೀಲೆ ಹೇಮಲತಾ ಮಹಿಷಿ, ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ್, ಕನ್ನಡ ಗೆಳೆಯರ ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ, ಸಂಶೋಧಕ ಆರ್. ಶೇಷಶಾಸ್ತ್ರಿ ಹಾಗೂ ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ. ಚನ್ನೇಗೌಡ ಸಹಿ ಹಾಕಿ, ಆಗ್ರಹಿಸಿದ್ದಾರೆ.

'ಪರಿಷ್ಕೃತ ಮಹಿಷಿ ವರದಿಯನ್ನು 2017ರ ಫೆಬ್ರವರಿಯಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಇದನ್ನು ನೀಡಿ ಏಳು ವರ್ಷಗಳಾದರೂ ಸದನದಲ್ಲಿ ಮಂಡಿಸಿ, ಕಾನೂನು ಬಲ ತಂದುಕೊಡುವ ಕೆಲಸವಾಗಿಲ್ಲ. ಪರಿಷ್ಕೃತ ವರದಿಯು ರಾಜ್ಯ ಸರ್ಕಾರ ಅನುಷ್ಠಾನಗೊಳಿಸಬಹುದಾದ 14 ಅಂಶಗಳು, ಕೇಂದ್ರ ಸರ್ಕಾರ ಅನುಷ್ಠಾನ ಗೊಳಿಸಬೇಕಿರುವ 7 ಅಂಶಗಳನ್ನು ಒಳಗೊಂಡಿದೆ. ಈ ಶಿಫಾರಸುಗಳನ್ನು ಅನುಷ್ಠಾನಗೊಳಿಸಲು ಅನುಸರಿಸಬೇಕಾದ ಮಾರ್ಗವನ್ನೂ ಸ್ಪಷ್ಟವಾಗಿ ವರದಿಯಲ್ಲಿ ಉಲ್ಲೇಖಿಸಿದೆ. ಪರಿಷ್ಕೃತ ಮಹಿಷಿ ವರದಿಯನ್ನು ಬಜೆಟ್ ಅಧಿವೇಶನದಲ್ಲಿ ಮಂಡಿಸಬೇಕು. ಇದಕ್ಕೆ ವಿರೋಧ ಪಕ್ಷಗಳೂ ಒಪ್ಪಿಗೆ ಕೊಡುವುದರಲ್ಲಿ ಯಾವುದೇ ಅನುಮಾನವಿಲ್ಲ' ಎಂದು ತಿಳಿಸಿದ್ದಾರೆ.

ಮುಖ್ಯಾಂಶಗಳು
- ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕನ್ನಡ ಗೆಳೆಯರ ಬಳಗದ ಪತ್ರ
- ಪರಿಷ್ಕೃತ ವರದಿಯನ್ನು ಬಜೆಟ್ ಅಧಿವೇಶನದಲ್ಲಿ ಮಂಡಿಸಲು ಒತ್ತಾಯ

ಕೇಂದ್ರೀಕೃತ ಹವಾನಿಯಂತ್ರಣ ವ್ಯವಸ್ಥೆ ಸೇರಿ ಅತ್ಯಾಧುನಿಕ ಸೌಲಭ್ಯ ಅಳವಡಿಕೆಗೆ ಪ್ರಸ್ತಾವ

ರವೀಂದ್ರ ಕಲಾಕ್ಷೇತ್ರಕ್ಕೆ ಸಿಗಲಿದೆ ಆಧುನಿಕ ಸ್ಪರ್ಶ

• ವರುಣ ಹೆಗಡೆ

ಬೆಂಗಳೂರು: ವಜ್ರ ಮಹೋತ್ಸವದ ಸಂಭ್ರಮದಲ್ಲಿರುವ ರವೀಂದ್ರ ಕಲಾಕ್ಷೇತ್ರಕ್ಕೆ ಆಧುನಿಕ ಸ್ಪರ್ಶ ನೀಡಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮುಂದಾಗಿದ್ದು, ಕೇಂದ್ರೀಕೃತ ಹವಾನಿಯಂತ್ರಣ ವ್ಯವಸ್ಥೆ ಸೇರಿ ಅತ್ಯಾಧುನಿಕ ಸೌಲಭ್ಯ ಅಳವಡಿಕೆ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ.

ಇಲ್ಲಿನ ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದ ನವೀಕರಣಕ್ಕೆ ₹24 ಕೋಟಿ ವೆಚ್ಚವಾಗಲಿದೆಯೆಂದು ಲೋಕೋಪಯೋಗಿ ಇಲಾಖೆ ಅಂದಾಜಿಸಿದೆ. 1963ರಲ್ಲಿ ಲೋಕಾರ್ಪಣೆಗೊಂಡ ಈ ರಂಗಮಂದಿರ, ನಾಟಕ, ಯಕ್ಷಗಾನ, ಸಂಗೀತ, ನೃತ್ಯ ಸೇರಿ ವಿವಿಧ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಕೈಗೆಟುಕುವ ದರದಲ್ಲಿ ವೇದಿಕೆಯನ್ನು ಕಲ್ಪಿಸುತ್ತಿದೆ. 60 ವರ್ಷಗಳಲ್ಲಿ ತಂತ್ರಜ್ಞಾನ ಸೇರಿ ವಿವಿಧ ವ್ಯವಸ್ಥೆಗಳಲ್ಲಿ ಸಾಕಷ್ಟು ಬದಲಾವಣೆಯಾಗಿರುವುದರಿಂದ ಈಗ ಇಲಾಖೆ ನವೀಕರಣಕ್ಕೆ ಮುಂದಾಗಿದೆ. ಈ ಸಂಬಂಧ ರಂಗಕರ್ಮಿಗಳೊಂದಿಗೂ ಅಗತ್ಯ ಸಲಹೆಗಳನ್ನು ಪಡೆದು, ಆಧುನಿಕ ಸೌಲಭ್ಯ ಕಲ್ಪಿಸಲು ಕ್ರಮವಹಿಸಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ರವೀಂದ್ರ ಕಲಾಕ್ಷೇತ್ರ ಒಳಗೊಂಡಂತೆ ನಗರದ ಏಳು ರಂಗ ಮಂದಿರಗಳನ್ನು ನಿರ್ವಹಣೆ ಮಾಡುತ್ತಿದೆ. ಇವುಗಳಲ್ಲಿ ಎರಡು ಬಯಲು ರಂಗಮಂದಿರಗಳು ಸೇರಿವೆ. ನಗರದ ಹೃದಯ ಭಾಗದಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ನಾಟಕಗಳಿಗೆ ಆದ್ಯತೆ ನೀಡಲಾಗುತ್ತಿದ್ದರೂ ರಂಗ ತಂಡಗಳು ಪ್ರದರ್ಶನ ನೀಡಲು ಎರಡು ತಿಂಗಳು ಮುಂಚಿತವಾಗಿ ಕಾಯ್ದಿರಿಸಬೇಕಾದ ಪರಿಸ್ಥಿತಿಯಿದೆ. ಅದು ಕೂಡ ಸರ್ಕಾರಿ ಕಾರ್ಯಕ್ರಮಗಳು ತುರ್ತಾಗಿ ನಿಗದಿಯಾದಲ್ಲಿ ಕಾಯ್ದಿರಿಸಿದ ದಿನಾಂಕವನ್ನು ಬಿಟ್ಟುಕೊಡಬೇಕಾಗುತ್ತದೆ. ಹೀಗಾಗಿ, ಪ್ರದರ್ಶನದ ದಿನದವರೆಗೂ ರಂಗತಂಡಗಳಿಗೆ ಸಿಗುವ ಖಚಿತತೆ ಇಲ್ಲದಂತಾಗಿದೆ. 830 ಆಸನಗಳನ್ನು ಹೊಂದಿರುವ ರವೀಂದ್ರ ಕಲಾಕ್ಷೇತ್ರವು ವರ್ಷದ ಬಹುತೇಕ ದಿನ ಕಲಾ ಚಟುವಟಿಕೆಗಳಿಂದ ಕೂಡಿರುತ್ತದೆ.

5 ವರ್ಷದ ಹಿಂದೆ ನವೀಕರಣ: ಸಂಸ್ಕೃತಿ ಇಲಾಖೆಯು ಲೋಕೋಪಯೋಗಿ ಇಲಾಖೆಯ ಸಹಯೋಗದಲ್ಲಿ 2018ರಲ್ಲಿ ₹ 2.24 ಕೋಟಿ ವೆಚ್ಚದಲ್ಲಿ ರವೀಂದ್ರ ಕಲಾಕ್ಷೇತ್ರವನ್ನು ನವೀಕರಣ ಮಾಡಿತ್ತು. ಆಗ ಹೊಸದಾಗಿ ಧ್ವನಿ-ಬೆಳಕಿನ ವ್ಯವಸ್ಥೆಯನ್ನು ಅಳವಡಿಸಲಾಗಿತ್ತು. 2022ರಲ್ಲಿ ರಂಗಮಂದಿರದ ಬಾಡಿಗೆಯನ್ನು ಪರಿಷ್ಕರಿಸಿ ಆದೇಶ ಹೊರಡಿಸಿದ್ದ ಸಂಸ್ಕೃತಿ ಇಲಾಖೆ, ಪ್ರತಿ ವರ್ಷ ಬಾಡಿಗೆ ದರವನ್ನು ಶೇ 5 ರಷ್ಟು ಏರಿಕೆ ಮಾಡಬೇಕೆಂದು ತಿಳಿಸಿತ್ತು. ಸರ್ಕಾರಿ ಆದೇಶದ ಅನ್ವಯ ರವೀಂದ್ರ ಕಲಾಕ್ಷೇತ್ರದ ಬಾಡಿಗೆಯನ್ನು ಕಳೆದ ವರ್ಷ ಶೇ 5ರಷ್ಟು ಹೆಚ್ಚಳ ಮಾಡಲಾಗಿತ್ತು. ಸದ್ಯ ಒಂದು ಪಾಳಿಗೆ ₹5 ಸಾವಿರ ಠೇವಣಿ ಹಾಗೂ ಜಿಎಸ್‌ಟಿ ಸಹಿತ ₹ 12,434 ಬಾಡಿಗೆಯಿದ್ದು, ಠೇವಣಿ ಹಣವನ್ನು ಮರಳಿಸಲಾಗುತ್ತದೆ.

'ರವೀಂದ್ರ ಕಲಾಕ್ಷೇತ್ರ ನವೀಕರಣಕ್ಕೆ ಸಂಬಂಧಿಸಿದಂತೆ ರಂಗಕರ್ಮಿಗಳ ಜತೆಗೆ ಸಭೆ ನಡೆಸಿ, ಅಗತ್ಯ ಸಲಹೆಗಳನ್ನು ಪಡೆಯಲಾಗಿದೆ. ಈ ಕಲಾಕ್ಷೇತ್ರವು ವಜ್ರಮಹೋತ್ಸವ ಸಂಭ್ರಮದಲ್ಲಿ ಇರುವುದರಿಂದ ನವೀಕರಣಕ್ಕೆ ಕ್ರಮ ಕೈಗೊಳ್ಳಲಾಗಿದೆ. ಬೆಳಕು, ಧ್ವನಿ ಸೇರಿ ಸಂಪೂರ್ಣ ವ್ಯವಸ್ಥೆಯ ನವೀಕರಣ ಪ್ರಸ್ತಾವದಲ್ಲಿದೆ' ಎಂದು ಹೆಸರು ಬಹಿರಂಗ ಪಡಿಸಲು ಇಚ್ಛಿಸದ ಅಧಿಕಾರಿಯೊಬ್ಬರು ತಿಳಿಸಿದರು.



ರವೀಂದ್ರ ಕಲಾಕ್ಷೇತ್ರದ ಹೊರನೋಟ

> ರವೀಂದ್ರ ಕಲಾಕ್ಷೇತ್ರ ನವೀಕರಣಕ್ಕೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಅನುಮೋದನೆ ದೊರೆತ ಬಳಿಕ ನವೀಕರಣ ಪ್ರಕ್ರಿಯೆ ಶುರುವಾಗಲಿದೆ
>
> **ಧರಣೀದೇವಿ ಮಾಲಗತ್ತಿ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ

ಬಯಲು ರಂಗಮಂದಿರವೂ ನವೀಕರಣ

ರವೀಂದ್ರ ಕಲಾಕ್ಷೇತ್ರದ ಹಿಂಭಾಗದಲ್ಲಿರುವ ಸಂಸ ಬಯಲು ರಂಗಮಂದಿರವನ್ನೂ ನವೀಕರಿಸಲು ಸಂಸ್ಕೃತಿ ಇಲಾಖೆ ಮುಂದಾಗಿದೆ. ಈ ರಂಗಮಂದಿರದಲ್ಲಿ ನಡೆಯುವ ಕಾರ್ಯಕ್ರಮಗಳು ರವೀಂದ್ರ ಕಲಾಕ್ಷೇತ್ರದಲ್ಲಿನ ಕಾರ್ಯಕ್ರಮಗಳಿಗೆ ಅಡ್ಡಿಪಡಿಸುತ್ತಿದ್ದವು. ಆದ್ದರಿಂದ ಧ್ವನಿ ವ್ಯವಸ್ಥೆ ರವೀಂದ್ರ ಕಲಾಕ್ಷೇತ್ರಕ್ಕೆ ಕೇಳಿಸದಂತೆ ತಡೆಗೋಡೆ ನಿರ್ಮಾಣ ಸೇರಿ ವಿವಿಧ ನವೀಕರಣ ಕಾಮಗಾರಿ ಪ್ರಸ್ತಾವ ಸಲ್ಲಿಸಲಾಗಿದೆ. ಎರಡೂ ರಂಗಮಂದಿರಗಳ ನವೀಕರಣ ಕಾಮಗಾರಿಯನ್ನು ಏಕಕಾಲದಲ್ಲಿ ಕೈಗೊಂಡರೆ ರಂಗ ಚಟುವಟಿಕೆಗಳ ಪ್ರದರ್ಶನಕ್ಕೆ ಅಡ್ಡಿಯಾಗಲಿದೆ. ಆದ್ದರಿಂದ ಮೊದಲು ಸಂಸ ಬಯಲು ರಂಗಮಂದಿರ ನವೀಕರಿಸಿ, ಬಳಿಕ ರವೀಂದ್ರ ಕಲಾಕ್ಷೇತ್ರ ನವೀಕರಣ ಮಾಡಲು ಇಲಾಖೆ ಮುಂದಾಗಿದೆ.

ಏನೆಲ್ಲ ಅಳವಡಿಕೆ?

ರವೀಂದ್ರ ಕಲಾಕ್ಷೇತ್ರದಲ್ಲಿ ಕೇಂದ್ರೀಕೃತ ಹವಾನಿಯಂತ್ರಣ ವ್ಯವಸ್ಥೆಯ ಅಳವಡಿಕೆ ಜತೆಗೆ ಅತ್ಯಾಧುನಿಕ ತಂತ್ರಜ್ಞಾನ ಆಧಾರಿತ ಧ್ವನಿ-ಬೆಳಕಿನ ವ್ಯವಸ್ಥೆ ಅಳವಡಿಸುವುದೂ ಪ್ರಸ್ತಾವದಲ್ಲಿದೆ. ಒಟ್ಟು 20 ಅಂಶಗಳು ಸೇರಿದ್ದು, ವೇದಿಕೆ ಮಧ್ಯಭಾಗವನ್ನು ಮೇಲಕ್ಕೆ ಏರಿಸಲು ಹೈಡ್ರಾಲಿಕ್ ವ್ಯವಸ್ಥೆ, ಆಸನಗಳಿಗೆ ಜಲ ನಿರೋಧಕ (ವಾಟರ್ ಪ್ರೂಫ್) ವ್ಯವಸ್ಥೆಯೂ ಸೇರಿದೆ. ಉಳಿದಂತೆ ವೇದಿಕೆಯ ನೆಲಹಾಸು ಸೇರಿ ಸಮಗ್ರ ನವೀಕರಣ ಪ್ರಸ್ತಾವದಲ್ಲಿದೆ.



ಸಪ್ನ ಬುಕ್ ಹೌಸ್ ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ 'ಅಕ್ಷರ ಸುಗ್ಗಿ ಮಾತಿನ ಹುಗ್ಗಿ' ಸಂವಾದ ಕಾರ್ಯಕ್ರಮದಲ್ಲಿ ಮಕ್ಕಳು ಪುಸ್ತಕಗಳನ್ನು ವೀಕ್ಷಿಸಿದರು

ಮನೆಯಲ್ಲಿಯೇ ಪುಟ್ಟ ಗ್ರಂಥಾಲಯವಿರಲಿ: ಶೇಷಶಾಸ್ತ್ರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮನೆಗಳಲ್ಲಿಯೇ ಪುಟ್ಟ ಗ್ರಂಥಾಲಯಗಳನ್ನು ಮಾಡಿಕೊಂಡು, ಪುಸ್ತಕ ಓದುವಂತೆ ಮಕ್ಕಳಿಗೆ ಪ್ರೋತ್ಸಾಹ ನೀಡಬೇಕು' ಎಂದು ಸಂಶೋಧಕ ಆರ್. ಶೇಷಶಾಸ್ತ್ರಿ ತಿಳಿಸಿದರು.

ಸಪ್ನ ಬುಕ್ ಹೌಸ್ ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ 'ಅಕ್ಷರ ಸುಗ್ಗಿ ಮಾತಿನ ಹುಗ್ಗಿ' ಸಂವಾದದಲ್ಲಿ ಮಾತನಾಡಿದ ಅವರು, 'ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಸಾಹಿತ್ಯ ಕೃತಿಗಳು ಹಾಗೂ ವಿವಿಧ ಪುಸ್ತಕಗಳನ್ನು ಓದುವ ಮೂಲಕ ಜ್ಞಾನವನ್ನು ವೃದ್ಧಿಸಿಕೊಳ್ಳಬೇಕು. ಮಕ್ಕಳು ಓದಿನ ಹವ್ಯಾಸ ರೂಢಿಸಿಕೊಳ್ಳಲು ಮನೆಯಲ್ಲಿಯೂ ಪುಸ್ತಕ ಓದುವ ವಾತಾವರಣವನ್ನು ಪೋಷಕರು ನಿರ್ಮಿಸಬೇಕು' ಎಂದುರು.

ಕನ್ನಡ ಪರ ಹೋರಾಟಗಾರ ರಾ.ನಂ. ಚಂದ್ರಶೇಖರ, 'ಆಳುವ ಸರ್ಕಾರಗಳು ಕನ್ನಡಪರ ಹೋರಾಟಗಾರರನ್ನು ಹತ್ತಿಕ್ಕುವ ಪ್ರಯತ್ನ ನಡೆಸುತ್ತಿವೆ. ಕನ್ನಡದ ಪರ ಧ್ವನಿ ಎತ್ತುವವರ ಧ್ವನಿ ಅಡಗಿಸಲು ಯತ್ನಿಸುತ್ತಿವೆ. ಕನ್ನಡ ಭಾಷೆಯನ್ನು ಉಳಿಸುವ, ಬೆಳೆಸುವ ಬದ್ಧತೆ ಸರ್ಕಾರಕ್ಕೆ ಇಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಕನ್ನಡ ಪ್ರಭದ ಪುರವಣಿ ಮುಖ್ಯಸ್ಥ ಗಿರೀಶ್ ರಾವ್ ಹತ್ವಾರ್ (ಜೋಗಿ), 'ವಿವಿಧ ಪತ್ರಿಕೆಗಳು ಹಾಗೂ ಪ್ರಕಾಶನ ಸಂಸ್ಥೆಗಳು ನಡೆಸುವ ಸಾಹಿತ್ಯ ಸ್ಪರ್ಧೆಗಳಲ್ಲಿ ನಿರೀಕ್ಷೆಗೂ ಮೀರಿ ಯುವಜನರು, ವಿದ್ಯಾರ್ಥಿಗಳು ಭಾಗವಹಿಸುತ್ತಿದ್ದಾರೆ. ಹೊಸಬರಿಗೆ ಪ್ರಶಸ್ತಿಗಳು ಸಿಕ್ಕರೆ ಅವರಲ್ಲಿ ಬರೆಯುವ ಉತ್ಸಾಹ ಇನ್ನಷ್ಟು ಹೆಚ್ಚಲಿದೆ' ಎಂದರು.

ಜಾನಪದ ಗಾಯಕ ಅಪ್ಪಗೆರೆ ತಿಮ್ಮರಾಜು ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಪತ್ರಕರ್ತರಾದ ಶಶಿಧರ ಹಾಲಾಡಿ, ಗಾಣಧಾಳು ಶ್ರೀಕಂತ, ವಿದ್ಯಾರಶ್ಮಿ ಪೆಲತ್ತಡ್ಕ ಮಾತನಾಡಿದರು. ಸಪ್ನ ಬುಕ್ ಹೌಸ್ ವ್ಯವಸ್ಥಾಪಕ ನಿರ್ದೇಶಕ ನಿತಿನ್ ಷಾ ಹಾಜರಿದ್ದರು. ಆರ್. ದೊಡ್ಡೇಗೌಡ ಅವರು ಸಂವಾದ ನಡೆಸಿಕೊಟ್ಟರು.

ಗವಿಮಠದ ರಥೋತ್ಸವ ಇಂದು

ಪ್ರಜಾವಾಣಿ ವಾರ್ತೆ

ಕೊಪ್ಪಳ: ಇಲ್ಲಿನ ಪ್ರಸಿದ್ಧ ಗವಿಸಿದ್ಧೇಶ್ವರ ಮಠದ ಜಾತ್ರೆಯ ಮಹಾರಥೋತ್ಸವ ಶನಿವಾರ ಸಂಜೆ 5.30ಕ್ಕೆ ಮಠದ ಆವರಣದಲ್ಲಿ ನಡೆಯಲಿದೆ.

ಮೈಸೂರಿನ ಸುತ್ತೂರು ಕ್ಷೇತ್ರದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಚಾಲನೆ ನೀಡಲಿದ್ದು, ನಿವೃತ್ತ ಅಧಿಕಾರಿ ಚಿರಂಜೀವಿ ಸಿಂಗ್, ಇಸ್ರೊ ಚಂದ್ರಯಾನ್-3 ಯೋಜನಾ ನಿರ್ದೇಶಕ ಪಿ.ವೀರಮುತ್ತುವೇಲ್, ಅದಮ್ಯ ಚೇತನ ಫೌಂಡೇಷನ್ ಅಧ್ಯಕ್ಷೆ ತೇಜಸ್ವಿನಿ ಅನಂತ ಕುಮಾರ್ ಪಾಲ್ಗೊಳ್ಳುವರು.

ಶನಿವಾರದಿಂದ ಮೂರು ದಿನಗ ಕಾರ್ಯಕ್ರಮಗಳು ನಡೆಯಲಿದ್ದು, ಲಕ್ಷಾಂತರ ಭಕ್ತರಿಗೆ ಮಹಾದಾಸೋಹ ಸಿದ್ಧಪಡಿಸಲಾಗಿದೆ.

ಬಿಜೆಪಿ ವಿಶೇಷ ಕಾರ್ಯಕಾರಿಣಿ ಸಭೆ ಇಂದು

ಲೋಕಸಭಾ ಚುನಾವಣೆಗೆ ಸಿದ್ಧತೆ • ರಾಜ್ಯದ ಕಾಂಗ್ರೆಸ್ ಸರ್ಕಾರದ ವಿರುದ್ಧ ಹೋರಾಟಕ್ಕೆ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆಗೆ ಸಿದ್ಧತೆ ಮತ್ತು ಕಾಂಗ್ರೆಸ್ ಸರ್ಕಾರದ ವಿರುದ್ಧ ಹೋರಾಟ ರೂಪಿಸುವ ಉದ್ದೇಶದಿಂದ ನಗರದ ಅರಮನೆ ಮೈದಾನದಲ್ಲಿ ಶನಿವಾರ ಬಿಜೆಪಿ ವಿಶೇಷ ಕಾರ್ಯಕಾರಿಣಿ ಸಭೆ ನಡೆಯಲಿದೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿದರು.

ಲೋಕಸಭಾ ಚುನಾವಣೆಯನ್ನು ಗಮನದಲ್ಲಿ ಇಟ್ಟುಕೊಂಡು ಈ ಸಭೆ ನಡೆಸಲಾಗುತ್ತಿದೆ. ಅಲ್ಲದೇ, ಬಡವರು, ರೈತರು ಮತ್ತು ದಲಿತ ವಿರೋಧಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಹೋರಾಟ ಕೈಗೆತ್ತಿಕೊಳ್ಳಲು ಚರ್ಚಿಸಲಾಗುವುದು ಎಂದು ಹೇಳಿದರು.

ಕೇಂದ್ರದ ಸರ್ಕಾರದ ಕಾರ್ಯಕ್ರಮಗಳನ್ನು ಮನೆ- ಮನೆಗೆ ತಲುಪಿಸಲು ಉದ್ದೇಶಿಸಲಾಗಿದೆ. ಮೋದಿಯವರ ಜನಪ್ರಿಯತೆಯನ್ನು ಮತವನ್ನಾಗಿ ಪರಿವರ್ತಿಸಿ ಕರ್ನಾಟಕವನ್ನು ದಕ್ಷಿಣ ಭಾರತದ ಬಿಜೆಪಿ ಹೆಬ್ಬಾಗಿಲು ಎಂಬುದನ್ನು ಸಾಬೀತುಪಡಿಸುತ್ತೇವೆ ಎಂದು ವಿಜಯೇಂದ್ರ ತಿಳಿಸಿದರು.



ಬಿಜೆಪಿ ವಿಶೇಷ ಕಾರ್ಯಕಾರಿಣಿ ಸಭೆಗಾಗಿ ಅರಮನೆ ಆವರಣದಲ್ಲಿ ನಡೆದಿರುವ ಅಂತಿಮ ಹಂತದ ಸಿದ್ಧತೆಯನ್ನು ಬಿ.ವೈ.ವಿಜಯೇಂದ್ರ ಅವರು ಪರಿಶೀಲಿಸಿದರು.

ಈ ಎಲ್ಲ ವಿಷಯಗಳ ಬಗ್ಗೆ ಸಮಾಲೋಚನೆ ಮಾಡಿ ಲೋಕಸಭಾ ಚುನಾವಣೆಗೆ ಬೇಕಾದ ಕಾರ್ಯತಂತ್ರ ಮತ್ತು ಕಾರ್ಯಕ್ರಮಗಳನ್ನು ರೂಪಿಸುತ್ತೇವೆ ಎಂದು ಅವರು ಹೇಳಿದರು.

ಕೇಂದ್ರ ಸಚಿವ ಭೂಪೇಂದ್ರ ಯಾದವ್ ಅವರು ಕಾರ್ಯಕಾರಿಣಿ ಸಭೆಯನ್ನು ಉದ್ಘಾಟಿಸುತ್ತಾರೆ. ಪಕ್ಷದ ಎಲ್ಲ ಹಿರಿಯ ನಾಯಕರು, ಮಾಜಿ ಮುಖ್ಯಮಂತ್ರಿಗಳು ಭಾಗವಹಿಸಲಿದ್ದಾರೆ. ಹಿರಿಯ ನಾಯಕರ ಮಾರ್ಗದರ್ಶನದಲ್ಲಿ ಪಕ್ಷ ಮುನ್ನಡೆಸುವ ಕುರಿತು ಚರ್ಚಿಸುತ್ತೇವೆ ಎಂದು ತಿಳಿಸಿದರು.

ರಾಜ್ಯದಲ್ಲಿ ಪ್ರಧಾನಿ ಮೋದಿ ಅವರ ಪರವಾದ ಅಲೆ ಇದೆ. 28 ಕ್ಕೆ 28 ಕ್ಷೇತ್ರಗಳನ್ನು ಗೆಲ್ಲುವ ಗುರಿ ಹಾಕಿಕೊಂಡಿದ್ದೇವೆ. ಬಿಜೆಪಿಯ ತತ್ವ, ಸಿದ್ಧಾಂತ ಒಪ್ಪಿ ಬರುವ ಯಾವುದೇ ನಾಯಕರನ್ನು ಪಕ್ಷಕ್ಕೆ ಸ್ವಾಗತ ಮಾಡುತ್ತೇವೆ. ಜಗದೀಶ ಶೆಟ್ಟರ್ ಕಾಂಗ್ರೆಸ್‌ನಲ್ಲಿದ್ದರೂ ಅವರ ಮನಸ್ಸು ಬಿಜೆಪಿಯಲ್ಲೇ ಇತ್ತು. ಮೋದಿ ಅವರು ಮತ್ತೊಮ್ಮೆ ಪ್ರಧಾನಿ ಆಗಬೇಕು ಎಂಬ ಅಪೇಕ್ಷೆ ಅವರಲ್ಲಿ ಬಲವಾಗಿತ್ತು. ಅದಕ್ಕೆ ಪೂರಕವಾಗಿ ಉತ್ತಮ ತೀರ್ಮಾನ ಮಾಡಿದ್ದಾರೆ ಎಂದು ಹೇಳಿದರು.

ಯಾವ ಕ್ಷೇತ್ರದಲ್ಲಿ ಯಾರು ಅಭ್ಯರ್ಥಿ ಎಂಬ ಕುರಿತು ಕೇಂದ್ರದ ವರಿಷ್ಠರು ನಿರ್ಧಾರ ಮಾಡುತ್ತಾರೆ. ಕಾರ್ಯಕರ್ತರ ನಿರೀಕ್ಷೆಗೆ ಅನುಗುಣವಾಗಿ ನಿರ್ಧಾರ ಆಗಲಿದೆ ಎಂದರು.

ಸಂಸದ ಸಿದ್ದೇಶ್ವರ ವಿರುದ್ಧ ಅಹವಾಲು

ಬೆಂಗಳೂರು: ದಾವಣಗೆರೆ ಸಂಸದ ಜಿ.ಎಂ.ಸಿದ್ದೇಶ್ವರ ಅವರಿಗೆ ಈ ಬಾರಿ ಟಿಕೆಟ್ ನೀಡಬಾರದು ಎಂದು ದಾವಣಗೆರೆ ಜಿಲ್ಲಾ ಬಿಜೆಪಿ ಮುಖಂಡರ ನಿಯೋಗ ಶನಿವಾರ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ಬಿ.ಎಸ್. ಯಡಿಯೂರಪ್ಪ ಅವರಿಗೆ ಮನವಿ ಮಾಡಿದೆ.

'ಜಿಲ್ಲೆಯಲ್ಲಿ ಸಿದ್ದೇಶ್ವರ ಅವರ ಸ್ಪರ್ಧೆಗೆ ವಿರೋಧವಿದೆ. ಇವರು ನಾಲ್ಕು ಬಾರಿ ಗೆದ್ದರೂ ಜಿಲ್ಲೆಯನ್ನು ಅಭಿವೃದ್ಧಿ ಮಾಡಿಲ್ಲ. ಕಾರ್ಯಕರ್ತರನ್ನು ವಿಶ್ವಾಸಕ್ಕೂ ತೆಗೆದುಕೊಂಡಿಲ್ಲ. ಆದ್ದರಿಂದ ಅವರಿಗೆ ಟಿಕೆಟ್ ನೀಡಬಾರದು. ಟಿಕೆಟ್ ನೀಡಿದರೆ ಸೋಲುತ್ತಾರೆ' ಎಂದು ನಿಯೋಗವು ವಿಜಯೇಂದ್ರ ಮತ್ತು ಯಡಿಯೂರಪ್ಪ ಅವರಿಗೆ ಮನವರಿಕೆ ಮಾಡುವ ಪ್ರಯತ್ನ ನಡೆಸಿತು.

ಇದಕ್ಕೂ ಮುನ್ನ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಮಾಜಿ ಶಾಸಕ ಎಂ.ಪಿ.ರೇಣುಕಾಚಾರ್ಯ, 'ದಾವಣಗೆರೆಯಲ್ಲಿ ಈ ಬಾರಿ ಸಮೀಕ್ಷೆ ನಡೆಸಿ ಟಿಕೆಟ್ ನೀಡಬೇಕು ಎಂಬುದು ಜಿಲ್ಲೆಯ ಕಾರ್ಯಕರ್ತರ ಒತ್ತಾಸೆಯಾಗಿದೆ. ನಾವು ಯಾರ ಪರವೂ ಇಲ್ಲ ವಿರುದ್ಧವೂ ಇಲ್ಲ. ಕಾರ್ಯಕರ್ತರ ಅಭಿಪ್ರಾಯದಂತೆ ನಡೆದುಕೊಳ್ಳಬೇಕು. ಜಿಲ್ಲೆಯ ವಾಸ್ತವ ಸ್ಥಿತಿ ಏನಿದೆಯೋ ಅದರಂತೆ ನಮ್ಮ ನಾಯಕರಿಗೆ ಮನವರಿಕೆ ಮಾಡಿದ್ದೇವೆ' ಎಂದರು.

ನಿಯೋಗದಲ್ಲಿ ಮಾಜಿ ಸಚಿವ ಎಸ್.ಎ.ರವೀಂದ್ರನಾಥ್, ಎಂ.ಪಿ. ರೇಣುಕಾಚಾರ್ಯ, ಕರುಣಾಕರ ರೆಡ್ಡಿ, ಗುರು ಸಿದ್ದನಗೌಡ, ಡಾ.ಶಿವಯೋಗಿ ಸ್ವಾಮಿ, ಮಾಡಾಳ್ ಮಲ್ಲಿಕಾರ್ಜುನ, ಲೋಕಿಕೆರೆ ನಾಗರಾಜ್, ಅಜಯ್‌ಕುಮಾರ್ ಸೇರಿ 500 ಕ್ಕೂ ಹೆಚ್ಚು ಕಾರ್ಯಕರ್ತರು ಇದ್ದರು.

ಹಳೇ ಕಾಮಗಾರಿಗೆ ಶಾಸಕರ ಶಂಕುಸ್ಥಾಪನೆ: ಆರೋಪ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಈಗಿನ ಸರ್ಕಾರದಲ್ಲಿ ಯಾವುದೇ ಅನುದಾನ ಮಂಜೂರಾಗಿಲ್ಲ, ಹಿಂದಿನ ಸರ್ಕಾರ 2022ರಲ್ಲಿ ಮಂಜೂರು ಮಾಡಿದ್ದ ಕಾಮಗಾರಿಗಳಿಗೆ ಶಾಸಕ ಎನ್. ಶ್ರೀನಿವಾಸ್ ಮತ್ತೆ ಶಂಕುಸ್ಥಾಪನೆ ಮಾಡುತ್ತಿದ್ದಾರೆ ಎಂದು ಮಾಜಿ ಶಾಸಕ ಕೆ. ಶ್ರೀನಿವಾಸಮೂರ್ತಿ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಹೊಸ ಕಾಮಗಾರಿ ಮಂಜೂರು ಆಗಿದ್ದರೆ ಅದರ ಪತ್ರವನ್ನು ತೋರಿಸಲಿ' ಎಂದು ಸವಾಲು ಹಾಕಿದರು.

'ನನ್ನ ವಯಸ್ಸಿಗಾದರೂ ಶಾಸಕರು ಮರ್ಯಾದೆ ಕೊಡಲಿ. ಏಕವಚನದಲ್ಲಿ ಬಾಯಿಗೆ ಬಂದಹಾಗೆ ಮಾತನಾಡುವುದನ್ನು ನಿಲ್ಲಿಸಲಿ. ರಕ್ತಮಂಗಲ ಎಂದು ಕುಖ್ಯಾತಿ ಪಡೆದಿದ್ದ ನೆಲಮಂಗಲವನ್ನು ನನ್ನ ಅವಧಿಯಲ್ಲಿ ನೆಮ್ಮದಿಯಿಂದ ಬಾಳುವಂತೆ ಮಾಡಿದ್ದೆ' ಎಂದು ಹೇಳಿದರು.

'ಅಧಿಕಾರಿಗಳಿಗೆ ಏಕವಚನದಲ್ಲಿ ಬೈಯುತ್ತಿದ್ದಾರೆ, ಅಮಾನತು ಮಾಡಿಸುತ್ತಿದ್ದಾರೆ. ತೊಂದರೆ ಕೊಡುವುದು ಹೀಗೆ ಮುಂದುವರಿದರೆ ಹೋರಾಟ ಮಾಡಬೇಕಾಗುತ್ತದೆ. ಹಾಡ ಹಗಲೇ ಕಳ್ಳತನಗಳಾಗುತ್ತಿವೆ. ಪೊಲೀಸರನ್ನು ತಮ್ಮ ಹಿಂದೆ ಓಡಾಡಲು ಬಳಸಿಕೊಳ್ಳುವುದನ್ನು ಬಿಟ್ಟು ಕೆಲಸ ಮಾಡಲು ಬಿಡಲಿ. ಅಪರಾಧ ಪ್ರಕರಣಗಳು ಕಡಿಮೆ ಮಾಡಲು ಕ್ರಮ ಕೈಗೊಳ್ಳಲಿ' ಎಂದು ಸಲಹೆ ನೀಡಿದರು.

ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಟಿ. ತಿಮ್ಮರಾಯಪ್ಪ, ಮುಖಂಡರಾದ ಎಲ್.ಜಿ.ಕೃಷ್ಣಪ್ಪ, ಗಂಗಣ್ಣ, ರಾಜಣ್ಣ, ವಕೀಲರ ಸಂಘದ ಕಾರ್ಯದರ್ಶಿ ನಾಗೇಂದ್ರ, ಆಂಜಿನಪ್ಪ, ನಾರಾಯಣರಾವ್, ನಗರಸಭೆ ಸದಸ್ಯ ಶಿವಕುಮಾರ್, ಮಾಜಿ ಸದಸ್ಯ ಸೀತಾರಾಮು ಭಾಗವಹಿಸಿದ್ದರು.

ಡಿಸಿಎಂ ವೈದ್ಯ ಸಲಹೆಗಾರರಾಗಿ ನರಸಿಂಹಜ್ಞಾನಿ



ದೊಡ್ಡಬಳ್ಳಾಪುರ: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ವೈದ್ಯಕೀಯ ಸಲಹೆಗಾರರಾಗಿ ಡಾ.ಬಿ.ಸಿ.ನರಸಿಂಹ ಜ್ಞಾನಿ ಅವರನ್ನು ಶುಕ್ರವಾರ ಸರ್ಕಾರ ನೇಮಿಸಿ ಆದೇಶಿಸಿದೆ.

ಎಂಬಿಬಿಎಸ್, ಎಂ.ಡಿ, ಎಫ್ಐಸಿಎಂ, ಐಡಿಸಿಸಿಎಂ ವಿದ್ಯಾರ್ಹತೆ ಹೊಂದಿರುವ ಡಾ.ನರಸಿಂಹಜ್ಞಾನಿ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೆ ಉಪಮುಖ್ಯಮಂತ್ರಿ ವೈದ್ಯಕೀಯ ಸಲಹೆಗಾರರಾಗಿ ನೇಮಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ.

ವೈದ್ಯ ಡಾ.ನರಸಿಂಹಜ್ಞಾನಿ, ತಾಲ್ಲೂಕಿನ ಸಾಸಲಿ ಹೋಬಳಿ ಬಂಡಯ್ಯನಪಾಳ್ಯದವರು. ಇಲ್ಲಿನ ಜವಾಹರ್ ನವೋದಯ ವಿದ್ಯಾಲಯದಲ್ಲಿ ವಿದ್ಯಾಭ್ಯಾಸ ಮಾಡಿದ್ದಾರೆ. ಬೆಂಗಳೂರಿನ ನಾಗರಬಾವಿ ಟ್ರೂಲೈಫ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಯಲಹಂಕ: ಉಪನಗರದಲ್ಲಿ ವೇಮನರ 612ನೇ ಜಯಂತ್ಯುತ್ಸವ

ರಕ್ತದಾನ ಶಿಬಿರ: 487 ಯುನಿಟ್ ರಕ್ತ ಸಂಗ್ರಹ

ಪ್ರಜಾವಾಣಿ ವಾರ್ತೆ

ಯಲಹಂಕ: ಮಹಾಯೋಗಿ ವೇಮನರ ತತ್ವಾದರ್ಶಗಳು ಸಾರ್ವಕಾಲಿಕವಾಗಿದ್ದು, ಅವರು ಸಮಾಜಕ್ಕೆ ನೀಡಿದ ಸಂದೇಶ ಮತ್ತು ಆದರ್ಶಗಳನ್ನು ಪ್ರತಿಯೊಬ್ಬರೂ ಪಾಲಿಸಬೇಕು ಎಂದು ಶಾಸಕ ಎಸ್.ಆರ್. ವಿಶ್ವನಾಥ್ ಹೇಳಿದರು.

ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ಸಂಘ ಹಾಗೂ ಬೆಂಗಳೂರು ಉತ್ತರ ವಲಯದ ರೆಡ್ಡಿ ಜನಸಂಘದ ಆಶ್ರಯದಲ್ಲಿ ಮಹಾಯೋಗಿ ವೇಮನರ 612 ನೇ ಜಯಂತ್ಯುತ್ಸವದ ಪ್ರಯುಕ್ತ ಉಪನಗರದಲ್ಲಿ ಆಯೋಜಿಸಿದ್ದ ರಕ್ತದಾನ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

'ವೇಮನರು ಶ್ರೀಮಂತ ಕುಟುಂಬದಲ್ಲಿ ಜನಿಸಿದ್ದರೂ, ಜೀವನ ನಶ್ವರವೆಂದು ಸರ್ವಸಂಘ ಪರಿತ್ಯಾಗಿಯಾಗಿ ಸಮಾಜಕ್ಕೆ ಸತ್ಸಂದೇಶ ಸಾರಿದರು. ಅಂತಹ ಮಹಾಪುರುಷರ ಹೆಸರಿನಲ್ಲಿ ರಕ್ತದಾನ ಶಿಬಿರ ಆಯೋಜಿಸಿರುವುದು ಶ್ಲಾಘನೀಯ' ಎಂದರು.



ಯಲಹಂಕ ಉಪನಗರದಲ್ಲಿ ಆಯೋಜಿಸಿದ್ದ ರಕ್ತದಾನ ಶಿಬಿರದಲ್ಲಿ ಸಾರ್ವಜನಿಕರು ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಿದರು

ಶಿಬಿರದಲ್ಲಿ ಕಾಲೇಜು ವಿದ್ಯಾರ್ಥಿಗಳು, ಪೊಲೀಸ್ ಸಿಬ್ಬಂದಿ, ಉಪನ್ಯಾಸಕರು ಸೇರಿ ಸಾರ್ವಜನಿಕರು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಿದರು. ದಾನಿಗಳಿಗೆ ಪ್ರಮಾಣಪತ್ರ ವಿತರಿಸಲಾಯಿತು. 487 ಯುನಿಟ್ ರಕ್ತ ಸಂಗ್ರಹಿಸಲಾಯಿತು.

ಸಂಘದ ಅಧ್ಯಕ್ಷ ಎಂ.ಮುನಿರೆಡ್ಡಿ, ಉಪಾಧ್ಯಕ್ಷ ಎಸ್.ಎನ್. ಸಂಪತ್‌ಕುಮಾರ್, ನಿರ್ದೇಶಕರಾದ ಎಂ.ಮೋಹನ್‌ಕುಮಾರ್, ಎಸ್. ಜಿ. ನರಸಿಂಹಮೂರ್ತಿ, ಎಚ್. ರಾಜಣ್ಣ, ಶ್ರೀನಿವಾಸ್, ಅರುಣ ಪ್ರಕಾಶ್, ಗೀತಾ.ಬಿ.ಎಂ, ಬಿಜೆಪಿ ಮುಖಂಡರಾದ ದಿಬ್ಬೂರು ಜಯಣ್ಣ, ಎಂ.ಸತೀಶ್, ಚೊಕ್ಕನಹಳ್ಳಿ ವೆಂಕಟೇಶ್, ಟಿ.ಮುನಿರೆಡ್ಡಿ, ಅದ್ದೆ ವಿಶ್ವನಾಥಪುರ ಮಂಜುನಾಥ್, ಎಸ್.ಜಿ.ಪ್ರಶಾಂತ್ ರೆಡ್ಡಿ, ಸೂರ್ಯನಾರಾಯಣ ರೆಡ್ಡಿ ಮತ್ತಿತರರು ಉಪಸ್ಥಿತರಿದ್ದರು.

ಓದುವ ಸಂಸ್ಕೃತಿ ಪಸರಿಸಿ: ಪಾಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂವಿಧಾನ, ಅರಿವಿಗೆ ಇರುವ ಬಾಗಿಲು. ಅರಿವು ಬದಲಾವಣೆಗಿರುವ ದಾರಿದೀಪ. ಹಾಗಾಗಿ ಓದುವ ಸಂಸ್ಕೃತಿಯನ್ನು ಹರಡಬೇಕಾದ ತುರ್ತು ನಮ್ಮ ಎದುರಿಗಿದೆ' ಎಂದು ಸಾಹಿತಿ, ಭಾಷಾಂತರಕಾರ ಎಂ. ಅಬ್ದುಲ್ ರೆಹಮಾನ್ ಪಾಷ ಅಭಿಪ್ರಾಯಪಟ್ಟರು.

ನಗರದಲ್ಲಿ 'ಪರಾಗ್' ಸಂಸ್ಥೆ ಹಾಗೂ 'ಬಹುರೂಪಿ' ಪ್ರಕಾಶನ ಹಮ್ಮಿಕೊಂಡಿರುವ 'ಬಿಂಬ ಪ್ರತಿಬಿಂಬ' ಮೂರು ದಿನಗಳ ಮಕ್ಕಳ ಕೃತಿಗಳ ಭಾಷಾಂತರ ಕಲಿಕಾ ಕಾರ್ಯಾಗಾರವನ್ನು ಉದ್ದೇಶಿಸಿ ಅವರು ಮಾತನಾಡಿದರು.

ಸಂವಿಧಾನ, ಜನರಿಗೆ ನೀಡಿರುವ ಭರವಸೆ ದೊಡ್ಡದು. ಈ ಭರವಸೆಯನ್ನು ಉಳಿಸಿಕೊಳ್ಳಬೇಕಾದ ತುರ್ತು ಎಲ್ಲರ ಮುಂದಿದೆ ಎಂದು ಅವರು ಹೇಳಿದರು.

ಪರಾಗ್ ಸಂಸ್ಥೆಯ ಮುಖ್ಯಸ್ಥರಾದ ಲಕ್ಷ್ಮಿ ಕರುಣಾಕರನ್ ಅವರು ಮಾತನಾಡಿ 'ಇಂದು ಸಂವಿಧಾನದ ಆಶಯವನ್ನು ಎಲ್ಲರೆಡೆಗೆ ಕೊಂಡೊಯ್ಯಬೇಕಾದ ತುರ್ತು ಇದೆ. 'ಪರಾಗ್' ಸಂಸ್ಥೆ, ಮಕ್ಕಳ ಕೃತಿಗಳಿಗೆ ಪ್ರೋತ್ಸಾಹ ನೀಡುವ ಮೂಲಕ ಅದನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದೆ ಎಂದರು.

ಸಂವಿಧಾನದ ದಿನದ ಅಂಗವಾಗಿ ಸಂವಿಧಾನದ ಪೀಠಿಕೆಯನ್ನು ಅನಾವರಣ ಮಾಡಿ ಪ್ರತಿಜ್ಞಾ ವಿಧಿ ಕೈಗೊಳ್ಳಲಾಯಿತು.

ಬಹುರೂಪಿ ಪ್ರಕಟಿಸಿರುವ ಗುಜ್ಜಾರ್ ಅವರ 'ಎಲ್ಲರಿಗಾಗಿ ಅಂಬೇಡ್ಕರ್ ' ಸಚಿತ್ರ ಪುಸ್ತಕ ಬಿಡುಗಡೆ ಮಾಡಲಾಯಿತು. ಮಕ್ಕಳ ಸಾಹಿತ್ಯ ತಜ್ಞರಾದ ತೇಜಸ್ವಿ ಶಿವಾನಂದ್, 'ಪರಾಗ್'ನ ತುಹಿನಾ ಶರ್ಮ, ವಿವೇಕ್, ಬಹುರೂಪಿಯ ಜಿ.ಎನ್. ಮೋಹನ್, ಶ್ರೀಜಾ ವಿ.ಎನ್. ಉಪಸ್ಥಿತರಿದ್ದರು.



'ಬಿಂಬ ಪ್ರತಿಬಿಂಬ'– ಮಕ್ಕಳ ಕೃತಿಗಳ ಭಾಷಾಂತರ ಕಾರ್ಯಾಗಾರವನ್ನು ಸಾಹಿತಿ ಎಂ. ಅಬ್ದುಲ್ ರೆಹಮಾನ್ ಪಾಷ ಸಂವಿಧಾನ ಪೀಠಿಕೆ ಅನಾವರಣಗೊಳಿಸುವ ಮೂಲಕ ಉದ್ಘಾಟಿಸಿದರು. ತೇಜಸ್ವಿ ಶಿವಾನಂದ್, ಪರಾಗ್‌ನ ಲಕ್ಷ್ಮಿ ಕರುಣಾಕರನ್, ಬಹುರೂಪಿಯ ಶ್ರೀಜಾ ವಿ.ಎನ್. ಹಾಗೂ ಜಿ.ಎನ್.ಮೋಹನ್ ಪಾಲ್ಗೊಂಡಿದ್ದರು

ಚಾಲಕರಿಗೆ ಮುಖ್ಯಮಂತ್ರಿಗಳ ಚಿನ್ನದ ಪದಕ ವಿತರಿಸಿದ ಸಚಿವ ರಾಮಲಿಂಗಾರೆಡ್ಡಿ

ಅವಘಡಗಳಾಗದಂತೆ ಬಸ್ ಚಲಾಯಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಣ್ಣ ಅವಘಡಗಳಿಗೇ ಮಾಧ್ಯಮಗಳು ಹೆಚ್ಚು ಪ್ರಚಾರ ನೀಡುತ್ತವೆ. ಅಂಥ ಸಣ್ಣ ಅವಘಡ ಕೂಡ ಆಗದಂತೆ ಎಚ್ಚರ ವಹಿಸಿ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಅಪಘಾತ ರಹಿತವಾಗಿ ಚಾಲನೆ ಮಾಡಿದ ಬಿಎಂಟಿಸಿ ಚಾಲಕರಿಗೆ ರಾಷ್ಟ್ರೀಯ ಚಾಲಕರ ದಿನದ ಅಂಗವಾಗಿ ಬುಧವಾರ ಮುಖ್ಯಮಂತ್ರಿಗಳ ಚಿನ್ನದ ಪದಕ ವಿತರಿಸಿ ಮಾತನಾಡಿದರು.

ಬಸ್‌ಗಳು ದಿನಕ್ಕೆ 1.56 ಲಕ್ಷ ಟ್ರಿಪ್ ಮಾಡುತ್ತವೆ. ಅಪಘಾತಗಳು ಬಹಳ ಕಡಿಮೆ. ಎಷ್ಟೇ ಉತ್ತಮವಾಗಿ ಕೆಲಸ ಮಾಡಿದರೂ ಅದಕ್ಕೆ ಪ್ರಚಾರ ಸಿಗುವುದು ಕಡಿಮೆ. ಯಾರೋ ಒಬ್ಬರು ಮಾಡುವ ತಪ್ಪಿಗೆಷ್ಟೇ ಪ್ರಚಾರ ಸಿಕ್ಕಿಬಿಡುತ್ತದೆ ಎಂದರು.

ಶಕ್ತಿ ಯೋಜನೆ ಜಾರಿಯಾದ ಮೇಲೆ ಸಾರಿಗೆಯ ನಾಲ್ಕು ನಿಗಮಗಳ ಬಸ್‌ಗಳಲ್ಲಿ ಪ್ರಯಾಣಿಸುವವರ ಸಂಖ್ಯೆ 25 ಲಕ್ಷ ಹೆಚ್ಚಾಗಿದೆ. ಸಿಬ್ಬಂದಿ ಕೊರತೆ ಸಹಿತ ಇರುವ ಎಲ್ಲ ಮಿತಿಗಳನ್ನು ಮೀರಿ ಸಿಬ್ಬಂದಿ ಉತ್ತಮವಾಗಿ ಕೆಲಸ ಮಾಡಿದ್ದರಿಂದ ಯೋಜನೆ ಯಶಸ್ವಿಯಾಗಿದೆ ಎಂದು ಶ್ಲಾಘಿಸಿದರು.

7 ವರ್ಷಗಳಿಂದ ಅಪಘಾತ-ರಹಿತವಾಗಿ ಕಾರ್ಯನಿರ್ವಹಿಸುತ್ತಿರುವ ಚಾಲಕರು, 10 ವರ್ಷಗಳಿಂದ ಅನುಸೂಚಿತ ಮಾರ್ಗಗಳಲ್ಲಿ ಅಪಘಾತ ರಹಿತವಾಗಿ ಕಾರ್ಯನಿರ್ವಹಿಸುತ್ತಿರುವ ಚಾಲಕರು/ನಿರ್ವಾಹಕರು ಮತ್ತು 15 ವರ್ಷಗಳಿಂದ ನಿಗಮದ ವಾಹನಗಳಲ್ಲಿ ಅಪಘಾತ ರಹಿತವಾಗಿ ಕಾರ್ಯ ನಿರ್ವಹಿಸುತ್ತಿರುವ ಚಾಲಕರು ಸೇರಿ 171 ಮಂದಿಗೆ ಚಿನ್ನದ ಪದಕ ನೀಡಿ ಗೌರವಿಸಲಾಯಿತು.

ಚಿನ್ನದ ಪದಕ ಪಡೆದವರಿಗೆ ₹ 5,000 ನಗದು, 40 ಗ್ರಾಂ ಬೆಳ್ಳಿಯ ಮೇಲೆ 6 ಗ್ರಾಂ ಚಿನ್ನದ ಗಂಡಭೇರುಂಡ ಚಿಹ್ನೆ ಇರುವ ಪದಕ ನೀಡಲಾಯಿತು. ಅವರಿಗೆ ತಿಂಗಳಿಗೆ ₹ 100 ಪ್ರೋತ್ಸಾಹಭತ್ಯೆ ದೊರೆಯಲಿದೆ.

139 ಚಾಲಕರಿಗೆ ಪದೋನ್ನತಿ ಆದೇಶವನ್ನು ವಿತರಿಸಲಾಯಿತು. ಬಿಎಂಟಿಸಿ ನಿರ್ದೇಶಕ (ಭದ್ರತೆ ಮತ್ತು ಜಾಗೃತಿ) ಕಲಾ ಕೃಷ್ಣಸ್ವಾಮಿ, ಮುಖ್ಯ ಸಂಚಾರ ವ್ಯವಸ್ಥಾಪಕ (ಆಚರಣೆ) ಪ್ರಭಾಕರ ರೆಡ್ಡಿ ಭಾಗವಹಿಸಿದ್ದರು.



ಅಪಘಾತ ರಹಿತ ಚಾಲನೆ ಮಾಡಿದ ಬಿಎಂಟಿಸಿ ಚಾಲಕರಿಗೆ ಬುಧವಾರ ಮುಖ್ಯಮಂತ್ರಿಗಳ ಚಿನ್ನದ ಪದಕ ವಿತರಿಸಲಾಯಿತು

ಟೇಬಲ್ ಟೆನಿಸ್: ಪ್ರಿ ಕ್ವಾರ್ಟರ್‌ಗೆ ಅರ್ಚನಾ

ಬೆಂಗಳೂರು: ಭಾರತದ ಯುವ ಆಟಗಾರ್ತಿ ಅರ್ಚನಾ ಕಾಮತ್ ಅವರು ಗೋವಾದಲ್ಲಿ ನಡೆಯುತ್ತಿರುವ ವಿಶ್ವ ಟೇಬಲ್ ಟೆನಿಸ್ ಸ್ಟಾರ್ ಕಂಟೆಂಡರ್ ಟೂರ್ನಿಯ ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಶುಕ್ರವಾರ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಬೆಂಗಳೂರಿನ 23 ವರ್ಷದ ಆಟಗಾರ್ತಿ, ವಿಶ್ವದ 134ನೇ ಕ್ರಮಾಂಕದ ಅರ್ಚನಾ 9-11, 11-5, 11-5, 8-11, 11-5ರಿಂದ ವಿಶ್ವದ 53ನೇ ಕ್ರಮಾಂಕದ ಜಿಯೆನಿ ಶಾವೊ (ಪೋರ್ಚುಗಲ್) ಅವರಿಗೆ ಆಘಾತ ನೀಡಿದರು.



ಅರ್ಚನಾ ಕಾಮತ್

ಪುರುಷರ ಡಬಲ್ಸ್‌ನ ಕ್ವಾರ್ಟರ್ ಫೈನಲ್‌ನಲ್ಲಿ ಭಾರತದ ಮಾನವ್ ಠಕ್ಕರ್ ಮತ್ತು ಮನುಷ್ ಶಾ ಜೋಡಿಯು ನಿರಾಸೆ ಅನುಭವಿಸಿತು. ಈ ಜೋಡಿಯು 7-11, 11-7, 8-11, 9-11ರಿಂದ ಚೀನಾ ತೈಪೆಯ ಕಾವೊ ಚೆಂಗ್-ಜುಯಿ ಮತ್ತು ಚುವಾಂಗ್ ಚಿಹ್ ಯುವಾನ್ ಅವರಿಗೆ ಮಣಿಯಿತು.

ಮಹಿಳೆಯರ ಡಬಲ್ಸ್‌ನಲ್ಲಿ ದಿಯಾ ಚಿತಳೆ ಮತ್ತು ಶ್ರೀಜಾ ಅಕುಲಾ 9-11, 8-11, 8-11ರಿಂದ ಚೀನಾ ತೈಪೆಯ ಚೆಂಗ್ ಐ-ಚಿಂಗ್ ಮತ್ತು ಲಿ ಯು-ಜುನ್ ವಿರುದ್ಧ ಮುಗ್ಗರಿಸಿದರು.

ವ್ಯಕ್ತಿಗೆ ಬ್ಲ್ಯಾಕ್‌ಮೇಲ್: ದಂಪತಿ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವ್ಯಕ್ತಿ ಜೊತೆ ಸಲುಗೆಯಿಂದ ವರ್ತಿಸಿ ಫೋಟೊ ಕ್ಲಿಕ್ಕಿಸಿಕೊಂಡು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಆರೋಪದಡಿ ದಂಪತಿಯನ್ನು ಪೂರ್ವ ವಿಭಾಗದ ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಹಲಸೂರು ನಿವಾಸಿಯೊಬ್ಬರು ನೀಡಿದ್ದ ದೂರು ಆಧರಿಸಿ ಗುಜರಾತ್‌ನ ದಂಪತಿಯನ್ನು ಹಲಸೂರು ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಕೃತ್ಯ ನಡೆದ ಸ್ಥಳದ ಆಧಾರದಲ್ಲಿ ಪ್ರಕರಣವನ್ನು ಪುಲಿಕೇಶಿನಗರ ಠಾಣೆಗೆ ವರ್ಗಾಯಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ವೇಶ್ಯಾವಾಟಿಕೆಯಲ್ಲಿ ತೊಡಗಿದ್ದ ಪತಿ ಹಾಗೂ ಪತ್ನಿ, ರಾಜ್ಯದಿಂದ ರಾಜ್ಯಕ್ಕೆ ಸುತ್ತಾಡುತ್ತಿದ್ದರು. ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಪ್ರಕಟಿಸುತ್ತಿದ್ದ ಪತಿ, ಗ್ರಾಹಕರನ್ನು ವೇಶ್ಯಾವಾಟಿಕೆಗೆ ಆಹ್ವಾನಿಸುತ್ತಿದ್ದರು. ಅಂಥ ವ್ಯಕ್ತಿಗಳ ಜೊತೆ ಪತ್ನಿ ಸಲುಗೆಯಿಂದ ವರ್ತಿಸಿ ಹಣ ಪಡೆದುಕೊಳ್ಳುತ್ತಿದ್ದಳು' ಎಂದು ತಿಳಿಸಿವೆ.

'ಬೆಂಗಳೂರಿಗೆ ಇತ್ತೀಚೆಗೆ ಬಂದಿದ್ದ ದಂಪತಿಯನ್ನು ದೂರುದಾರ ಸಂಪರ್ಕಿಸಿದ್ದರು. ದೂರುದಾರರ ಜೊತೆ ಸಲುಗೆಯಿಂದ ವರ್ತಿಸಿದ್ದ ಪತ್ನಿ, ಫೋಟೊ ಕ್ಲಿಕ್ಕಿಸಿಕೊಂಡಿದ್ದಳು. ಅದೇ ಫೋಟೊವನ್ನು ದೂರುದಾರರಿಗೆ ತೋರಿಸಿದ್ದ ದಂಪತಿ, ಹಣಕ್ಕಾಗಿ ಬ್ಲ್ಯಾಕ್‌ಮೇಲ್ ಮಾಡಲಾರಂಭಿಸಿದ್ದರು. ಹಣ ನೀಡಲು ಒಪ್ಪದ ವ್ಯಕ್ತಿ ಠಾಣೆಗೆ ದೂರು ನೀಡಿದ್ದರು. ತಾಂತ್ರಿಕ ಪುರಾವೆಗಳನ್ನು ಆಧರಿಸಿ ದಂಪತಿಯನ್ನು ವಶಕ್ಕೆ ಪಡೆಯಲಾಗಿದೆ' ಎಂದು ಮೂಲಗಳು ಹೇಳಿವೆ.

ಕರಾಟೆ: ಚೈತ್ರಾಶ್ರೀಗೆ ಕಂಚಿನ ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಗಾವಿಯ ವಿಶ್ವೇಶರಯ್ಯ ತಾಂತ್ರಿಕ ವಿಶ್ವವಿದ್ಯಾಲಯವನ್ನು ಪ್ರತಿನಿಧಿಸಿದ ಬೆಂಗಳೂರಿನ ಚೈತ್ರಾ ಶ್ರೀ ಎನ್. ಅವರು ಮಧ್ಯಪ್ರದೇಶದ ಭೋಪಾಲ್‌ನಲ್ಲಿ ಲಕ್ಷ್ಮೀನಾರಾಯಣ ಕಾಲೇಜ್ ಆಫ್ ಟೆಕ್ನಾಲಜಿ (ಎಲ್‌ಎನ್‌ಸಿಟಿ) ಆಶ್ರಯದಲ್ಲಿ ಇತ್ತೀಚೆಗೆ ನಡೆದ ನೈರುತ್ಯ ವಲಯ ಅಂತರ ವಿಶ್ವವಿದ್ಯಾಲಯ ಕರಾಟೆ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದಾರೆ.




ಚೈತ್ರಾ ಶ್ರೀ ಎನ್.

ಅವರು ಬೆಂಗಳೂರಿನ ಡಾ.ಅಂಬೇಡ್ಕರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

ಪ್ರಜಾವಾಣಿ ಶನಿವಾರ, 27 ಜನವರಿ 2024

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ



ಸಂವಿಧಾನವೆಂಬ ಮರದ ನೆರಳಿನಲ್ಲಿ...

ಭಾರತ ಸಂವಿಧಾನದ ಅಂತಿಮ ಕರಡನ್ನು ಸರ್ಕಾರದ ಅಂಗೀಕಾರಕ್ಕೆ ಮಂಡಿಸಿದ್ದು 1949ರ ನ. 26ರಂದು. ಅದೇ ದಿನ ಸ್ವೀಕಾರವೂ ಆಯಿತು. ಆದರೆ, ಸಂವಿಧಾನ ಅನುಷ್ಠಾನಕ್ಕೆ ಬಂದಿದ್ದು 1950ರ ಜ. 26. ಹಾಗಾಗಿ, ಈ ದಿನವನ್ನು ಗಣರಾಜ್ಯೋತ್ಸವನ್ನಾಗಿ ಆಚರಿಸಲಾಗುತ್ತದೆ. ಸಂವಿಧಾನದ ಮೂಲ ಆಶಯವಾಗಿರುವ ಸಮಾನತೆಯು, ಸ್ತ್ರೀ ಸಬಲೀಕರಣದಲ್ಲಿ ಮಹತ್ವದ ಪಾತ್ರ ವಹಿಸಿದೆ. ಈ ಬಗ್ಗೆ ಸಾಧಕಿಯರ ಅನಿಸಿಕೆಗಳನ್ನು ಮಂಜುಶ್ರೀ ಎಂ. ಕಡಕೋಳ ನಿರೂಪಿಸಿದ್ದಾರೆ.

ಘನತೆಯ ಬದುಕಿಗೆ ದಾರಿ...

ಇಂದು ನಾವು ಕುಡಿಯುತ್ತಿರುವ ನೀರು, ಉಣ್ಣುತ್ತಿರುವ ಅನ್ನ ಡಾ.ಬಿ.ಆರ್. ಅಂಬೇಡ್ಕರ್ ಅವರಿಂದ ದೊರೆತದ್ದು. ಸಂವಿಧಾನ ಇಲ್ಲದಿದ್ದರೆ ನಾನು ಲಿಂಗತ್ವ ಅಲ್ಪಸಂಖ್ಯಾತಳು ಎಂದು ಹೇಳಿಕೊಳ್ಳಲು ಆಗುತ್ತಿರಲಿಲ್ಲ. ಸಮಾಜವನ್ನು ಪ್ರಶ್ನಿಸಲು ಸಾಧ್ಯವಾಗುತ್ತಿರಲಿಲ್ಲ. ವಿವಿಧ ಧರ್ಮಗಳಿರುವ ದೇಶದಲ್ಲಿ ದಲಿತಳಾಗಿ, ಲಿಂಗತ್ವ ಅಲ್ಪಸಂಖ್ಯಾತಳಾಗಿರುವ ನನ್ನನ್ನು ಸಾಮಾಜಿಕ, ಕೌಟುಂಬಿಕ ಮೌಲ್ಯಗಳು ಹೆಣ್ಣೆಂದು ಒಪ್ಪಿಕೊಂಡಿಲ್ಲ. ಆದರೆ, ಸಂವಿಧಾನದ ಮೌಲ್ಯ ನನ್ನನ್ನು ಒಪ್ಪಿಕೊಂಡಿದೆ. ಎಲ್ಲರೂ ನನ್ನನ್ನು ಆಚೆ ಇಟ್ಟಾಗ ನನ್ನನ್ನು ಒಪ್ಪಿಕೊಂಡಿದ್ದು ಬಾಬಾ ಸಾಹೇಬರು ನೀಡಿದ ಸಂವಿಧಾನ ಮಾತ್ರ.

ಕತ್ತಲೆಯ ಹಿಂದೆ ನನ್ನನ್ನು ಹೆಣ್ಣೆಂದು ಒಪ್ಪಿಕೊಳ್ಳುವವರು ಬೆಳಕಿನಲ್ಲಿ ಒಪ್ಪಿಕೊಳ್ಳಲು ಹಿಂಜರಿಯುತ್ತಾರೆ. ಸಂವಿಧಾನದ ಅರಿವು ಮೂಡಿದಾಗ ಪರ್ಯಾಯ ದಾರಿ, ಘನತೆಯ ಬದುಕು ಯಾವುದು ಎಂಬ ಮನವರಿಕೆಯಾಯಿತು. ತಳಸಮುದಾಯದ ಹೆಣ್ಣುಮಕ್ಕಳು ಹಿಂದೆ ತಮ್ಮ ತಂದೆ, ಗಂಡ ಯಾವ ಕೆಲಸ ಮಾಡುತ್ತಿದ್ದರೋ ಅದೇ ಕೆಲಸ ಮಾಡಿಕೊಂಡಿರಬೇಕೆಂದು ಸಮಾಜ ಹೇಳುತ್ತದೆ. ಆದರೆ, ಚಪ್ಪಲಿ ಹೊಲೆಯುವ ಕುಟುಂಬದ ಹೆಣ್ಣುಮಗಳು ಕೂಡಾ ಸ್ಪೀಕರ್ ಆಗಬಲ್ಲಳು ಎಂಬ ಆತ್ಮವಿಶ್ವಾಸ, ನಂಬಿಕೆ ಮೂಡಿಸಿದ್ದು ಸಂವಿಧಾನ. ಟೋಲ್‌ಗಳಲ್ಲಿ ಭಿಕ್ಷೆ ಬೇಡುತ್ತಿದ್ದ ನಾನೀಗ ಸಾಮಾಜಿಕ ಕಾರ್ಯಕರ್ತೆ ಆಗಿದ್ದೇನೆ. ಲಿಂಗತ್ವ ಅಲ್ಪಸಂಖ್ಯಾತರ ಬಗ್ಗೆ ಭರವಸೆಯ ತೀರ್ಪುಗಳನ್ನು ನ್ಯಾಯಾಲಯಗಳು ನೀಡಿದ್ದು ಸಂವಿಧಾನದ ಮೌಲ್ಯಗಳ ಆಧಾರ ಮೇಲೆಯೇ. ದೇವರು–ಧರ್ಮದ ಹೆಸರಿನಲ್ಲಿ ಮಹಿಳೆಯರನ್ನು ದೇವದಾಸಿಯರನ್ನಾಗಿ ಮಾಡಲಾಗಿದೆ. ಆದರೆ, ಸಂವಿಧಾನ ಮಾತ್ರ ಮಹಿಳೆಯರನ್ನು ಪ್ರಧಾನಿ, ರಾಷ್ಟ್ರಪತಿ, ಮುಖ್ಯಮಂತ್ರಿ, ನ್ಯಾಯಮೂರ್ತಿಯನ್ನಾಗಿ ಮಾಡಿದೆ ಎಂಬುದನ್ನು ಸದಾ ನೆನಪಿನಲ್ಲಿಡಬೇಕು.

ಅಕ್ಷತಾ ಕೆ.ಸಿ., ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದ ನಾಯಕಿ



ಸಂವಿಧಾನವೇ ಎಲ್ಲವೂ...

ನನಗೆ ಭಾರತೀಯತೆ ಧರ್ಮವಾದರೆ, ಸಂವಿಧಾನವೇ ಧಾರ್ಮಿಕ ಗ್ರಂಥವಿದ್ದಂತೆ. ಶ್ರೇಣೀಕೃತ ಸಮಾಜದಲ್ಲಿ ಅತ್ಯಂತ ದಮನಕ್ಕೊಳಗಾದ ಜಾತಿಯಲ್ಲಿ ಹುಟ್ಟಿದ ನಾನು ಸಂವಿಧಾನದ ಕಾರಣಕ್ಕಾಗಿಯೇ ಶಿಕ್ಷಣ ಪಡೆದೆ, ಉದ್ಯೋಗ ಮಾಡಿದೆ. ನನ್ನಿಷ್ಟದ ರಂಗಭೂಮಿ, ಆ್ಯಕ್ಟಿವಿಸಂ ಅನ್ನು ಆರಿಸಿಕೊಂಡೆ. ಸರ್ಕಾರವನ್ನು ಪ್ರಶ್ನಿಸುವ ವಾಕ್ ಸ್ವಾತಂತ್ರ್ಯವನ್ನು ಕೂಡಾ ಪಡೆದದ್ದು ಇದೇ ಸಂವಿಧಾನದಿಂದಲೇ. ಎಲ್ಲದಕ್ಕಿಂತ ಮುಖ್ಯವಾಗಿ ಘನತೆಯಿಂದ ಬದುಕಲು ಕಾರಣವಾಗಿದ್ದು, ಶಿಕ್ಷಣ ಮತ್ತು ಉದ್ಯೋಗದ ಸಂದರ್ಭದಲ್ಲಿ ನಾನು ಜಾತೀಯತೆ ಹಾಗೂ ಹೆಣ್ಣು ಅನ್ನುವ ಕಾರಣಕ್ಕಾಗಿ ಎದುರಾದ ಸವಾಲುಗಳನ್ನು ಎದುರಿಸಲು ಬಲ ನೀಡಿದ್ದು ಸಂವಿಧಾನ. ಅದೇ ನಮಗೆ ಶಕ್ತಿ. ಇಂದು ಭಾರತದ ಸಕಲ ದುಡಿಯುವ ಜನರು ಹಾಗೂ ಹೆಣ್ಣುಮಕ್ಕಳು ನಿತ್ಯವೂ ಸಂವಿಧಾನ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ನೆನಪಿಸಿಕೊಳ್ಳಬೇಕು. ಹೆಣ್ಣುಮಕ್ಕಳಿಗೆ ಆಸ್ತಿಯಲ್ಲಿ ಹಕ್ಕು, ವಿಚ್ಛೇದನ ಹಕ್ಕು, ಶೈಕ್ಷಣಿಕ, ಔದ್ಯೋಗಿಕ ಹಕ್ಕು ಹೀಗೆ ಎಲ್ಲವೂ ದೊರೆತಿರುವುದು ಸಂವಿಧಾನದ ಆಧಾರದಿಂದಲೇ.

ನಮ್ಮ ಸಂವಿಧಾನವು ಬರೀ ಹಕ್ಕುಗಳ ಬಗ್ಗೆ ಮಾತ್ರವಲ್ಲ ಕರ್ತವ್ಯಗಳ ಬಗ್ಗೆಯೂ ಹೇಳುತ್ತದೆ. ಪ್ರತಿಯೊಬ್ಬರೂ ತಮ್ಮ ಏಳಿಗೆ, ಅಸ್ಮಿತೆಯನ್ನು ಸಾಧಿಸಿಕೊಳ್ಳಬೇಕು ಎಂಬ ಆಶಯವನ್ನೂ ನೀಡಿದೆ. ಬಹುತ್ವದ ಕಾರಣಕ್ಕಾಗಿ ಎಲ್ಲವನ್ನೂ ಸೌಹಾರ್ದವಾಗಿ ನಡೆಸಲು ದೇಶವು ಗಣರಾಜ್ಯವಾಗಿದೆ. ಬಹುತ್ವ ಹಾಗೂ ಪ್ರಜಾಪ್ರಭುತ್ವದ ಆಶಯವುಳ್ಳ ಸಂವಿಧಾನ ಪ್ರತಿ ಜೀವವೂ ಅನನ್ಯ ಎನ್ನುತ್ತದೆ. ಭಿನ್ನ ಧರ್ಮ, ಸಂಸ್ಕೃತಿ, ಜನಾಂಗವಿರುವ ಈ ದೇಶದಲ್ಲಿ ಉಡುವ ಬಟ್ಟೆ, ಉಣ್ಣುವ ಅನ್ನ ಸ್ಥಳದಿಂದ ಸ್ಥಳಕ್ಕೆ ಬದಲಾಗುತ್ತದೆ. ಅಷ್ಟೇಕೆ ರಾಮಾಯಣವೂ ಬದಲಾಗುತ್ತದೆ. ಹೀಗೆ ಹಲವು ಧಾರೆಗಳ ಭಾರತ ನಮ್ಮದು. ಇದನ್ನು ಗೌರವಿಸುವ ಈ ನೆಲದ ಕಾನೂನು ಸಂವಿಧಾನ.



ದು. ಸರಸ್ವತಿ, ಸಾಮಾಜಿಕ ಕಾರ್ಯಕರ್ತೆ

ಶೋಷಿತರ ಪಾಲಿನ ಬೆಳಕು

ಜಾತಿ, ಧರ್ಮ ಯಾವುದೇ ಇರಲಿ ದಮನಿತರಾಗಿ ಬದುಕುತ್ತಿರುವ ಮಹಿಳೆಯರಿಗೆ ಸಮಾನ ಅವಕಾಶ ನೀಡಿದ್ದು ಸಂವಿಧಾನ. ಸಂವಿಧಾನ ಕಲ್ಪಿಸಿರುವ ಸಮಾನತೆಯ ಅಂಶಗಳು ಮಹಿಳೆಯರ ಪಾಲಿಗೆ ಬೆಳಕಾಗಿದೆ. ಈ ಬೆಳಕಿನ ಆಧಾರದಲ್ಲೇ ತಾವು ಸಬಲರಾಗಿ ಮತ್ತೊಬ್ಬರ ನೋವಿಗೆ ಸ್ಪಂದಿಸಿದ ಅನೇಕ ಮಹಿಳೆಯರು ನಮ್ಮ ನಡುವೆ ಇದ್ದಾರೆ. ನೋವು, ಸವಾಲುಗಳಿಗೆ ಎದೆಗುಂದದೆ ಸಂವಿಧಾನದ ಬಲದಿಂದಲೇ ಎಲ್ಲವನ್ನೂ ಎದುರಿಸಿದ ಗಟ್ಟಿಗಿತ್ತಿಯರು ಇವರು. ಆತ್ಮಗೌರವದಿಂದ ಬದುಕುವ, ಸರ್ವರೂ ಸಮಾನರು ಎಂದು ಸಾರುವ ಈ ನೆಲದ ಸಂವಿಧಾನ ಸದಾ ನಮ್ಮ ಜೊತೆಗಿರುತ್ತದೆ ಎಂಬ ಭರವಸೆಯನ್ನೂ ಅವರು ನೀಡಿದ್ದಾರೆ. ಸಾಮಾಜಿಕ ಕಟ್ಟುಪಾಡು, ಹೆಣ್ಣು ಎಂಬ ನಿರ್ಬಂಧದಲ್ಲಿ ಕಳೆದು ಹೋಗಿರುವ ಮಹಿಳೆಯರಿಗೆ ಸಂವಿಧಾನ ಬಲ ನೀಡುತ್ತದೆ ಎಂದು ಪ್ರತಿಪಾದಿಸುತ್ತಿರುವವರಲ್ಲಿ ಮಂಜುಳಾ ಮುನವಳ್ಳಿ, ಅಕ್ಷತಾ ಕೆ.ಸಿ, ದು. ಸರಸ್ವತಿ ಹಾಗೂ ಫಾತಿಮಾ ರಲಿಯಾ ಮುಂಚೂಣಿಯಲ್ಲಿದ್ದಾರೆ.

ರಂಗಭೂಮಿ, ಸಾಮಾಜಿಕ ಚಳವಳಿ, ನ್ಯಾಯಾಂಗ, ಸಾಹಿತ್ಯ ಕ್ಷೇತ್ರಗಳಲ್ಲಿ ಸಂವಿಧಾನದ ಆಶಯಗಳಿಗೆ ಪೂರಕವಾಗಿ ಕಾರ್ಯ ನಿರ್ವಹಿಸುತ್ತಿರುವ ಇವರ ಜೀವನಾನುಭವದ ಮಾತುಗಳು ನೋವಿನಲ್ಲಿ ಮಿಂದೆದ್ದೂ ಸುಮ್ಮನಿರುವ ಮಹಿಳೆಯರಿಗೆ ಪ್ರೇರಣಾ ಶಕ್ತಿ ಆಗಿವೆ.

ಸ್ತ್ರೀ ಸಬಲೀಕರಣ



ಹೆಣ್ಣು ಸ್ವಾತಂತ್ರ್ಯಕ್ಕೆ ಅರ್ಹಳಲ್ಲ ಎಂಬ ಕಾಲದಿಂದಲೂ ಆಕೆ ಶಿಕ್ಷಣ, ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸ್ಥಾನಮಾನಗಳಿಂದ ವಂಚಿತಳಾಗಿದ್ದಳು. ಆದರೆ, ಇಂದು ಮಹಿಳೆಯೊಬ್ಬರು ದೇಶದ ರಾಷ್ಟ್ರಪತಿಯಾಗಿದ್ದಾರೆ ಎಂದರೆ ಅದಕ್ಕೆ ಸಂವಿಧಾನವೇ ಕಾರಣ. ಧಾರ್ಮಿಕ ನಂಬಿಕೆ ಏನೇ ಆಗಿರಲಿ, ಇಂದು ಮಹಿಳೆ ಪ್ರಗತಿ ಸಾಧಿಸಲು ಹಿಂದಿರುವುದು ಸಂವಿಧಾನವೇ ಹೊರತು ಬೇರಾವುದೂ ಅಲ್ಲ.

ಸುಮಾರು 142 ವರ್ಷಗಳ ಹಿಂದೆ ಕಾರ್ನಾಲಿಯಾ ಸೊರಾಬ್ಜಿ ಎನ್ನುವ ಮಹಿಳೆ ಕಾನೂನು ಪದವಿ ಪೂರೈಸಿ ಅಲಹಾಬಾದ್ ಹೈಕೋರ್ಟ್‌ನಲ್ಲಿ ವಕೀಲಿಕೆ ವೃತ್ತಿ ಅರಂಭಿಸಿದಾಗ, ಅಲ್ಲಿನ ಪುರುಷ ಪ್ರಧಾನ ವ್ಯವಸ್ಥೆ ಕಾರ್ಯನಿರ್ವಹಿಸಲು ಬಿಡಲಿಲ್ಲ. ಆದರೆ, ಇಂದು ಮಹಿಳೆಯೊಬ್ಬರು ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಮೂರ್ತಿಯ ಸ್ಥಾನವನ್ನು ಅಲಂಕರಿಸಿದ್ದಾರೆ. ಇದಕ್ಕೆ ಕಾರಣ ಸಂವಿಧಾನದಲ್ಲಿರುವ ಸಮಾನತೆಯ ಅಂಶ. ನಾನು ಕೂಡಾ ವಕೀಲಳಾಗಿ ಜನಸಾಮಾನ್ಯರ ಪರ ಕೆಲಸ ಮಾಡಲು ಅವಕಾಶ ಕೊಟ್ಟಿದ್ದು ಸಂವಿಧಾನವೇ. ಮಹಿಳೆ ಪುರುಷನಷ್ಟೇ ಸಮರ್ಥಳಾಗಿದ್ದಾಳೆ. ಇಂದು ಎಲ್ಲ ಕ್ಷೇತ್ರಗಳಲ್ಲೂ ಅವಳ ಅಸ್ತಿತ್ವಕ್ಕೆ ಕಾರಣವಾಗುತ್ತಿರುವುದು ಸಂವಿಧಾನವೇ. ನಮ್ಮ ಸಂವಿಧಾನ ನಮ್ಮ ಹೆಮ್ಮೆ.

ಮಂಜುಳಾ ಮುನವಳ್ಳಿ, ಹೈಕೋರ್ಟ್ ವಕೀಲೆ,ಬೆಂಗಳೂರು

ಬೆಳಕಿನ ದಾರಿ ತೋರಿತು...



ನಮ್ಮ ಸಂವಿಧಾನ ನನಗೆ ನೀಡಿದ ಮೂಲಭೂತ ಹಕ್ಕುಗಳಲ್ಲಿ ಮೊದಲನೆಯದು ಸಮಾನತೆಯ ಹಕ್ಕು. ಆ ಹಕ್ಕನ್ನು ಸಂವಿಧಾನ ನನಗೆ ನೀಡಿರದೇ ಇದ್ದರೆ ನಾನು ನನ್ನ ಸ್ವತಂತ್ರ ವ್ಯಕ್ತಿತ್ವದ ಬದುಕನ್ನು ರೂಪಿಸಿಕೊಳ್ಳಲು ಸಾಧ್ಯವೇ ಇರಲಿಲ್ಲ.

ಇಂಥವರು ಮಾತ್ರ ಓದಬೇಕು, ಹೆಣ್ಣು ಮಕ್ಕಳಿಗೆಲ್ಲಾ ಶಾಲೆ ನಿಷಿದ್ಧ ಎನ್ನುವ ಕಾಲದಲ್ಲಿ ನನ್ನಮ್ಮ ಶಾಲೆಯ ಮೆಟ್ಟಿಲು ಹತ್ತಿದ್ದರು. ಹಾಗೆ ಅವರನ್ನು ಓದಿಸಿದ್ದು ಅಜ್ಜ. ಅವರಿಗೆ ಬೆಂಗಾವಲಾಗಿ ನಿಂತದ್ದು ಅಜ್ಜಿ. ಅವರಿಬ್ಬರಿಗೂ ಬದುಕು ಕಟ್ಟಿಕೊಳ್ಳಲು ಓದುವುದು ಮುಖ್ಯ ಎನ್ನುವ ಬೆಳಕಿನ ದಾರಿ ತೋರಿದ್ದು ಸಂವಿಧಾನ ಮತ್ತು ಬಾಬಾ ಸಾಹೇಬರು.

ಅಮ್ಮ ಓದಿದ್ದರಿಂದ ನನಗೂ ಓದಲು ಸಾಧ್ಯವಾಯಿತು. ಇಲ್ಲಿ ಇದನ್ನು ಬರೆಯಲೂ ಸಾಧ್ಯವಾಯಿತು. ನನ್ನ ವ್ಯಕ್ತಿತ್ವವನ್ನು ಕಟ್ಟಿಕೊಳ್ಳುವಲ್ಲಿ ಮತ್ತು ಸಮಾಜದ ಮುಂದೆ ನಿಲ್ಲುವಲ್ಲಿ ಓದು ಹಾಗೂ ಬರವಣಿಗೆಯ ಪಾತ್ರ ಅಗಾಧವಾದದ್ದು. ಇವೆರಡನ್ನೂ ನಾನು ಪಡೆದುಕೊಂಡದ್ದು ಶಿಕ್ಷಣದ ಮೂಲಕ. ಆದರೆ, ಜಾತಿ, ಧರ್ಮ, ಹೆಣ್ಣು, ಗಂಡು , ಭಾಷೆ, ಉಡುಗೆ, ತೊಡುಗೆ, ಜನಾಂಗ, ಸಮುದಾಯ, ಆಚಾರ–ವಿಚಾರ, ವೈಯಕ್ತಿಕ ನಂಬಿಕೆಗಳು ಇವೆಲ್ಲವನ್ನೂ ಒಳಗೊಂಡು ಮತ್ತು ಮೀರಿಯೂ ಶಾಲೆಯ ಬಾಗಿಲನ್ನು ಎಲ್ಲರಿಗೆ ತೆರೆದಿಟ್ಟದ್ದು ಸಂವಿಧಾನ.

ಫಾತಿಮಾ ರಲಿಯಾ, ಕವಯಿತ್ರಿ

ಸವತೆ ಮುಗಿಯದ ರುಚಿಯ ಒರತೆ

ರಸಸ್ವಾದ

ಕವಿತಾ ಹೆಗಡೆ

ರಿಬ್ಬನ್ ಪಕೋಡ

ಬೇಕಾಗುವ ಸಾಮಗ್ರಿಗಳು: ಕಡಲೆಹಿಟ್ಟು 1 ಕಪ್, ಅಕ್ಕಿಹಿಟ್ಟು 1/4 ಕಪ್, ಸವತೆಕಾಯಿ ರಸ 3/4 ಕಪ್, ಇಂಗು ಚಿಟಿಕೆ, ಉಪ್ಪು ರುಚಿಗೆ ತಕ್ಕಷ್ಟು, ಮೆಣಸಿನಪುಡಿ 1 ಚಮಚ, ಜೀರಿಗೆ ಪುಡಿ 1 ಚಮಚ, ಕರಿಯಲು ಸಾಕಷ್ಟು ಎಣ್ಣೆ

ಮಾಡುವ ವಿಧಾನ: ಒಂದು ಬೌಲ್ ನಲ್ಲಿ ಕಡಲೆ ಹಿಟ್ಟು , ಅಕ್ಕಿ ಹಿಟ್ಟು, ಸವತೆಕಾಯಿ ರುಬ್ಬಿ ತಯಾರಿಸಿದ ರಸ , ಇಂಗು, ಉಪ್ಪು,ಮೆಣಸಿನ ಪುಡಿ, ಜೀರಿಗೆ ಪುಡಿ, ಸೇರಿಸಿ ಚೆನ್ನಾಗಿ ಕಲೆಸಿಟ್ಟುಕೊಳ್ಳಿ..ಈಗ ಚಕ್ಕುಲು ಒರಳಿಗೆ ಎಣ್ಣೆ ಸವರಿಕೊಂಡು ನಲ್ಲಿ ರಿಬ್ಬನ್ ಪ್ಲೇಟ್ ನ್ನು ಹಾಕಿ ಕಾದ ಎಣ್ಣೆಯಲ್ಲಿ ರಿಬ್ಬನ್ ಗಳನ್ನು ಒತ್ತಿರಿ .....ಕೆಂಪಗೆ ಕರಿದು ತೆಗೆಯಿರಿ.. ಗರಿ ಗರಿಯಾದ ಸವತೆಕಾಯಿ ಸ್ನ್ಯಾಕ್ಸ್ ಸವಿಯಲು ಸಿದ್ಧ.

ಖಾರ ಸೇವ್



ಬೇಕಾಗುವ ಸಾಮಗ್ರಿಗಳು: ಸವತೆಕಾಯಿ ರಸ 1 ಕಪ್, ಹಸಿಮೆಣಸು 3, ಓಂ ಕಾಳು 1 ಚಮಚ, ಅಕ್ಕಿ ಹಿಟ್ಟು 2 ಕಪ್, ಉಪ್ಪು ರುಚಿಗೆ ತಕ್ಕಷ್ಟು, ಎಣ್ಣೆ 1 ಕಪ್

ಮಾಡುವ ವಿಧಾನ: ಮೊದಲು ಸವತೆಕಾಯಿ ಸಿಪ್ಪೆ ತೆಗೆದು ತುರಿದುಕೊಂಡು ಹಸಿಮೆಣಸು ಸೇರಿಸಿ ರುಬ್ಬಿಕೊಳ್ಳಿ.ರುಬ್ಬಿದ ರಸಕ್ಕೆ ಅಕ್ಕಿ ಹಿಟ್ಟು , ಓಂಕಾಳು , ಉಪ್ಪು ಬೆರೆಸಿ ಚೆನ್ನಾಗಿ ಕಲೆಸಿ. ತೇಂಗೊಳಲು ಒರಳಿಗೆ ಎಣ್ಣೆ ಸವರಿಕೊಂಡು ಕಲೆಸಿಕೊಂಡ ಹಿಟ್ಟನ್ನು ತುಂಬಿ ಪ್ರೆಸ್ ಮಾಡಿ. ಬಾಣಲೆಯಲ್ಲಿ ಎಣ್ಣೆ ಬಿಸಿ ಮಾಡಿಕೊಂಡು ನೇರವಾಗಿ ಒರಳಿನಿಂದ ಬಾಣಲೆಗೆ ಸೇವ್ ಒತ್ತಿರಿ.ಕೆಂಪಗೆ ಗರಿ-ಗರಿಯಾಗಿ ಕರಿದು ತೆಗೆಯಿರಿ. ಟೀ ಮತ್ತು ಕಾಫಿ ಜೊತೆಗೆ ಖುಷಿಯಿಂದ ಸವಿಯಿರಿ.

ಗ್ರೀನ್ ಹಲ್ವಾ

ಬೇಕಾಗುವ ಸಾಮಗ್ರಿಗಳು: ತುರಿದ ಸವತೆಕಾಯಿ 2 ಕಪ್, ಸಕ್ಕರೆ 1 ಕಪ್, ಹಾಲಿನ ಪುಡಿ 2 ಚಮಚ, ತುಪ್ಪ 2 ಚಮಚ, ಏಲಕ್ಕಿ ಪುಡಿ 1/4 ಚಮಚ, ಗೋಡಂಬಿ- ದ್ರಾಕ್ಷಿ-ಪಿಸ್ತಾ 1/4 ಕಪ್

ಮಾಡುವ ವಿಧಾನ:- ಸವತೆಕಾಯಿ ಮೇಲಿನ ಸಿಪ್ಪೆ ತೆಗೆದು ಒಳಗಿನ ಬೀಜ ತೆಗೆದು ತುರಿದುಕೊಳ್ಳಿ . ಬಾಣಲೆಗೆ ಸ್ವಲ್ಪ ತುಪ್ಪ ಹಾಕಿ ಗೋಡಂಬಿ ಮತ್ತು ದ್ರಾಕ್ಷಿ ಹುರಿದು ತೆಗೆದಿಟ್ಟುಕೊಳ್ಳಿ .

ಅದೇ ಬಾಣಲೆಗೆ ತುರಿದಿಟ್ಟುಕೊಂಡ ಸವತೆಕಾಯಿಯನ್ನು ನೀರಿನಿಂದ ಬೇರ್ಪಡಿಸಿ ಬಾಣಲೆಗೆ ಹಾಕಿ ಹುರಿಯಿರಿ ಎರಡು ಚಮಚ ಹಾಲಿನ ಪುಡಿ ಹಾಕಿ ಮಿಕ್ಸ್ ಮಾಡಿ ಸಕ್ಕರೆ ಹಾಕಿ ಹೊಂದಿಸಿ. ಏಲಕ್ಕಿ ಪುಡಿ ಹಾಕಿ ಕೆಳಗಿಳಿಸಿ ತುಪ್ಪ ಸವರಿದ ತಟ್ಟೆಗೆ ಹಾಕಿ ಅದರ ಮೇಲೆ ತುಪ್ಪದಲ್ಲಿ ಕರಿದ ದ್ರಾಕ್ಷಿ, ಗೋಡಂಬಿ, ಪಿಸ್ತಾ ಉದುರಿಸಿ ಅರ್ಧ ಗಂಟೆ ಸೆಟ್ ಆಗಲು ಬಿಡಿ . ನಂತರ ಬೌಲ್ ಗೆ ಹಾಕಿ ಸರ್ವ್ ಮಾಡಿ .



ಕೇಕ್



ಬೇಕಾಗುವ ಸಾಮಗ್ರಿಗಳು: ತುರಿದ ಸವತೆಕಾಯಿ 3/4 ಕಪ್, ತೆಂಗಿನ ತುರಿ 3/4 ಕಪ್, ತುರಿದ ಬೆಲ್ಲ 3/4 ಕಪ್, ಚಿರೋಟಿ ರವೆ 3/4 ಕಪ್, ಜಾಯಿಕಾಯಿ 1/2 , ತುಪ್ಪ 4 ಚಮಚ, ಉಪ್ಪು 1/2 ಚಮಚ, ಬೇಕಿಂಗ್ ಪೇಪರ್ 1

ಮಾಡುವ ವಿಧಾನ: ಮೊದಲು ಒಂದು ಮಿಕ್ಸಿಂಗ್ ಬೌಲ್ ನಲ್ಲಿ ಚಿರೋಟಿ ರವೆ, ತುರಿದ ಬೆಲ್ಲ , ಸಣ್ಣಗೆ ತುರಿದ ಸವತೆಕಾಯಿ ಮತ್ತು ತೆಂಗಿನ ತುರಿ ಹಾಕಿ ಮಿಕ್ಸ್ ಮಾಡಿ..ತುಪ್ಪ ಮತ್ತು ಉಪ್ಪು ಸೇರಿಸಿ ಒಂದು ಗಂಟೆಗಳ ಕಾಲ ಮಿಶ್ರಣವನ್ನು ಮುಚ್ಚಿಡಿ.. ನಂತರ ಅಗಲವಾದ ಕೇಕ್ ಮೌಲ್ಡ್ ನಲ್ಲಿ ಬೇಕಿಂಗ್ ಪೇಪರ್ ಹಾಕಿಕೊಂಡು ತಯಾರಿಸಿದ ಮಿಶ್ರಣವನ್ನು ಸುರುವಿಕೊಂಡು ಸರಿಯಾಗಿ ಸೆಟ್ ಮಾಡಿ. .ಓವನನ್ನು ಫ್ರೀ ಹೀಟ್ ಮಾಡಿ 180'ಸೆಲ್ಸಿಯಸ್ ನಲ್ಲಿ ಮುಕ್ಕಾಲು ಗಂಟೆ ಬೇಯಿಸಿ.. ನಂತರ ಡಿ ಮೌಲ್ಡ್ ಮಾಡಿ ಕೇಕ್ ಪೀಸ್ ಗಳನ್ನು ಕಟ್ ಮಾಡಿ ಸರ್ವ್ ಮಾಡಿ.

ಕೋಡುಬಳೆ

ಬೇಕಾಗುವ ಸಾಮಗ್ರಿಗಳು: ಸವತೆಕಾಯಿ 2, ಹಸಿಮೆಣಸು 4, ಅಕ್ಕಿ ಹಿಟ್ಟು 2 ಕಪ್, ಅರಿಶಿನ ಪುಡಿ 1/4 ಚಮಚ, ಜೀರಿಗೆ 1/2 ಚಮಚ, ಓಂ ಕಾಳು 1/2 ಚಮಚ, ಉಪ್ಪು ರುಚಿಗೆ ತಕ್ಕಷ್ಟು, ಎಣ್ಣೆ ಕರಿಯಲು ಸಾಕಷ್ಟು



ಮಾಡುವ ವಿಧಾನ:- ಒಂದು ಪಾತ್ರೆಯಲ್ಲಿ ತುರಿದ ಸವತೆಕಾಯಿ ಹಸಿಮೆಣಸು,ಉಪ್ಪು,ಜೀರಿಗೆ, ಓಂ ಕಾಳು ,ಅರಿಶಿನ ಪುಡಿ ಹಾಕಿ ಕುದಿಸಿ.ಈ ಮಿಶ್ರಣಕ್ಕೆ ಅಕ್ಕಿ ಹಿಟ್ಟು ಬೆರೆಸಿ ಬಿಸಿಯಾಗಿದ್ದಾಗಲೇ ಕಲೆಸಿ. ಸ್ವಲ್ಪ ತಣಿದ ನಂತರ ಒಂದು ಚಮಚ ಕಾದ ಎಣ್ಣೆ ಹಾಕಿ ಚೆನ್ನಾಗಿ ನಾದಿಕೊಳ್ಳಿ. ಕೋಡುಬಳೆ ಹೊಸೆದುಕೊಳ್ಳಿ. .ಕಾದ ಎಣ್ಣೆಯಲ್ಲಿ ಗರಿಯಾಗಿ ಕರಿದು ತೆಗೆಯಿರಿ.ಕಾಫಿ ಅಥವಾ ಟೀ ಜೊತೆಗೆ ಸವಿಯಿರಿ..

ಕ್ರಿಸ್ಪಿ ಕಟ್ಲೆಟ್



ಬೇಕಾಗುವ ಸಾಮಗ್ರಿಗಳು:- ಸವತೆಕಾಯಿ 1, ಚಿರೋಟಿ ರವೆ 1 ಕಪ್, ಸಕ್ಕರೆ 1 ಚಮಚ, ಉಪ್ಪು ರುಚಿಗೆ ತಕ್ಕಷ್ಟು, ಅರಿಶಿನ ಪುಡಿ 1/2 ಚಮಚ, ಜೀರಿಗೆ ಪುಡಿ 1/2 ಚಮಚ, ಹಸಿ ಮೆಣಸು 2, ಕೊತ್ತಂಬರಿ ಸೊಪ್ಪು ಸ್ವಲ್ಪ,ಎಣ್ಣೆ 5 ಚಮಚ

ಮಾಡುವ ವಿಧಾನ:- ಮೊದಲು ಸವತೆಕಾಯಿ ತುರಿದು ರುಬ್ಬಿಕೊಳ್ಳಿ.ಈ ರಸಕ್ಕೆ ಚಿರೋಟಿ ರವೆ, ಉಪ್ಪು, ಅರಿಶಿನ ಪುಡಿ, ಜೀರಿಗೆ ಪುಡಿ, ಸಕ್ಕರೆ, ಹೆಚ್ಚಿದ ಹಸಿಮೆಣಸು , ಕೊತ್ತಂಬರಿ ಸೊಪ್ಪು ಸೇರಿಸಿ ನೀರು ಹಾಕದೇ ಕಲೆಸಿಕೊಳ್ಳಿ. ತಯಾರಿಸಿದ ಮಿಶ್ರಣವನ್ನು ಕಟ್ಲೆಟ್ ಆಕಾರದಲ್ಲಿ ತಟ್ಟಿಕೊಂಡು ರವೆಯಲ್ಲಿ ಅದ್ದಿತೆಗೆದು ತವಾದ ಮೇಲೆ ಹಾಕಿ ಎರಡೂ ಕಡೆ ಎಣ್ಣೆ ಹಾಕಿ ಬೇಯಿಸಿ ತೆಗೆಯಿರಿ.. ರುಚಿಕರ ಕಟ್ಲೆಟ್ ನ್ನು ಸಾಸ್ ಜೊತೆಗೆ ಸರ್ವ್ ಮಾಡಿ

ಬೆನ್ನಿಗಿರಲಿ ರಾಮ..

ಫ್ಯಾಷನ್



ವೃಂದಾ ಶೇಖರ್

ಉತ್ತರಪ್ರದೇಶದ ಗಾಜಿಯಾಬಾದ್ ಜಿಲ್ಲೆಯ ಒಂದು ರಾಮಮಂದಿರದಲ್ಲಿದ್ದ ಪರದೆ, ಕನ್ನಡತಿ ವೃಂದಾ ಶೇಖರ್ ಅವರ ಬೆನ್ನೇರಿದೆ.

ರಾಮನ ವಿಗ್ರಹದ ಹಿಂದೆ ಪರದೆಯಂತೆ ಬಳಸುತ್ತಿದ್ದ ಟಸ್ಸರ್ ಸಿಲ್ಕ್‌ನ ವಸ್ತ್ರದ ತುಣುಕು ಆಶೀರ್ವಾದದ ರೂಪದಲ್ಲಿ ವೃಂದಾ ಕೈಗೆ ಬಂದಿತು. ಮೊದಲೆಲ್ಲ ಈ ಪರದೆಯನ್ನು ನೀಡಲು ಅರ್ಚಕರು ನಿರಾಕರಿಸಿದರು. ದೇವರನ್ನು ಅವಮಾನಿಸಿದಂತೆ ಎಂದೆಲ್ಲ ಹೇಳಿದರು. ಈಗಾಗಲೇ ಬುದ್ಧನ ಚಿತ್ರವನ್ನು ಮನಬಂದಂತೆ ಬಳಸಲಾಗುತ್ತಿದೆ. ಹಾಗೆಯೇ ಇದೂ ಆದರೆ ಎಂಬ ಆತಂಕ ವ್ಯಕ್ತಪಡಿಸಿದರು.

ವೃಂದಾ ಮಾತ್ರ ತಮ್ಮ ರಾಮ ಭಕ್ತಿಯನ್ನೂ ಸಮ್ಮಿಳಿಸಿ, ದೇವರು ನನ್ನ ಬೆನ್ನಿಗಿರಲಿ ಎಂಬ ಆಶಯವನ್ನು ಸ್ಪಷ್ಟಪಡಿಸಿದರು. ಎಲ್ಲಿಯೂ ರಾಮ ಎಂಬ ಹೆಸರು ಬರುವಲ್ಲಿ ಕತ್ತರಿ ಹಾಕದಂತೆ ಬಳಸಬೇಕಿತ್ತು. ಈ ವಸ್ತ್ರದಲ್ಲಿ ಶ್ರೀರಾಮಚಂದ್ರನ ಪಟ್ಟಾಭಿಷೇಕದ ಚಿತ್ರವನ್ನೂ ಚಿತ್ರಿಸಲಾಗಿದೆ. ಜೊತೆಗೆ ತುಳಸೀದಾಸರ ಶ್ರೀರಾಮ ಚರಿತಮಾನಸವನ್ನೂ ದೇವನಾಗರಿ ಲಿಪಿಯಲ್ಲಿ ಬರೆಯಲಾಗಿದೆ.

ಅದನ್ನು ನಾಜೂಕಾಗಿ ರವಿಕೆಗೆ ಒಪ್ಪುವಂತೆ ವಿನ್ಯಾಸವನ್ನು ಒಪ್ಪಗೊಳಿಸಿದರು. ಬೆನ್ನಿಗಿರಲಿ ರಾಮನ ಬೆಳಕು ಎಂಬಂತೆ ರವಿಕೆಯನ್ನು ಸಿದ್ಧಪಡಿಸಿದರು. ಈ ರವಿಕೆ ತೊಟ್ಟಾಗ ಆದ ದೈವೀಕ ಅನುಭವ ವರ್ಣಿಸಲು ಅಸದಳ ಎನ್ನುತ್ತಾರೆ ವೃಂದಾ.

ಅಷ್ಟೂ ವರ್ಷಕಾಲ ದೇವೋಪಾಸನೆಯ ಪರಿಸರದಲ್ಲಿ ಇದ್ದುದರಿಂದ ಈ ರವಿಕೆ ಸ್ಪರ್ಶಿಸಿದರೂ ಸಕಾರಾತ್ಮಕ ಅಲೆಗಳ ಅನುಭೂತಿ ಉಂಟಾಗುತ್ತದೆ. ಮತ್ತು ಪ್ರತಿಸಲವೂ ಆ ಅರ್ಚಕರ ಎಚ್ಚರವೂ ಇರುತ್ತದೆ. ನಮ್ಮನು ಘನತೆಯಿಂದ ಕಾಣುವಂತೆ ಮಾಡುವ ರವಿಕೆ, ಈ ಚಿತ್ರದಿಂದಾಗಿ ಗೌರವವನ್ನೂ ತಂದು ಕೊಡುತ್ತಿದೆ ಎನ್ನುತ್ತಾರೆ.

ಈ ವಿನ್ಯಾಸದಿಂದಲೇ ಸ್ಫೂರ್ತಿ ಪಡೆದ ವೃಂದಾ, ದೇಗುಲದ ವಿನ್ಯಾಸವನ್ನು ರವಿಕೆಯ ಬೆನ್ನಿಗೆ ಬರೆಯಿಸಿ, ಕಡ್ಡಿ ಹೊಲಿಗೆಯಿಂದ ಕಸೂತಿ ಮಾಡಿಸಿದರು. ಈ ವಸ್ತ್ರ ನೇಯ್ದಿದ್ದು ಬಾಗಲಕೋಟೆ ಜಿಲ್ಲೆಯ ನೇಕಾರರು. ಕಸೂತಿ ಮಾಡಿದ್ದು, ವೃಂದಾ ಅವರ ಸಹಾಯಕಿ ಪ್ರಿಯಾ. ಕ್ರೈಸ್ತಧರ್ಮದ ಈ ಯುವತಿ ರಾಮಬಂಟ ಹನುಮನ ಭಕ್ತೆಯೂ ಹೌದು. ಅವರು ಈ ದೇಗುಲವನ್ನು ಕಸೂತಿಯಲ್ಲಿ ಸೆರೆ ಹಿಡಿದರು.

ಪಟ್ಟಾಭಿಷೇಕದ ರಾಮ, ತುಳಸೀದಾಸರ ರಾಮ ಹಾಗೂ ಬಾಲರಾಮನ ಮಂದಿರ ಎಲ್ಲವೂ ವೃಂದಾ ಶೇಖರ್ ಸಂಗ್ರಹದಲ್ಲಿ ಬೆಚ್ಚಗಿವೆ.





ಲೋಕಸಭಾ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರದಿಂದ ಎಚ್‌.ಡಿ.ದೇವೇಗೌಡ ಕುಟುಂಬ ಸ್ಪರ್ಧೆ ಸಾಧ್ಯತೆ

ಎಚ್‌ಡಿಕೆ– ಸುಮಲತಾ ಮಧ್ಯೆ ಸ್ನೇಹ ಸೂತ್ರ?

● ಎಂ.ಎನ್.ಯೋಗೇಶ್


ಕುಮಾರಸ್ವಾಮಿ


ಸುಮಲತಾ

ಕುಮಾರಸ್ವಾಮಿ ಅವರು ನನ್ನನ್ನು ಭೇಟಿಯಾದರೆ ಅದನ್ನು ನಾನು ವಿರೋಧಿಸುವುದಿಲ್ಲ, ಖಂಡಿತ ಅವರನ್ನು ಗೌರವಿಸುತ್ತೇನೆ. ಬಿಜೆಪಿಯ ಟಿಕೆಟ್ ನನಗೆ ಸಿಗುವ ವಿಶ್ವಾಸವಿದೆ

ಸುಮಲತಾ, ಸಂಸದೆ

ಮಂಡ್ಯ: ಕಳೆದ ಲೋಕಸಭಾ ಚುನಾವಣೆ ವೇಳೆ ಏಟು– ಎದಿರೇಟುಗಳ ಮೂಲಕ ದೇಶದ ಗಮನ ಸೆಳೆದಿದ್ದ ಸಂಸದೆ ಸುಮಲತಾ ಹಾಗೂ ಜೆಡಿಎಸ್ ನಾಯಕ ಎಚ್‌.ಡಿ.ಕುಮಾರಸ್ವಾಮಿ ನಡುವೆ ಈಗ ಸ್ನೇಹ ಸಾಧ್ಯವೇ?

–ಇಂಥದ್ದೊಂದು ಪ್ರಶ್ನೆ ಸದ್ಯ ಜಿಲ್ಲೆಯ ಜೆಡಿಎಸ್– ಬಿಜೆಪಿ ಮೈತ್ರಿ ಪಕ್ಷಗಳ ಮುಖಂಡರಲ್ಲಿ ಮೂಡಿದೆ.

ಅಂಬರೀಷ್ ಸಾವಿನ ವಿಷಯ ಸೇರಿದಂತೆ ವೈಯಕ್ತಿಕ ವಿಚಾರಗಳನ್ನೆಲ್ಲಾ ತೆಗೆದು ಕುಮಾರಸ್ವಾಮಿ ಅವರು ಸುಮಲತಾರನ್ನು ಜರೆದಿದ್ದರು. ಇದಕ್ಕೆ ಸುಮಲತಾ ಹಾಗೂ ಅವರ ಬೆಂಬಲಿಗರು ಕೂಡ ತಿರುಗೇಟು ನೀಡಿದ್ದರು.

ಆದರೆ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಪರಿಸ್ಥಿತಿ ಬದಲಾಗುತ್ತಿದ್ದು ಕುಮಾರಸ್ವಾಮಿ ಹಾಗೂ ಸುಮಲತಾರ ನಡುವೆ ಸ್ನೇಹಸೂತ್ರವೊಂದು ಸಿದ್ಧಗೊಂಡಿದೆ ಎಂದು ಮೂಲಗಳು ತಿಳಿಸಿವೆ.

ಇದಕ್ಕೆ ಮುನ್ನುಡಿ ಎಂಬಂತೆ ಕುಮಾರಸ್ವಾಮಿ ಅವರು ಈಚೆಗೆ 'ಸಾಧ್ಯವಾದರೆ ಸುಮಲತಾ ಅವರನ್ನು ಭೇಟಿಯಾಗುವೆ, ಅವರೇನೂ ನನ್ನ ಶತ್ರುವಲ್ಲ' ಎಂದು ಹೇಳಿರುವುದು ಕುತೂಹಲ ಮೂಡಿಸಿದೆ. ಮುಂದಿನ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರದಿಂದ ಎಚ್‌.ಡಿ. ದೇವೇಗೌಡರ ಕುಟುಂಬ ಸದಸ್ಯರೇ ಅಭ್ಯರ್ಥಿಯಾಗಲಿದ್ದು ಬಿಜೆಪಿ ಜೊತೆ ಇರುವ ಸಂಸದೆ ಸುಮಲತಾ ಅವರಿಗೆ ಸ್ನೇಹ ನಿವೇದನೆ ಮಾಡಲು ಸಜ್ಜಾಗಿರುವುದಾಗಿ ಜೆಡಿಎಸ್ ಮುಖಂಡರು ಹೇಳುತ್ತಾರೆ.

ಸುಮಲತಾ ಅವರು ತಾಂತ್ರಿಕವಾಗಿ ಪಕ್ಷೇತರ ಸಂಸದೆಯಾಗಿದ್ದರೂ ರಾಜಕೀಯವಾಗಿ ಬಿಜೆಪಿ ಜೊತೆಯಲ್ಲಿದ್ದಾರೆ. ಎನ್‌ಡಿಎ ಮೈತ್ರಿಕೂಟ ಸೇರಿರುವ ಎಚ್‌ಡಿಕೆ ಅವರೂ ಬಿಜೆಪಿಯ ಮಿತ್ರರಾಗಿದ್ದಾರೆ. ಹೀಗಾಗಿ ಇಬ್ಬರೂ ನಾಯಕರ ನಡುವೆ ಸ್ನೇಹದ ಸೇತುವೆ ಕಟ್ಟಲು ಜೆಡಿಎಸ್– ಬಿಜೆಪಿ ಎರಡೂ ಪಕ್ಷಗಳ ನಾಯಕರು ಪ್ರಯತ್ನಿಸುತ್ತಿದ್ದಾರೆ ಎಂದು ಎರಡೂ ಪಕ್ಷಗಳ ಮುಖಂಡರು ಹೇಳುತ್ತಾರೆ.

'ರಾಜಕಾರಣದಲ್ಲಿ ಯಾರೂ ಮಿತ್ರರಲ್ಲ, ಯಾರೂ ಶತ್ರುಗಳಲ್ಲ. ಕಳೆದ ಪರಿಸ್ಥಿತಿಯೇ ಬೇರೆ, ಈಗಿನ ಪರಿಸ್ಥಿತಿಯೇ ಬೇರೆ. ಸುಮಲತಾ ಅವರ ಸ್ನೇಹದ ಜೊತೆ ಸೌಹಾರ್ದಯುತವಾಗಿ ಚುನಾವಣೆ ಎದುರಿಸುವ ಪ್ರಯತ್ನಗಳು ನಡೆಯುತ್ತಿವೆ. ಈ ವಿಷಯದಲ್ಲಿ ಎಚ್‌.ಡಿ.ಕುಮಾರಸ್ವಾಮಿ ಅವರೂ ಎಚ್ಚರಿಕೆಯ ಹೆಜ್ಜೆ ಇಡುತ್ತಿದ್ದಾರೆ' ಎಂದು ಜೆಡಿಎಸ್ ಮುಖಂಡ ಕೆ.ಟಿ. ಶ್ರೀಕಂಠೇಗೌಡ ಹೇಳಿದರು.

ಒಪ್ಪದ ಬೆಂಬಲಿಗರು?: ಜೆಡಿಎಸ್ ಮುಖಂಡರ ಸ್ನೇಹ ನಿವೇದನೆಗೆ ಸುಮಲತಾ ಒಪ್ಪುತ್ತಾರಾ ಎಂಬ ಪ್ರಶ್ನೆ ಎರಡೂ ಪಕ್ಷಗಳ ಕಾರ್ಯಕರ್ತರಲ್ಲಿದೆ. ಆದರೆ, ಅವರ ಬೆಂಬಲಿಗರು ಸ್ನೇಹದ ಪ್ರಸ್ತಾಪವನ್ನು ಸಾರಾಸಗಟಾಗಿ ತಿರಸ್ಕರಿಸುತ್ತಾರೆ.

'ರಾಜಕೀಯ ಲಾಭ ಪಡೆಯಲು ಜೆಡಿಎಸ್ ಮುಖಂಡರು ಸ್ನೇಹದ ನಾಟಕವಾಡುತ್ತಿದ್ದಾರೆ. ಸುಮಲತಾ ಅವರು ಪಕ್ಷೇತರ ಸಂಸದೆಯಾಗಿದ್ದು, ಬಿಜೆಪಿಗೆ ಬೆಂಬಲ ನೀಡಿದ್ದಾರಷ್ಟೇ. ಯಾವುದಾದರೊಂದು ಪಕ್ಷ ಅಥವಾ ಮತ್ತೆ ಪಕ್ಷೇತರವಾಗಿ ಸ್ಪರ್ಧಿಸುವುದು ಖಚಿತ' ಎಂದು ಬೆಂಬಲಿಗ ಬೇಲೂರು ಸೋಮಶೇಖರ್ ತಿಳಿಸಿದರು.

ಕಾದು ನೋಡುತ್ತಿರುವ ಕಾಂಗ್ರೆಸ್

'ದೇವೇಗೌಡರ ಕುಟುಂಬ ಸದಸ್ಯರು ಜೆಡಿಎಸ್– ಬಿಜೆಪಿ ಮೈತ್ರಿ ಅಭ್ಯರ್ಥಿಯಾದರೆ ಕಾಂಗ್ರೆಸ್ ಕಾರ್ಯಸೂಚಿ ಭಿನ್ನವಾಗಿರಲಿದೆ. ನಮಗೆ ಅಭ್ಯರ್ಥಿಗಳ ಕೊರತೆ ಇಲ್ಲ. ಮೈತ್ರಿ ಅಭ್ಯರ್ಥಿ, ಸಂಸದೆ ಸುಮಲತಾ ಅವರ ಸ್ಪರ್ಧೆ ವಿಚಾರವನ್ನು ಕಾದು ನೋಡಿ ನಾವು ಅಭ್ಯರ್ಥಿ ಘೋಷಣೆ ಮಾಡುತ್ತೇವೆ. ಸುಮಲತಾ ಅವರನ್ನು ಕಾಂಗ್ರೆಸ್‌ಗೆ ಕರೆತರುವ ಪ್ರಯತ್ನಗಳೂ ನಡೆಯುತ್ತಿವೆ' ಎಂದು ಕಾಂಗ್ರೆಸ್ ಮುಖಂಡರೊಬ್ಬರು ತಿಳಿಸಿದರು.


ಪುಷ್ಕರಣಿಯಲ್ಲಿ ಮುಳುಗಿ ಬಾಲಕ ಸಾವು

ಬಾದಾಮಿ (ಬಾಗಲಕೋಟೆ ಜಿಲ್ಲೆ): ಬನಶಂಕರಿಯ ಹರಿದ್ರಾತೀರ್ಥ ಪುಷ್ಕರಣಿಯ ನೀರಿನಲ್ಲಿ ಶುಕ್ರವಾರ ಇರ್ಫಾನ್ ಹಂಗರಗಿ (16) ಎಂಬಾತ ಮುಳುಗಿ ಮೃತಪಟ್ಟಿದ್ದಾನೆ.

'ಇಳಕಲ್‌ನ ಅಲ್ಲಂಪೂರ ಪೇಟೆಯ ನಿವಾಸಿ ಇರ್ಫಾನ್ ಹಂಗರಗಿ ಸ್ನೇಹಿತರ ಜೊತೆಗೆ ಜಾತ್ರೆಗೆ ಬಂದು, ಸ್ನಾನಕ್ಕೆಂದು ನೀರಿನಲ್ಲಿ ಇಳಿದಿದ್ದ ವೇಳೆ ಅವಘಡ ಸಂಭವಿಸಿದೆ. ಅಗ್ನಿಶಾಮಕ ಸಿಬ್ಬಂದಿ ಮತ್ತು ಸ್ಥಳೀಯ ಈಜುಗಾರರ ನೆರವಿನಿಂದ ಮೃತದೇಹ ನೀರಿನಿಂದ ಹೊರ ತೆಗೆಯಲಾಯಿತು' ಎಂದು ಪಿಎಸ್‌ಐ ನಿಂಗಪ್ಪ ಪೂಜಾರ ಹೇಳಿದರು.

ಪಕ್ಷಕ್ಕೆ ಸೇರಿಸಿಕೊಳ್ಳುವ ಮುನ್ನ ಎಚ್ಚರವಹಿಸಿ: ಖರ್ಗೆ

ಪ್ರಜಾವಾಣಿ ವಾರ್ತೆ


ಮಲ್ಲಿಕಾರ್ಜುನ ಖರ್ಗೆ

ಬೆಂಗಳೂರು: 'ವಸ್ತುಗಳನ್ನು ಕೊಳ್ಳುವಾಗ, ಗ್ರಾಮೀಣ ಪ್ರದೇಶದಲ್ಲಿ ಸಣ್ಣ ಪ್ರಾಣಿಗಳನ್ನು ಖರೀದಿಸುವಾಗ ತೂಕ, ಗಾತ್ರ ಎಲ್ಲವನ್ನೂ ನೋಡಿ, ಹಲವು ಬಾರಿ ಯೋಚಿಸಿ ನಿರ್ಧಾರ ತೆಗೆದುಕೊಳ್ಳುತ್ತಾರೆ. ಪಕ್ಷಕ್ಕೆ ಸೇರಿಸಿಕೊಳ್ಳುವಾಗಲೂ ಗುಣ, ತತ್ವ, ಹಿನ್ನೆಲೆಗಳನ್ನು ಪರಿಶೀಲಿಸುವುದು ಮುಖ್ಯ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಗಣರಾಜ್ಯೋತ್ಸವದಲ್ಲಿ ಮಾತನಾಡಿದ ಅವರು, ವೇದಿಕೆ ಮೇಲಿದ್ದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಉದ್ದೇಶಿಸಿ ಈ ಎಚ್ಚರಿಕೆ ನೀಡಿದರು.

ಜಗದೀಶ ಶೆಟ್ಟರ್ ಅವರು ಕಾಂಗ್ರೆಸ್ ತೊರೆದು, ಬಿಜೆಪಿ ಸೇರಿರುವ ಬೆನ್ನಲ್ಲೇ ಎಐಸಿಸಿ ಅಧ್ಯಕ್ಷರು ನೀಡಿರುವ ಎಚ್ಚರಿಕೆ ಪಕ್ಷದೊಳಗೆ ಚರ್ಚೆಗೆ ಕಾರಣವಾಗಿದೆ.

'ಯಾರೇ ಬಂದರೂ ಪಕ್ಷಕ್ಕೆ ಸೇರಿಸಿಕೊಂಡು ಶಕ್ತಿ ತುಂಬುವ ಕೆಲಸ ಮಾಡಬೇಕಿದೆ. ಆದರೆ, ಇಂದು ಬಂದರು ನಾಳೆ ಹೋದರು ಎನ್ನುವಂತಾಗಬಾರದು. ಪಕ್ಷಕ್ಕೆ ನಿಷ್ಠಾವಂತರಾಗಿರುವವರನ್ನು ಮಾತ್ರ ಕರೆತನ್ನಿ' ಎಂದು ಸೂಚಿಸಿದರು.

'ನಮ್ಮ ಪಕ್ಷವು ತತ್ವ ಸಿದ್ಧಾಂತದ ಆಧಾರದ ಮೇಲೆ ನಿಂತಿದೆ. ತತ್ವಕ್ಕಾಗಿಯೇ ನಮ್ಮ ಪಕ್ಷದ ನಾಯಕರು ಇಂದಿರಾಗಾಂಧಿಯವರು, ರಾಜೀವ್ ಗಾಂಧಿಯವರು ತಮ್ಮ ಜೀವವನ್ನೆ ತ್ಯಾಗ ಮಾಡಿದ್ದಾರೆ. ಬಡವರು, ರೈತರು, ವಿದ್ಯಾರ್ಥಿಗಳು ಹಾಗೂ ಮಹಿಳೆಯರ ಬಗ್ಗೆ ಅಪಾರ ಕಾಳಜಿ ಇರುವ ಪಕ್ಷ ನಮ್ಮದು ಎಂದು ಹೇಳಿದರು.

'ಪಕ್ಷಕ್ಕೆ ಯಾರನ್ನಾದರೂ ಸೇರಿಸಿಕೊಳ್ಳಬೇಕಾದರೆ ಅವರ ಗುಣ ಏನು? ಅವರ ಹಿನ್ನೆಲೆ ಏನು? ಅವರು ಯಾವ ತತ್ವವನ್ನು ಪಾಲಿಸುತ್ತಿದ್ದವರು. ಇಂದು ಯಾವ ತತ್ವ ಒಪ್ಪಿಕೊಳ್ಳುತ್ತಿದ್ದಾರೆ ಎನ್ನುವುದನ್ನು ಪರಿಶೀಲನೆ ಮಾಡುವುದು ಬಹಳ ಮುಖ್ಯ' ಎಂದರು.

ಮನಸ್ಸು ಮಾಡಿದ್ದರೆ ಎಷ್ಟೋ ಮನೆ ಖಾಲಿ: ಡಿಕೆಶಿ


ಶಿವಕುಮಾರ್

ಬೆಂಗಳೂರು: 'ಬಿಜೆಪಿಯವರು ಯಾರನ್ನೂ ಬಿಡದೇ ಎಲ್ಲರನ್ನೂ ಸೆಳೆಯುವ ಯತ್ನ ಮಾಡುತ್ತಿದ್ದಾರೆ. ನಮಗೂ ಆ ಕೆಲಸ ಗೊತ್ತಿದೆ. ನಾವು ಮನಸ್ಸು ಮಾಡಿದ್ದರೆ ಎಷ್ಟೋ ಮನೆಗಳು ಖಾಲಿಯಾಗಿರುತ್ತಿದ್ದವು' ಎಂದು ಕೆಪಿಸಿಸಿ ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಲಕ್ಷ್ಮಣ ಸವದಿಯವರನ್ನು ಸೆಳೆಯಲು ಬಿಜೆಪಿ ನಾಯಕರು ಯತ್ನ ನಡೆಸುತ್ತಿರುವ ಬಗ್ಗೆ ಸುದ್ದಿಗಾರರು ಪ್ರಶ್ನಿಸಿದಾಗ, 'ಸವದಿ ನಮ್ಮ ಪಕ್ಷದ ನಾಯಕರು ಹಾಗೂ ಪ್ರಮುಖ ಆಸ್ತಿ. ಪಕ್ಷದಲ್ಲೇ ಉಳಿಯುವುದಾಗಿ ಅವರು ಹೇಳಿದ್ದಾರೆ' ಎಂದರು.

'ನಮ್ಮ ಸಿದ್ಧಾಂತದಲ್ಲಿ ಇರುವವರನ್ನು ಕರೆತರುತ್ತೇವೆ' ಎಂದು ಬಿಜೆಪಿಯ ಸುನಿಲ್ ಕುಮಾರ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ನಮ್ಮ ಪಕ್ಷದಿಂದ ಕರೆದುಕೊಂಡು ಹೋದರಲ್ಲ. ಅವರಿಗೆ ಯಾವ ಸಿದ್ಧಾಂತವಿತ್ತು. ಅವರಿಗೆ ಯಾವ ಸಿದ್ಧಾಂತ ಪಾಠ ಮಾಡಿದರು. ಅವರೆಲ್ಲರೂ ಆ ಪಕ್ಷದ ಸಿದ್ಧಾಂತ ಒಪ್ಪಿದ್ದಾರಾ ಎಂದು ನಮ್ಮಲ್ಲಿಂದ ಹೋದ ಶಾಸಕರು, ಕಾರ್ಯಕರ್ತರನ್ನು ಕೇಳಲಿ' ಎಂದರು.

'ಕಾಂಗ್ರೆಸ್ ಶಾಸಕರು ಸಂಪರ್ಕದಲ್ಲಿದ್ದಾರೆ' ಎಂಬ ಬಿಜೆಪಿ ನಾಯಕರ ಹೇಳಿಕೆ ಕುರಿತು ಮಾತನಾಡಿದ ಶಿವಕುಮಾರ್, 'ನಾನು ಅವರ ಸಂಪರ್ಕದಲ್ಲಿರುವ ಬಗ್ಗೆ ಅವರಿಗೆ ಗೊತ್ತಿಲ್ಲವೇ? ಬಿಜೆಪಿಯ ಎಷ್ಟು ಶಾಸಕರು ನಮ್ಮ ಸಂಪರ್ಕದಲ್ಲಿದ್ದಾರೆ ಎಂಬ ಪಟ್ಟಿ ನೀಡಬೇಕಾ' ಎಂದು ಮರು ಪ್ರಶ್ನೆ ಹಾಕಿದರು.

'ನಾವು ಹೈಕಮಾಂಡ್ ಗುಲಾಮರೇ' ಎಂದು ಸಹಕಾರ ಸಚಿವ ರಾಜಣ್ಣ ಹೇಳಿದ್ದಾರಲ್ಲ ಎಂಬ ಪ್ರಶ್ನೆಗೆ, 'ಅವರ ಹೇಳಿಕೆಯನ್ನು ಬಹಳ ಗಂಭೀರವಾಗಿ ಪರಿಗಣಿಸುತ್ತೇವೆ. ಅವರ ಮಾತನ್ನು ಎಐಸಿಸಿ ಗಮನಿಸಲಿದೆ. ರಾಜಣ್ಣ ಸಚಿವರಾಗಿದ್ದು ಈ ಬಗ್ಗೆ ಮುಖ್ಯಮಂತ್ರಿ ಉತ್ತರ ನೀಡುತ್ತಾರೆ' ಎಂದರು.

ಬಿಜೆಪಿಗೆ ಸೇರಲು ನನಗೂ ಒತ್ತಡ: ಲಕ್ಷ್ಮಣ ಸವದಿ


ಲಕ್ಷ್ಮಣ ಸವದಿ

ಬೆಳಗಾವಿ: 'ಬಿಜೆಪಿಗೆ ಮರಳಲು ನನಗೂ ಸಾಕಷ್ಟು ಒತ್ತಡ ಬಂದಿದೆ. ಆದರೆ, ನಾನು ಕಾಂಗ್ರೆಸ್ ಪಕ್ಷದಲ್ಲಿಯೇ ಇರುತ್ತೇನೆ' ಎಂದು ಶಾಸಕ ಲಕ್ಷ್ಮಣ ಸವದಿ ಪ್ರತಿಕ್ರಿಯಿಸಿದರು.

ಅಥಣಿಯಲ್ಲಿ ಶುಕ್ರವಾರ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, 'ನಾನು ಕಾಂಗ್ರೆಸ್ ಸೇರಿದ ಬಳಿಕ ಯಾವ ಕ್ಷೇತ್ರಗಳಲ್ಲಿ ಏನೆಲ್ಲ ಪರಿಣಾಮ ಆಯಿತು ಎಂಬುದು ಬಿಜೆಪಿಯವರಿಗೆ ಅರಿವಾಗಿದೆ. ಈಗ ಮರಳಿ ಪಕ್ಷಕ್ಕೆ ಕರೆಯುವುದು ಅವರಿಗೆ ಅಗತ್ಯ ಮತ್ತು ಅನಿವಾರ್ಯವಾಗಿದೆ. ಬಿಜೆಪಿಯಲ್ಲಿರುವ ಕೆಲ ಹಳೆಯ ಗೆಳೆಯರು ಪದೇ ಪದೇ ಒತ್ತಾಯಿಸುತ್ತಾರೆ. ನಾನು ಯಾವ ಒತ್ತಡಕ್ಕೂ ಮಣಿಯುವುದಿಲ್ಲ' ಎಂದರು.

'ನಾನು ಜಗದೀಶ ಶೆಟ್ಟರ್ ಅವರು ಒಟ್ಟಿಗೇ ಕಾಂಗ್ರೆಸ್ ಸೇರಿಲ್ಲ. ನಾನು ಅವರಿಗಿಂತ ಮುಂಚೆ ಸೇರಿದ್ದೇನೆ. ಅವರು ಪಕ್ಷ ಬಿಟ್ಟ ಕಾರಣಕ್ಕೆ ನಾನೂ ಬಿಡುತ್ತೇನೆ ಎಂಬುದು ಸುಳ್ಳು. ಅಥಣಿ ಜನ ನನ್ನ ಮೇಲೆ ನಂಬಿಕೆ ಇಟ್ಟು ಬಹುಮತದಿಂದ ಆಯ್ಕೆ ಮಾಡಿದ್ದಾರೆ' ಎಂದು ಹೇಳಿದರು.

'ವಾಪಸ್ ಕರೆತರಲು 5 ತಿಂಗಳ ಪ್ರಯತ್ನ'


ಜಗದೀಶ ಶೆಟ್ಟರ್

ಬೆಂಗಳೂರು: 'ನನ್ನನ್ನು ಮತ್ತೆ ಬಿಜೆಪಿಗೆ ಕರೆತರುವ ಪ್ರಯತ್ನ ಒಂದೆರಡು ದಿನಗಳು ಅಥವಾ ನಾಲ್ಕು ಗಂಟೆಗಳಲ್ಲಿ ಆದ ಬೆಳವಣಿಗೆ ಅಲ್ಲ. ಐದಾರು ತಿಂಗಳಿಂದಲೂ ಆ ಪ್ರಯತ್ನ ನಡೆದಿತ್ತು' ಎಂದು ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಹೇಳಿದರು.

'ಬಿಜೆಪಿಗೆ ಮತ್ತೆ ಕರೆತರಬೇಕೆಂಬ ಒತ್ತಡ ಕಾರ್ಯಕರ್ತರಿಂದಲೂ ಇತ್ತು. ನನ್ನನ್ನೂ ಭೇಟಿ ಮಾಡಿ ಬಿಜೆಪಿಗೆ ಮರಳುವಂತೆ ಒತ್ತಾಯಿಸಿದ್ದರು. ಕಾರ್ಯಕರ್ತರ ಆಶಯ, ಧ್ವನಿ, ರಾಜ್ಯ ನಾಯಕರು ಮತ್ತು ರಾಷ್ಟ್ರೀಯ ನಾಯಕರ ಕರೆಗೆ ಸ್ಪಂದಿಸಿ ಮರಳಿದ್ದೇನೆ. ಪಕ್ಷದಲ್ಲಿ ಸೂಕ್ತ ಸ್ಥಾನಮಾನ ನೀಡುವುದಾಗಿ ಹಿರಿಯರು ಹೇಳಿದ್ದಾರೆ' ಎಂದು ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಬಿಜೆಪಿ ಕಳೆದ ಲೋಕಸಭಾ ಚುನಾವಣೆಯಲ್ಲಿ 25 ಸ್ಥಾನಗಳನ್ನು ಗೆದ್ದಿತ್ತು. ಅದಕ್ಕಿಂತ ಹೆಚ್ಚು ಸ್ಥಾನಗಳನ್ನು ಗೆಲ್ಲಲು ಪ್ರಯತ್ನ ಮಾಡುತ್ತೇವೆ. ಅದಕ್ಕಾಗಿ ರಾಜ್ಯದಾದ್ಯಂತ ಪ್ರವಾಸ ಮಾಡುತ್ತೇನೆ. ಪಕ್ಷದ ಸೂಚನೆಯಂತೆ ಸಂಘಟನಾತ್ಮಕ ಕಾರ್ಯದಲ್ಲಿ ತೊಡಗಿಸಿಕೊಳ್ಳುವೆ' ಎಂದು ಅವರು ಹೇಳಿದರು.

'ಇದು ನಮ್ಮ ಮನೆ, ನಾವು ಕಟ್ಟಿ ಬೆಳೆಸಿದ ಮನೆ. ನಮ್ಮ ಕುಟುಂಬ ಬಿಜೆಪಿ ಜತೆ ಆತ್ಮೀಯತೆ ಹೊಂದಿದೆ. ವಿಧಾನಸಭೆ ಚುನಾವಣೆ ವೇಳೆ ಕೆಲವೊಂದು ಘಟನೆಗಳು ನಡೆದ ಕಾರಣ ಕಾಂಗ್ರೆಸ್ ಸೇರಿದ್ದೆ. ಮೋದಿಯವರು 10 ವರ್ಷಗಳ ಉತ್ತಮ ಆಡಳಿತ ನೀಡಿದ್ದಾರೆ. ಒಳ್ಳೆಯ ಕೆಲಸಗಳನ್ನೂ ಮಾಡಿದ್ದಾರೆ. ಅವರು ಮತ್ತೊಮ್ಮೆ ಪ್ರಧಾನಿ ಆಗಬೇಕು. ಭಾರತವು ಆರ್ಥಿಕವಾಗಿ ಇನ್ನಷ್ಟು ಬಲಿಷ್ಠವಾಗಿ ಹೊರಹೊಮ್ಮಬೇಕು ಎಂಬ ಅಭಿಲಾಷೆ ದೇಶದ ಜನರದ್ದು. ಆ ಕಾರಣಕ್ಕೆ ಪಕ್ಷಕ್ಕೆ ಸಂತೋಷದಿಂದ ಬಂದಿದ್ದೇನೆ' ಎಂದರು.

'ಬೆಂಬಲ ಬಯಸಿದರೆ ಬಿಜೆಪಿಗೆ ಸಹಕಾರ'

ಗಂಗಾವತಿ: 'ನರೇಂದ್ರ ಮೋದಿಯೇ ಮತ್ತೆ ಪ್ರಧಾನಿ ಆಗಬೇಕು ಎಂಬುದು ದೇಶದ ಜನರ ಆಶಯ. ಲೋಕಸಭೆ ಚುನಾವಣೆಯಲ್ಲಿ ಬೆಂಬಲಿಸಲು ಬಿಜೆಪಿ ನಾಯಕರು ಸೂಚಿಸಿದರೆ ಖಂಡಿತವಾಗಿ ಮೋದಿ ಗೆಲುವಿಗೆ ನನ್ನ ಶ್ರಮವಿರುತ್ತದೆ'ಎಂದು ಶಾಸಕ ಜಿ.ಜನಾರ್ದನ ರೆಡ್ಡಿ ಹೇಳಿದರು.

'ಪಕ್ಷಕ್ಕೆ ಮರಳಿ ಬರಲು ಬಿಜೆಪಿ ಕೇಂದ್ರ ನಾಯಕರಿಂದ ಆಹ್ವಾನ ಬಂದಿದೆಯೇ' ಎಂಬ ಸುದ್ದಿಗಾರರ ಪ್ರಶ್ನೆಗೆ ಅವರು, 'ಸದ್ಯ ಬಿಜೆಪಿಗೆ ಹೋಗುವುದಿಲ್ಲ. ಕೆಆರ್‌ಪಿಪಿಯನ್ನು ಸದೃಢವಾಗಿ ಬೆಳೆಸುವ ಕಾರ್ಯದಲ್ಲಿ ನಿರತನಾಗಿದ್ದೇನೆ. 'ಬಿಜೆಪಿಯ ಕೇಂದ್ರ ನಾಯಕರಿಗೆ ನನ್ನ ಮೇಲೆ ವಿಶೇಷ ಪ್ರೀತಿಯಿದೆ. ನನ್ನನ್ನು ಯಾವ ನಾಯಕರೂ ದೂರ ಮಾಡಿಲ್ಲ. 28 ಕ್ಷೇತ್ರಗಳಿಗೆ ಕೆಆರ್‌ಪಿಪಿ ಅಭ್ಯರ್ಥಿಗಳನ್ನು ನಿಲ್ಲಿಸಿ, ಗೆಲ್ಲಿಸಿಕೊಳ್ಳುವ ಶಕ್ತಿ, ಸಮಯ ಎರಡೂ ಇಲ್ಲ' ಎಂದರು.

ಕಾರ್ಖಾನೆ ಮುಚ್ಚಲು ನೋಟಿಸ್

ಒಂದನೇ ಪುಟದಿಂದ

ನಿಯಮ ಉಲ್ಲಂಘನೆ ಸಂಬಂಧ ವಿವರ ಪಡೆಯಲು ಮಂಡಳಿ, ಕಳೆದ ಮಾರ್ಚ್‌ನಲ್ಲಿ ಕಾರ್ಖಾನೆಗೆ ನೋಟಿಸ್ ಜಾರಿಗೊಳಿಸಿತ್ತು. ನಿಯಮ ಉಲ್ಲಂಘಿಸಿದ್ದರೂ ಒಂದು ವರ್ಷದಿಂದ ಕಾರ್ಖಾನೆ ವಿರುದ್ಧ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿರಲಿಲ್ಲ ಎಂಬ ಆರೋಪವಿದೆ.

ಪರಿಸರ ಮಾಲಿನ್ಯ ಮಾಡುತ್ತಿರುವುದಕ್ಕೆ ಸಕ್ಕರೆ ಕಾರ್ಖಾನೆಗೆ ಕೇಂದ್ರ ಪರಿಸರ ಸಚಿವಾಲಯವು ಕಳೆದ ವರ್ಷ ₹1.58 ಕೋಟಿ ದಂಡ ಸಹ ವಿಧಿಸಿತ್ತು.

ಪರಿಸರ ಸಚಿವ ಈಶ್ವರ ಖಂಡ್ರೆ ಅಧ್ಯಕ್ಷತೆಯಲ್ಲಿ ಕಳೆದ ವಾರ ನಡೆದ ಕೆಎಸ್‌ಪಿಸಿಬಿ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ಕಾರ್ಖಾನೆಯನ್ನು ಮುಚ್ಚುವಂತೆ ನೋಟಿಸ್ ಕಳುಹಿಸಲಾಗಿದೆ. ರಾಜ್ಯದಲ್ಲಿ ನಿಯಮ ಉಲ್ಲಂಘಿಸುತ್ತಿರುವ ಕಾರ್ಖಾನೆಗಳು ಹಾಗೂ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಮಂಡಳಿ ಸಭೆಯಲ್ಲಿ ನಿರ್ಧರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಈ ಸಂಬಂಧ ಪ್ರತಿಕ್ರಿಯೆ ಪಡೆಯಲು ಕೆಎಸ್‌ಪಿಸಿಬಿ ಅಧ್ಯಕ್ಷ ಶಾಂತ ತಮ್ಮಯ್ಯ ಲಭ್ಯವಾಗಲಿಲ್ಲ.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **'ಪಿವಿ ಬ್ರ್ಯಾಂಡ್ ಸ್ಪಾಟ್'**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

'ಅಘೋಷಿತ ತುರ್ತು ಪರಿಸ್ಥಿತಿ'

ಪ್ರಜಾವಾಣಿ ವಾರ್ತೆ


ಶಬನಂ ಹಾಶ್ಮಿ

ಹುಬ್ಬಳ್ಳಿ: 'ರಾಷ್ಟ್ರೀಯ ಸ್ವಯಂಸೇವಕ ಸಂಘವು (ಆರ್‌ಎಸ್‌ಎಸ್) ಸರ್ವಾಧಿಕಾರಿ ಹಿಟ್ಲರ್ ನೀತಿ ಅನುಸರಿಸುತ್ತಿದ್ದು, ಇದರಿಂದ ದೇಶವನ್ನು ರಕ್ಷಿಸಬೇಕಿದೆ. ಎಲ್ಲೆಡೆ ಆವರಿಸಿರುವ ಅಘೋಷಿತ ತುರ್ತು ಪರಿಸ್ಥಿತಿ ಹೋಗಲಾಡಿಸಬೇಕಿದೆ' ಎಂದು ಮಾನವ ಹಕ್ಕುಗಳ ಹೋರಾಟಗಾರ್ತಿ ಶಬನಂ ಹಾಶ್ಮಿ ಹೇಳಿದರು.

ಸಂವಿಧಾನ ಸುರಕ್ಷಾ ಸಮಿತಿಯಿಂದ ಶುಕ್ರವಾರ ನಡೆದ 'ಭಾರತದ ಪ್ರಸ್ತುತ ಪರಿಸ್ಥಿತಿ' ಕುರಿತ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಗಣರಾಜ್ಯೋತ್ಸವದ ಸಂದರ್ಭದಲ್ಲಿ ಎಲ್ಲೆಡೆ ತಿರಂಗ ಧ್ವಜ ಕಾಣುತ್ತಿದ್ದೆವು. ಆದರೆ, ಕೆಲ ದಿನಗಳಿಂದ ದೇಶದಲ್ಲೆಡೆ ತಿರಂಗದ ಬದಲು ಬೇರೆಯದ್ದೇ ಧ್ವಜ ಹೆಚ್ಚು ಕಾಣುತ್ತಿದ್ದೇವೆ' ಎಂದು ಹೇಳಿದರು.

'ದೇಶದಲ್ಲಿ ಕೆಲವರ ಧ್ವನಿ ಮಾತ್ರ ಕೇಳುತ್ತಿದೆ. ಅಪಾಯಕಾರಿ ಬೆಳವಣಿಗೆಗಳ ವಿರುದ್ಧ ಮಾತನಾಡಿದರೆ, ಇ.ಡಿ, ಐ.ಟಿ ದಾಳಿ ನಡೆಸಲಾಗುತ್ತಿದೆ. ನಾವೇನು ಧರಿಸಬೇಕು, ಯಾವ ಆಹಾರ ಸೇವಿಸಬೇಕು, ಯಾರೊಂದಿಗೆ ಮದುವೆ ಆಗಬೇಕು, ಯಾರನ್ನು ಪ್ರೀತಿಸಬೇಕು ಎಂಬುದನ್ನು ಯಾರೋ ನಿರ್ಧರಿಸುತ್ತಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಗುಜರಾತ್‌ನಲ್ಲಿ ಮೂಡಿಸಲಾದ ಭಯದ ವಾತಾವರಣವನ್ನು ದೇಶದಾದ್ಯಂತ ವಿಸ್ತರಿಸಲು ಯೋಜನೆ ರೂಪಿಸಲಾಗುತ್ತಿದೆ. ಈಗಲೂ ಅಲ್ಲಿ ಭಯದ ವಾತಾವರಣವಿದೆ' ಎಂದು ಕಳವಳ ವ್ಯಕ್ತಪಡಿಸಿದರು.

ಅಭಿಯಾನ: 'ಫೆಬ್ರುವರಿ 21ರಂದು ಬೆಳಗಾವಿ ಜಿಲ್ಲೆಯ ಚನ್ನಮ್ಮನ ಕಿತ್ತೂರಿನ ಕೋಟೆ ಬಳಿ ರಾಷ್ಟ್ರಮಟ್ಟದ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ. ಚನ್ನಮ್ಮ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಕೋಟೆವರೆಗೆ ಮೆರವಣಿಗೆ ನಡೆಸಲಾಗುವುದು. ರಾಣಿ ಚನ್ನಮ್ಮ ಅಭಿಯಾನದ ಮೂಲಕ ಮಹಿಳಾ ಸಂಘಟನೆಗಳನ್ನು ಒಗ್ಗೂಡಿಸಲಾಗುವುದು' ಎಂದು ಹೇಳಿದರು.

ಸಮಿತಿಯ ಸಂಚಾಲಕರಾದ ಮಹೇಶ ಪತ್ತಾರ, ಅಶ್ರಫ್ ಅಲಿ ಬಶೀರ್ ಮತ್ತು ಅನ್ವರ್ ಮುದೋಳ್ ಇದ್ದರು.

ಬೀಳಗಿ ಬಳಿ ಅಪಘಾತ: ನಾಲ್ವರ ಸಾವು

ಪ್ರಜಾವಾಣಿ ವಾರ್ತೆ

ಬೀಳಗಿ (ಬಾಗಲಕೋಟೆ ಜಿಲ್ಲೆ): ತಾಲ್ಲೂಕಿನ ತುಂಬರಮಟ್ಟಿ ಕ್ರಾಸ್ ಬಳಿ ಶುಕ್ರವಾರ ಬೆಳಗಿನ ಜಾವ ನಿಂತಿದ್ದ ಟ್ರ್ಯಾಕ್ಟರ್‌ಗೆ ಕಾರು ಡಿಕ್ಕಿ ಹೊಡೆದು ಸ್ಥಳದಲ್ಲೇ ನಾಲ್ವರು ಮೃತಪಟ್ಟಿದ್ದಾರೆ.

ವಿಜಯಪುರ ಜಿಲ್ಲೆಯ ಹೊನಗನಹಳ್ಳಿ ಗ್ರಾಮದ ಮಲ್ಲು ಪೂಜಾರಿ (24), ಕಲ್ಲಪ್ಪ ಕೌಟಗಿ, (34), ಕಾಮಾಕ್ಷಿ ಬಡಿಗೇರ (35) ಮತ್ತು ತುಕಾರಾಮ್ ತಳೇವಾಡ (30) ಮೃತರು.

ಬಾದಾಮಿಯಿಂದ ಹೊನಗನಹಳ್ಳಿಗೆ ಕಾರಿನಲ್ಲಿ ತೆರಳುತ್ತಿದ್ದ ವೇಳೆ ಈ ಘಟನೆ ಸಂಭವಿಸಿದೆ ಎಂದು ಬೀಳಗಿ ಠಾಣೆಯ ಪೊಲೀಸರು ತಿಳಿಸಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ಮತ್ತೆ ಬಿವೈಆರ್ ಗೆಲ್ಲಿಸಿ'

ಪ್ರಜಾವಾಣಿ ವಾರ್ತೆ


ಶಾಮನೂರು ಶಿವಶಂಕರಪ್ಪ

ಶಿವಮೊಗ್ಗ: 'ಶಿವಮೊಗ್ಗ ಜಿಲ್ಲೆಯಲ್ಲಿ ಆಗಿರುವ ಅಭಿವೃದ್ಧಿ ಕೆಲಸಗಳನ್ನು ಗಮನಿಸಿದರೆ ನೀವು ಉತ್ತಮ ಸಂಸದರನ್ನೇ ಆಯ್ಕೆ ಮಾಡಿದ್ದೀರಿ ಎಂಬುದು ತಿಳಿಯುತ್ತದೆ. ಮುಂಬರುವ ಚುನಾವಣೆಯಲ್ಲೂ ಬಿ.ವೈ. ರಾಘವೇಂದ್ರ ಅವರನ್ನು ಆಯ್ಕೆ ಮಾಡಿ' ಎಂದು ಕಾಂಗ್ರೆಸ್ ಶಾಸಕರೂ ಆದ, ಅಖಿಲ ಭಾರತ ವೀರ ಶೈವ ಮಹಾಸಭಾ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಶುಕ್ರವಾರ ಸಲಹೆ ನೀಡಿದರು.

ಇಲ್ಲಿನ ಬೆಕ್ಕಿನ ಕಲ್ಮಠದಲ್ಲಿ ನಡೆದ ಸಮಾರಂಭದಲ್ಲಿ 'ಗುರು ಬಸವಶ್ರೀ' ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು.

'ಬಿ.ವೈ. ರಾಘವೇಂದ್ರ ಅವರಂತಹ ಸಂಸದರನ್ನು ಪಡೆದ ನೀವೇ ಧನ್ಯರು. ಜಿಲ್ಲೆಯಲ್ಲಿ ಆಗಬೇಕಿರುವ ಎಲ್ಲ ಕೆಲಸಗಳನ್ನು ಪೂರ್ಣ ಮಾಡಿ ಮುನ್ನಡೆಯುತ್ತಿದ್ದಾರೆ' ಎಂದು ಶ್ಲಾಘಿಸಿದರು. 'ಈ ಬಾರಿ ಬಿಜೆಪಿಯಿಂದ ಅವರಿಗೇ ಟಿಕೆಟ್ ಪಕ್ಕಾ. ಅವರನ್ನು ಮತ್ತೆ ಆಯ್ಕೆ ಮಾಡಿ' ಎಂದರು.

'ವೀರಶೈವ ಲಿಂಗಾಯತರಲ್ಲಿ ಅನೇಕ ಒಳ ಪಂಗಡಗಳಿವೆ. ಎಲ್ಲರೂ ಒಂದೇ ಎಂಬ ಭಾವನೆ ಬಂದಾಗ ಏಕತೆ ಮೂಡುತ್ತದೆ' ಎಂದರು.

'ನರೇಗಾ ಕೂಲಿ ದಿನ ಹೆಚ್ಚಿಸದಿದ್ದರೆ ಧರಣಿ'

ಪ್ರಜಾವಾಣಿ ವಾರ್ತೆ


ಪ್ರಿಯಾಂಕ್ ಖರ್ಗೆ

ಕಲಬುರಗಿ: 'ನರೇಗಾ ಯೋಜನೆಯಡಿ ಕೂಲಿ ದಿನಗಳನ್ನು 150ಕ್ಕೆ ಹೆಚ್ಚಿಸುವಂತೆ ರಾಜ್ಯ ಬಜೆಟ್ ಮಂಡನೆಗೂ ಮುನ್ನ ಮತ್ತೊಮ್ಮೆ ದೆಹಲಿಗೆ ಹೋಗಿ ಒತ್ತಾಯಿಸುತ್ತೇನೆ. ಸ್ಪಂದಿಸದಿದ್ದರೆ ನೀವು ಧರಣಿ ಕುಳಿತಿರುವಂತೆ ನಾನೂ ಶಾಸಕರೊಂದಿಗೆ ದೆಹಲಿಯಲ್ಲಿ ನರೇಂದ್ರ ಮೋದಿ ಸರ್ಕಾರದ ವಿರುದ್ಧ ಪ್ರತಿಭಟಿಸುತ್ತೇನೆ' ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಎಚ್ಚರಿಸಿದರು.


ನಗರದಲ್ಲಿ ಸರ್ಕಾರಿ ಶಾಲಾ ಅಭಿವೃದ್ಧಿ ವೇದಿಕೆಯಡಿ ಅಹೋರಾತ್ರಿ ಧರಣಿ ನಡೆಸುತ್ತಿದ್ದ ಮಹಿಳೆಯರು, 'ನರೇಗಾ ಕೂಲಿ ದಿನ ಹೆಚ್ಚಿಸುವುದು ಹಾಗೂ ಕೂಲಿ ಹಣ ಪಾವತಿಸಬೇಕು' ಎಂದು ಬೇಡಿಕೆ ಮಂಡಿಸಿದಾಗ ಸಚಿವರು ಹೀಗೆ ಪ್ರತಿಕ್ರಿಯಿಸಿದರು.

'ರಾಜ್ಯಕ್ಕೆ 13 ಕೋಟಿ ಮಾನವ ದಿನಗಳು ದೊರೆತಿದ್ದವು. ಈಗ 12 ಕೋಟಿ ಮಾನವ ದಿನಗಳನ್ನು ಬಳಸಿದ್ದೇವೆ. ಮಾನವ ದಿನ ಸೃಜಿಸಲು ರಾಜ್ಯ ಸರ್ಕಾರ ಕೇವಲ ಶಿಫಾರಸು ಮಾಡಬಲ್ಲದು. ಅದನ್ನು ಕೇಂದ್ರ ಅನುಮೋದಿಸಬೇಕಾಗುತ್ತದೆ. ಬರಗಾಲ ಬಂದಾಗ, ನರೇಗಾ ಕೂಲಿ ದಿನ ಹೆಚ್ಚಿಸುವಂತೆ ದೆಹಲಿಗೆ ಹೋಗಿ ಅಧಿಕಾರಿಗಳನ್ನು ಭೇಟಿಯಾಗಿ ಐದು ಸಲ ಮನವಿ ಕೊಟ್ಟರೂ ಸ್ಪಂದಿಸಿಲ್ಲ' ಎಂದು ದೂರಿದರು.

'ನರೇಗಾ ಕೂಲಿ ಹಣವನ್ನು ಬಿಡುಗಡೆ ಮಾಡಲು ಕೇಂದ್ರ ಸರ್ಕಾರ ವಿಳಂಬ ಮಾಡಿದ್ದರಿಂದ ಹಿಂದೆ ರಾಜ್ಯ ಸರ್ಕಾರವೇ ವಿತರಿಸಿದೆ. ಈಗಲೂ ಅಂದಾಜು ₹470 ಕೋಟಿ ಕೇಂದ್ರದಿಂದ ರಾಜ್ಯಕ್ಕೆ ಬರಬೇಕಿದೆ' ಎಂದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಬರೀ ಕಲಿಯುತ್ತಲೇ ಇದ್ದು ಅದನ್ನು ಕಾರ್ಯರೂಪಕ್ಕೆ ತರದವನು, ಸದಾ ಉಳುತ್ತಲೇ ಇದ್ದು ಬೀಜ ಬಿತ್ತನೆಯನ್ನೇ ಮಾಡದ ವ್ಯಕ್ತಿಯಂತೆ.

-ಪ್ಲೇಟೊ

‘ವೈಟ್ ಟಾಪಿಂಗ್’ಗೆ ಆತುರವೇಕೆ? ಜನರ ದುಡ್ಡು ಪೋಲು ಮಾಡಬೇಡಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿಬಿಎಂಪಿ) ಪ್ರಸಕ್ತ ಹಣಕಾಸು ವರ್ಷದಲ್ಲಿ ದಾಖಲೆಯ ಪ್ರಮಾಣದಲ್ಲಿ ಆಸ್ತಿ ತೆರಿಗೆ ಸಂಗ್ರಹದತ್ತ ದಾಪುಗಾಲು ಹಾಕಿದೆ. ನಗರದ ಅಭಿವೃದ್ಧಿ ಬಯಸಿದವರ ಪಾಲಿಗೆ ಇದೊಂದು ಸಂತಸದಾಯಕ ಸುದ್ದಿಯೇ ಸರಿ. ಅದೇ ಕಾಲಕ್ಕೆ ಬೇಸರ ಉಂಟುಮಾಡುವ ಸಂಗತಿ ಏನೆಂದರೆ, ಈ ತೆರಿಗೆ ಸಂಗ್ರಹದಲ್ಲಿ ₹ 754 ಕೋಟಿಯಷ್ಟು ಮೊತ್ತವನ್ನು ಒಟ್ಟಾರೆ 61 ಕಿ.ಮೀ. ಉದ್ದದ ರಸ್ತೆಗಳ ವೈಟ್ ಟಾಪಿಂಗ್‌ಗಾಗಿ ವ್ಯಯಿಸಲು ಬಿಬಿಎಂಪಿಯು ಯೋಜನೆ ರೂಪಿಸಿರುವುದು. ಕಳೆದ ಹಣಕಾಸು ವರ್ಷದಲ್ಲಿ ₹ 3,300 ಕೋಟಿಯಷ್ಟು ಆಸ್ತಿ ತೆರಿಗೆ ಸಂಗ್ರಹವಾಗಿತ್ತು. ಈ ಹಣಕಾಸು ವರ್ಷದಲ್ಲಿ ₹ 4,600 ಕೋಟಿಯಷ್ಟು ತೆರಿಗೆ ಸಂಗ್ರಹದ ಗುರಿಯನ್ನು ಬಿಬಿಎಂಪಿ ಹಾಕಿಕೊಂಡಿದೆ. ತೆರಿಗೆ ಸಂಗ್ರಹದಲ್ಲಿ ಹಿಂದಿನ ದಾಖಲೆಗಳನ್ನು ಮುರಿದಿರುವ ಬಿಬಿಎಂಪಿಯ ಸಾಧನೆಯು ನಿಸ್ಸಂಶಯವಾಗಿ ಅಭಿನಂದನಾರ್ಹ. ಆದರೆ, ಸಂಗ್ರಹವಾದ ಹೆಚ್ಚುವರಿ ವರಮಾನವನ್ನು ವೈಟ್ ಟಾಪಿಂಗ್ ಯೋಜನೆಗಾಗಿ ಖರ್ಚು ಮಾಡಲು ಹೊರಟಿರುವ ನಡೆ ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಏಕೆಂದರೆ, ಈ ಯೋಜನೆಯ ಮೂಲಕ ಕಾಂಕ್ರೀಟ್ ಪದರು ಹಾಕಲು ಬಿಬಿಎಂಪಿಯು ಆಯ್ಕೆ ಮಾಡಿಕೊಂಡಿರುವ ಬಹುತೇಕ ರಸ್ತೆಗಳು ಈಗಾಗಲೇ ಸುಸ್ಥಿತಿಯಲ್ಲಿವೆ. ಉದಾಹರಣೆಗೆ, 2.2 ಕಿ.ಮೀ. ಉದ್ದದ ಎಂ.ಜಿ. ರಸ್ತೆಗೆ ₹ 45 ಕೋಟಿ ವೆಚ್ಚದಲ್ಲಿ ವೈಟ್ ಟಾಪಿಂಗ್ ಮಾಡಲು ಯೋಜನೆ ಹಾಕಿಕೊಳ್ಳಲಾಗಿದೆ. ಸದ್ಯ ಈ ರಸ್ತೆ ತುಂಬಾ ಸುಸ್ಥಿತಿಯಲ್ಲಿದೆ. ತಕ್ಷಣದಲ್ಲೇ ದುರಸ್ತಿಯ ಅಗತ್ಯವಿರುವ ರಸ್ತೆಗಳು ನಗರದಲ್ಲಿ ನೂರಾರು ಸಂಖ್ಯೆಯಲ್ಲಿವೆ. ನಗರ ಹೊರವಲಯದಲ್ಲಿರುವ ಹಲವು ರಸ್ತೆಗಳಂತೂ ವಾಹನ ಸಂಚರಿಸಲು ಕೂಡ ಯೋಗ್ಯವಾಗಿಲ್ಲ. ಸುಸ್ಥಿತಿಯಲ್ಲಿರುವ ರಸ್ತೆಗಳಿಗಿಂತ ಕೆಟ್ಟ ಸ್ಥಿತಿಯಲ್ಲಿರುವ ರಸ್ತೆಗಳನ್ನೇ ಮೊದಲು ದುರಸ್ತಿಗೊಳಿಸಬೇಕು ಎನ್ನುವುದು ಸಾಮಾನ್ಯ ಜ್ಞಾನ. ಇದೇಕೆ ಬಿಬಿಎಂಪಿ ಆಡಳಿತದ ತಲೆಗೆ ಹೋಗಲಿಲ್ಲ?



ವೈಟ್ ಟಾಪಿಂಗ್ ಯೋಜನೆಗಾಗಿ ಖರ್ಚು ಮಾಡಲು ಹೊರಟಿರುವ ನಡೆ ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ ಹಾಗೂ ಅನುಮಾನ ಮೂಡಿಸಿದೆ

ವೈಟ್ ಟಾಪಿಂಗ್ ಯೋಜನೆ ಕುರಿತು ಮತ್ತೊಂದು ಮಹತ್ವದ ಪ್ರಶ್ನೆಯೂ ಇದೆ. 2050ರ ವೇಳೆಗೆ ಇಂಗಾಲದ ಹೊರಸೂಸುವಿಕೆಯನ್ನು ಶೂನ್ಯ ಪ್ರಮಾಣಕ್ಕೆ ಇಳಿಸುವ ಮಹತ್ವಾಕಾಂಕ್ಷಿ ಉದ್ದೇಶದಿಂದ ಬಿಬಿಎಂಪಿಯು ‘ಬೆಂಗಳೂರು ಹವಾಮಾನ ಕ್ರಿಯಾ ಯೋಜನೆ’ಯನ್ನು (ಬಿಕ್ಯಾಪ್) ರೂಪಿಸಿದೆ. ಕಾಂಕ್ರೀಟ್ ಪದರಿನ ರಸ್ತೆಗಳು ಆ ಯೋಜನೆಗೆ ಅನುಗುಣವಾಗಿರುವವೇ ಎನ್ನುವುದು ಆ ಪ್ರಶ್ನೆ. ಯೋಜನೆಯ ಭಾಗವಾಗಿ, ಬಿಬಿಎಂಪಿಯು ಹವಾಮಾನ ಕ್ರಿಯಾ ಘಟಕವನ್ನು ಸ್ಥಾಪಿಸಿದೆ. ಬೆಂಗಳೂರಿನ ನೈಸರ್ಗಿಕ ಮೂಲ ಸೌಕರ್ಯಗಳನ್ನು ಕಾಪಾಡುವ, ಮರುಸ್ಥಾಪಿಸುವ, ಸುಸ್ಥಿತಿಯಲ್ಲಿಡುವ ವಿಷಯದಲ್ಲಿ ಸಮುದಾಯ ಸಹಭಾಗಿತ್ವದ ಅಗತ್ಯವನ್ನೂ ಸ್ಥಳೀಯ ಆಡಳಿತ ಪ್ರತಿಪಾದಿಸಿದೆ. ಹೀಗಿದ್ದೂ ವೈಟ್ ಟಾಪಿಂಗ್ ರಸ್ತೆಗಳು ಮತ್ತು ಅವು ಹವಾಮಾನ ಬದಲಾವಣೆಯ ಮೇಲೆ ಬೀರುವ ಪರಿಣಾಮದ ಕುರಿತು ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳಿಂದ ಅಭಿಪ್ರಾಯ ಪಡೆಯಲು ಯಾವುದೇ ಪ್ರಯತ್ನವೂ ನಡೆದಿಲ್ಲ. ಕಾಂಕ್ರೀಟ್ ಹಾಕಿದ ರಸ್ತೆ 20 ವರ್ಷಗಳಿಂದ 45 ವರ್ಷಗಳವರೆಗೆ ಬಾಳಿಕೆ ಬರಲಿದೆ ಎಂಬುದು ಸರ್ಕಾರದ ವಾದ. ಒಂದು ಕಿ.ಮೀ. ವೈಟ್ ಟಾಪಿಂಗ್‌ಗೆ ಸರಾಸರಿ ₹ 9 ಕೋಟಿಯಿಂದ ₹ 10 ಕೋಟಿವರೆಗೆ ವೆಚ್ಚ ಭರಿಸಬೇಕಾಗುತ್ತದೆ. ಅಷ್ಟೇ ಉದ್ದದ ರಸ್ತೆಗೆ ಟಾರು ಹಾಕಿದರೆ ₹ 70 ಲಕ್ಷದಿಂದ ₹ 1 ಕೋಟಿವರೆಗೆ ಖರ್ಚು ಬರಲಿದೆ. ಜಗತ್ತಿನ ಅತಿಯಾದ ಸಂಚಾರ ದಟ್ಟಣೆ ನಗರಗಳಲ್ಲಿ ಬೆಂಗಳೂರು ಕೂಡ ಒಂದಾಗಿದೆ. 61 ಕಿ.ಮೀ. ಉದ್ದದ ರಸ್ತೆಗಳಿಗೆ ಕಾಂಕ್ರೀಟ್ ಪದರ ಹಾಕುವ ಕಾಮಗಾರಿ ಶುರುವಾದ ಮೇಲೆ ಇಲ್ಲಿಯ ದಟ್ಟಣೆ ಸ್ಥಿತಿ ಹೇಗಿರಬಹುದು ಎಂಬುದನ್ನು ಊಹಿಸುವುದು ಕಷ್ಟವಲ್ಲ.

ಕೆಲವು ಕಾರಣಗಳಿಗಾಗಿ, ರಸ್ತೆಗಳ ನಿರ್ಮಾಣವೊಂದೇ ತನ್ನ ಆದ್ಯ ಕರ್ತವ್ಯ ಎಂದು ಬಿಬಿಎಂಪಿಯು ಬಲವಾಗಿ ನಂಬಿದೆ. ಶಾಲೆಗಳನ್ನು ತೆರೆಯುವುದು, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆಯನ್ನು ಹೆಚ್ಚಿಸುವುದು, ಕಸಮುಕ್ತ ವಾತಾವರಣ ನಿರ್ಮಿಸುವುದು- ಯಾವುವೂ ತನ್ನ ಕೆಲಸಗಳಲ್ಲ, ಅವು ತಮ್ಮಷ್ಟಕ್ಕೆ ತಾವೇ ಆಗುವಂಥವು ಎಂದೂ ಪರಿಭಾವಿಸಿದೆ. ದೊಡ್ಡ ಪ್ರಮಾಣದ ಕಿಕ್‌ಬ್ಯಾಕ್ ಸಿಗುವುದರಿಂದಲೇ ಪಕ್ಷಾತೀತವಾಗಿ ಬಹುತೇಕ ರಾಜಕಾರಣಿಗಳು ಹಾಗೂ ಅಧಿಕಾರಿಗಳು ವೈಟ್ ಟಾಪಿಂಗ್ ಯೋಜನೆ ಅನುಷ್ಠಾನಕ್ಕಾಗಿ ಹಾತೊರೆಯುತ್ತಿರುವುದು ಎಂಬ ಭಾವನೆ ಸಾರ್ವಜನಿಕರಲ್ಲಿದೆ. ಈ ಭಾವನೆ ಬಲಗೊಳ್ಳಲು ಅವಕಾಶ ನೀಡದೆ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬಿಬಿಎಂಪಿಯ ಹೆಚ್ಚುವರಿ ವರಮಾನದ ಪ್ರಯೋಜನ ಜನರಿಗೆ ತೀರಾ ಅಗತ್ಯವಾದ ಇತರ ಉದ್ದೇಶಗಳಿಗೆ ಸಿಗುವಂತೆ ನೋಡಿಕೊಳ್ಳಬೇಕು. ಸಾರ್ವಜನಿಕರ ದುಡ್ಡು ಪೋಲಾಗುವುದನ್ನೂ ತಪ್ಪಿಸಬೇಕು.

ದಿನದ ಟ್ವೀಟ್

ಹೀಗೂ ಆಗುತ್ತದೆ!



ಆಘಾತಕಾರಿ! ಭೋಪಾಲ್ ರೈಲು ನಿಲ್ದಾಣದಲ್ಲಿ ವ್ಯಕ್ತಿಯೊಬ್ಬ ಮೂತ್ರ ವಿಸರ್ಜಿಸಲು ವಂದೇಭಾರತ್ ರೈಲನ್ನು ಹತ್ತಿದ ತಪ್ಪಿಗೆ ₹ 5,000 ದಂಡ ತೆರಬೇಕಾಯಿತು. ವಂದೇಭಾರತ್ ರೈಲುಗಳು ಸ್ವಯಂಚಾಲಿತ ಬಾಗಿಲುಗಳನ್ನು ಹೊಂದಿರುತ್ತವೆ ಎಂಬುದು ಆತನಿಗೆ ತಿಳಿದಿರಲಿಲ್ಲ.

ಅಭಿಜಿತ್ ಚೋಕ್ಷಿ, ಷೇರುಪೇಟೆ ಸಲಹೆಗಾರ

ಕಿಡಿನುಡಿ



ಕೇಂದ್ರ ಸರ್ಕಾರವು ಜಗದೀಶ ಶೆಟ್ಟರ್ ಅವರಿಗೆ ಐ.ಟಿ., ಇ.ಡಿ. ಭಯ ತೋರಿಸಿದ್ದರಿಂದ ಅವರು ದಿಢೀರ್ ಆಗಿ ಬಿಜೆಪಿಗೆ ಸೇರ್ಪಡೆಯಾಗಿರಬಹುದು. ಬಿಜೆಪಿಗೆ ಇ.ಡಿ., ಐ.ಟಿ., ಸಿಬಿಐಗಳೇ ಸ್ಟಾರ್ ಕ್ಯಾಂಪೇನರ್‌ಗಳು. ಎಂಥ ಭ್ರಷ್ಟ ವ್ಯಕ್ತಿಯೇ ಇರಲಿ, ಆತ ಬಿಜೆಪಿ ವಾಷಿಂಗ್ ಮಷೀನ್‌ನಲ್ಲಿ ಹಾದುಹೋದರೆ ಶುಭ್ರನಾಗುತ್ತಾನೆ.

ಪ್ರಿಯಾಂಕ್ ಖರ್ಗೆ, ಸಚಿವ

25 ವರ್ಷಗಳ ಹಿಂದೆ

ಬುಧವಾರ, 27-1-1999

● **ಹೆಚ್ಚಿದ ‘ಅಪವಿತ್ರ ಮೈತ್ರಿ’ ರಾಜ್ಯಪಾಲರ ಕಳವಳ**

ಬೆಂಗಳೂರು, ಜ. 26- ಹೆಚ್ಚುತ್ತಿರುವ ಭ್ರಷ್ಟಾಚಾರ, ಕುಸಿಯುತ್ತಿರುವ ನೈತಿಕ ಮೌಲ್ಯಗಳು, ರಾಜಕಾರಣಿಗಳು, ಉದ್ಯಮಿಗಳು ಮತ್ತು ಆಡಳಿತಶಾಹಿಗಳ ನಡುವೆ ಹೆಚ್ಚುತ್ತಿರುವ ‘ಅಪವಿತ್ರ ಮೈತ್ರಿ’ಯ ಬಗ್ಗೆ ರಾಜ್ಯಪಾಲ ಖುರ್ಷಿದ್ ಆಲಂಖಾನ್ ಅವರು ಇಂದು ಇಲ್ಲಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಗಣರಾಜ್ಯೋತ್ಸವದ ಅಂಗವಾಗಿ ಇಲ್ಲಿನ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ರಾಷ್ಟ್ರ ಧ್ವಜಾರೋಹಣ ಮಾಡಿ ಮಾತನಾಡಿದ ಅವರು, ಶ್ರೇಷ್ಠ ವ್ಯಕ್ತಿಗಳಿಗೆ ನೆಲೆ ನೀಡಿದ ಈ ನಾಡು ಭ್ರಷ್ಟಾಚಾರದ ಸುಳಿಯಲ್ಲಿ ಮತ್ತು ನೈತಿಕ ಮೌಲ್ಯಗಳ ಅವಸಾನದಲ್ಲಿ ಸಿಲುಕುತ್ತಿರುವುದನ್ನು ನೋಡಿದರೆ ಸಂಕಟ ಆಗುತ್ತಿದೆ ಎಂದು ವಿಷಾದಿಸಿದರು.

ಇತ್ತೀಚೆಗೆ ನಡೆಯುತ್ತಿರುವ ಎಲ್ಲಾ ರಾಜಕೀಯ ಸಂಘರ್ಷಗಳೂ ವ್ಯಕ್ತಿಗತ ಸಂಘರ್ಷಗಳಾಗುತ್ತಿರುವುದು ವಿಪರ್ಯಾಸ. ಇದು ಕೇವಲ ರಾಜಕೀಯ ಪ್ರಾಬಲ್ಯಕ್ಕಾಗಿ ನಡೆಯುತ್ತಿದೆಯೇ ವಿನಾ ಯಾವುದೇ ತಾತ್ವಿಕ ನೆಲೆಗಟ್ಟಿಗಾಗಿ ಅಲ್ಲ. ನಮ್ಮ ಶಿಕ್ಷಣದ ಮೌಲ್ಯವೂ ನಶಿಸುತ್ತಿರುವುದು ಹಲವು ಕೆಡುಕುಗಳಿಗೆ ಕಾರಣ ಎಂದರು.

● **ಮತಾಂತರ ಅಜನ್ಮಸಿದ್ಧ ಹಕ್ಕು ಸಾಹಿತಿ ಅನಂತಮೂರ್ತಿ**

ಬೆಂಗಳೂರು, ಜ. 26- ಮತಾಂತರವಾಗುವುದು ಆಜನ್ಮಸಿದ್ಧ ಹಕ್ಕು. ಆದ್ದರಿಂದ ಮತಾಂತರ ನಿಷೇಧ ಕಾನೂನನ್ನು ಜಾರಿಗೆ ತರುವುದಕ್ಕೆ ಬಿಡಬಾರದು ಎಂದು ಸಾಹಿತಿ ಡಾ. ಯು.ಆರ್. ಅನಂತಮೂರ್ತಿ ಇಂದು ಇಲ್ಲಿ ಹೇಳಿದರು.

ಮಾಜಿ ಸಚಿವ ಬಿ. ಬಸವಲಿಂಗಪ್ಪನವರ ಸ್ಮರಣಾರ್ಥ ದಲಿತ ಸಂಘರ್ಷ ಸಮಿತಿಯು ಏರ್ಪಡಿಸಿದ್ದ ‘ಜನಸಾಹಿತ್ಯ- ಜನಚಳವಳಿ’ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

‘ಬೂಸಾ ಚಳವಳಿ’ಗೆ 25 ವರ್ಷವಾಗಿರುವ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಹಿಂದೂ ಧರ್ಮದಿಂದ ಬೇರೆ ಧರ್ಮಕ್ಕೆ ಯಾರಾದರೂ ಮತಾಂತರ ಆದರೆ ಮೊದಲು ಹಿಂದೂ ಧರ್ಮದ ಮಠಾಧಿಪತಿಗಳು ಆತ್ಮವಿಮರ್ಶೆ ಮಾಡಿಕೊಳ್ಳಬೇಕು. ಇನ್ನು ಕ್ರೈಸ್ತ ಅಥವಾ ಇತರ ಧರ್ಮೀಯರು ಹಿಂದೂ ಧರ್ಮಕ್ಕೆ ಮತಾಂತರವಾಗಬೇಕು ಎಂದುಕೊಂಡರೂ ಈ ಧರ್ಮದಲ್ಲಿರುವ ನಾನಾ ಜಾತಿಗಳಿಂದಾಗಿ ಅವರಿಗೆ ತಾವು ಯಾವ ಜಾತಿಗೆ ಸೇರಬೇಕೆಂಬ ಸಮಸ್ಯೆ ಎದುರಾಗುತ್ತದೆ ಎಂದು ಅವರು ವಿವರಿಸಿದರು.

● **ಬಿಹಾರದ ರಣವೀರ ಸೇನೆ ಅಟ್ಟಹಾಸ: 21 ಮಂದಿಯ ಕಗ್ಗೊಲೆ**

ಪಟ್ನಾ, ಜ. 26- (ಯುಎನ್ಐ, ಪಿಟಿಐ)- ಬಿಹಾರ ಭೂ ಮಾಲೀಕರ ನಿಷೇಧಿತ ರಣವೀರ ಸೇನೆಯು ನಕ್ಸಲೀಯರ ಉಪಟಳ ಹೆಚ್ಚಿರುವ ಜೆಹಾನಾಬಾದ್ ಜಿಲ್ಲೆಯ ಶಂಕರ್ ಬಿಘಾ ಗ್ರಾಮದ ಪರಿಶಿಷ್ಟರ ಕೇರಿಯ ಮೇಲೆ ಶನಿವಾರ ರಾತ್ರಿ ದಾಳಿ ಮಾಡಿ, ಮಹಿಳೆಯರು ಹಾಗೂ ಮಕ್ಕಳು ಸೇರಿದಂತೆ 21 ಮಂದಿಯನ್ನು ಕೊಂದುಹಾಕಿದೆ.

ಸತ್ತವರಲ್ಲಿ ಆರು ಮಕ್ಕಳು ಹಾಗೂ ಐವರು ಮಹಿಳೆಯರು ಸೇರಿದ್ದಾರೆ. ಇತರ 12 ಮಂದಿ ತೀವ್ರವಾಗಿ ಗಾಯಗೊಂಡಿದ್ದು ಅವರನ್ನು ಪಟ್ನಾ ವೈದ್ಯಕೀಯ ಆಸ್ಪತ್ರೆಗೆ ಸೇರಿಸಲಾಗಿದೆ.

ಸುಮಾರು 100ಕ್ಕೂ ಹೆಚ್ಚು ಜನರಿದ್ದ ಶಸ್ತ್ರಸಜ್ಜಿತ ರಣವೀರ ಸೇನೆಯ ಗುಂಪು ಗಣರಾಜ್ಯೋತ್ಸವದ ಮುನ್ನಾ ದಿನ ನಡೆಸಿದ ಈ ಕರಾಳ ಕೃತ್ಯದಿಂದಾಗಿ ಬಿಹಾರದಲ್ಲಿ ಉದ್ರಿಕ್ತ ಪರಿಸ್ಥಿತಿ ನಿರ್ಮಾಣವಾಗಿದೆ.

ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ನೆರವೇರಿಸಿದ ಪ್ರಧಾನಿ

ಸನಾತನ ಧರ್ಮಕ್ಕೆ ಮೋದಿ ಸವಾಲು?



ವಿಶ್ಲೇಷಣೆ

ದಿನೇಶ್ ಅಮಿನ್ ಮಟ್ಟು

ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ನಡೆದು ರಾಮ ಮಂದಿರ ಅಧಿಕೃತವಾಗಿ ಉದ್ಘಾಟನೆಗೊಂಡ ನಂತರ, ಐದು ಶತಮಾನಗಳ ವಿವಾದ ಸದ್ಯಕ್ಕೆ ಕೊನೆಗೊಂಡಿದೆ. ಸುಪ್ರೀಂ ಕೋರ್ಟ್ ತೀರ್ಪು ನೀಡಿದ ನಂತರ, ವಿವಾದಿತ ನಿವೇಶನದ ಕೆಳಗೆ ಮತ್ತು ಮೇಲೆ ಏನಿತ್ತು, ಆ ಕಟ್ಟಡವನ್ನು ಒಡೆದುಹಾಕಿದ್ದು ಸರಿಯೇ, ತಪ್ಪೇ ಎಂಬಂತಹ ವಿಚಾರಗಳು ಹಿಂದೆಯೇ ಅಪ್ರಸ್ತುತವಾಗಿ ಹೋಗಿದ್ದವು. ಶಂಕರ ಮಠಗಳ ಶಂಕರಾಚಾರ್ಯರು ಎತ್ತಿದ್ದ ಆಕ್ಷೇಪಗಳು ಕೂಡ ಮಂದಿರ ಉದ್ಘಾಟನೆಯ ನಂತರ ರಾಮನಾಮ ಭಜನೆಯಲ್ಲಿ ಲೀನವಾಗಿವೆ. ಆದರೆ, ಸನಾತನ ಧರ್ಮದ ಪ್ರಬಲ ಪ್ರತಿಪಾದಕರಾದ ಸಾಧು ಸಂತರು, ಮಠ ಮಂದಿರಗಳ ಸ್ವಾಮಿಗಳು, ಹಿಂದೂ ಸಮಾಜದ ತಥಾಕಥಿತ ನಾಯಕರೆಲ್ಲರೂ ಉತ್ತರಿಸಲೇಬೇಕಾದ ಬಹುಮುಖ್ಯ ಪ್ರಶ್ನೆಯೊಂದನ್ನು ಅಯೋಧ್ಯೆಯಲ್ಲಿ ನಡೆದ ಧಾರ್ಮಿಕ ಸಮಾರಂಭ ಹುಟ್ಟುಹಾಕಿದೆ.

ವರ್ಣಾಶ್ರಮ ವ್ಯವಸ್ಥೆಯನ್ನು ಬಲವಾಗಿ ನಂಬಿರುವ ಸನಾತನ ಧರ್ಮದ ಪ್ರಕಾರ, ದೇವಾಲಯಗಳ ಮೂರ್ತಿ ಪ್ರತಿಷ್ಠಾಪನೆಯ ಅಧಿಕಾರ ಇರುವುದು ಬ್ರಾಹ್ಮಣರಿಗೆ ಮಾತ್ರ. ನಾಲ್ಕನೇ ಪಾದದಲ್ಲಿರುವ ಶೂದ್ರರಿಗೆ ಈ ಕಾರ್ಯ ನಿಷಿದ್ಧವಾದುದು ಮಾತ್ರವಲ್ಲ, ಅವರು ದೇವಾಲಯಗಳ ಗರ್ಭಗುಡಿಯನ್ನೂ ಪ್ರವೇಶಿಸುವಂತೆ ಇಲ್ಲ. ಹೊಲಿದ ಬಟ್ಟೆಯನ್ನು ಹಾಕಿಕೊಂಡು ಬಹಳಷ್ಟು ದೇವಾಲಯಗಳಲ್ಲಿ ಒಳಪ್ರವೇಶಿಸುವಂತಿಲ್ಲ. ಸಹಪಂಕ್ತಿ ಭೋಜನಕ್ಕೆ ಕೆಲವೆಡೆ ಅವಕಾಶವೇ ಇಲ್ಲ. ಲಿಖಿತ ಸಂವಿಧಾನವನ್ನು ಒಪ್ಪಿಕೊಂಡ ನಂತರವೂ ಅಲಿಖಿತ ಸಂವಿಧಾನದ ಈ ನಿಯಮಗಳನ್ನು ರೂಢಿಯಲ್ಲಿ ಬ್ರಾಹ್ಮಣರು ಮಾತ್ರವಲ್ಲ, ಬಹುತೇಕ ಬ್ರಾಹ್ಮಣೇತರ ಹಿಂದೂಗಳು ಕೂಡ ಶ್ರದ್ಧಾಭಕ್ತಿಯಿಂದ ಪಾಲಿಸುತ್ತಾ ಬರುತ್ತಿದ್ದಾರೆ.

ದೇಶದ 140 ಕೋಟಿ ಜನರನ್ನು ಸಾಕ್ಷಿಯಾಗಿ ಇಟ್ಟುಕೊಂಡು ಪ್ರಧಾನಿ ನರೇಂದ್ರ ಮೋದಿ ಅವರು ಬಾಲರಾಮನ ಪ್ರಾಣ ಪ್ರತಿಷ್ಠಾಪನೆಯನ್ನು ಕೈಯಾರೆ ನೆರವೇರಿಸುವ ಮೂಲಕ, ವರ್ಣಾಶ್ರಮ ವ್ಯವಸ್ಥೆಯ ಎಲ್ಲ ನಿಯಮಗಳನ್ನು ಒಂದೇ ಏಟಿಗೆ ಹೊಡೆದು ಹಾಕಿದ್ದಾರೆ. ಹಿಂದುಳಿದ ಗಾಣಿಗ ಜಾತಿಗೆ ಸೇರಿರುವ ನರೇಂದ್ರ ದಾಮೋದರದಾಸ್ ಮೋದಿಯವರು ಗರ್ಭಗುಡಿಯನ್ನು ಪ್ರವೇಶಿಸಿದ್ದು ಮಾತ್ರವಲ್ಲ, ತಾವೇ ಯಜಮಾನರಾಗಿ ಪೂಜಾ ಕಾರ್ಯಕ್ರಮದಲ್ಲಿ ಅರ್ಚಕರ ಜೊತೆ ಕೂತು, ಬಾಲರಾಮನ ಮೂರ್ತಿಯನ್ನು ಸ್ಪರ್ಶಿಸಿ ಪ್ರಾಣ ಪ್ರತಿಷ್ಠಾಪನೆ ಮಾಡಿದ್ದಾರೆ. ಅರ್ಚಕರ ಸಮ್ಮುಖದಲ್ಲಿ ಅವರಿಗಿಂತ ತುಸು ಎತ್ತರದ ಪೀಠದಲ್ಲಿ ನಿಂತು ಪ್ರತಿಷ್ಠಾಪನೆಯ ವಿಧಿವಿಧಾನಗಳನ್ನು ನೆರವೇರಿಸಿದ್ದಾರೆ. ವಿಪರ್ಯಾಸವೆಂದರೆ, ನರೇಂದ್ರ ಮೋದಿ ಅವರು ಯಾವ ರಾಮನ ಪ್ರಾಣ ಪ್ರತಿಷ್ಠಾಪನೆಯನ್ನು ಮಾಡಿದರೋ ಆ ಶ್ರೀರಾಮಚಂದ್ರನೇ ವರ್ಣಾಶ್ರಮ ವ್ಯವಸ್ಥೆಯ ಪ್ರಬಲ ಪ್ರತಿಪಾದಕ. ಮೋಕ್ಷ ಪ್ರಾಪ್ತಿಗಾಗಿ ಬೇಡರ ಕುಲದ ಶೂದ್ರ ಶಂಬೂಕ ನಡೆಸುತ್ತಿದ್ದ ತಪಸ್ಸಿನಿಂದಾಗಿ ಬ್ರಾಹ್ಮಣ ಕುಟುಂಬವೊಂದರ ಮಗು ಸತ್ತು ಹೋಯಿತು ಎಂಬ ಸಿಟ್ಟಿನಿಂದ ಶಂಬೂಕನ ತಲೆಯನ್ನೇ ಕಡಿದವನು ಶ್ರೀರಾಮಚಂದ್ರ. ನೂರು ವರ್ಷಗಳ ಹಿಂದೆ ಕೇರಳದ ಈಳವ ಸಮುದಾಯದ ನಾರಾಯಣ ಗುರುಗಳು ಶಿವಗಿರಿಯಲ್ಲಿ ಶಿವಲಿಂಗವನ್ನು ಕೈಯಿಂದಲೇ ಪ್ರತಿಷ್ಠಾಪಿಸಿ ವರ್ಣಾಶ್ರಮ ವ್ಯವಸ್ಥೆಗೆ ಸವಾಲು ಹಾಕಿದ್ದರು. ಸನಾತನ ಧರ್ಮದ ಬೆಂಬಲಿಗರು ನಾರಾಯಣ ಗುರುಗಳನ್ನು ವ್ಯಕ್ತಿಯಾಗಿ ತಿರಸ್ಕರಿಸದೇ ಇದ್ದರೂ ಇಂದಿಗೂ ಗುರುಗಳ ಚಿಂತನೆಯನ್ನು ಪುರಸ್ಕರಿಸಿಲ್ಲ.

ದೇವಾಲಯಗಳಲ್ಲಿ ಮೂರ್ತಿ ಪ್ರತಿಷ್ಠಾಪನೆ ಸಂಪೂರ್ಣವಾಗಿ ತಮ್ಮ ಪರಮಾಧಿಕಾರ ಎಂದು ಬ್ರಾಹ್ಮಣ ಅರ್ಚಕರು ಬಲವಾಗಿ ನಂಬಿದ್ದಾರೆ. ದೇಶದಲ್ಲಿ ನಿತ್ಯ ನಡೆಯುವ ನೂರಾರು ದೇವಾಲಯಗಳ ಗರ್ಭಗುಡಿಯ ದೇವ-ದೇವತೆಗಳ ಪ್ರತಿಷ್ಠಾಪನೆಯನ್ನು ಅವರೇ ಮಾಡುತ್ತಿದ್ದಾರೆ. ತಮಿಳುನಾಡಿನಲ್ಲಿ ಮಾತ್ರ ಧಾರ್ಮಿಕ ದತ್ತಿ ಇಲಾಖೆಗೆ ಸೇರಿರುವ ದೇವಾಲಯಗಳಲ್ಲಿ ಎಲ್ಲ ಜಾತಿಗೆ ಸೇರಿರುವ, ಆಗಮಶಾಸ್ತ್ರದಲ್ಲಿ ತರಬೇತಿ ಪಡೆದಿರುವ ಅರ್ಚಕರನ್ನು ನೇಮಿಸಲಾಗಿದೆ. ಸರ್ಕಾರದ ಈ ನಿರ್ಧಾರ ಕೂಡ ನ್ಯಾಯಾಲಯದ ಅಂಗಳದಲ್ಲಿದೆ. ಕೇರಳದಲ್ಲಿ ನಾರಾಯಣ ಗುರುಗಳು ವರ್ಣಾಶ್ರಮ ವ್ಯವಸ್ಥೆಯನ್ನು ಪ್ರಶ್ನಿಸಿ, ಪರ್ಯಾಯವಾಗಿ ಶೂದ್ರರಿಗಾಗಿಯೇ ದೇವಾಲಯಗಳನ್ನು ಸ್ಥಾಪಿಸಿದ್ದು ಮಾತ್ರವಲ್ಲ ಅಲ್ಲಿ ಶೂದ್ರ ಅರ್ಚಕರನ್ನು ನೇಮಿಸಿದ್ದರು. ಈ ಅರ್ಚಕರ ತರಬೇತಿಗೆ ‘ಬ್ರಹ್ಮಸಂಘ’ವನ್ನು ಪ್ರಾರಂಭಿಸಿದ್ದರು. ಹೀಗಿದ್ದರೂ ಅವರು ಸ್ಥಾಪಿಸಿರುವ ದೇವಾಲಯಗಳಲ್ಲಿಯೂ ಈಗ ಬ್ರಾಹ್ಮಣ ಅರ್ಚಕರ ಪ್ರವೇಶವಾಗಿದೆ.

ಕಾನೂನಿನ ಭಯದಿಂದಾಗಿ ಇಂದು ದೇವಾಲಯಗಳಿಗೆ ಶೂದ್ರರು ಮತ್ತು ದಲಿತರ ಪ್ರವೇಶಕ್ಕೆ ಅವಕಾಶ ನೀಡಲಾಗಿದ್ದರೂ ಅವರಿಗೆ ಗರ್ಭಗುಡಿಯನ್ನು ಪ್ರವೇಶಿಸುವ ಮತ್ತು ದೇವರಮೂರ್ತಿಯನ್ನು ಸ್ಪರ್ಶಿಸಿ ಪೂಜಿಸುವ ಅಧಿಕಾರ ಇಲ್ಲ. ಈ ದೇವಾಲಯಗಳಲ್ಲಿರುವ ಅರ್ಚಕರು ಇಂದಿಗೂ ಭಕ್ತರ ಕೈಗಳನ್ನು ಮುಟ್ಟದೆ ದೂರದಿಂದಲೇ ಪ್ರಸಾದವನ್ನು ಕೊಡುತ್ತಿರುತ್ತಾರೆ.

ಕುರುಬ ಸಮುದಾಯದ ಕನಕದಾಸನಿಗೆ ಶ್ರೀಕೃಷ್ಣನ ದರ್ಶನಕ್ಕೆ ಅವಕಾಶ ನಿರಾಕರಿಸಿದ್ದ ಉಡುಪಿಯ ಶ್ರೀಕೃಷ್ಣ ಮಠ ಈಗಲೂ ವರ್ಣಾಶ್ರಮ ವ್ಯವಸ್ಥೆಯನ್ನು ಚಾಚೂ ತಪ್ಪದೆ ಪಾಲಿಸಿಕೊಂಡು ಬರುತ್ತಿದೆ. ಅಲ್ಲಿ ಈಗಲೂ ಪಂಕ್ತಿಭೇದ ಅನುಸರಿಸಲಾಗುತ್ತಿದೆ. ಇಂತಹ ಧರ್ಮ ಕರ್ಮಠ ಮಠದ ವಿಶ್ವಪ್ರಸನ್ನತೀರ್ಥ ಸ್ವಾಮಿಗಳು, ಮೋದಿಯವರ ಹೆಗಲಿಗೆ ಹೆಗಲು ತಾಗಿಸಿ ನಿಂತು ಬಾಲರಾಮನ ಪ್ರಾಣ ಪ್ರತಿಷ್ಠಾಪನೆಯ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ. ಅಂದರೆ ಅವರು, ಶೂದ್ರರು ಕೂಡ ದೇವಾಲಯಗಳಲ್ಲಿ ಮೂರ್ತಿಗಳ ಪ್ರತಿಷ್ಠಾಪನೆಯನ್ನು ಕೈಯಾರೆ ಮಾಡಬಹುದು ಎಂದು ಒಪ್ಪಿಕೊಂಡಿದ್ದಾರೆಯೇ?




ಬಾಲರಾಮನ ಪ್ರಾಣ ಪ್ರತಿಷ್ಠಾಪನೆಯ ಪುಣ್ಯ ಕಾರ್ಯಕ್ಕಾಗಿ ತಾವು 11 ದಿನಗಳ ಕಠಿಣ ವ್ರತ ಆಚರಿಸಿದ್ದಾಗಿಯೂ ಮೋದಿ ಹೇಳಿಕೊಂಡಿದ್ದರು. ಇದರ ಅರ್ಥ ದೇವಾಲಯಗಳ ಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆಯಂತಹ ಧಾರ್ಮಿಕ ಕಾರ್ಯಕ್ರಮಗಳಲ್ಲಿ ನೇರವಾಗಿ ಪಾಲ್ಗೊಳ್ಳಲು ಜಾತಿ-ವರ್ಣ ಮುಖ್ಯವಲ್ಲ, ವ್ರತ, ನೇಮ, ನಿಷ್ಠೆಗಳಷ್ಟೇ ಮುಖ್ಯ ಎಂದಾಯಿತು. ಅವರ ಈ ನಡೆಯನ್ನೇ ಅನುಸರಿಸಿ ಮುಂದಿನ ದಿನಗಳಲ್ಲಿ, ಶೂದ್ರ ವರ್ಗಕ್ಕೆ ಸೇರಿರುವ ಮುಖ್ಯಮಂತ್ರಿಗಳು, ಸಚಿವರು, ವಿವಿಧ ಸಮುದಾಯಗಳ ನಾಯಕರು ಕೈಯಾರೆ ದೇವಸ್ಥಾನಗಳಲ್ಲಿ ಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ ನಡೆಸಿದರೆ ಸನಾತನ ಧರ್ಮದ ಪ್ರತಿಪಾದಕರು ಒಪ್ಪಿಕೊಳ್ಳುವರೇ?

ಇವೆಲ್ಲಕ್ಕಿಂತಲೂ ಮುಖ್ಯವಾದುದು, ಇಂದು ದೇಶದ ಸಮಸ್ತ ಹಿಂದೂ ಸಮುದಾಯದ ಪ್ರಾತಿನಿಧಿಕ ಸಂಸ್ಥೆಯೆಂದು ಹೇಳಿಕೊಳ್ಳುತ್ತಿರುವ ಆರ್‌ಎಸ್‌ಎಸ್ ನಿಲುವೇನು ಎಂಬುದು. ಮನುಧರ್ಮವನ್ನು ಈಗಲೂ ಪ್ರಬಲವಾಗಿ ಪ್ರತಿಪಾದಿಸುವ ಮತ್ತು ಗುಪ್ತವಾಗಿ ವರ್ಣಾಶ್ರಮ ವ್ಯವಸ್ಥೆಯನ್ನು ಸಮರ್ಥಿಸಿಕೊಂಡು ಬರುತ್ತಿರುವ ಆರ್‌ಎಸ್‌ಎಸ್, ರಾಜಕೀಯ ಒತ್ತಡ ಮತ್ತು ಅನಿವಾರ್ಯ ಕಾರಣಗಳಿಂದಾಗಿ, ಹಿಂದುಳಿದ ಮತ್ತು ದಲಿತ ನಾಯಕರನ್ನು ಬಿಜೆಪಿಯೊಳಗೆ ಬೆಳೆಸುವುದನ್ನು ವಿರೋಧಿಸಲು ಹೋಗಿಲ್ಲ. ಆದರೆ ಧಾರ್ಮಿಕ ಕ್ಷೇತ್ರದಲ್ಲಿ ಇಂತಹ ಯಾವುದೇ ಸುಧಾರಣಾ ಕ್ರಮಗಳನ್ನು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ವಿರೋಧಿಸುತ್ತಾ ಬಂದಿದೆ. ‘ಹಿಂದೂಗಳೆಲ್ಲರೂ ಒಂದು’ ಎಂದು ಹಿಂದಿನ ನೂರು ವರ್ಷಗಳಿಂದ ಘೋಷಣೆ ಕೂಗುತ್ತಾ ಬಂದಿರುವ ಆರ್‌ಎಸ್‌ಎಸ್‌ನಲ್ಲಿ ಇಂದಿಗೂ ಶೂದ್ರ ಸಮುದಾಯದವರು ಸರಸಂಘ ಚಾಲಕರಾಗಿಲ್ಲ, ಸಂಘಟನೆಯ ಯಾವ ಪ್ರಮುಖ ಸ್ಥಾನಗಳಲ್ಲೂ ಶೂದ್ರರಿಗೆ ಅವಕಾಶ ನೀಡಲಾಗಿಲ್ಲ. ಶೂದ್ರರೇನಿದ್ದರೂ ಬಜರಂಗದಳ, ಜಾಗರಣ ವೇದಿಕೆಯಂತಹ ಹೊಡಿಬಡಿ ಸಂಘಟನೆಗಳಿಗೆ ಸೀಮಿತ.

ಈ ರೀತಿ ಹಿಂದೂ ಮೂಲಭೂತವಾದವನ್ನೇ ಉಸಿರಾಡುತ್ತಾ ಬಂದಿರುವ ಆರ್‌ಎಸ್‌ಎಸ್, ನೂರು ವರ್ಷ ಪೂರ್ಣಗೊಳಿಸುವ ಈ ಸಂದರ್ಭದಲ್ಲಿ ತನ್ನ ವಿಚಾರಧಾರೆಯನ್ನು ಬದಲಿಸಿಕೊಂಡಿದೆಯೇ? ಇಲ್ಲವೇ ಮೋದಿಯವರು ರಾಜಕೀಯ ಲಾಭಕ್ಕಾಗಿ ಹಿಂದುತ್ವದ ಮೂಲ ಸಿದ್ಧಾಂತದ ಜೊತೆಯಲ್ಲಿಯೇ ರಾಜಿ ಮಾಡಿಕೊಳ್ಳುತ್ತಿರುವುದನ್ನು ವಿರೋಧಿಸಲಾಗದಷ್ಟು ದುರ್ಬಲವಾಗಿದೆಯೇ? ಮೋದಿಯವರ ರಾಜಕೀಯ ಪ್ರವೇಶ ನಂತರದ 23 ವರ್ಷಗಳ ಅವಧಿಯನ್ನು ಅವಲೋಕಿಸಿದರೆ, ಎರಡನೇ ಅಭಿಪ್ರಾಯವೇ ನಿಜ ಎಂದು ಅನಿಸುತ್ತಿದೆ. ಒಂದು ಕಾಲದಲ್ಲಿ ಬಿಜೆಪಿಯಿಂದ ಪ್ರಧಾನಿ ಇಲ್ಲವೇ ಮುಖ್ಯಮಂತ್ರಿ ಯಾರಾಗಬೇಕೆಂದು ಆರ್‌ಎಸ್‌ಎಸ್ ನಿರ್ಧರಿಸುತ್ತಿತ್ತು. ಇಂದು ಅದರ ಸರಸಂಘ ಚಾಲಕ ಯಾರಾಗಬೇಕೆಂದು ನಿರ್ಧರಿಸುವ ಸ್ಥಿತಿಯಲ್ಲಿ ನರೇಂದ್ರ ಮೋದಿ ಅವರಿದ್ದಾರೆ.

ರಾಮ ಮಂದಿರ ಉದ್ಘಾಟನೆಯಿಂದ ಇಡೀ ದೇಶದಲ್ಲಿ ಹಿಂದುತ್ವದ ಪುನರುತ್ಥಾನವಾಗಲಿದೆ ಎಂದು ಸಂಭ್ರಮಿಸುತ್ತಿರುವವರು, ವರ್ಣಾಶ್ರಮ ವ್ಯವಸ್ಥೆಯನ್ನು ಉಲ್ಲಂಘಿಸುವ ಮೂಲಕ ಸನಾತನ ಧರ್ಮಕ್ಕೆ ಮೋದಿ ಅವರು ಹಾಕಿರುವ ಸವಾಲನ್ನು ಹೇಗೆ ಸ್ವೀಕರಿಸುತ್ತಾರೆ ಎನ್ನುವುದನ್ನು ಕಾದು ನೋಡಬೇಕು.

ಚುರುಮುರಿ



ಷಟರ್ ರಾಜಕೀಯ!

● ತುರುವೇಕೆರೆ ಪ್ರಸಾದ್

‘ರಾಜಕೀಯದವರ ರಿವರ್ಸ್ ಕವಾಯತು ಶುರುವಾಗದೆ ಕಣ್ಲಾ! ಅಲ್ಲಿ ಇಲ್ಲಿ ವಲಸೆ ಓದೋರೆಲ್ಲಾ ತಮ್ ತಮ್ ಪಕ್ಷಕ್ಕೆ ವಾಪಸ್ ಬರೋ ಅಂಗೆ ಕಾಣ್ತದೆ’ ಎಂದ ಗುದ್ಲಿಂಗ.

‘ಓಹೋ! ಕೈ ಷಟರ್ ಎಳೆದು ವಾಪಸ್ ಕಮಲದ ಶೆಲ್ಟರ್‌ಗೆ ಬಂದೋರ್ ಬಗ್ಗೆ ಯೋಳ್ತಿದೀಯಾ ನೀನು?’ ಕೇಳಿದ ಮಾಲಿಂಗ.

‘ಊ್ಞಂ ಕಣ್ಲಾ. ಈಗೀಗ ಪಕ್ಷಾಂತರಕ್ಕೂ ಬೆಲೆ ಇಲ್ದಂಗ್ ಆಗೋಗದೆ. ಒಂದು ಪಾಲ್ಟಿ ಬುಟ್ ಓದ್ಮೇಲೆ ಒಂದೆಲ್ಡು ಮೂರು ವರ್ಷವಾದ್ರೂ ಇರಂಗೇ ಇಲ್ಲ, ಪುಸಕ್ಕಂತ ವಾಟ ಕೀಳ್ತಾರೆ’.

‘ಯಾವ್ದಾರಾ ಒಂದು ರೀತಿ ಕಮಾಯಿ ಇಲ್ಲ ಅಂದ್ರೆ, ಥೂ ಅಂತ ಉಗಿದು ವಾಪಸ್ ಬತ್ತಾರೆ. ಇದು ಕವಾಯತು ಅಲ್ಲ ಕಮಾಯಿ ಥೂ!’ ಎಂದ ಕಲ್ಲೇಶಿ.

‘ಇಂಗ್ ಓದ ಪುಟ್ಟ ಬಂದ ಪುಟ್ಟ ಅಂತ ಆದ್ರೆ ಏನ್ಲಾ ಪ್ರಯೋಜನ ಐತೆ?! ತೆನೆ ಅಧ್ಯಕ್ಷರಾಗಿದ್ದ ಕೂಲಿಂಗ್ ಗ್ಲಾಸ್ ಸಾಹೇಬ್ರು ನೋಡು, 6-7 ಸಾರಿ ಪಕ್ಷಾಂತರ ಮಾಡಿ ಪಟ್ಟ, ಪೀಠ ಎಲ್ಲದರ ರುಚಿ ನೋಡುದ್ರು’.

‘ಊ್ಞಂ ಕಣ್ಲಾ, ನಮ್ ಕೇರಿಹಕ್ಕಿನೂ ಎಲ್ಲಾ ಪಕ್ಷದಲ್ಲೂ ರೆಕ್ಕೆ ಬಿಚ್ಚಿ ಹೊರಳಿ, ಗುಂಜು ಅಂಟಿಸ್ಕೊಂಡು ಬಂದಿತ್ತು. ಅಂಗೇ ಕೈ-ತೆನೆ ಹೈಬ್ರಿಡ್ ಹಕ್ಕಿ ಪುಕ್ಕನೂ ತರ್ದು ಆಕಿತ್ತು’.

‘ಸ್ಥಾನ ಮಾನ ಎಲ್ಲಾ ಕೊಟ್ಟಿದ್ರೂ ಇವರು ಇಂಗ್ ಓಗಿ ಅಂಗ್ ವಾಪಸ್ ಬಂದವ್ರಲ್ಲ’.

‘ಹೋದ ಕಡೆ ಅರಳಬೇಕು, ಏನಾದ್ರೂ ಮೆತ್ಕಳೋ ಹಾಗೆ ಹೊರಳಬೇಕು, ಇಲ್ಲ ವಾಪಸ್ ಮರಳಬೇಕು. ಎಲ್ಲಾ ಕೊಟ್ಟವ್ರೆ ಅಂದ್ರೆ ಪುಗಸಟ್ಟೆನಾ? ಶಾಸಕರ ಆಪರೇಶನ್ ಮಾಡಕ್ ಬರ್ಬೇಕು, ಇಲ್ಲ ಸಂಸದರ ಸೀಟಿಗೆ ಪ್ರಿಪರೇಶನ್ ಮಾಡ್ಬೇಕು. ಇಲ್ಲ ಅಂದ್ರೆ ಡಿಫೆಕ್ಷನ್’ ಎಂದ ಪರ್ಮೇಶಿ.

‘ಅದಕ್ಕೇ ಯೋಳಾದು, ರೋಲಿಂಗ್ ಸ್ಟೋನ್ ಗ್ಯಾದರ್ಸ್ ನೋ ಮಾಸ್, ಉರುಳೋ ಕಲ್ಲಿಗೆ ಏನೂ ಮೆತ್ಕಳಲ್ಲ ಅಂತ’.

‘ಅಯ್ಯೋ ಏನ್ ಮೆತ್ಕಳುತ್ತೋ ಬಿಡುತ್ತೋ, ಇಂಗೇ ಎಲ್ಲಾ ಕಲ್ಲುಗಳು ಉರುಳಿ ನಮ್ ತಲೆ ಮೇಲೆ ತಪಕ್ ಅಂತ ಬೀಳುತ್ವಲ್ಲ. ಇಂತೋರ್ ಹಿಂದಿರೋ ನಮ್ಮಂತ ಕಾರ್ಯಕರ್ತರ ಮೂತಿಗೂ ಎಲ್ಲೂ ಏನೂ ಮೆತ್ಕಳ್ದಂಗ್ ಆಗೋಗದೆ’ ಎಂದು ಹಲುಬಿದ ಗುದ್ಲಿಂಗ.

ಚರ್ಚೆ

ದ್ವಂದ್ವ ಧೋರಣೆ ಬದಲಾಗಲಿ

ಶಿಕ್ಷಕ ವೃತ್ತಿ ತುಂಬಾ ಜವಾಬ್ದಾರಿಯುತವಾದುದು ಎಂಬ ಪ್ರಜ್ಞೆಯನ್ನು ನಾವು ಎಚ್ಚರಿಕೆಯಿಂದ ರೂಢಿಸಿಕೊಳ್ಳಬೇಕಿದೆ

● ಪು.ಸೂ.ಲಕ್ಷ್ಮೀನಾರಾಯಣ ರಾವ್

‘ಗುರು ಪರಂಪರೆ: ಬದಲಾಯಿತೇ ವ್ಯಾಖ್ಯಾನ?!’ ಎಂಬ ದೀಪಾ ಹಿರೇಗುತ್ತಿ ಅವರ ಲೇಖನ (ಸಂಗತ, ಜ. 24), ಗುರು- ಶಿಷ್ಯ ಸಂಬಂಧದಲ್ಲಿನ ಇತ್ತೀಚೆಗಿನ ಬದಲಾವಣೆಗಳನ್ನು ಅಥವಾ ಬೆಳವಣಿಗೆಗಳನ್ನು ಕುರಿತದ್ದಾಗಿದ್ದು, ಚಿಂತನಾರ್ಹವಾಗಿದೆ.

ಮಲೆನಾಡಿನ ಕೆಲವು ಶಾಲಾ ವಾಹನಗಳಲ್ಲಿ ಮಕ್ಕಳು ಬಸ್ ಹತ್ತಿದಾಗ, ಸೀಟು ಖಾಲಿ ಇಲ್ಲದಿದ್ದರೆ ಶಿಕ್ಷಕರೇ ಎದ್ದು ಮಕ್ಕಳಿಗೆ ಸೀಟು ಕೊಡಬೇಕಾದ ಸ್ಥಿತಿ ತಲೆದೋರಿದೆ ಎಂದೂ, ಒಂದುವೇಳೆ ಶಿಕ್ಷಕರು ಸೀಟು ಬಿಟ್ಟುಕೊಡದಿದ್ದರೆ ಪೋಷಕರೇ ಮುಖ್ಯೋಪಾಧ್ಯಾಯರಿಗೆ ಅಥವಾ ಆಡಳಿತ ಮಂಡಳಿಗೆ ದೂರು ಸಲ್ಲಿಸುವ ಸ್ಥಿತಿ ಇದೆ ಎಂದೂ ಹೇಳಿದ್ದಾರೆ. ಇದು, ಪ್ರಸ್ತುತ ಸಮಾಜದಲ್ಲಿ ಶಿಕ್ಷಕರ ಸ್ಥಾನಮಾನದ ವಿಷಯದಲ್ಲಿ ಇರುವ ವಾಸ್ತವ ಸಂಗತಿ!

ಮತ್ತೊಂದು ಕಡೆ, ‘ಗುರುಬ್ರಹ್ಮ ಗುರುವಿಷ್ಣು...’, ಎಂದೂ, ‘ನಹಿ ಗುರೋಃ ಪರಂ ದೈವತಂ’ ಎಂದೆಲ್ಲಾ ಗುರುವನ್ನು ದೈವತ್ವಕ್ಕೆ ಏರಿಸುವ ಉತ್ಪ್ರೇಕ್ಷಿತ ಭಾಷಣೋಕ್ತಿಗಳಿಗೂ ನಾವು ಸಾಕ್ಷಿಗಳಾಗಿದ್ದೇವೆ.

ಈ ಸಂದರ್ಭದಲ್ಲಿ, 12ನೇ ಶತಮಾನದಲ್ಲಿದ್ದ ಅಲ್ಲಮಪ್ರಭುವಿನ ವಚನವೊಂದು ನೆನಪಿಗೆ ಬರುತ್ತಿದೆ:


**‘ಕೃತಯುಗದಲ್ಲಿ ಶ್ರೀ ಗುರು ಶಿಷ್ಯಂಗೆ ಬಡಿದು ಬುದ್ಧಿಯ
ಕಲಿಸಿದಡೆ, ಆಗಲಿ ಮಹಾಪ್ರಸಾದವೆಂದೆನಯ್ಯಾ|
ತ್ರೇತಾಯುಗದಲ್ಲಿ ಶ್ರೀ ಗುರು ಶಿಷ್ಯಂಗೆ ಬೈದು
ಬುದ್ಧಿಯ ಕಲಿಸಿದಡೆ, ಆಗಲಿ
ಮಹಾಪ್ರಸಾದವೆಂದೆನಯ್ಯಾ|
ದ್ವಾಪರಯುಗದಲ್ಲಿ ಶ್ರೀ ಗುರು ಶಿಷ್ಯಂಗೆ ಝಂಕಿಸಿ
ಬುದ್ಧಿಯ ಕಲಿಸಿದಡೆ, ಆಗಲಿ
ಮಹಾಪ್ರಸಾದವೆಂದೆನಯ್ಯಾ|
ಕಲಿಯುಗದಲ್ಲಿ ಶ್ರೀ ಗುರು ಶಿಷ್ಯಂಗೆ ವಂದಿಸಿ
ಬುದ್ಧಿಯ ಕಲಿಸಿದಡೆ, ಆಗಲಿ
ಮಹಾಪ್ರಸಾದವೆಂದೆನಯ್ಯಾ|
ಗುಹೇಶ್ವರಾ, ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ
ಅನು ಬೆರಗಾದೆನು|’**

ಕಾಲಾನುಕಾಲಕ್ಕೆ ಸಂಭವಿಸುವ ಸ್ಥಿತ್ಯಂತರಗಳನ್ನು ಅರಿತು ನಡೆಯಬೇಕೆಂಬ ಸೂಚನೆಯನ್ನು ಈ ವಚನದಲ್ಲಿ ಸರಳವಾಗಿ ನಿರೂಪಿಸಲಾಗಿದೆ.

ಮನೆಗಳಲ್ಲಿ ಪೋಷಕರಾದವರು ಮಕ್ಕಳ ಮುಂದೆ ಉಪಾಧ್ಯಾಯರ ಬಗೆಗೆ ಕೇವಲವಾಗಿ ಮಾತನಾಡಿಕೊಳ್ಳುವುದರ ಪರಿಣಾಮವಾಗಿ ವಿದ್ಯಾರ್ಥಿಗಳಲ್ಲಿ ಶಿಕ್ಷಕರ ಬಗ್ಗೆ ಉದಾಸೀನ ಭಾವ ಬೆಳೆಯುತ್ತದೆ. ಪೋಷಕರೇ ಏಕೆ, ಶಿಕ್ಷಣ ಕ್ಷೇತ್ರದ ರೂವಾರಿಗಳಾದ ಶಿಕ್ಷಣ ಇಲಾಖೆಯ ಅಧಿಕಾರಿಗಳಲ್ಲಿ, ಸಿಬ್ಬಂದಿ ವರ್ಗದಲ್ಲಿ ಮತ್ತು ಆಡಳಿತ ಮಂಡಳಿಯವರಲ್ಲಿ ಕೂಡ ಶಿಕ್ಷಕರ ಬಗ್ಗೆ ಅಗೌರವ ಮತ್ತು ಉದಾಸೀನ ಭಾವ ಇರುವುದನ್ನು ಕಾಣುತ್ತೇವೆ. ಸ್ಥಿತಿವಂತ ಕುಟುಂಬಗಳಲ್ಲಿ ಹೆಚ್ಚಿನವರು ತಮ್ಮ ಮಗಳನ್ನು ಶಿಕ್ಷಕನಿಗೆ ಕೊಟ್ಟು ಮದುವೆ ಮಾಡುವುದನ್ನು ಆದ್ಯತೆಯನ್ನಾಗಿ ಇಟ್ಟುಕೊಂಡಿರುವುದಿಲ್ಲ. ಶಿಕ್ಷಣದ ವ್ಯಾಪಾರೀಕರಣ ಸಹ ಈ ಬದಲಾವಣೆಗಳಿಗೆ ಕಾರಣವಾಗಿದೆ. ನಮ್ಮ ಸಮಾಜದಲ್ಲಿ ಇರುವ ಈ ಇಬ್ಬಂದಿತನ ಅಥವಾ ದ್ವಂದ್ವ ಮನೋಭಾವವನ್ನು ಮೊದಲು ಸರಿಪಡಿಸಿಕೊಳ್ಳಬೇಕಾಗುತ್ತದೆ.

ಸಮಾಜದ ಹಿತಕ್ಕೆ ಅಗತ್ಯವಿರುವ ಎಲ್ಲ ವೃತ್ತಿಗಳೂ ಹುದ್ದೆಗಳೂ ಪವಿತ್ರವೇ. ಸಮಾಜದ ಸ್ವಾಸ್ಥ್ಯಕ್ಕೆ ಘಾತವನ್ನು ಉಂಟುಮಾಡುವ ಯಾವುದೇ ಚಟುವಟಿಕೆ ಅಪವಿತ್ರ ಎಂದು ಭಾವಿಸಬೇಕಾಗುತ್ತದೆ. ಆದರೆ ಶಿಕ್ಷಕರಾದವರು, ಎಳೆಯರಾದ ಜೀವಂತ ಚೇತನಗಳೊಂದಿಗೆ ವ್ಯವಹರಿಸುತ್ತಾರಾದ್ದರಿಂದ ವಿಶೇಷ ತರಬೇತಿ ಹಾಗೂ ಮುನ್ನೆಚ್ಚರಿಕೆ ಬೇಕಾಗುತ್ತದೆ. ಪೋಷಕರು ತಮ್ಮ ಮಕ್ಕಳ ಪುರೋಭಿವೃದ್ಧಿಯ ದೃಷ್ಟಿಯಿಂದ ಹಣ, ಅಧಿಕಾರವೆಂಬ ಪ್ರತಿಷ್ಠೆಯಾಚೆಗೆ ಶಿಕ್ಷಕರ ಹುದ್ದೆಯ ಘನತೆಯನ್ನು ಪರಿಗಣಿಸಬೇಕಾಗುತ್ತದೆ.

ಶಿಕ್ಷಕರೂ ತಮ್ಮನ್ನು ತಾವು ಆ ಅರ್ಹತೆಗೆ ಅಣಿ ಮಾಡಿಕೊಳ್ಳಬೇಕಾಗುತ್ತದೆ. ಸಾಮಾನ್ಯವಾಗಿ ಇಲ್ಲಿ ಮಕ್ಕಳ ತಪ್ಪು ಏನೂ ಇರುವುದಿಲ್ಲ. ಮಕ್ಕಳ ಎಲ್ಲ ವರ್ತನೆಗಳಿಗೆ ಪೋಷಕರು, ಸಮಾಜ ಹಾಗೂ ಶಿಕ್ಷಕರ ಪ್ರಭಾವವೇ ಕಾರಣವಾಗಿರುತ್ತದೆ. ‘ಮೇಷ್ಟ್ರು’ ಮತ್ತು ‘ಮಕ್ಕಳ’ ನಡುವಿನ ಸಂಬಂಧ ಒಂದು ವಿಶಿಷ್ಟವಾದ ಸಾಮರಸ್ಯದಿಂದ ಸಾಗಬೇಕಾಗುತ್ತದೆ.



ಮೇಷ್ಟ್ರು ತಾನು ‘ಗುರು’ವು, ವಿಷ್ಣು, ಬ್ರಹ್ಮ ಎಂಬ ಭ್ರಮೆಯನ್ನು ವರ್ಜಿಸಬೇಕಾಗಿದೆ. ಸಮಾಜವು ‘ಶಿಕ್ಷಕ- ವಿದ್ಯಾರ್ಥಿ’ ಸಂಬಂಧದ ಸೂಕ್ಷ್ಮವನ್ನು ಗ್ರಹಿಸಿ ಮೇಷ್ಟ್ರುಗಳ ಬಗೆಗಿನ ನಿಕೃಷ್ಟ ಭಾವವನ್ನು ತೊಲಗಿಸಿಕೊಳ್ಳಬೇಕಿದೆ. ರಾಮಕೃಷ್ಣ ಪರಮಹಂಸ- ವಿವೇಕಾನಂದ, ವ್ಯಾಸರಾಯರು- ಕನಕ, ಪುರಂದರರು ಅಂತೆಯೇ ಸಾಕ್ರಟೀಸ್- ಪ್ಲೇಟೊ- ಅರಿಸ್ಟಾಟಲ್ ಅವರಂತಹ ಅಪರೂಪದಲ್ಲಿ ಅಪರೂಪವಾದ ಸಂಬಂಧಗಳ ಕುರಿತಂತೆ ‘ಗುರುಬ್ರಹ್ಮ, ಗುರುವಿಷ್ಣು, ಗುರುದೇವೋ ಮಹೇಶ್ವರಃ’ ಎಂಬಂತಹ ರೂಪಕಗಳು ಹುಟ್ಟಿಕೊಂಡಿರಬಹುದು ಮತ್ತು ಅವು ನಿಜವೂ ಆಗಿರಬಹುದು. ಆದರೆ ಅದನ್ನೇ ಇಂದಿನ ಶಿಕ್ಷಣ ವ್ಯವಸ್ಥೆಯ ಶಿಕ್ಷಕರು- ವಿದ್ಯಾರ್ಥಿಗಳ ನಡುವಿನ ಸಂಬಂಧಕ್ಕೆ ಅನ್ವಯಿಸುವುದು ಸರಿಯಾಗಲಾರದು.

ಇದನ್ನು ಅರಿತಾಗ ಮಾತ್ರ ಮಕ್ಕಳು ಮತ್ತು ಮೇಷ್ಟ್ರುಗಳ ನಡುವಿನ ಬಾಂಧವ್ಯ ಸಹಜವಾದುದು, ಮಾನವೀಯವಾದುದು ಹಾಗೂ ಮಧುರವಾದುದು ಆಗುತ್ತದೆ. ಆಗ, ಗೌರವ ಕೊಡಲಿಲ್ಲ, ನಮಸ್ಕಾರ ಹಾಕಲಿಲ್ಲ, ಎದ್ದೇಳಲಿಲ್ಲ ಎಂಬಂತಹ ಸಣ್ಣಪುಟ್ಟ ಸಮಸ್ಯೆಗಳು ಉದ್ಭವವೇ ಆಗುವುದಿಲ್ಲ.

ಲೇಖಕ: ನಿವೃತ್ತ ಶಿಕ್ಷಕ

ವಾಚಕರ ವಾಣಿ

ಪುಸ್ತಕ ಸಲ್ಲಿಕೆ: ಅವಧಿ ವಿಸ್ತರಿಸಿ

ರಾಜ್ಯ ಗ್ರಂಥಾಲಯ ಇಲಾಖೆಯು ಇತ್ತೀಚೆಗೆ ಏಕಗವಾಕ್ಷಿ ಯೋಜನೆಗೆ ಲೇಖಕರಿಂದ 2023ರ ಕೃತಿಗಳನ್ನು ಆಹ್ವಾನಿಸಿರುವುದು ಸಂತೋಷದ ಸಂಗತಿ. ಆದರೆ ಕೊನೆಯ ದಿನಾಂಕದೊಳಗೆ ತಮ್ಮ ಕೃತಿಗಳನ್ನು ಬೆಂಗಳೂರಿನಲ್ಲಿರುವ ಕೇಂದ್ರ ಗ್ರಂಥಾಲಯ ಇಲಾಖೆಯಲ್ಲಿ ಕಾಪಿರೈಟ್ ನೋಂದಣಿ ಮಾಡಿಸಿದ ನಂತರ, ವಿಶ್ವೇಶ್ವರಯ್ಯ ಗೋಪುರದಲ್ಲಿರುವ ಮುಖ್ಯ ಗ್ರಂಥಾಲಯ ಅಧಿಕಾರಿಗಳ ಕಚೇರಿಗೆ ಸಲ್ಲಿಸಬೇಕಾಗಿದೆ. ಈ ಕೆಲಸ ನಿಗದಿತ ಅವಧಿಯಲ್ಲಿ ಆಗುತ್ತದೋ ಇಲ್ಲವೋ ಎನ್ನುವ ಚಿಂತೆ ಲೇಖಕರನ್ನು ಕಾಡುತ್ತಿದೆ.

ಬೆಂಗಳೂರಿನಿಂದ 600- 700 ಕಿಲೊ ಮೀಟರ್ ದೂರದಲ್ಲಿರುವ ಗ್ರಾಮೀಣ ವಲಯದ ಲೇಖಕರು ಹೆಚ್ಚು ತೊಂದರೆಗೆ ಒಳಗಾಗಲಿದ್ದಾರೆ. ತಾವು ಬರೆದ ಹಸ್ತಪ್ರತಿಗಳನ್ನು ಪಟ್ಟಣದಲ್ಲಿರುವ ಸೈಬರ್ ಸೆಂಟರ್‌ಗೋ ಮುದ್ರಣಾಲಯಕ್ಕೋ ಹೋಗಿ ಬೆರಳಚ್ಚು ಮಾಡಿಸಿ, ಅದಕ್ಕಾಗಿ 20-30 ಸಾವಿರ ರೂಪಾಯಿಯನ್ನು ಸಾಲಸೋಲ ಮಾಡಿಕೊಂಡಿರುತ್ತಾರೆ. ಅವರೆಲ್ಲ ಇನ್ನೇನು ಪುಸ್ತಕ ಇಂದೋ ನಾಳೆ ಕೈಗೆ ಬರುತ್ತದೆ ಎಂದು, ಮಳೆಗಾಗಿ ರೈತ ಕಾದಂತೆ ಪುಸ್ತಕ ಪ್ರಕಟಣೆಗಾಗಿ ಕಾದು ಕುಳಿತಿರುತ್ತಾರೆ. ಹೀಗಿರುವಾಗ, ಇಲಾಖೆಯ ಆದೇಶದ ಅನುಸಾರ ಈ 31ರೊಳಗೇ ಪುಸ್ತಕಗಳನ್ನು ಸಲ್ಲಿಸಬೇಕು. ರಾಜಧಾನಿಯಿಂದ ದೂರದಲ್ಲಿರುವ ಅಸಂಖ್ಯ ಲೇಖಕರಿಗೆ ಕಷ್ಟವಾಗುತ್ತದೆ. ಆದ್ದರಿಂದ ಏಕಗವಾಕ್ಷಿ ಹಾಗೂ ಇನ್ನಿತರ ಯೋಜನೆಗಳಿಗೆ ಜಿಲ್ಲಾ ಗ್ರಂಥಾಲಯ ಕಚೇರಿಯಲ್ಲೇ ನೋಂದಣಿ ಮಾಡಿಸಿ ಸಲ್ಲಿಸಲು ಅವಕಾಶ ಮಾಡಿಕೊಡಬೇಕು. ಇದರಿಂದ ಬಡ ಲೇಖಕರಿಗೆ ತುಂಬಾ ಅನುಕೂಲ ಆಗುತ್ತದೆ.

ಇನ್ನು ಅನಾರೋಗ್ಯದಿಂದ ಬಳಲುತ್ತಿರುವ, ಕೆಲಸ ಕಾರ್ಯಗಳ ಒತ್ತಡದಲ್ಲಿ ಇರುವ ಬರಹಗಾರರು, ವಯೋವೃದ್ಧ ಕವಿ, ಸಾಹಿತಿಗಳ ಪಾಡನ್ನು ಮನಗಂಡು, ಪುಸ್ತಕ ಸಲ್ಲಿಕೆಗೆ ಫೆಬ್ರುವರಿ ತಿಂಗಳ ಕೊನೆಯವರೆಗೂ ದಿನಾಂಕವನ್ನು ವಿಸ್ತರಿಸಬೇಕು.

ಗಣಪತಿ ಗೋ ಚಲವಾದಿ, ದೇವರ ಗೆಣ್ಣೂರ, ವಿಜಯಪುರ

ಗಡಿಯಲ್ಲಿ ತಂತಿಬೇಲಿ: ಎಚ್ಚರ ಅಗತ್ಯ

‘ಮ್ಯಾನ್ಮಾರ್- ಭಾರತ ಗಡಿಗೆ ತಂತಿಬೇಲಿ ಹಾಕುತ್ತೇವೆ’ ಎಂಬ ಕೇಂದ್ರ ಗೃಹ ಸಚಿವರ ಇತ್ತೀಚಿನ ಹೇಳಿಕೆ ಅಲ್ಲಿನ ಸ್ಥಿತಿಯನ್ನು ಇನ್ನಷ್ಟು ಬಿಗುಗೊಳಿಸಬಹುದು. ಬಾಂಗ್ಲಾ ಗಡಿಗೆ ಬೇಲಿ ಹಾಕಿದ್ದರಿಂದ ವಿದೇಶಿಯರ ಒಳನುಸುಳುವಿಕೆ ನಿಯಂತ್ರಣಕ್ಕೆ ಬಂತು ಎಂಬುದು ನಿಜವಾದರೂ ಇಂಡೊ- ಬರ್ಮಾ ಗಡಿಯದು ವಿಶಿಷ್ಟ ಪರಿಸ್ಥಿತಿ. ಮಣಿಪುರದ ಮುಖ್ಯಮಂತ್ರಿಯೇನೋ ಒತ್ತಾಯ ಮಾಡಿದ್ದಾರೆ, ಆದರೆ 1,643 ಕಿ.ಮೀ. ಒಟ್ಟು ಉದ್ದದ ಪೈಕಿ 398 ಕಿ.ಮೀ. (ಕಾಲು ಭಾಗಕ್ಕಿಂತ ಕಡಿಮೆ) ಆ ರಾಜ್ಯದ ವ್ಯಾಪ್ತಿಗೆ ಬರುತ್ತದೆ. ಮಿಜೋರಾಂ (510 ಕಿ.ಮೀ.) ಹಾಗೂ ನಾಗಾಲ್ಯಾಂಡ್ (215 ಕಿ.ಮೀ.) ವಿರೋಧ ವ್ಯಕ್ತಪಡಿಸಿವೆ. ಅರುಣಾಚಲ ಪ್ರದೇಶದ (520 ಕಿ.ಮೀ.) ನಿಲುವು ತಿಳಿದಿಲ್ಲ. ಫೆಡರಲ್ ರಿಪಬ್ಲಿಕ್ ದೇಶವೊಂದು ಸಂಬಂಧಿಸಿದ ಪ್ರಾಂತ್ಯಗಳನ್ನೆಲ್ಲ ವಿಶ್ವಾಸಕ್ಕೆ ತೆಗೆದುಕೊಂಡು ನಿರ್ಧರಿಸಬೇಕಾಗುತ್ತದೆ. ನಾವೊಮ್ಮೆ ಆ ಗಡಿಯ ವಿಜೋಯ್ ನಗರ್‌ನತ್ತ ಹೊರಟಿದ್ದಾಗ ಭೂಕುಸಿತದಿಂದ ಮಧ್ಯದಲ್ಲೇ ಹಿಂತಿರುಗಬೇಕಾಯಿತು. ಚಾಂಗ್ಲಾಂಗ್ ಜಿಲ್ಲೆಯ ದಕ್ಷಿಣ ಹಾಗೂ ಪೂರ್ವ ದಿಕ್ಕುಗಳಲ್ಲಿ ಬರ್ಮಾ ಗಡಿ ಹರಡಿದೆ. ಸರ್ಕಾರಗಳು ಆನೆಗಳನ್ನು ಸರಕು ಸಾಗಣೆಗೆ ಮುಖ್ಯವಾಗಿ ಅವಲಂಬಿಸಿದ್ದವು. ಈಗಲೂ ಒಂದು ಅತ್ಯಾಧುನಿಕ ಲ್ಯಾಂಡಿಂಗ್ ಗ್ರೌಂಡ್ (ವಾಯುಸೇನೆ ಕಾರ್ಯಾಚರಣೆಗೆ) ಹೊರತುಪಡಿಸಿ ರಸ್ತೆ, ರೈಲ್ವೆ ಸಂಪರ್ಕ ಹೆಚ್ಚು ಸುಧಾರಿಸಿಲ್ಲ. ವೀಸಾರಹಿತ ಭೇಟಿಗೆ ಇರುವ ಎಫ್‌ಎಂಆರ್ (ಫ್ರೀ ಮೂವ್‌ಮೆಂಟ್ ರೆಜಿಮ್) ಅನ್ನು ಪುನಃ ಪರಿಶೀಲಿಸುವ ಇರಾದೆಯನ್ನೂ ಅಮಿತ್ ಶಾ ವ್ಯಕ್ತಪಡಿಸಿದ್ದಾರೆ.

‘ಕುಕಿ- ಮಿಜೋ ಜನಾಂಗಗಳು ಮ್ಯಾನ್ಮಾರ್‌ನ ಶಿನ್‌ಗಳೊಂದಿಗೆ ಪುರಾತನ ಸಂಬಂಧ ಹೊಂದಿವೆ. ಬೇಲಿ ನಿರ್ಮಾಣದಿಂದ ಇದಕ್ಕೆ ಧಕ್ಕೆ ಉಂಟಾಗುತ್ತದೆ’- ಇದು ವಿರೋಧಿಸುವವರು ನೀಡುವ ಕಾರಣ. ನದಿ, ಝರಿ, ವನ್ಯಜೀವಿಗಳು ದೇಶಗಳ ಗಡಿ ಅರಿಯವು. ಭದ್ರತೆಯ ದೃಷ್ಟಿಯಿಂದ ಎಷ್ಟು ಬೇಕೋ ಅಷ್ಟು ಮಾತ್ರ ಕ್ರಮ ಕೈಗೊಳ್ಳುವುದು ಸರಿ. ಏಳು ತಿಂಗಳುಗಳಲ್ಲಿ ಮಣಿಪುರದ ಆಂತರಿಕ ಸಮಸ್ಯೆ ಬಗೆಹರಿಸಲು ಪ್ರಧಾನಿ ಖುದ್ದಾಗಿ ಪ್ರಯತ್ನಿಸಿಲ್ಲ, ಅವರು ಯಾರಿಗೆ ಆ ಜವಾಬ್ದಾರಿ ನೀಡಿದರೋ ಅವರು ಇಲ್ಲಿಯವರೆಗೆ ಯಶಸ್ವಿಯಾಗಿಲ್ಲ. ಈಗ ಈ ಬೇಲಿ ಹಾಕುವ ಕೆಲಸ ರಾಜ್ಯಗಳು, ಜನಾಂಗಗಳ ನಡುವೆ ಹೊಸ ತಿಕ್ಕಾಟಕ್ಕೆ ಕಾರಣವಾಗಬಹುದು. ಎಚ್ಚರದ ಹೆಜ್ಜೆ ಅಗತ್ಯ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಬ್ರಹ್ಮಾಂಡ ಭ್ರಷ್ಟಾಚಾರಕ್ಕೆ ಕನ್ನಡಿ!

‘ಕರ್ನಾಟಕದಲ್ಲಿ ಲಂಚ ಪಡೆಯುತ್ತಿದ್ದಾಗಲೇ ಬೆಸ್ಕಾಂನ ಮತ್ತೊಬ್ಬ ಉದ್ಯೋಗಿಯನ್ನು ಹಿಡಿಯಲಾಗಿದೆ. ಕರ್ನಾಟಕದಲ್ಲಿ ಭ್ರಷ್ಟಾಚಾರದ ಹಾವಳಿ ಯಾಕೆ ಈ ಪರಿ ಇದೆ ಎಂದು ಅಚ್ಚರಿಯಾಗುತ್ತದೆ’ ಎಂದು ಸಹನಾ ಅವರು ಹೇಳಿದ್ದಾರೆ (ಕಿಡಿನುಡಿ, ಜ. 24). ಆದರೆ ಇದನ್ನು ಓದಿದವರಿಗೆ ಈ ಲಂಚದ ವಿಷಯದಲ್ಲಿ ಅಚ್ಚರಿಯೇನೂ ಆಗದು. ಏಕೆಂದರೆ, ಕರ್ನಾಟಕದ ಸರ್ಕಾರಿ ನೌಕರರ ಭ್ರಷ್ಟಾಚಾರಕ್ಕೆ ಸುದೀರ್ಘ ಇತಿಹಾಸವೇ ಇದ್ದಂತೆ ಇದೆ. ಇದಕ್ಕೆ ಸೂಕ್ತ ನಿದರ್ಶನ ಇಲ್ಲಿದೆ:

ಹಳೆಯ ಮೈಸೂರಿಗೆ 1800ರಲ್ಲಿ ಭೇಟಿ ನೀಡಿ ಸರ್ವೇಕ್ಷಣಾ ಕಾರ್ಯ ನಡೆಸಿದ ಡಾ. ಫ್ರಾನ್ಸಿಸ್ ಬುಕಾನನ್, ಅಂದಿನ ಕಂದಾಯ ಇಲಾಖೆ ಅಧಿಕಾರಿಗಳ ಭ್ರಷ್ಟಾಚಾರದ ಕುರಿತು ‘ಎ ಜರ್ನಿ ಫ್ರಂ ಮದ್ರಾಸ್- ಥ್ರೂ ದಿ ಕಂಟ್ರೀಸ್ ಆಫ್ ಮೈಸೂರ್, ಕೆನರಾ ಆ್ಯಂಡ್ ಮಲಬಾರ್’ ಎಂಬ ತನ್ನ ಪುಸ್ತಕದಲ್ಲಿ ಹೀಗೆ ಹೇಳಿದ್ದಾನೆ: ‘ಟಿಪ್ಪುಗೆ ರೈತರು ನೀಡುತ್ತಿದ್ದ ಹಿಡುವಳಿ ಭೂಮಿಯ ಮೇಲಿನ ಬಾಡಿಗೆ ಹಣದ ಪೈಕಿ ಅರ್ಧದಷ್ಟು ಮಾತ್ರ ಸೇರುತ್ತಿತ್ತು. ಎಲ್ಲರೂ ಸೇರಿ ಆತನನ್ನು ವಂಚಿಸಿದರು. ಕಂದಾಯ ಇಲಾಖೆಯ ಪ್ರತಿಯೊಬ್ಬ ಅಧಿಕಾರಿಯೂ ಟಿಪ್ಪುಗೆ ಸೇರಬೇಕಾದ ಹಣವನ್ನು ಲಪಟಾಯಿಸುತ್ತಿದ್ದ. ಶ್ರೀರಂಗಪಟ್ಟಣದ ಒಪ್ಪಂದದ ಪ್ರಕಾರ ಬ್ರಿಟಿಷರಿಗೆ ಅಪಾರ ಮೊತ್ತದ ಕಪ್ಪ ಕೊಡಬೇಕಾಗಿದ್ದರಿಂದ, ಜನರಿಂದ ಹೆಚ್ಚು ಹಣ ವಸೂಲಿ ಮಾಡುವಂತೆ ಅವನು ಅಧಿಕಾರಿಗಳನ್ನು ಒತ್ತಾಯಿಸುತ್ತಿದ್ದ. ಟಿಪ್ಪು ಸುಲ್ತಾನ್ 3 ಕೋಟಿ ರೂಪಾಯಿಯಷ್ಟು ಹಣವನ್ನು ಜನರಿಂದ ಸಂಗ್ರಹಿಸುವಂತೆ ಫರ್ಮಾನು ಹೊರಡಿಸಿದ್ದರೆ, ಅಧಿಕಾರಿಗಳು ಜನರಿಂದ ಹತ್ತು ಕೋಟಿ ರೂಪಾಯಿಯಷ್ಟು ಸಂಗ್ರಹಿಸುತ್ತಿದ್ದರು. ಉಳಿದ ಏಳು ಕೋಟಿ ರೂಪಾಯಿಯನ್ನು ಕಂದಾಯ ಇಲಾಖೆ ಅಧಿಕಾರಿಗಳು ವಂಚಿಸುತ್ತಿದ್ದರು. ತಳಮಟ್ಟದ ಅಧಿಕಾರಿಗಳು ತಮ್ಮ ಮೇಲಿನ ಅಧಿಕಾರಿಗಳಿಗೆ ಲಂಚ ನೀಡುವುದು ಅನಿವಾರ್ಯವಾಗಿತ್ತು’.

ಹೀಗೆಂದು ವಿದೇಶಿ ಸರ್ವೇಕ್ಷಣಾಧಿಕಾರಿಯು 1801ರ ಏಪ್ರಿಲ್ 19ರಂದು ದಾಖಲಿಸಿರುವುದು, ರಾಜ್ಯದ ಅಧಿಕಾರಿಗಳ ಬ್ರಹ್ಮಾಂಡ ಭ್ರಷ್ಟಾಚಾರಕ್ಕೆ ಕನ್ನಡಿ ಹಿಡಿಯುತ್ತದೆ.

ಎಂ.ಜಿ.ರಂಗಸ್ವಾಮಿ, ಹಿರಿಯೂರು


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ರಾಜ್ಯ ಸರ್ಕಾರವು ಬರ ಪರಿಸ್ಥಿತಿಯನ್ನು ಸಮರ್ಪಕವಾಗಿ ಎದುರಿಸುತ್ತಿದೆಯೇ?

ರಾಜ್ಯದಲ್ಲಿ ಈ ಬಾರಿ ಮುಂಗಾರು ಕೈಕೊಟ್ಟಿದೆ. ಪರಿಣಾಮವಾಗಿ ಬೆಳೆಗಳೆಲ್ಲ ನಷ್ಟವಾಗಿವೆ. ರೈತ ಕಂಗಾಲಾಗಿದ್ದಾನೆ ರಾಜ್ಯದ 236 ತಾಲ್ಲೂಕುಗಳ ಪೈಕಿ 223 ತಾಲ್ಲೂಕುಗಳು ಬರಪೀಡಿತ ಎಂದು ರಾಜ್ಯ ಸರ್ಕಾರ ಘೋಷಿಸಿದೆ. ಆದರೆ, ರೈತರ ಸಂಕಷ್ಟ ಪರಿಹಾರ ಕಾರ್ಯ ಗಂಭೀರವಾಗಿ ನಡೆದಿಲ್ಲ. ಕೇಂದ್ರವು ಪರಿಹಾರದ ಹಣ ಬಿಡುಗಡೆ ಮಾಡದೆ ಸತಾಯಿಸುತ್ತಿದೆ ಎಂದು ರಾಜ್ಯ ಸರ್ಕಾರ ವಾದಿಸುತ್ತಿದೆ. ಆದರೆ, ರೈತರಿಗೆ ಪರಿಹಾರ ನೀಡಲು ಸರ್ಕಾರದ ಬಳಿ ಹಣವೇ ಇಲ್ಲ, ಎಲ್ಲ ಹಣವನ್ನು 'ಗ್ಯಾರಂಟಿ' ಯೋಜನೆಗಳ ಜಾರಿಗೆ ವಿನಿಯೋಗಿಸಲಾಗಿದೆ ಎಂದು ವಿರೋಧ ಪಕ್ಷ ಬಿಜೆಪಿ ದೂರುತ್ತಿದೆ. ಈ ಕುರಿತು, ಕಂದಾಯ ಸಚಿವ ಕೃಷ್ಣಬೈರೇಗೌಡ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರ ಮಾತುಗಳು ಇಲ್ಲಿವೆ:

'ಬರ ಎದುರಿಸಲು ಸರ್ವ ತಯಾರಿ'

• ರಾಜೇಶ್ ರೈ ಚಟ್ಲ



ಕೃಷ್ಣ ಬೈರೇಗೌಡ

• 223 ತಾಲ್ಲೂಕುಗಳನ್ನು ಬರಪೀಡಿತವೆಂದು ಸೆಪ್ಟೆಂಬರ್ 13ರಂದೇ ಘೋಷಿಸಲಾಗಿದೆ. ಈ ತಾಲ್ಲೂಕುಗಳಲ್ಲಿ ವಸ್ತುಸ್ಥಿತಿ ಹೇಗಿದೆ?

ಸದ್ಯ ಪರಿಸ್ಥಿತಿ ನಿಯಂತ್ರಣದಲ್ಲಿದೆ. ಬರದಿಂದ ಎದುರಾಗಿರುವ, ಎದುರಾಗಬಹುದಾದ ಎಲ್ಲ ಸವಾಲು–ಸಮಸ್ಯೆಗಳನ್ನು ಎದುರಿಸಲು ಆಡಳಿತ ಯಂತ್ರ ಸನ್ನದ್ಧವಾಗಿದೆ. ಅಗತ್ಯ ಇರುವ ಕಡೆಗಳಿಗೆ ಕುಡಿಯುವ ನೀರು ಪೂರೈಕೆ, ಮೇವು ವ್ಯವಸ್ಥೆ ಕಲ್ಪಿಸಲು ಜಿಲ್ಲಾಧಿಕಾರಿಗಳು ಮತ್ತು ತಹಶೀಲ್ದಾರ್‌ಗಳ ಬಳಿ ₹ 870 ಕೋಟಿ ಲಭ್ಯವಿದೆ. ಬರ ನಿರ್ವಹಣೆ ಹೊಣೆಯನ್ನು ಸ್ಥಳೀಯ ಮಟ್ಟದ ಅಧಿಕಾರಿಗಳಿಗೆ ನೀಡಲಾಗಿದೆ. ಸದ್ಯ 36 ಗ್ರಾಮಗಳಿಗೆ ಟ್ಯಾಂಕರ್ ಮೂಲಕ ಕುಡಿಯುವ ನೀರು ಪೂರೈಸಲಾಗುತ್ತಿದೆ. 158 ಖಾಸಗಿ ಕೊಳವೆಬಾವಿಗಳನ್ನು ಬಾಡಿಗೆಗೆ ಪಡೆದು 141 ಗ್ರಾಮಗಳಿಗೆ ನೀರು ಒದಗಿಸಲಾಗುತ್ತಿದೆ. 2–3 ಹೋಬಳಿ ಹೊರತುಪಡಿಸಿದರೆ, ಮೇವು ಕೊರತೆ ಎಲ್ಲೂ ಇಲ್ಲ. ಮೇವು ಬ್ಯಾಂಕ್, ಗೋ ಶಾಲೆ ತೆರೆಯುವ ಅಗತ್ಯವೂ ಬಂದಿಲ್ಲ. ಮೇವಿನ ಲಭ್ಯತೆ ಹೆಚ್ಚಿಸಲು ಬಿತ್ತನೆ ಬೀಜದ 6,36,847 ಕಿಟ್‌ಗಳನ್ನು ಉಚಿತವಾಗಿ ಈಗಾಗಲೇ ವಿತರಿಸಲಾಗಿದೆ. ಫೆಬ್ರುವರಿಯಲ್ಲಿ ಮತ್ತೊಮ್ಮೆ 7 ಲಕ್ಷ ಕಿಟ್‌ಗಳನ್ನು ನೀಡಲಿದ್ದೇವೆ. 16 ಜಿಲ್ಲೆಗಳಲ್ಲಿ ಮೇವು ಖರೀದಿಗೆ ಟೆಂಡರ್ ನಡೆದಿದೆ. ಬರ ಪರಿಹಾರ ಕಾರ್ಯಗಳ ಮೇಲೆ ನಿಗಾ ಇಡಲು ರಚಿಸಿರುವ ಶಾಸಕರ ನೇತೃತ್ವದ ತಾಲ್ಲೂಕು ಮಟ್ಟದ ಕಾರ್ಯಪಡೆ ನ. 4ರಿಂದ ಈವರೆಗೆ 344 ಸಭೆಗಳನ್ನು ಮಾಡಿದೆ. ಜಿಲ್ಲಾಧಿಕಾರಿ ಅಧ್ಯಕ್ಷತೆಯ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ (ಡಿಡಿಎಂಎ) ಜೂನ್ 1ರಿಂದ ಈವರೆಗೆ 210 ಸಭೆಗಳನ್ನು ನಡೆಸಿದೆ.

• ಬರ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸುವ ಸಾಧ್ಯತೆ ಇದ್ದು, ತಯಾರಿ ಏನು?

ಮುಂದಿನ ದಿನಗಳಲ್ಲಿ ಪರಿಸ್ಥಿತಿ ತೀವ್ರಗೊಳ್ಳುವ ಸಾಧ್ಯತೆಯಿದೆ. ಅದಕ್ಕೆ ಈಗಿನಿಂದಲೇ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. 6,097 ಗ್ರಾಮಗಳಲ್ಲಿ ಮತ್ತು ನಗರ ಪ್ರದೇಶಗಳ 1,186 ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣಿಸಬಹುದೆಂದು ಅಂದಾಜಿಸಿದ್ದೇವೆ. ಈ ಗ್ರಾಮಗಳು ಮತ್ತು ವಾರ್ಡ್‌ಗಳ ಪಟ್ಟಿಯನ್ನೂ ತಯಾರಿಸಿದ್ದೇವೆ. ಹೀಗೆ ಗುರುತಿಸಿದ ಗ್ರಾಮ, ವಾರ್ಡ್ ಹೊರತಾದ ಕಡೆಗಳಲ್ಲೂ ಸಮಸ್ಯೆಗಳು ಎದುರಾಗಬಹುದು. ಕುಡಿಯುವ ನೀರಿನ ಸಮಸ್ಯೆ ಕಂಡುಬಂದರೆ ಖಾಸಗಿ ಕೊಳವೆಬಾವಿಗಳ ಮೂಲಕ ನೀರು ಪೂರೈಸಲು ಸೂಚಿಸಲಾಗಿದೆ. ಈಗಾಗಲೇ 3,000 ಕಡೆಗಳಲ್ಲಿ ಖಾಸಗಿ ಕೊಳವೆಬಾವಿಗಳನ್ನು ಗುರುತಿಸಿದ್ದೇವೆ. ಕೊಳವೆಬಾವಿ ಹೊಂದಿರುವ 1,200 ಜನರ ಜೊತೆ ಒಪ್ಪಂದ ಮಾಡಿಕೊಂಡಿದ್ದೇವೆ. 21 ಜಿಲ್ಲೆಗಳಲ್ಲಿ ಟ್ಯಾಂಕರ್‌ಗಳಿಗೆ ಟೆಂಡರ್ ಮಾಡಿದ್ದೇವೆ. ಯಾವುದೇ ಊರಿನಲ್ಲಿ ನೀರಿನ ಕೊರತೆ ಎದುರಾದರೂ 24 ಗಂಟೆಯ ಒಳಗೆ ಟ್ಯಾಂಕರ್ ಮೂಲಕವಾದರೂ ನೀರು ಪೂರೈಸಲು ಹೇಳಿದ್ದೇವೆ. ಅನಿವಾರ್ಯವಾದರೆ ಮೇವು ಖರೀದಿ, ಮೇವು ಬ್ಯಾಂಕ್, ಗೋ ಶಾಲೆ ತೆರೆಯಲು ಸೂಚಿಸಿದ್ದೇವೆ.

• ಟ್ಯಾಂಕರ್, ಕೊಳವೆಬಾವಿ ಒದಗಿಸಿದವರಿಗೆ ಬಾಡಿಗೆ ಹಣ ಪಾವತಿ ವಿಳಂಬವಾಗುತ್ತಿದೆ ಎಂಬ ದೂರು ಇದೆಯಲ್ಲ?

ಬರ ನಿರ್ವಹಣೆಯ ಸಂಪೂರ್ಣ ಹೊಣೆಯನ್ನು ತಳಮಟ್ಟದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಲೆಕ್ಕಾಧಿಕಾರಿಗಳು ಮತ್ತು ಕುಡಿಯುವ ನೀರಿನ ಸಹಾಯಕ ಎಂಜಿನಿಯರ್‌ಗಳ ತಂಡಕ್ಕೆ ವಹಿಸಲಾಗಿದೆ. ಟ್ಯಾಂಕರ್, ಖಾಸಗಿ ಕೊಳವೆಬಾವಿ ಒದಗಿಸಿದವರ ಬಿಲ್ ಅನ್ನು ಪ್ರತಿ 15 ದಿನಗಳಿಗೊಮ್ಮೆ ಸಿದ್ಧಪಡಿಸಬೇಕು. ತಹಶೀಲ್ದಾರ್‌ಗಳು ಈ ಬಿಲ್‌ಗಳನ್ನು ಪರಿಶೀಲಿಸಿ ತಕ್ಷಣವೇ ಹಣ ಪಾವತಿಸಬೇಕು. ಇದರಲ್ಲಿ ಯಾವುದೇ ವಿಳಂಬ ಆಗಬಾರದೆಂದು ಸ್ಪಷ್ಟ ಸೂಚನೆ ನೀಡಿದ್ದೇನೆ.

• ಬರ ಪರಿಹಾರ ಬಿಡುಗಡೆ ವಿಚಾರದಲ್ಲಿ ಕೇಂದ್ರ ಸರ್ಕಾರದ ನಿರ್ಲಕ್ಷ್ಯ ಧೋರಣೆ ಏಕೆ?

ಸೆ. 13ರಂದು ಬರ ಘೋಷಣೆ ಮಾಡಿ, ಸೆ. 23ರಂದು ಕೇಂದ್ರಕ್ಕೆ ಮನವಿ ಸಲ್ಲಿಸಿದ್ದೇವೆ. ಬೇರೆ ರಾಜ್ಯಗಳು ಮನವಿ ಸಲ್ಲಿಸುವ ಎರಡು ತಿಂಗಳು ಮೊದಲೇ ನಾವು ಮನವಿ ಕೊಟ್ಟಿದ್ದೇವೆ. ಕೇಂದ್ರ ತಂಡ ರಾಜ್ಯದಲ್ಲಿ ಅಕ್ಟೋಬರ್‌ನಲ್ಲಿ ಅಧ್ಯಯನ ನಡೆಸಿ ವರದಿ ನೀಡಿದೆ. ಕೇಂದ್ರದ ಸಚಿವರು, ಅಧಿಕಾರಿಗಳನ್ನು ಭೇಟಿ ಮಾಡಿದ್ದೇವೆ. ಮುಖ್ಯಮಂತ್ರಿ ಮತ್ತು ನಾನು ಪ್ರಧಾನಿಯವರನ್ನು ಭೇಟಿ ಮಾಡಿ ಅಹವಾಲು ಸಲ್ಲಿಸಿದ್ದೇವೆ. ಈವರೆಗೆ 17 ಪತ್ರಗಳನ್ನು ಬರೆದಿದ್ದೇವೆ. ಪ್ರಧಾನಿಯವರು ಮೊನ್ನೆ ರಾಜ್ಯಕ್ಕೆ ಬಂದಿದ್ದಾಗಲೂ ಮುಖ್ಯಮಂತ್ರಿ ಮನವಿ ಮಾಡಿದ್ದಾರೆ. ಆದರೆ, ನಮ್ಮ ಮನವಿಗೆ ಸಂಬಂಧಿಸಿದಂತೆ ಈವರೆಗೂ ಕೇಂದ್ರ ಸರ್ಕಾರ ಯಾವುದೇ ತೀರ್ಮಾನ ಮಾಡಿಲ್ಲ. ಹೀಗಾಗಿ, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೇಂದ್ರ ಯಾಕೆ ವಿಳಂಬ ಮಾಡುತ್ತಿದೆಯೊ ಗೊತ್ತಿಲ್ಲ. ತಕ್ಷಣ ನೆರವಿಗೆ ಬರಬೇಕು ಎನ್ನುವುದು ನಮ್ಮ ಆಗ್ರಹ.

• ಕೇಂದ್ರದ ಈ ನಡೆ ಉದ್ದೇಶಪೂರ್ವಕ ಅನಿಸುತ್ತಿದೆಯೇ?

ನಮ್ಮದು ಒಕ್ಕೂಟ ವ್ಯವಸ್ಥೆ. ಬರಗಾಲ ಬಂದಾಗ ನಮ್ಮದೂ (ರಾಜ್ಯ), ಅವರದ್ದೂ (ಕೇಂದ್ರ) ಜವಾಬ್ದಾರಿ ಇದೆ. ಆದರೆ, ಮೂರು ತಿಂಗಳು ಕಳೆದರೂ ಒಂದು ತೀರ್ಮಾನಕ್ಕೆ ಬರಲು ಕೇಂದ್ರಕ್ಕೆ ಆಗಿಲ್ಲ ಎನ್ನುವುದು ನಮ್ಮ ಕಲ್ಪನೆ, ಊಹೆಗೆ ನಿಲುಕದ ಸಂಗತಿ. ಉದ್ದೇಶಪೂರ್ವಕವಾಗಿ ಹೀಗೆ ಮಾಡುತ್ತಿದ್ದಾರೊ ಗೊತ್ತಿಲ್ಲ. ಸಂಘರ್ಷದಿಂದ ಜನರಿಗೆ ಲಾಭ ಇಲ್ಲ. ನಾವಂತೂ ಪರಿಹಾರ ಬಿಡುಗಡೆ ಮಾಡುವಂತೆ ನಿರಂತರ ಒತ್ತಡ ಹಾಕುತ್ತಿದ್ದೇವೆ. ಕೇಂದ್ರದಿಂದ ಬರಬೇಕಾದ ಪರಿಹಾರ ವಿಳಂಬ ಆಗಿರುವುದರಿಂದ ನಾವೇ ರೈತರಿಗೆ ಮೊದಲ ಕಂತಿನಲ್ಲಿ ₹2 ಸಾವಿರ ಪರಿಹಾರ ಕೊಡಲು ತೀರ್ಮಾನಿಸಿದ್ದೇವೆ.

• ಎಕರೆಗೆ ₹2 ಸಾವಿರ ವಿತರಣೆ ಎಲ್ಲಿಗೆ ಬಂತು?

ಈವರೆಗೆ (ಜ. 25) 28.80 ಲಕ್ಷ ರೈತರಿಗೆ ₹545.03 ಕೋಟಿ ಪಾವತಿ ಆಗಿದೆ. ಅಂದಾಜು 37 ಲಕ್ಷ ರೈತರಿಗೆ ಪರಿಹಾರ ಸಿಗಲಿದೆ. ಇನ್ನೂ 8ರಿಂದ 9 ಲಕ್ಷ ರೈತರ ಬೆಳೆಹಾನಿ ಸಮೀಕ್ಷೆಯ ಪರಿಶೀಲನೆ ಪೂರ್ಣಗೊಂಡ ತಕ್ಷಣ ಪರಿಹಾರದ ಹಣ ಪಾವತಿಯಾಗಲಿದೆ. ರೈತರ ಬೆಳೆ ಸಮೀಕ್ಷೆಯ ಮಾಹಿತಿಯನ್ನು 'ಫ್ರೂಟ್ಸ್' (ಫಾರ್ಮರ್ ರಿಜಿಸ್ಟ್ರೇಷನ್ ಮತ್ತು ಯೂನಿಫೈಡ್ ಬೆನಿಫೀಷಿಯರಿ ಸಿಸ್ಟಂ) ತಂತ್ರಾಂಶದಲ್ಲಿ ಅಧಿಕಾರಿಗಳು ದಾಖಲಿಸಿದ್ದಾರೆ. ಫ್ರೂಟ್ಸ್ ಡಾಟಾಬೇಸ್‌ನಲ್ಲಿ 7.7 ಲಕ್ಷ ರೈತರ ಮಾಹಿತಿಯೇ ಇರಲಿಲ್ಲ. ನೋಂದಣಿಯಲ್ಲಿ ಬಿಟ್ಟು ಹೋಗಿರುವ ಅರ್ಹ ರೈತರ ಮಾಹಿತಿಯನ್ನು ಮತ್ತೆ ದಾಖಲಿಸಲು ಸೂಚಿಸಲಾಗಿದೆ. ಎಲ್ಲ ಅರ್ಹ ರೈತರ ಆಧಾರ್ ಜೋಡಣೆಯಾಗಿರುವ ಬ್ಯಾಂಕ್ ಖಾತೆಗೆ ಈ ಪರಿಹಾರ ಹಣ ನೇರವಾಗಿ ಜಮೆ ಮಾಡಲಾಗುತ್ತಿದೆ.

• ಬರ ಪರಿಹಾರದಲ್ಲೂ ಅಕ್ರಮಗಳು ನಡೆದಿವೆ ಎಂದು ನೀವು ಹೇಳಿದ್ದೀರಿ?

ಹೌದು, ಹಿಂದಿನ ಸರ್ಕಾರದ ಅವಧಿಯಲ್ಲಿ ಪರಿಹಾರ ಕೊಡುವುದರಲ್ಲಿ ವ್ಯಾಪಕ ಅಕ್ರಮವಾಗಿರುವುದು ಗಮನಕ್ಕೆ ಬಂದಿದೆ. ಕಡೂರು ತಾಲ್ಲೂಕಿನಲ್ಲಿ ₹6 ಕೋಟಿಯಷ್ಟು ದುರುಪಯೋಗವಾಗಿರುವ ಆರೋಪವಿದೆ. ಇಲ್ಲಿನ 13 ಗ್ರಾಮಗಳಲ್ಲಿ ಪರಿಶೀಲಿಸಿದಾಗ, 1,635 ಸರ್ವೆ ನಂಬರ್‌ಗಳಿಗೆ ₹2.54 ಕೋಟಿ ಪಾವತಿಯಾಗಿದೆ. ಈ ಪೈಕಿ, 576 ರೈತರ ಆಧಾರ್ ಹೊಂದಾಣಿಕೆ ಆಗಿಲ್ಲ. ಆಧಾರ್ ಇಲ್ಲದ 329 ಮಂದಿಗೆ ಹಣ ಪಾವತಿಯಾಗಿದೆ. 1,241 ರೈತರು ಹಾಕಿರುವ ಬೆಳೆಗೂ, ಪರಿಹಾರ ಪಾವತಿಸಿದ ಬೆಳೆಗೂ ಸಂಬಂಧವೇ ಇಲ್ಲ. 299 ರೈತರ ಬೆಳೆ ಮಾಹಿತಿಯೇ ಇಲ್ಲ. ಡೇಟಾಬೇಸ್‌ನಲ್ಲಿ ಇಲ್ಲದಿರುವವರಿಗೂ ಹಣ ಪಾವತಿಯಾಗಿದೆ. ಹಾವೇರಿ ಜಿಲ್ಲೆಯ ಹಾನಗಲ್, ಶಿಗ್ಗಾವಿಯಲ್ಲೂ ಇಂಥ ಅಕ್ರಮ ನಡೆದಿದೆ. ಪ್ರಾದೇಶಿಕ ಅಧಿಕಾರಿ ಕೊಟ್ಟ ವರದಿಯನ್ನು ಮುಚ್ಚಿಡಲಾಗಿದೆ. ಚಿತ್ರದುರ್ಗ, ಕಲಬುರಗಿ, ರಾಯಚೂರಿನಲ್ಲಿಯೂ ಇದೇ ರೀತಿಯ ಅಕ್ರಮ ನಡೆದ ದೂರುಗಳಿವೆ. ಯಾರದ್ದೋ ಜಮೀನು, ಇನ್ಯಾರಿಗೋ ಹಣ ಪಾವತಿಯಾಗಿದೆ. ಬೆಳೆ ಪರಿಹಾರ ರೈತರ ಹಕ್ಕು. ಇದನ್ನು ಸಮರ್ಪಕವಾಗಿ ಮಾಡಬೇಕೆಂಬ ಕಾರಣಕ್ಕೆ ಮತ್ತು ಅಕ್ರಮಕ್ಕೆ ಕಡಿವಾಣ ಹಾಕಲೇಬೇಕೆಂದು 'ಫ್ರೂಟ್ಸ್' ತಂತ್ರಾಂಶದಲ್ಲಿ ನೋಂದಣಿ ಕಡ್ಡಾಯಗೊಳಿಸಲಾಗಿದೆ.

• ಜನ ಗುಳೇ ಹೋಗುವ ಪರಿಸ್ಥಿತಿ ಎದುರಾಗಬಹುದೇ?

ಬರಗಾಲದಂತಹ ಪರಿಸ್ಥಿತಿಯಲ್ಲಿ ಉದ್ಯೋಗ ಇಲ್ಲದೆ ಜನ ಗುಳೇ ಹೋಗುವ ಸ್ಥಿತಿ ಬರಬಾರದೆಂಬ ಕಾರಣಕ್ಕೆ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಇದ್ದಾಗ ಉದ್ಯೋಗ ಖಾತ್ರಿ (ನರೇಗಾ) ಯೋಜನೆ ತಂದಿತ್ತು. ಸಾಮಾನ್ಯವಾಗಿ 100 ದಿನ ಕೆಲಸ ಕೊಡಬೇಕು. ಬರಗಾಲ ಬಂದಾಗ ಹೆಚ್ಚುವರಿಯಾಗಿ 50 ದಿನಗಳ ಕೆಲಸ ಕೊಡಬೇಕು ಎಂಬ ಕಾನೂನಿದೆ. ನಾವು ಈ ಬಗ್ಗೆಯೂ ಒತ್ತಾಯ ಮಾಡಿದ್ದೇವೆ. ಆದರೆ, ಕೇಂದ್ರ ಸರ್ಕಾರ ಅದಕ್ಕೂ ಒಪ್ಪಿಗೆ ಕೊಟ್ಟಿಲ್ಲ. ಈಗಾಗಲೇ 100 ದಿನಗಳ ಕೆಲಸ ಪೂರೈಸಿದವರು ಸಂಕಷ್ಟದಲ್ಲಿದ್ದಾರೆ. ನಮ್ಮ 'ಗ್ಯಾರಂಟಿ' ಯೋಜನೆಗಳಿಂದ ಜನರ ಕೈಗೆ ಸ್ವಲ್ಪ ಹಣ ಹೋಗುತ್ತಿರುವುದರಿಂದ ಅನುಕೂಲವಾಗಿದೆ. ಕೇಂದ್ರ ಸರ್ಕಾರ ತಕ್ಷಣ ಹೆಚ್ಚುವರಿ 50 ದಿನಗಳ ಕೆಲಸಕ್ಕೆ ಒಪ್ಪಿಗೆ ಕೊಡಬೇಕು. ಅದರಿಂದ ಗುಳೇ ಹೋಗುವುದನ್ನು ತಪ್ಪಿಸಲು ಅವಕಾಶ ಆಗುತ್ತದೆ.

• ಬರ ನಿರ್ವಹಣೆಯಲ್ಲಿ ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ವಿರೋಧ ಪಕ್ಷಗಳು ಟೀಕಿಸುತ್ತಲೇ ಇವೆಯಲ್ಲ?

ಕೇಂದ್ರದಿಂದ ರಾಜ್ಯಕ್ಕೆ ಬರಬೇಕಾದ ಪರಿಹಾರ ಹಣ ಬಿಡುಗಡೆ ಮಾಡುವಂತೆ ಒತ್ತಾಯಿಸುವ ಧೈರ್ಯವನ್ನು ಬಿಜೆಪಿಯವರು ಮೊದಲು ತೋರಿಸಲಿ. ತಮ್ಮ ವೈಫಲ್ಯ ಮುಚ್ಚಿ ಹಾಕಿಕೊಳ್ಳಲು, ಜನರ ಕಣ್ಣಿಗೆ ಮಣ್ಣೆರಚಲು ನಮ್ಮ (ಕಾಂಗ್ರೆಸ್) ಮೇಲೆ ಅವರು ಆರೋಪ ಮಾಡುತ್ತಿದ್ದಾರೆ. ಕೇಂದ್ರದ ವಿಳಂಬದ ವಿರುದ್ಧ ಧ್ವನಿ ಎತ್ತುವ ಧೈರ್ಯ ಇಲ್ಲದೆ, ವೃಥಾ ದೂರುತ್ತಿದ್ದಾರೆ. ಅವರಿಗೆ ಬದ್ಧತೆ ಇದ್ದರೆ ಕೇಂದ್ರ ಸರ್ಕಾರದ ಜೊತೆ ಮಾತನಾಡಲಿ. ಕೇಂದ್ರ ಸರ್ಕಾರ ಕೊಡಬೇಕಾದ ಪರಿಹಾರದ ಹಣವನ್ನು ನಾವು ನೀಡುತ್ತಿದ್ದೇವೆ.

ಪ್ರಜಾವಾಣಿ ಸಂದರ್ಶನ



'ಪಾಪರ್ ಆಗಿರುವ ಸರ್ಕಾರ'

• ಎಸ್ ರವಿಪ್ರಕಾಶ್



ಆರ್.ಅಶೋಕ

• ರಾಜ್ಯ ಸರ್ಕಾರ ಬರ ಪರಿಹಾರ ಕಾರ್ಯವನ್ನು ಸರಿಯಾಗಿ ನಿಭಾಯಿಸುತ್ತಿದೆಯೇ?

ಬರದ ಪರಿಸ್ಥಿತಿ ಗಂಭೀರವಾಗಿದೆ. ಕುಡಿಯುವ ನೀರಿಗೆ ಹಾಹಾಕಾರ ಪಡುವ ಪರಿಸ್ಥಿತಿ ಇದೆ. ಜಲಾಶಯಗಳೂ ಬರಿದಾಗುತ್ತಿವೆ. ವಿರೋಧಪಕ್ಷದ ನಾಯಕನಾಗಿ ಆಯ್ಕೆ ಆದ ಮಾರನೇ ದಿನದಿಂದಲೇ ಬರಪೀಡಿತ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ರೈತರನ್ನು ಭೇಟಿ ಮಾಡಿದ್ದೇನೆ. ಆದರೆ, ಸರ್ಕಾರದ ಪರವಾಗಿ ಉಸ್ತುವಾರಿ ಸಚಿವರಾಗಲಿ, ಕೃಷಿ, ತೋಟಗಾರಿಕೆ ಸಚಿವರಾಗಲಿ ಪ್ರವಾಸ ಮಾಡಿಲ್ಲ. 800ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿರುವುದನ್ನು ನೋಡಿದರೆ ಪರಿಸ್ಥಿತಿ ಎಷ್ಟು ದಾರುಣವಾಗಿದೆ ಎಂಬುದು ಗೊತ್ತಾಗುತ್ತದೆ. ಸಾಲ–ಸೋಲ ಮಾಡಿ ಹಾಕಿದ ಬಂಡವಾಳ ಮಣ್ಣಲ್ಲಿ ಮಣ್ಣಾಗಿ ಹೋಗಿದೆ. ತ್ರಿಫೇಸ್‌ನಲ್ಲಿ ಏಳು ಗಂಟೆ ವಿದ್ಯುತ್ ನೀಡುವುದಾಗಿ ಭರವಸೆ ನೀಡಿದ್ದ ಸರ್ಕಾರ ಈಗ ಮೂರು ಗಂಟೆ ಮಾತ್ರ ಪೂರೈಕೆ ಮಾಡುತ್ತಿದೆ. ಐಪಿ ಸೆಟ್ ಸುಟ್ಟು ಹೋದರೂ ಅದರ ರಿಪೇರಿಗೆ ರೈತರೇ ಬಂಡವಾಳ ಹಾಕಬೇಕಾಗಿದೆ. ಟಿಸಿ ಹಾಕಲು ₹25 ಸಾವಿರ ಆಗುತ್ತಿದ್ದ ಕೆಲಸಕ್ಕೆ ಈಗ ₹2.50 ಲಕ್ಷ ಕೊಡಬೇಕಾಗಿದೆ. ಮೇವಿನ ಕೊರತೆ ವ್ಯಾಪಕವಾಗಿದೆ. ಮೇವು ಬ್ಯಾಂಕ್ ಇಲ್ಲ, ಗೋಶಾಲೆಗಳೂ ಸ್ಥಾಪನೆ ಆಗಿಲ್ಲ. ದೇವರ ಎತ್ತುಗಳಿಗೂ ಮೇವು ಸಿಗುತ್ತಿಲ್ಲ. ಬರಗಾಲದ ವೇಳೆ ಕಾಡುವ ರೋಗಗಳಿಗೆ ಲಸಿಕೆ ಹಾಕುವ ಕೆಲಸವನ್ನೂ ಮಾಡಿಲ್ಲ. ಕುಡಿಯುವ ನೀರಿಗೆ ಎಂದು ತಾಲ್ಲೂಕಿಗೆ ₹50 ಲಕ್ಷ ಬಿಡುಗಡೆ ಮಾಡಿದ್ದಾರೆ. ಇದರಿಂದ ಎಷ್ಟು ಗ್ರಾಮಗಳಿಗೆ ನೀರು ಒದಗಿಸಲು ಸಾಧ್ಯ? ಇವರು ಬಿಡುಗಡೆ ಮಾಡಿರುವ ಹಣ, ಒಂದು ಹಳ್ಳಿಗೆ ಕೊಳವೆಬಾವಿ ಹಾಕಿಸಿ, ನೀರು ಪೂರೈಕೆ ಮಾಡುವುದಕ್ಕೂ ಸಾಲದು.

• ರಾಜ್ಯದಿಂದ ಜನರು ಗುಳೇ ಹೋಗುತ್ತಿದ್ದಾರೆ ಎಂದು ಆರೋಪಿಸಿದ್ದೀರಿ. ಅದಕ್ಕೆ ಅಂಕಿ–ಅಂಶಗಳಿವೆಯೇ?

ಸಾವಿರಾರು ರೈತರು ಗುಳೇ ಹೋಗುತ್ತಿದ್ದಾರೆ. ಬರಪೀಡಿತ ತಾಲ್ಲೂಕುಗಳಲ್ಲಿ ಹಳ್ಳಿಗಳು ವೃದ್ಧಾಶ್ರಮಗಳಾಗಿವೆ. ಗ್ರಾಮಗಳಿಂದ ಎಷ್ಟು ಜನ ಗುಳೇ ಹೋಗಿದ್ದಾರೆ ಎಂಬ ಮಾಹಿತಿ ಪಿಡಿಒಗಳಿಗೆ ಇರುತ್ತದೆ. ಆದರೆ, ಈ ಕುರಿತು ಸರ್ಕಾರ ಅಧ್ಯಯನ ಮಾಡಿ ಗುಳೇ ತಡೆಯಲು ಕ್ರಮ ತೆಗೆದುಕೊಳ್ಳಬೇಕು. ಅಧ್ಯಯನ ಮಾಡಿದರೆ ಸರ್ಕಾರದ ಮರ್ಯಾದೆ ಹರಾಜಾಗುತ್ತದೆ ಎಂಬ ಕಾರಣಕ್ಕೆ ಸರ್ಕಾರ ಬಾಯಿ ಮುಚ್ಚಿಕೊಂಡು ಕುಳಿತಿದೆ. ನಮ್ಮ ಸರ್ಕಾರ ಇದ್ದಾಗ ಗುಳೇ ತಡೆಯಲು ಕುಟುಂಬಗಳ ಅಗತ್ಯಕ್ಕೆ ಅನುಗುಣವಾಗಿ ಪಡಿತರ ಕಿಟ್‌ಗಳನ್ನು ವಿತರಿಸಿದ್ದೆವು. ಈ ಸರ್ಕಾರ ಚಿಕ್ಕಾಸೂ ನೀಡುತ್ತಿಲ್ಲ.

• ಸರ್ಕಾರಕ್ಕೆ ಬಿಸಿ ಮುಟ್ಟಿಸುವ ಹೋರಾಟ ಬಿಜೆಪಿಯಿಂದ ನಡೆಯುತ್ತಿಲ್ಲವಲ್ಲ?

ಈ ಹಿಂದೆಯೂ ಹೋರಾಟ ಮಾಡಿದ್ದೇವೆ. ಮುಂದಿನ ವಾರದಿಂದ ಮತ್ತೊಂದು ಸುತ್ತಿನ ಹೋರಾಟ ಆರಂಭಿಸುತ್ತೇವೆ. ಹಿಂದೆ ಭೇಟಿ ಕೊಟ್ಟ ಜಿಲ್ಲೆಗಳನ್ನು ಬಿಟ್ಟು ಬೇರೆ ಜಿಲ್ಲೆಗಳಿಗೆ ಭೇಟಿ ನೀಡುತ್ತೇವೆ.

• ರಾಜ್ಯ ಸರ್ಕಾರ ಮನವಿ ಕೊಟ್ಟು ನಾಲ್ಕು ತಿಂಗಳು ಕಳೆದರೂ ಕೇಂದ್ರ ಪರಿಹಾರ ಕೊಟ್ಟಿಲ್ಲವಲ್ಲ?

ಮಾತೆತ್ತಿದರೆ ಕಾಂಗ್ರೆಸ್‌ನವರು ಕೇಂದ್ರ ಸರ್ಕಾರದತ್ತ ಬೊಟ್ಟು ಮಾಡುತ್ತಾರೆ. ಅಸಲಿಯತ್ತು ಏನೆಂದರೆ ಗ್ಯಾರಂಟಿಗಳಿಂದ ಖಜಾನೆ ಖಾಲಿ ಆಗಿದೆ. ಅಭಿವೃದ್ಧಿ ಕೆಲಸಗಳಿಗೆ ಹಣವಿಲ್ಲ. ಎಲ್ಲ ಅಭಿವೃದ್ಧಿ ಕಾಮಗಾರಿಗಳೂ ನಿಂತು ಹೋಗಿವೆ. ಇನ್ನು ಬರ ಪರಿಹಾರಕ್ಕೆ ಹಣ ಎಲ್ಲಿಂದ ಬರಬೇಕು? ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ ಎರಡು ಬಾರಿ ಪ್ರವಾಹ ಬಂದಿತ್ತು. ಮೊದಲ ಬಾರಿ ಪ್ರವಾಹ ಬಂದಿದ್ದಾಗ, ಕೇಂದ್ರದಲ್ಲಿ ಮನಮೋಹನ್ ಸಿಂಗ್ ಪ್ರಧಾನಿ ಆಗಿದ್ದರು. ಆಗ ನಾವು ಕೇಂದ್ರದ ನೆರವಿಗೆ ಕಾಯದೇ ಪರಿಹಾರ ಕಾರ್ಯ ಆರಂಭಿಸಿದ್ದೆವು. ಇವರ ಹಾಗೆ ಕೇಂದ್ರದ ಮೇಲೆ, ಮನಮೋಹನ್ ಸಿಂಗ್ ಮೇಲೆ ಗೂಬೆ ಕೂರಿಸುವ ಕೆಲಸ ಮಾಡಲಿಲ್ಲ. ಯಡಿಯೂರಪ್ಪ ಎರಡನೇ ಬಾರಿ ಮುಖ್ಯಮಂತ್ರಿ ಆದಾಗಲೂ ಶತಮಾನ ಕಂಡರಿಯದ ಮಳೆ, ಪ್ರವಾಹ ಮತ್ತು ಭೂಕುಸಿತಗಳು ಆಗಿ ಜನ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದರು. ಆಗಲೂ ನಾವು ಕೇಂದ್ರದ ನೆರವಿಗೆ ಕಾಯದೇ ಒಂದೇ ತಿಂಗಳಲ್ಲಿ ಸಂತ್ರಸ್ತರ ಖಾತೆಗಳಿಗೆ ಹಣ ಹಾಕಿದ್ದೆವು. ಕೆಲವು ತಿಂಗಳ ಬಳಿಕ ಕೇಂದ್ರದಿಂದ ಹಣ ಬಂದಿತು. ಕೋವಿಡ್ ನಂತರ ಅತಿವೃಷ್ಟಿ ಆದಾಗಲೂ ನಮ್ಮ ಬಳಿ ಹಣ ಇಲ್ಲದಿದ್ದರೂ ಸಾಲ ತಂದು ರೈತರಿಗೆ ಪರಿಹಾರ ವಿತರಣೆ ಮಾಡಿದ್ದೆವು. ಈಗ ದೇಶದ 15ರಿಂದ 16 ರಾಜ್ಯಗಳು ಬರಪೀಡಿತವಾಗಿವೆ. ರಾಜ್ಯಗಳ ಸ್ಥಿತಿಗತಿ ನೋಡಿ ಎಲ್ಲ ರಾಜ್ಯಗಳಿಗೂ ಒಟ್ಟಿಗೆ ಪರಿಹಾರ ನೀಡುತ್ತದೆಯೇ ಹೊರತು ಯಾವುದೇ ಒಂದು ರಾಜ್ಯಕ್ಕೆ ಮಾತ್ರ ಪರಿಹಾರ ನೀಡುವುದಿಲ್ಲ. ಇದು ಹಿಂದಿನಿಂದಲೂ ನಡೆದುಕೊಂಡು ಬಂದ ಪದ್ಧತಿ. ಕೆಲಸ ಮಾಡದ ಸಿದ್ದರಾಮಯ್ಯ ಸರ್ಕಾರವು ಮೋದಿ ಕರ್ನಾಟಕ ವಿರೋಧಿ, ಕನ್ನಡ ವಿರೋಧಿ ಎಂಬುದನ್ನು ಬಿಂಬಿಸುವ ಕುತ್ಸಿತ ಕೆಲಸ ಮಾಡುತ್ತಿದೆ.

ಮನಮೋಹನ್ ಸಿಂಗ್ ಅವಧಿಯಲ್ಲಿ 2006ರಿಂದ 2014ರವರೆಗೆ ಕೇಂದ್ರದಿಂದ (ಎಸ್‌ಡಿಆರ್‌ಎಫ್) ₹812 ಕೋಟಿ ಬಂದಿತ್ತು, ರಾಜ್ಯ ₹271 ಕೋಟಿ ತನ್ನ ಪಾಲು ನೀಡಿತ್ತು. ಎನ್‌ಡಿಆರ್‌ಎಫ್ ಅಡಿ ಕೇಂದ್ರ ₹3,233 ಕೋಟಿ ನೀಡಿತ್ತು. ಮೋದಿ ಅವಧಿಯಲ್ಲಿ 2014ರಿಂದ 2022ರವರೆಗೆ ಕೇಂದ್ರದಿಂದ (ಎಸ್‌ಡಿಆರ್‌ಎಫ್) ₹2,557 ಕೋಟಿ ಬಂದಿದ್ದು, ರಾಜ್ಯ ತನ್ನ ಪಾಲು ₹852 ಕೋಟಿ ನೀಡಿತ್ತು. ಎನ್‌ಡಿಆರ್‌ಎಫ್‌ನಿಂದ ₹11,603 ಕೋಟಿ ಬಂದಿದೆ. ಇದು ವಾಸ್ತವ ಸ್ಥಿತಿ. ಸಿದ್ದರಾಮಯ್ಯ ನಿತ್ಯವೂ ಸುಳ್ಳು ಹೇಳುವುದರಲ್ಲಿ ನಿರತವಾಗಿದ್ದಾರೆ.

• ಬರಪರಿಹಾರಕ್ಕೆ ರೈತರಿಗೆ ಏನೂ ಕೊಟ್ಟಿಲ್ಲ ಎಂದು ನೀವು (ವಿರೋಧ ಪಕ್ಷಗಳು) ದೂರುತ್ತಿದ್ದೀರಿ. ಆದರೆ, ಸರ್ಕಾರವು ಪ್ರತಿ ಎಕರೆಗೆ ₹2,000 ವರೆಗೆ ಪರಿಹಾರ ಘೋಷಿಸಿದೆಯಲ್ಲ?

ಪರಿಹಾರ ನೀಡುವುದಾಗಿ ಬೆಳಗಾವಿಯ ಅಧಿವೇಶನದಲ್ಲೇ ಘೋಷಿಸಿದ್ದರು. ಯಾರಿಗಾದರೂ ಒಂದು ಪೈಸೆ ತಲುಪಿದೆಯೇ? ಕಂದಾಯ ಸಚಿವರಂತೂ ಇನ್ನೊಂದು ವಾರದಲ್ಲಿ ಪರಿಹಾರ ಕೈಸೇರುತ್ತದೆ ಎಂದು ಹೇಳುತ್ತಲೇ ಹಲವು ವಾರಗಳು ಕಳೆದಿವೆ. ಪರಿಹಾರ ಕೊಡುವುದನ್ನು ತಡ ಮಾಡಲೆಂದೇ ಫ್ರೂಟ್ಸ್ ಎಂಬ ಹೊಸ ವಿಧಾನ ಜಾರಿ ತಂದಿದ್ದಾರೆ. ಎಷ್ಟು ಸಾಧ್ಯವೋ ಅಷ್ಟು ಮುಂದೂಡುವುದು ಇವರ ಉದ್ದೇಶ. ಶೇ 60ರಷ್ಟು ರೈತರು ಹೆಸರು ನೋಂದಾಯಿಸಲು ಸಾಧ್ಯವಾಗಿಲ್ಲ. ದಶಕದ ಹಿಂದೆ ನಾವು ಅಧಿಕಾರದಲ್ಲಿ ಇದ್ದಾಗ ಕೇಂದ್ರದಲ್ಲಿ ಯುಪಿಎ ಸರ್ಕಾರ ಇತ್ತು, ಕೇಂದ್ರ ಹಣ ಕೊಟ್ಟಿಲ್ಲ ಎಂದು ದೂರುತ್ತಾ ಕೂರಲಿಲ್ಲ. ಕೇಂದ್ರದ ನೆರವಿಗೆ ಕಾಯದೇ ಎಸ್‌ಡಿಆರ್‌ಎಫ್ ಮಾರ್ಗಸೂಚಿ ಪರಿಷ್ಕರಿಸಿ ದುಪ್ಪಟ್ಟು ಪರಿಹಾರ ಕೊಟ್ಟೆವು. 2022ನೇ ಸಾಲಿನಲ್ಲಿ 13,09,421 ಹೆಕ್ಟೇರ್ ಬೆಳೆ ನಾಶವಾಗಿತ್ತು. 14,62,841 ರೈತರ ಬ್ಯಾಂಕ್ ಖಾತೆಗಳಿಗೆ ₹2,031.15 ಕೋಟಿಯನ್ನು ಒಂದು ಬಟನ್ ಒತ್ತುವ ಮೂಲಕ ವರ್ಗಾವಣೆ ಮಾಡಿದೆವು. ನೀರಾವರಿ ಬೆಳೆಗೆ ಪ್ರತಿ ಎಕರೆಗೆ ತಲಾ ₹25 ಸಾವಿರ, ಬಹುವಾರ್ಷಿಕ ಬೆಳೆಗೆ ತಲಾ ₹28 ಸಾವಿರ ಕೊಟ್ಟಿದ್ದೇವೆ. ಇವೆಲ್ಲ ಸರ್ಕಾರಿ ದಾಖಲೆಗಳಲ್ಲಿ ಇವೆ. ಈ ಸರ್ಕಾರ ಪಾಪರ್ ಆಗಿರುವುದರಿಂದಲೇ ಪರಿಹಾರ ಕೊಡುತ್ತಿಲ್ಲ.

• ಗ್ಯಾರಂಟಿ ಯೋಜನೆಗಳಿಂದಾಗಿ ಬರ ನಿರ್ವಹಣೆಗೆ ಸಾಧ್ಯವಾಗುತ್ತಿಲ್ಲ, ಸರ್ಕಾರ ದಿವಾಳಿ ಆಗಿದೆ ಎಂಬ ನಿಮ್ಮ ಆರೋಪಕ್ಕೆ ಆಧಾರ ಏನಿದೆ?

ಕಾಂಗ್ರೆಸ್ ಗ್ಯಾರಂಟಿ ಅವೈಜ್ಞಾನಿಕ ಯೋಜನೆ. ಇದಕ್ಕೆ ಸರ್ಕಾರದ ಸಕಲ ಆದಾಯವೂ ಹರಿದು ಹೋಗುತ್ತಿದೆ. ಇವುಗಳನ್ನು ಜಾರಿ ಮಾಡಿ ಸಿಕ್ಕಿ ಹಾಕಿಕೊಂಡಿದ್ದಾರೆ. ಲೋಕಸಭೆ ಚುನಾವಣೆವರೆಗೆ ಮಾತ್ರ ಗ್ಯಾರಂಟಿಗಳು ಇರುತ್ತವೆ. ಆ ಬಳಿಕ ರದ್ದು ಆಗುತ್ತದೆ. ಮುಸ್ಲಿಂ ಸಮುದಾಯವನ್ನು ಓಲೈಸಲು ಮುಲ್ಲಾಗಳಿಗಾಗಿ ₹1,000 ಕೋಟಿ ಬಿಡುಗಡೆ ಮಾಡಿದ್ದಾರೆ. ರೈತರಿಗೆ ಬಿಡುಗಡೆ ಮಾಡಿರುವುದು ಕೇವಲ ₹105 ಕೋಟಿ. ಇದು ಈ ಸರ್ಕಾರದ ಆದ್ಯತೆ.

ಹಾಸ್ಯಮಿಶ್ರಿತ ಪಯಣದಲ್ಲಿ ಹಳೆ ಅನುಭವ

ನಾವು ನೋಡಿದ ಸಿನಿಮಾ

'ದಿ ಹ್ಯಾಂಗ್ ಓವರ್' ಎನ್ನುವ ಇಂಗ್ಲಿಷ್ ಸಿನಿಮಾವೊಂದಿದೆ. ಫಿಲ್, ಅಲೆನ್, ಸ್ಟ್ಯೂ ಎಂಬ ಮೂವರು ಮಿತ್ರರು ಮಾದಕ ವಸ್ತುಗಳ ನಶೆಯಲ್ಲಿ ತಮಗರಿವಿಲ್ಲದಂತೆ ಬೇರೆ ದೇಶಕ್ಕೆ ಹೋಗುತ್ತಾರೆ. ಅಲ್ಲಿನ ಘಟನಾವಳಿಗಳು ಕಥೆಯನ್ನು ಮುಂದುವರಿಸುತ್ತದೆ. ಅಭಿಜಿತ್ ಮಹೇಶ್ ನಿರ್ದೇಶನದ 'ಬ್ಯಾಚುಲರ್ ಪಾರ್ಟಿ' ಸಿನಿಮಾವೂ ಇದೇ ಎಳೆಯ ಮೇಲೆ ಹೆಣೆದ ಹೊಸ ಕಥೆ. ಹೊಸದೇನಿದೆ ಎಂದರೆ, ಕಥೆಗೆ ಸ್ಥಳೀಯ ಘಮವಿದೆ, ನಗಿಸುವ ಒನ್‌ಲೈನರ್‌ಗಳಿವೆ, ಮಿಗಿಲಾಗಿ ಪಯಣಕ್ಕೆ ಅಚ್ಯುತ್ ಕುಮಾರ್ ಅನುಭವದ ಸಾರವಿದೆ.

ಅಭಿಜಿತ್ ಮಹೇಶ್ ನಿರ್ದೇಶನದ ಚೊಚ್ಚಲ ಚಿತ್ರ ಇದಾಗಿದೆ. ಪತಿ, ಪತ್ನಿ ನಡುವಿನ ಹೊಂದಾಣಿಕೆಯ ಕೊರತೆಯನ್ನು ವಿಷಯವಾಗಿಟ್ಟುಕೊಂಡು ಕಥೆ ಆರಂಭಿಸಿದ್ದಾರೆ ನಿರ್ದೇಶಕರು. ಸಾಫ್ಟ್‌ವೇರ್ ಎಂಜಿನಿಯರ್ ಸಂತೋಷ್ ಮಂಚಾಲೆ (ದಿಗಂತ್) ಮದುವೆಯಾಗಿ ಆರು ವರ್ಷ ಕಳೆದಿದೆ. ಆದರೆ ಪತಿ–ಪತ್ನಿಯ ನಡುವೆ ಹೊಂದಾಣಿಕೆಯಿಲ್ಲ. ಪತ್ನಿಯೊಂದಿಗೆ ಏರುಧ್ವನಿಯಲ್ಲಿ ಮಾತಾಡಲು ಹಿಂಜರಿಯುವಾತ. ಹೆಸರಿನಲ್ಲಿ ಸಂತೋಷವಿದ್ದರೂ, ಆತ ಸಂತೋಷವಾಗಿಲ್ಲ. ಇಂತಹ ವ್ಯಕ್ತಿಯ ಬದುಕಿನ ದಿನನಿತ್ಯದ ಜಂಜಾಟಗಳನ್ನು ಮೊದಲಾರ್ಧದ ಆರಂಭದಲ್ಲಿ ಹಾಸ್ಯಮಯವಾಗಿ ತೆರೆಗೆ ತರಲಾಗಿದೆ. ಸಂತೋಷ್‌ನ ಶಾಲಾ ಗೆಳೆಯನ 'ಬ್ಯಾಚುಲರ್ ಪಾರ್ಟಿ'ಯಿಂದ ಕಥೆ ಮುಂದಡಿ ಇಡುತ್ತದೆ. ಸಂತೋಷ್ ದೂರವಿಡಲು ಯತ್ನಿಸಿದ ಗೆಳೆಯ ಮ್ಯಾಡಿ (ಯೋಗಿ) ಆತನ ಜೀವನಕ್ಕೆ ಮರುಪ್ರವೇಶಿಸಿದ ಬಳಿಕ ಸಾಗುವ ಪಯಣವೇ ಈ ಸಿನಿಮಾ.



ದಿಗಂತ್, ಯೋಗಿ, ಅಚ್ಯುತ್ ಕುಮಾರ್

ಒನ್‌ಲೈನರ್‌ಗಳ ಮೂಲಕವೇ ನಗಿಸುವ ಸಿನಿಮಾ ಇದಾಗಿದೆ. ಬ್ಯಾಂಕಾಕ್‌ಗೆ ಚಿತ್ರಕಥೆ ಅಡಿಇಟ್ಟ ಬಳಿಕ ಕಥೆಗೊಂದಿಷ್ಟು ವೇಗ ಸಿಗುತ್ತದೆ. ಇಲ್ಲಿ ಸಂತೋಷ್, ಮ್ಯಾಡಿಗೆ, ಅವರ ಪಿ.ಟಿ. ಟೀಚರ್ (ಅಚ್ಯುತ್ ಕುಮಾರ್) ಜೊತೆಯಾಗುತ್ತಾರೆ. ಭಿನ್ನವಾದ ಪಾತ್ರವೊಂದರಲ್ಲಿ ಅಚ್ಯುತ್ ಇಲ್ಲಿ ಗಮನ ಸೆಳೆಯುತ್ತಾರೆ. ಅವರ ನಟನೆಯಲ್ಲಿ ಹೊಸ ಘಮ ಕಾಣಬಹುದು. ಅನುಭವದ ಸಾರವಿದೆ. ನಗಿಸುತ್ತಾ, ಸಣ್ಣಗೆ ಕಣ್ಣು ತೇವಗೊಳಿಸುತ್ತಾ ಅವರಿಲ್ಲಿ ಗಮನ ಸೆಳೆಯುತ್ತಾರೆ. ಸಂತೋಷ್ ಪಾತ್ರದಲ್ಲಿ ದಿಗಂತ್ ಇಷ್ಟವಾಗುತ್ತಾರೆ. ನಗಿಸುವ ಹೊಣೆ ಹೊತ್ತು ಬರುವ ಯೋಗಿ, ತಮ್ಮ ಮಾತಿನ ಧಾಟಿಯಿಂದಲೇ ನಗುವಿನೌತಣ ಬಡಿಸುತ್ತಾರೆ. ಮಹಿಳಾ ಪಾತ್ರಗಳ ಬರವಣಿಗೆಯು ನಗು ಹುಟ್ಟಿಸಲು ನಿರ್ದೇಶಕರು ಮಾಡಿದ ವಿಫಲ ಯತ್ನ.

ಬ್ಯಾಚುಲರ್ ಪಾರ್ಟಿ (ಕನ್ನಡ)
- ನಿರ್ಮಾಣ: ರಕ್ಷಿತ್ ಶೆಟ್ಟಿ ಹಾಗೂ ಜಿ.ಎಸ್.ಗುಪ್ತ
- ನಿರ್ದೇಶನ: ಅಭಿಜಿತ್ ಮಹೇಶ್
- ತಾರಾಗಣ: ದಿಗಂತ್, ಯೋಗಿ, ಅಚ್ಯುತ್ ಕುಮಾರ್, ಸಿರಿ ರವಿಕುಮಾರ್, ಪ್ರಕಾಶ್ ತುಮಿನಾಡ್, ಬಾಲಾಜಿ ಮನೋಹರ್ ಮತ್ತಿತರರು.


ಪ್ರೀತಿಯಲ್ಲಿ ಹಲವು ಆಯಾಮಗಳನ್ನು ನಿರ್ದೇಶಕರು ಇಲ್ಲಿ ಪರಿಚಯಿಸಿದ್ದಾರೆ. ಅಚ್ಯುತ್ ಕುಮಾರ್ ಪಾತ್ರ ಅನುಭವಿಸಿದ ಪ್ರೀತಿ, ಮ್ಯಾಡಿ ಕಂಡುಕೊಂಡ ಪ್ರೀತಿ, ಸಂತೋಷ್‌ಗೆ ದೊರಕಿದ ಪ್ರೀತಿಯನ್ನು ಇಲ್ಲಿ ಕಾಣಬಹುದು. ಮ್ಯಾಡಿ ಪಾತ್ರದ ಪರಿಚಯಕ್ಕೆ ಹಾಗೂ ಆತನ ಪ್ರೀತಿಗೆ ರಚಿಸಿದ ಹಾಡುಗಳು ಚೆನ್ನಾಗಿವೆ. ಕ್ಯಾಮೆರಾ ಹಿಂದೆ ಅರವಿಂದ್ ಕಶ್ಯಪ್ ಕೈಚಳಕ ಕಾಣಬಹುದು.

ಬ್ಯಾಂಕಾಕ್‌ನಲ್ಲಿನ ಚೇಸ್ ದೃಶ್ಯಕ್ಕೆ ಕತ್ತರಿ ಹಾಕಿ, ನಗುವಿನ ಓಟದ ಭರಾಟೆ ನಡುವೆ ಭಾವನೆಗಳಿಗೆ ಒಂದಿಷ್ಟು ಜಾಗವನ್ನು ಹೆಚ್ಚು ಮೀಸಲಿಡಬಹುದಿತ್ತು. ಪಾರ್ಟಿಗೆ ಬಂದವರು ಪಾಸ್‌ಪೋರ್ಟ್ ತರ್ತಾರಾ? ಗುಂಡಿಗೆ ಬಿದ್ದ ಪಿ.ಟಿ. ಟೀಚರ್ ಬದುಕಿದ್ದು ಹೇಗೆ? ಹೀಗೆ ಲಾಜಿಕ್ ಇಲ್ಲದ ಒಂದೆರಡು ಸನ್ನಿವೇಶಗಳು ಖಂಡಿತಾ ಇವೆ. 'ಬ್ಯಾಚುಲರ್ ಪಾರ್ಟಿ' ಸಿನಿಮಾದ ಕ್ಲೈಮ್ಯಾಕ್ಸ್ ಪ್ರಿಯದರ್ಶನ್ ಅವರ ಸಿನಿಮಾಗಳನ್ನು ನೆನಪಿಸುತ್ತದೆ. 'ಜಾನಿ' ಮೇಲೆ ನಿರ್ದೇಶಕರಿಗೆ ಯಾಕಷ್ಟು ಪ್ರೀತಿ! ಎನ್ನುವ ಪ್ರಶ್ನೆ ಕೊನೆಗೂ ಉಳಿಯುತ್ತದೆ.

–ಅಭಿಲಾಷ್ ಪಿ.ಎಸ್.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪದಬಂಧ 5573 – ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1. ಪ್ರವಹಿಸುತ್ತಿರುವಾಗ ಕಾಣಿಸಿದ ದೋಣಿ (4)
3. ಪೀಠಿಕೆಯನ್ನು ಹೀಗೂ ಹೇಳುವರು (4)
5. ಕೆಲಸದವರು ಸಿಡಿಸಿದ ರಾಡಿ (3)
7. ಬಿಮ್ಮಾನ ತೋರಿದಾತನ ದುಃಖ (3)
9. ಹೊಟ್ಟೆಕಿಚ್ಚು ಹೀಗೆ ಬಂದಿದೆ (3)
10. ಬಾಣವನ್ನು ಹಿಡಿದಿರುವ ಶೈವ ಭಕ್ತ (3)
11. ವಾಲಿಯ ಮಗನಿವನು (3)
15. ಕೋಲನ್ನು ಹಿಡಿದುದಕ್ಕೇ ಈ ಗದ್ದಲ! (4)
16. ಕಾರನ್ನು ಏರಿದವನು ನಡೆಸಿದ ಆಡಳಿತ (4)

ಮೇಲಿಂದ ಕೆಳಕ್ಕೆ

1. ದೇವರಿಗೆ ಸಲ್ಲಿಸುವ ಮುಡಿಪು (3)
2. ಪುಂಡ ಅಥವಾ ನೀಚ (2)
3. ವಾರದ ಕೊನೆಗೆ ಕಾಣಿಸಿದ ಅಭ್ಯರ್ಥಿ (5)
4. ಆಯವ್ಯಯ ಮೊದಲಾದ ವಿಷಯಗಳ ವಿವರಗಳ ಪಟ್ಟಿ (2)
6. ಒಳ್ಳೆಯ ಅವಕಾಶವಿದು (5)
8. ಈತ ಬಿಳಿಯ ಕೂದಲುಳ್ಳವನು (5)
9. ಸಾಯುವ ಸಮಯವಿದು (5)
12. ಒಡ್ಡೊಲಗದಲ್ಲಿ ಅಧಿಕಾರ ನಡೆಸುವಿಕೆ (3)
13. ಮಂಗವಿಲ್ಲಿ ತಿರುಗಿ ನಿಂತಿದೆಯಲ್ಲಾ? (2)
14. ಉತ್ತರದ ಕಡೆಯ ಚಿಕ್ಕಪ್ಪ (2)

5572ರ ಪದಬಂಧದ ಉತ್ತರ

ಎಡದಿಂದ ಬಲಕ್ಕೆ

1.ವಿಯೋಗ 3.ಪಂಜರ 6.ರಿವಾಜು 7.ಸಿಬ್ಬಂದಿ 8.ನಲುಮೆ 10.ಚಿತೆ 11.ಬಡಗ 12.ತೀರ 14.ವಿನಂತಿ 15.ಬಳಗ 16.ನಗರ 17.ತಗರಿ 18.ಸಮ್ಮೋಹ

ಮೇಲಿಂದ ಕೆಳಕ್ಕೆ

1.ವಿಧಾನಸೌಧ 2.ಗರಿಮೆ 3.ಪಂಜು 4.ರಸಿಕತೆ 5.ಮಂದಿರ 9.ಅಂಬರ 10.ಚಿಗುರೆ 11.ವಿಶ್ರಾಂತಿಗೃಹ 12.ತೀವ್ರಗತಿ 13.ಅಬಲೆ 14.ವಿರಸ 16.ನರಿ

ಸುಡೊಕು 5958

	3	1	4			2		7
7		4		3			5	
			1			8		3
				4				
3		2	9		1			
				6				2
1		8	3		4		2	
	2					9		8
6		9		2			3	1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5957 ಸುಡೊಕು

8	4	5	1	2	6	7	9	3
6	2	9	5	3	7	1	4	8
1	3	7	9	8	4	6	2	5
2	7	8	4	9	1	5	3	6
5	9	3	6	7	8	2	1	4
4	1	6	2	5	3	8	7	9
7	6	4	8	1	9	3	5	2
9	5	1	3	6	2	4	8	7
3	8	2	7	4	5	9	6	1

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಜನವರಿ 27, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪುಷ್ಯ ಕೃಷ್ಣ ದ್ವಿತೀಯ ಗಂ. 27-37 ನಕ್ಷತ್ರ: ಆಶ್ಲೇಷ ಗಂ. 13-01 ಯೋಗ: ಆಯುಷ್ಮಾನ್ ಗಂ. 08-08 ಕರಣ: ತೈತಿಲ ಗಂ. 14-26, ಮಕರ ಮಾಸದ 12 ನೇ ದಿನ, ಮಳೆನಕ್ಷತ್ರ: ಶ್ರವಣ 1.
ರಾಹುಕಾಲ: ಬೆಳಿಗ್ಗೆ 09-00 – 10-30
ಸೂರ್ಯೋದಯ: 07-01 ಸೂರ್ಯಾಸ್ತ: 06-25
ಮುಸ್ಲಿಂ ದಿನಾಂಕ : 15 ರಜಬ್
ಅದೃಷ್ಟ ಸಂಖ್ಯೆ : 9, 7

ಮೇಷ: ಕಚೇರಿಯ ಕೆಲಸಗಳನ್ನು ಶೀಘ್ರವೇ ಮುಗಿಸಿ, ಮನೆಯಲ್ಲಿ ತಂಗಿಯ ಅಥವಾ ತಮ್ಮನ ಮದುವೆಯ ಕೆಲಸದ ಒತ್ತಡ ಹಾಗೂ ಜವಾಬ್ದಾರಿ ಹೆಚ್ಚಲಿದೆ. ಕುಟುಂಬದ ಆಂತರಿಕ ಸಮಸ್ಯೆಯೊಂದು ಸಾಮರಸ್ಯದಿಂದ ಬಗೆಹರಿಯಲಿದೆ.

ವೃಷಭ: ಈ ದಿನದ ಕೆಲಸ ಪ್ರಾರಂಭಕ್ಕೆ ಆತ್ಮಸ್ಥೈರ್ಯ ಬಹಳ ಮುಖ್ಯ. ಯಾವುದೇ ಒತ್ತಡಕ್ಕೆ ಮಣಿಯದೆ ಮುನ್ನುಗ್ಗಿ, ಜಯ ನಿಮ್ಮದಾಗಲಿದೆ. ನಿಮ್ಮ ಮನೋಭಿಲಾಷೆಗಳನ್ನು ವ್ಯಕ್ತಪಡಿಸಲು ಹಿಂಜರಿಯಬೇಡಿ.

ಮಿಥುನ: ಹವ್ಯಾಸಿ ಕಲಾವಿದರಾದ ನೀವು ಕತೆ ಕವನಗಳ ಬರವಣಿಗೆಯಲ್ಲಿ ಹೆಚ್ಚಿನ ಸಮಯ ಕಳೆಯುವಿರಿ. ಯಾವುದೇ ಹೊಸ ನಿರ್ಧಾರ ತೆಗೆದುಕೊಳ್ಳುವ ಮೊದಲು ಸಮಯಾವಕಾಶ ತೆಗೆದುಕೊಂಡು ಯೋಚಿಸಿ ನಿರ್ಧಾರ ಕೈಗೊಳ್ಳಿ.

ಕರ್ಕಾಟಕ: ಇಂದು ನಿಮಗೆ ಕಷ್ಟದ ದಿನ ಎನಿಸಬಹುದು. ಅದರೆ ಇದೇ ನಿಮಗೆ ನಾಳಿನ ಸುಖಕ್ಕೆ ನಾಂದಿಯಾಗಲಿದೆ. ತಾಳ್ಮೆ ಜಯದ ಮಂತ್ರವಾಗಿರಲಿದೆ. ಹರಿತವಾದ ಆಯುಧಗಳ ಬಳಕೆಯ ವಿಷಯದಲ್ಲಿ ಜಾಗ್ರತೆ ವಹಿಸಿ.

ಸಿಂಹ: ಈ ದಿನ ನಿಮ್ಮ ಪ್ರತಿಭೆಯ ತೀಕ್ಷ್ಣತೆಯು ಸಂಬಂಧಪಟ್ಟವರ ಗಮನ ಸೆಳೆಯಲಿದೆ. ನಿಮ್ಮ ಎಲ್ಲ ಪ್ರಾಮಾಣಿಕ ಪ್ರಯತ್ನಗಳು ಯಶಸ್ಸು ಕಾಣುವ ಹಾದಿಯಲ್ಲಿರುವುದು. ನೆರೆಹೊರೆಯವರ ವೈಷಮ್ಯಗಳು ಅನುಭವಕ್ಕೆ ಬರಲಿವೆ.

ಕನ್ಯಾ: ವಿನಾಕಾರಣ ಅಲೆದಾಟದಿಂದ ಬೇಸರ ಪಡುವ ಅವಶ್ಯಕತೆ ಇಲ್ಲ. ಇಂದಿನ ನಿಮ್ಮ ಶ್ರಮ ಮುಂದಿನ ದಿನಕ್ಕೆ ಒಂದು ಅಡಿಪಾಯವಾಗಲಿದೆ. ವಿವಾದದ ಗೊಡವೆಗಳಿಂದ ದೂರ ಉಳಿಯುವುದರಿಂದ ಗೌರವ ಕಾಪಾಡಿಕೊಳ್ಳಹುದು.

ತುಲಾ: ಅಧಿಕಾರಸ್ಥರು ಹಾಗೂ ನಿಮ್ಮ ಹಿರಿಯ ನೌಕರರ ಜತೆ ನಿಮ್ಮ ಸ್ನೇಹ ಸಂಬಂಧ ಹೆಚ್ಚಾಗಿ ವೃತ್ತಿಯಲ್ಲಿ ನವ ಉಲ್ಲಾಸ ಮೂಡಲಿದೆ. ಸಾರ್ವಜನಿಕ ಸ್ಥಳದಲ್ಲಿ ನಿಮ್ಮ ಗೌರವ ಕಾಪಾಡಿಕೊಳ್ಳುವ ಬಗ್ಗೆ ಗಮನವಿರಲಿ.

ವೃಶ್ಚಿಕ: ಔದ್ಯೋಗಿಕ ವ್ಯವಹಾರದಲ್ಲಿ ನಿರೀಕ್ಷೆಗೆ ತಕ್ಕ ಫಲಗಳು ಪಡೆದುಕೊಳ್ಳಲು ಕಷ್ಟವಾಗಬಹುದು. ನಿಮ್ಮ ಪ್ರತಿಭೆ ಗುರುತಿಸಿಲ್ಲ ಎಂಬ ನಿಮ್ಮ ನೋವು ಇಂದೇ ಕೊನೆಯಾಗಲಿದೆ. ಉಡುಗೊರೆ ಲಭ್ಯವಾಗುವ ಸಾಧ್ಯತೆಯಿದೆ.

ಧನು: ಎದುರಾಗಿರುವ ಸದ್ಯದ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ. ಅದು ನಿಮ್ಮನ್ನು ಸಂತಸಗೊಳಿಸಲಿದೆ. ಏನೇ ಆದರೂ ಅದನ್ನು ಮುಕ್ತವಾಗಿ ಸ್ವೀಕರಿಸುವ ಭಾವನೆ ಇರಲಿ, ನಿಮ್ಮ ಮನೋಭಿಲಾಷೆ ಈಡೇರಲಿದೆ.

ಮಕರ: ಹಿರಿಯ ಮಗನ ಸಹಾಯದಿಂದ ಗಣ್ಯರ ಪರಿಚಯ ಹಾಗೂ ಸಹಾಯ ದೊರೆತು ನಿಮ್ಮ ಹೊಸ ಯೋಜನೆಗಳಿಗೆ ಅನುಕೂಲವಾಗಲಿದೆ. ನಿಮ್ಮ ಅದೃಷ್ಟವನ್ನು ಇಂದು ಪರೀಕ್ಷಿಸಿಕೊಳ್ಳಬಹುದು. ಆರೋಗ್ಯ ವೃದ್ಧಿಯಾಗಲಿದೆ.

ಕುಂಭ: ಹೊಸ ಪೀಠೋಪಕರಣಗಳ ಖರೀದಿಗೆ ಇಂದು ಧನವ್ಯಯವಾಗಲಿದೆ. ರಾಜಕೀಯ ವಲಯದ ಕಾರ್ಯಕರ್ತರಿಗೆ ಮುನ್ನಡೆಯುವ ಅವಕಾಶಗಳು ತಪ್ಪುವ ಸಾಧ್ಯತೆ ಇದೆ. ವಾಹನ ಚಾಲನೆಯಲ್ಲಿ ಮುತುವರ್ಜಿ ವಹಿಸಿ.

ಮೀನ: ಸಂತೋಷ ಕೂಟಗಳಲ್ಲಿ ನಿಮ್ಮ ಗೌರವ ಹೆಚ್ಚಿಸಿಕೊಳ್ಳುವ ಬಗ್ಗೆ ಗಮನವಿರಲಿ. ನಿಮ್ಮ ಆಪ್ತರು ನಿಮ್ಮ ಸಕಾಲಿಕ ನೆರವಿಗಾಗಿ ನಿಮಗೆ ಧನ್ಯವಾದ ಹೇಳಲಿದ್ದಾರೆ.

ಈಕ್ವಿಟಿ ರೂಪದಲ್ಲಿ ಹೂಡಿಕೆ ಮೊತ್ತ ₹15 ಸಾವಿರ ಕೋಟಿಗೆ ಇಳಿಕೆ

ತೈಲ ಕಂಪನಿಗಳಿಗೆ ನೆರವು ಕಡಿತ

ನವದೆಹಲಿ (ಪಿಟಿಐ): ನವೀಕರಿಸಬಹುದಾದ ಇಂಧನ ಯೋಜನೆಗಳಿಗೆ ಉತ್ತೇಜನ ನೀಡಲು ನಿರ್ಧರಿಸಿರುವ ಕೇಂದ್ರ ಸರ್ಕಾರವು, ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳಲ್ಲಿ ಈಕ್ವಿಟಿ ರೂಪದಲ್ಲಿ ಹೂಡಿಕೆ ಮಾಡುವ ಮೊತ್ತವನ್ನು ಅರ್ಧದಷ್ಟು ತಗ್ಗಿಸಲಿದೆ ಎಂದು ಹಣಕಾಸು ಸಚಿವಾಲಯ ತಿಳಿಸಿದೆ.

ಕಳೆದ ವರ್ಷದ ಫೆಬ್ರುವರಿಯಲ್ಲಿ ಮಂಡಿಸಿದ್ದ 2023–24ನೇ ಸಾಲಿನ ಬಜೆಟ್‌ನಲ್ಲಿ ಸರ್ಕಾರಿ ತೈಲ ಕಂಪನಿಗಳಲ್ಲಿ ಈಕ್ವಿಟಿ ರೂಪದಲ್ಲಿ ₹30 ಸಾವಿರ ಕೋಟಿ ಹೂಡಿಕೆ ಮಾಡುವ ಬಗ್ಗೆ ಘೋಷಿಸಲಾಗಿತ್ತು. ಭಾರತೀಯ ತೈಲ ನಿಗಮ, ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಮತ್ತು ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಅಭಿವೃದ್ಧಿಗೆ ಈ ನೆರವು ಪ್ರಕಟಿಸಲಾಗಿತ್ತು. ಸದ್ಯ ಈ ಮೊತ್ತವನ್ನು ₹15 ಸಾವಿರ ಕೋಟಿಗೆ ಇಳಿಸಲಾಗಿದೆ ಎಂದು 'ಎಕ್ಸ್'ನಲ್ಲಿ ಸಚಿವಾಲಯ ತಿಳಿಸಿದೆ.

ನಿಗದಿಪಡಿಸಿದ ಮೊತ್ತದಲ್ಲಿ ಅರ್ಧದಷ್ಟು ಕಡಿತ ಮಾಡುವ ಸಂಬಂಧ 2023ರ ನವೆಂಬರ್ 30ರಂದು ನಡೆದ ಹಣಕಾಸು ವೆಚ್ಚದ ಸಮಿತಿ ಸಭೆಯಲ್ಲಿ ನಿರ್ಧರಿಸಲಾಗಿತ್ತು. ಆದರೆ, ಇದಕ್ಕೆ ನಿರ್ದಿಷ್ಟ ಕಾರಣವನ್ನು ಸಚಿವಾಲಯವು ಬಹಿರಂಗಪಡಿಸಿರಲಿಲ್ಲ.

ಮುಖ್ಯಾಂಶಗಳು

- ಬಜೆಟ್‌ನಲ್ಲಿ ತೈಲ ಕಂಪನಿಗಳಿಗೆ ಮೀಸಲಿಟ್ಟದ್ದ ನೆರವು ಇಳಿಕೆ
- ಮಂಗಳೂರು, ವಿಶಾಖ ಪಟ್ಟಣದಲ್ಲಿ ತೈಲ ಶೇಖರಣೆಗೆ ನಿರ್ಧರಿಸಿದ್ದ ಸರ್ಕಾರ
- ₹5 ಸಾವಿರ ಕೋಟಿ ಮೊತ್ತದ ತೈಲ ಖರೀದಿ ಯೋಜನೆ ಮುಂದೂಡಿಕೆ

ತೈಲ ಪೂರೈಕೆಯಲ್ಲಿ ಎದುರಾಗುವ ತೊಂದರೆ ತಪ್ಪಿಸಲು ಕರ್ನಾಟಕದ ಮಂಗಳೂರು ಮತ್ತು ಆಂಧ್ರಪ್ರದೇಶದ ವಿಶಾಖಪಟ್ಟಣದ ಆಯಕಟ್ಟಿನ ಸ್ಥಳದಲ್ಲಿ ತೈಲ ಶೇಖರಣಾ ಘಟಕಗಳನ್ನು ಸ್ಥಾಪಿಸಲಾಗಿದೆ. ಈ ಘಟಕಗಳಲ್ಲಿ ಶೇಖರಣೆಗಾಗಿ ಕಚ್ಚಾ ತೈಲ ಖರೀದಿಸಲು ₹5,000 ಕೋಟಿ ಮೊತ್ತದ ಪ್ರಸ್ತಾವವನ್ನು ಸಿದ್ಧಪಡಿಸಲಾಗಿತ್ತು. ತೈಲ ಮಾರುಕಟ್ಟೆಯಲ್ಲಿನ ಪ್ರಸಕ್ತ ಬೆಳವಣಿಗೆಗಳನ್ನು ಆಧರಿಸಿ ಈ ಯೋಜನೆಯನ್ನೂ ಮುಂದೂಡಲಾಗಿದೆ ಎಂದು ತಿಳಿಸಿದೆ.

ಬಜೆಟ್ ದಾಖಲೆ ಸರಿಗಟ್ಟಲು ಸಜ್ಜಾದ ಸಚಿವೆ ನಿರ್ಮಲಾ


ನಿರ್ಮಲಾ

ನವದೆಹಲಿ (ಪಿಟಿಐ): ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಫೆಬ್ರುವರಿ 1ರಂದು ಕೇಂದ್ರದ ಮಧ್ಯಂತರ ಬಜೆಟ್ ಮಂಡಿಸಲಿದ್ದು, ಆ ಮೂಲಕ ಆರು ಬಾರಿ ಬಜೆಟ್ ಮಂಡಿಸಿರುವ ಮಾಜಿ ಪ್ರಧಾನಿ ದಿವಂಗತ ಮೊರಾರ್ಜಿ ದೇಸಾಯಿ ಅವರ ದಾಖಲೆಯನ್ನು ಸರಿಗಟ್ಟಲಿದ್ದಾರೆ.

ನಿರ್ಮಲಾ ಅವರು ಐದು ಬಾರಿ ಕೇಂದ್ರ ಬಜೆಟ್ ಮಂಡಿಸಿದ ಪ್ರಥಮ ಹಣಕಾಸು ಸಚಿವೆಯೂ ಆಗಿದ್ದಾರೆ. ದೇಶದಲ್ಲಿ ಇಲ್ಲಿಯವರೆಗೆ ಮನಮೋಹನ್ ಸಿಂಗ್, ಅರುಣ್ ಜೇಟ್ಲಿ, ಪಿ. ಚಿದಂಬರಂ ಮತ್ತು ಯಶವಂತ ಸಿನ್ಹಾ ಅವರು ಐದು ಬಾರಿ ಬಜೆಟ್ ಮಂಡಿಸಿದ್ದಾರೆ.

ಹಣಕಾಸು ಸಚಿವರಾಗಿದ್ದಾಗ ಮೊರಾರ್ಜಿ ದೇಸಾಯಿ ಅವರು 1959–1964ರ ನಡುವೆ ಐದು ಬಾರಿ ವಾರ್ಷಿಕ ಹಾಗೂ ಒಂದು ಮಧ್ಯಂತರ ಬಜೆಟ್ ಮಂಡಿಸಿದ ಹೆಗ್ಗಳಿಕೆ ಹೊಂದಿದ್ದಾರೆ.

ಏಪ್ರಿಲ್ ಅಥವಾ ಮೇ ತಿಂಗಳಿನಲ್ಲಿ ಲೋಕಸಭೆಗೆ ಚುನಾವಣೆ ನಡೆಯಲಿದೆ. ಹೊಸ ಸರ್ಕಾರ ರಚನೆಯಾದ ಬಳಿಕ ಪೂರ್ಣ ಬಜೆಟ್ ಮಂಡನೆಯಾಗಲಿದೆ. ಹಾಗಾಗಿ, ಫೆಬ್ರುವರಿ 1ರಂದು 2024–25ನೇ ಹಣಕಾಸು ವರ್ಷದ ಮಧ್ಯಂತರ ಬಜೆಟ್ ಮಂಡನೆಯಾಗಲಿದೆ.

ಮಧ್ಯಂತರ ಬಜೆಟ್‌ನಲ್ಲಿ ಕೇಂದ್ರ ಸರ್ಕಾರ ಯಾವುದೇ ಹೊಸ ಘೋಷಣೆ ಪ್ರಕಟಿಸುವುದಿಲ್ಲ ಎಂದು ಹೇಳಲಾಗಿದೆ. ಕಳೆದ ತಿಂಗಳು ನಡೆದ ಕೈಗಾರಿಕಾ ಸಭೆಯಲ್ಲಿ ನಿರ್ಮಲಾ ಅವರು ಬಜೆಟ್‌ನಲ್ಲಿ ಯಾವುದೇ ಹೊಸ ಘೋಷಣೆ ಪ್ರಕಟಿಸುವುದಿಲ್ಲ ಎಂದು ಹೇಳಿದ್ದರು.

ಸುಯೇಜ್ ಕಾಲುವೆ ಸರಕು ಸಾಗಣೆ ಶೇ 45ರಷ್ಟು ಕುಸಿತ

ಬ್ರುಸೆಲ್ಸ್ (ರಾಯಿಟರ್ಸ್): ಯೆಮನ್‌ನ ಹುಥಿ ಬಂಡುಕೋರರ ದಾಳಿಯಿಂದಾಗಿ ಸುಯೇಜ್ ಕಾಲುವೆ ಮೂಲಕ ನಡೆಯುತ್ತಿದ್ದ ಸರಕು ಸಾಗಣೆಯು ಶೇ 45ರಷ್ಟು ಕುಸಿದಿದೆ ಎಂದು ವಿಶ್ವಸಂಸ್ಥೆಯ ವಿಶ್ವ ವಾಣಿಜ್ಯ ಮತ್ತು ಅಭಿವೃದ್ಧಿ ಸಮ್ಮೇಳನ (ಯುಎನ್‌ಸಿಟಿಎಡಿ) ಹೇಳಿದೆ.

ಕೆಂಪು ಸಮುದ್ರದಲ್ಲಿ ವಾಣಿಜ್ಯ ಹಡಗುಗಳ ಮೇಲೆ ಕಳೆದ ಎರಡು ತಿಂಗಳಿನಿಂದಲೂ ಹುಥಿ ಬಂಡುಕೋರರಿಂದ ದಾಳಿ ಮುಂದುವರಿದಿದೆ. ಹಾಗಾಗಿ, ಹಡಗುಗಳ ಸಂಚಾರ ಮಾರ್ಗ ಬದಲಾಗಿದೆ.

ಈ ಬೆಳವಣಿಗೆಯು ಮುಂದಿನ ದಿನಗಳಲ್ಲಿ ಜಾಗತಿಕ ಮಟ್ಟದಲ್ಲಿ ಹಣದುಬ್ಬರದ ಏರಿಕೆ ಮತ್ತು ಆಹಾರ ಭದ್ರತೆ ಸಮಸ್ಯೆ ಸೃಷ್ಟಿಗೂ ಕಾರಣವಾಗಬಹುದು. ಅಲ್ಲದೇ, ಹಸಿರುಮನೆ ಅನಿಲಗಳ ಹೊರಸೂಸುವಿಕೆ ಪ್ರಮಾಣ ಹೆಚ್ಚಳವಾಗುವ ಸಾಧ್ಯತೆಯಿದೆ ಎಂದು ಎಚ್ಚರಿಕೆ ನೀಡಿದೆ.

ಜಾಗತಿಕಮಟ್ಟದಲ್ಲಿ ಸುಯೇಜ್ ಕಾಲುವೆ ಮೂಲಕ ಶೇ 12ರಿಂದ 15ರಷ್ಟು ವ್ಯಾಪಾರ ನಡೆಯುತ್ತದೆ. ಶೇ 25ರಿಂದ 30ರಷ್ಟು ಕಂಟೈನರ್ ಸಾಗಣೆ ನಡೆಯುತ್ತದೆ. ಆದರೆ, ಡಿಸೆಂಬರ್‌ನಿಂದ ಜನವರಿ 19ರವರೆಗೆ ಕಂಟೈನರ್ ಸಾಗಣೆ ಶೇ 82ರಷ್ಟು ಕುಸಿದಿದೆ ಎಂದು ತಿಳಿಸಿದೆ.

ಟಿಸಿಎಸ್ ಒಪ್ಪಂದ ರದ್ದು

ಆಕ್ಸ್‌ಫರ್ಡ್ ವಿ.ವಿ ಪ್ರವೇಶ ಪರೀಕ್ಷೆಯಲ್ಲಿ ತಾಂತ್ರಿಕ ದೋಷ

ನವದೆಹಲಿ (ಪಿಟಿಐ): ಆನ್‌ಲೈನ್ ಪ್ರವೇಶ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಎದುರಿಸಿದ ತಾಂತ್ರಿಕ ತೊಡಕಿನಿಂದಾಗಿ ಟಾಟಾ ಕನ್ಸಲ್ಟೆನ್ಸಿ ಸರ್ವಿಸ್ (ಟಿಸಿಎಸ್) ಜೊತೆಗಿನ ಒಪ್ಪಂದವನ್ನು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯವು ರದ್ದುಪಡಿಸಿದೆ.

ವಿಶ್ವದಾದ್ಯಂತ ಪ್ರತಿವರ್ಷ ಸಾವಿರಾರು ವಿದ್ಯಾರ್ಥಿಗಳು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಕ್ಕೆ ಪ್ರವೇಶಾತಿ ಕೋರಿ ಆನ್‌ಲೈನ್‌ನಲ್ಲಿ ಪರೀಕ್ಷೆ ಬರೆಯುತ್ತಾರೆ. ಬ್ರಿಟನ್‌ನ 30 ಕಾಲೇಜುಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿ ಪ್ರವೇಶಾತಿಗೆ ವಿಶ್ವವಿದ್ಯಾಲಯವು ಈ ಪರೀಕ್ಷೆ ನಡೆಸುತ್ತದೆ.

ಭಾರತದ ಪ್ರಧಾನಿಗಳಾದ ಇಂದಿರಾ ಗಾಂಧಿ ಮತ್ತು ಮನಮೋಹನ್ ಸಿಂಗ್ ಕೂಡ ಇದೇ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡಿದ್ದಾರೆ.

ಒಪ್ಪಂದ ರದ್ದತಿಗೆ ಕಾರಣವೇನು?: 2023ರ ಏಪ್ರಿಲ್ 1ರಂದು ವಿಶ್ವವಿದ್ಯಾಲಯವು, ಟಿಸಿಎಸ್‌ನ ಕಲಿಕಾ ಮತ್ತು ಮೌಲ್ಯಮಾಪನ ಘಟಕವಾದ 'ಟಿಸಿಎಸ್ ಐಒಎನ್' ಅನ್ನು ಪರೀಕ್ಷಾ ಏಜೆನ್ಸಿಯಾಗಿ ಆಯ್ಕೆ ಮಾಡಿತ್ತು. ಇದಕ್ಕೂ ಮೊದಲು ಕೇಂಬ್ರಿಡ್ಜ್ ಅಡ್ಮಿಷನ್ ಅಸೆಸ್‌ಮೆಂಟ್ ಟೆಸ್ಟಿಂಗ್ ಏಜೆನ್ಸಿಯಾಗಿತ್ತು. ಆದರೆ, ಆನ್‌ಲೈನ್‌ನಲ್ಲಿ ಪ್ರವೇಶ ಪರೀಕ್ಷೆ ಬರೆದ ಹಲವು ವಿದ್ಯಾರ್ಥಿಗಳು ತಾಂತ್ರಿಕ ತೊಡಕು ಎದುರಿಸಿದ್ದರು. ಹಾಗಾಗಿ, ಮುಂದಿನ ಪರೀಕ್ಷೆಗಳಿಗೆ ಟಿಸಿಎಸ್‌ನಿಂದ ಯಾವುದೇ ಸೇವೆ ಪಡೆಯುವುದಿಲ್ಲ ಎಂದು ವಿಶ್ವವಿದ್ಯಾಲಯದ ವಕ್ತಾರರು ತಿಳಿಸಿದ್ದಾರೆ.

ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪರೀಕ್ಷಾ ಕೇಂದ್ರಗಳಿಂದಲೂ ತಾಂತ್ರಿಕ ದೋಷ ಎದುರಾದ ಬಗ್ಗೆ ಮಾಹಿತಿ ಪಡೆದಿದ್ದೇವೆ. ಗುಣಮಟ್ಟದ ಸೇವೆ ನೀಡುವುದು ನಮ್ಮ ಆದ್ಯತೆಯಾಗಿದೆ. ಸಮಸ್ಯೆ ಎದುರಿಸಿದ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ತಾಳ್ಮೆಗೆ ಆಭಾರಿಯಾಗಿದ್ದೇವೆ. ಫೆಬ್ರುವರಿಯಲ್ಲಿ ಮುಂದಿನ ಪ್ರವೇಶ ಸುತ್ತಿನ ಪ್ರಕ್ರಿಯೆ ನಡೆಯಲಿದೆ. ಇದಕ್ಕೂ ಮೊದಲೇ ಹೊಸ ವ್ಯವಸ್ಥೆ ಬಗ್ಗೆ ಮಾಹಿತಿ ನೀಡಲಾಗುತ್ತದೆ ಎಂದು ಹೇಳಿದ್ದಾರೆ.


ನವಿ ಮುಂಬೈನಲ್ಲಿ ಮರಾಠ ಮೀಸಲಾತಿಗಾಗಿ ಆಗ್ರಹಿಸಿ ಶುಕ್ರವಾರ ಪ್ರತಿಭಟನೆ ನಡೆಯಿತು –ಪಿಟಿಐ ಚಿತ್ರ

ಮರಾಠ ಪ್ರತಿಭಟನೆ: ಸಂಚಾರಕ್ಕೆ ಅಡ್ಡಿ

ಮುಂಬೈ (ಪಿಟಿಐ): ದಕ್ಷಿಣ ಮುಂಬೈನ ಛತ್ರಪತಿ ಶಿವಾಜಿ ಮಹಾರಾಜ ಟರ್ಮಿನಸ್‌ನ (ಸಿಎಸ್‌ಎಂಟಿ) ಬಳಿ ನೂರಕ್ಕೂ ಹೆಚ್ಚು ಮರಾಠ ಪ್ರತಿಭಟನಕಾರರು ಶುಕ್ರವಾರ ಪ್ರತಿಭಟಿಸಿದರು. ಇದರಿಂದ ಸಂಚಾರಕ್ಕೆ ಅಡ್ಡಿಯುಂಟಾಯಿತು.

ಆಜಾದ್ ಮೈದಾನಕ್ಕೆ ತೆರಳುತ್ತಿದ್ದ ಪ್ರತಿಭಟನಕಾರರು, ಸಿಎಸ್‌ಎಂಟಿ ಮತ್ತು ಬೃಹತ್ ಮುಂಬೈ ಮಹಾನಗರ ಪಾಲಿಕೆಯ ಕೇಂದ್ರ ಕಚೇರಿ ಬಳಿಯ ಕೂಡುರಸ್ತೆಯಲ್ಲಿ ಕುಳಿತು ಪ್ರತಿಭಟಿಸಿದರು. ಇದರಿಂದ ಕೆಲಹೊತ್ತು ಸಂಚಾರಕ್ಕೆ ಅಡ್ಡಿಯಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಧ್ಯಾಹ್ನದ ಬಳಿಕ ಮಹಾನಗರ ಪಾಲಿಕೆ ಮಾರ್ಗ ಹಾಗೂ ಡಿ.ಎನ್.ರಸ್ತೆಯಲ್ಲಿ ಸಂಚಾರ ಸ್ಥಗಿತಗೊಳಿಸಿದ ಅಧಿಕಾರಿಗಳು, ಬಸ್‌ಗಳ ಸಂಚಾರಕ್ಕೆ ಬದಲಿ ಮಾರ್ಗ ಕಲ್ಪಿಸಿದರು.

ಮರಾಠ ಮೀಸಲಾತಿಗಾಗಿ ಒತ್ತಾಯಿಸಿ ಮನೋಜ್ ಜಾರಾಂಗೆ ನೇತೃತ್ವದಲ್ಲಿ ಹೋರಾಟ ನಡೆದಿದ್ದು, ಅಪಾರ ಸಂಖ್ಯೆಯ ಪ್ರತಿಭಟನಕಾರರು ನವಿ ಮುಂಬೈನಲ್ಲಿ ಜಮಾಯಿಸಿದ್ದರು. ಹೋರಾಟಗಾರರು ಮುಂಬೈ ಪ್ರವೇಶಿಸದಂತೆ ಸರ್ಕಾರವು ಮನವೊಲಿಸುತ್ತಿದೆ.


10 ತಿಂಗಳಲ್ಲಿ 75 ಸಾವಿರ ಪೇಟೆಂಟ್ ಮಂಜೂರು

ನವದೆಹಲಿ (ಪಿಟಿಐ): 'ಕೇಂದ್ರ ಸರ್ಕಾರವು ಬೌದ್ಧಿಕ ಆಸ್ತಿ ಹಕ್ಕುಗಳನ್ನು ಬಲಪಡಿಸಲು ಮುಂದಾಗಿದೆ. ಹಾಗಾಗಿ, ಕಳೆದ ಹತ್ತು ತಿಂಗಳ ಅವಧಿಯಲ್ಲಿ 75 ಸಾವಿರ ಪೇಟೆಂಟ್‌ಗಳನ್ನು ಮಂಜೂರು ಮಾಡಿರುವುದು ದಾಖಲೆಯಾಗಿದೆ' ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

75ನೇ ಗಣರಾಜ್ಯೋತ್ಸವದ ಅಂಗವಾಗಿ ಶುಕ್ರವಾರ ನವೋದ್ಯಮಿಗಳು ಮತ್ತು ಉದ್ಯಮಿಗಳು ಜೊತೆಗೆ ಸಂವಾದ ನಡೆಸಿದ ಅವರು, ಉದ್ಯಮಗಳನ್ನು ಸರಳವಾಗಿ ನಡೆಸಲು 40 ಸಾವಿರ ನಿಯಮಗಳನ್ನು ತೆಗೆದುಹಾಕಲಾಗಿದೆ ಅಥವಾ ರದ್ದುಪಡಿಸಲಾಗಿದೆ. ಇದರಿಂದ ಉದ್ಯಮಿಗಳ ಮೇಲಿನ ಅತಿಯಾದ ಹೊರೆ ಕಡಿಮೆಯಾಗಿದೆ ಎಂದರು.

ಭಾರತೀಯ ಪೇಟೆಂಟ್ ಕಚೇರಿಯು ಪೇಟೆಂಟ್ ಮಂಜೂರು ಮಾಡುವಲ್ಲಿ ದಾಖಲೆ ಬರೆದಿದೆ ಎಂದು ಹೇಳಿದರು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹570
12 ಕ್ಕೆ	₹75
ಮೈಸೂರು	
100ಕ್ಕೆ	₹572

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹159.50
ಆರ್‌ಎಸ್‌ಎಸ್-5	₹154
ಗುಡ್ ಲಾಟ್	₹137.50

(ಪ್ರತಿ ಕೆ.ಜಿಗೆ)

ಗುಂಡಿನ ದಾಳಿ: 50 ಜನರ ಸಾವು

ಅಬುಜಾ, ನೈಜೀರಿಯಾ (ಎ.ಪಿ): ನೈಜೀರಿಯಾದ ಉತ್ತರ ಕೇಂದ್ರ ಭಾಗದಲ್ಲಿ ಕೃಷಿಕರು ಹಾಗೂ ಅಲೆಮಾರಿ ದನಗಾಹಿ ಸಮುದಾಯವರ ನಡುವೆ ತೀವ್ರ ಹಿಂಸಾಚಾರ ನಡೆದಿದೆ. ಕಳೆದ ಎರಡು ದಿನದಲ್ಲಿ ಗುಂಡಿನ ದಾಳಿಯಿಂದ 50 ಗ್ರಾಮಸ್ಥರು ಅಸುನೀಗಿದ್ದಾರೆ.

ಹಿಂಸಾಚಾರದ ಹಿಂದೆಯೇ ಸ್ಥಳೀಯ ಆಡಳಿತವು ಮುಂಜಾಗ್ರತೆಯಾಗಿ 24 ಗಂಟೆ ಕರ್ಫ್ಯೂ ಜಾರಿಗೊಳಿಸಿದೆ. ಹಿಂಸಾಚಾರ ನಿಲ್ಲಿಸಲು ಮನವಿ ಮಾಡಿದೆ. ಗುಂಡಿನ ದಾಳಿಯ ಹೊಣೆಯನ್ನು ಯಾವುದೇ ಗುಂಪು ಹೊತ್ತುಕೊಂಡಿಲ್ಲ.

ಮಾಂಗು ಜಿಲ್ಲೆಯಲ್ಲಿ ಕೆಲ ಗ್ರಾಮಗಳಿಗೆ ಮಂಗಳವಾರ ನುಗ್ಗಿದ್ದ ಬಂದೂಕುಧಾರಿಗಳು ನಿವಾಸಿಗಳ ಮೇಲೆ ಗುಂಡಿನ ದಾಳಿ ನಡೆಸಿ ಮನೆಗಳಿಗೆ ಬೆಂಕಿ ಹಚ್ಚಿದ್ದಾರೆ ಎಂದು ವಾಫವುಲ್ ಡೆವಲಪ್‌ಮೆಂಟ್ ಅಸೋಸಿಯೇಷನ್ ಸಮುದಾಯ ಸಂಘಟನೆ ಆರೋಪಿಸಿದೆ. ಗುರುವಾರವೂ ಕೆಲ ಶವಗಳು ಪತ್ತೆಯಾಗಿವೆ. ಹಲವರು ನಾಪತ್ತೆಯಾಗಿದ್ದಾರೆ ಎಂದು ಸಮುದಾಯದ ನಾಯಕ ಮಥಾಯಿಸ್ ಸೊಹೊಡೆನ್ ತಿಳಿಸಿದ್ದಾರೆ. ಗುಂಡಿನ ದಾಳಿಗೆ ಸಮುದಾಯದ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದು, ಪರಿಸ್ಥಿತಿ ಸುಧಾರಣೆಗೆ ಒತ್ತು ನೀಡಲು ಅಧ್ಯಕ್ಷ ಬೊಲ ಟಿನುಬು ಅವರಿಗೆ ಒತ್ತಾಯಿಸಿದ್ದಾರೆ. ಟಿನುಬು ಪ್ರಸ್ತುತ ಖಾಸಗಿ ಭೇಟಿಗಾಗಿ ಫ್ರಾನ್ಸ್‌ಗೆ ತೆರಳಿದ್ದಾರೆ.

ನೈಜೀರಿಯಾದಲ್ಲಿ ಭದ್ರತಾ ವ್ಯವಸ್ಥೆ ಸುಧಾರಿಸುವುದಾಗಿ ಟಿನುಬು ಚುನಾವಣೆ ವೇಳೆ ನೀಡಿದ್ದರು. ಆದರೆ, ಅಧಿಕಾರಕ್ಕೆ ಬಂದು ವರ್ಷ ಕಳೆದರೂ ಪರಿಸ್ಥಿತಿ ಸುಧಾರಿಸಿಲ್ಲ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಬಾಕಿ ಅನುದಾನ ಬಿಡುಗಡೆಗೆ ಗಡುವು

ಕೋಲ್ಕತ್ತ (ಪಿಟಿಐ): ರಾಜ್ಯಕ್ಕೆ ಕೊಡಬೇಕಿರುವ ಎಲ್ಲ ಬಾಕಿಯನ್ನು 7 ದಿನದಲ್ಲಿ ಬಿಡುಗಡೆ ಮಾಡಬೇಕು ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಗಡುವು ನಿಗದಿಪಡಿಸಿದ್ದಾರೆ.

ರಾಜಭವನದಲ್ಲಿ ನಡೆದ ಗಣರಾಜ್ಯೋತ್ಸವದಲ್ಲಿ ಮಾತನಾಡಿದ ಅವರು, 'ಕೇಂದ್ರ ಸರ್ಕಾರ ಗಡುವಿನಲ್ಲಿ ಬಾಕಿ ಬಿಡುಗಡೆ ಮಾಡದಿದ್ದರೆ ತೃಣಮೂಲ ಕಾಂಗ್ರೆಸ್ ಪಕ್ಷ ಬೃಹತ್ ಪ್ರತಿಭಟನೆ ನಡೆಸಲಿದೆ' ಎಂದು ಎಚ್ಚರಿಸಿದರು.

ಪಶ್ಚಿಮ ಬಂಗಾಳಕ್ಕೆ ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ₹9,330 ಕೋಟಿ, ನರೇಗಾದಡಿ ₹ 6,900 ಕೋಟಿ ,ರಾಷ್ಟ್ರೀಯ ಆರೋಗ್ಯ ಮಿಷನ್ ಯೋಜನೆಯಡಿ ₹ 830 ಕೋಟಿ, ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ₹ 770 ಕೋಟಿ ಬಿಡುಗಡೆಯಾಗಬೇಕಿದೆ.

ಗಾಜಾ: ನರಮೇಧ ತಡೆಗೆ ಕ್ರಮ ಇಸ್ರೇಲ್‌ಗೆ ಕೋರ್ಟ್ ಆದೇಶ

ಹೇಗ್ (ಎ.ಪಿ): ಗಾಜಾ ಪಟ್ಟಿಯಲ್ಲಿ ಸೇನೆಯಿಂದ ನರಮೇಧ ಮತ್ತು ಆಸ್ತಿ ಹಾನಿ ಆಗುವುದನ್ನು ತಡೆಯಬೇಕು ಎಂದು ಅಂತರರಾಷ್ಟ್ರೀಯ ನ್ಯಾಯಾಲಯ ಶುಕ್ರವಾರ ಇಸ್ರೇಲ್‌ಗೆ ಒತ್ತಾಯಿಸಿದೆ.

ಇಸ್ರೇಲ್ ಸೇನೆಯಿಂದ ಗಾಜಾದಲ್ಲಿ ನರಮೇಧ ನಡೆದಿದೆ ಎಂದು ಆರೋಪಿಸಿ ಪ್ರಕರಣ ದಾಖಲಿಸಿದ್ದ ದಕ್ಷಿಣ ಆಫ್ರಿಕಾ, ಗಾಜಾದಲ್ಲಿ ಕಾರ್ಯಾಚರಣೆ ಸ್ಥಗಿತಗೊಳಿಸುವಂತೆ ಇಸ್ರೇಲ್‌ಗೆ ಆದೇಶಿಸಬೇಕು ಎಂದು ಕೋರಿತ್ತು.

ಗಾಜಾದಲ್ಲಿ ಕದನ ವಿರಾಮಕ್ಕೆ ಕೋರ್ಟ್ ಆದೇಶಿಸಬಹುದು ಎಂದು ನಿರೀಕ್ಷೆ ಹುಸಿಯಾಯಿತು. ಆದರೆ, ಗಾಜಾದಲ್ಲಿ ಅತಿಕ್ರಮಣ ನಡೆಸಿರುವ ಇಸ್ರೇಲ್‌ನ ಸೇನೆ ಅಲ್ಲಿ ನರಮೇಧದಲ್ಲಿ ತೊಡಗಿದೆ ಎಂಬ ಆರೋಪವನ್ನು ಕೈಬಿಡುವುದಿಲ್ಲ ಎಂದು ಕೋರ್ಟ್ ಸ್ಪಷ್ಟಪಡಿಸಿತು. ಪ್ರಕರಣದ ವಿಚಾರಣೆ ನಡೆಸಿದ್ದ 17 ನ್ಯಾಯಮೂರ್ತಿಗಳ ಪೀಠದ ಪ್ರಾಥಮಿಕ ನಿರ್ಧಾರವನ್ನು ಪ್ರಕಟಿಸುವ ಕಲಾಪವನ್ನು ಅಂತರರಾಷ್ಟ್ರೀಯ ಕೋರ್ಟ್‌ನ ಅಧ್ಯಕ್ಷೆ ಜಾನ್ ಇ ಡೊನೊಗ್ ಆರಂಭಿಸಿದರು.

ಗಾಜಾ ವಲಯದಲ್ಲಿ ಸಂಭವಿಸಿರುವ ಮನುಕುಲದ ದುರಂತ ಹಾಗೂ ಅಲ್ಲಿ ನಿರಂತರವಾಗಿ ಆಗುತ್ತಿರುವ ಜೀವಹಾನಿ ಹಾಗೂ ಆಸ್ತಿನಷ್ಟದ ಅರಿವು ಅಂತರರಾಷ್ಟ್ರೀಯ ಕೋರ್ಟ್‌ಗಿದೆ ಎಂದು ಅಧ್ಯಕ್ಷೆ ಹೇಳಿದರು.

ಶುಕ್ರವಾರ ಪ್ರಕಟಿಸಲಿರುವುದು ಮಧ್ಯಂತರ ಆದೇಶ. ಪ್ರಕರಣದ ವಿಚಾರಣೆ ಅಂತ್ಯಗೊಳ್ಳಲು ವರ್ಷಗಳೇ ಆಗಬಹುದು ಎನ್ನಲಾಗಿದೆ. ಆದರೆ, ನರಮೇಧ ಆರೋಪವನ್ನು ಸ್ಪಷ್ಟವಾಗಿ ತಳ್ಳಿಹಾಕಿರುವ ಇಸ್ರೇಲ್, ಈ ಆರೋಪಗಳನ್ನು ಕೈಬಿಡಬೇಕು ಎಂದೂ ಮನವಿ ಮಾಡಿದೆ.


ಗಾಜಾ ಪಟ್ಟಿಯ ಖಾನ್ ಯೂನಿಸ್ ನಗರದಲ್ಲಿ ಗುಳೆ ಹೊರಡಲು ಶುಕ್ರವಾರ ನೂರಾರು ಪ್ಯಾಲೆಸ್ಟೀನಿಯರು ಸೇರಿದ್ದರು. ಸಮೀಪದಲ್ಲಿಯೇ ಇಸ್ರೇಲ್‌ನ ಟ್ಯಾಂಕರ್‌ಗಳು ಗಸ್ತು ತಿರುಗಿದವು –ಎಎಫ್‌ಪಿ ಚಿತ್ರ

ಗಾಜಾಪಟ್ಟಿ: ಗುಂಡಿನ ದಾಳಿ– 20 ಸಾವು

ರಫಾ (ಗಾಜಾ ಪಟ್ಟಿ): ಮಾನವೀಯ ನೆರವು ಪಡೆಯಲು ಗಾಜಾಪಟ್ಟಿಯಲ್ಲಿ ಸಾಲಿನಲ್ಲಿ ನಿಂತಿದ್ದ ಪ್ಯಾಲೆಸ್ಟೀನ್ ಜನರ ಗುಂಪಿನ ಮೇಲೆ ಇಸ್ರೇಲ್‌ನ ಸೇನೆಯು ಗುಂಡಿನ ದಾಳಿ ನಡೆಸಿದ್ದು, ಕನಿಷ್ಠ 20 ಮಂದಿ ಸತ್ತಿದ್ದಾರೆ ಎಂದು ಗಾಜಾದ ಆರೋಗ್ಯ ಸಚಿವಾಲಯ ಆರೋಪಿಸಿದೆ.

ಈ ಕುರಿತಂತೆ ವರದಿ ನಿರೀಕ್ಷಿಸಲಾಗಿದೆ ಎಂದು ಇಸ್ರೇಲ್ ಸೇನೆಯು ಪ್ರತಿಕ್ರಿಯಿಸಿದೆ. ಪ್ರತ್ಯಕ್ಷದರ್ಶಿಗಳು ಹಾಗೂ ಆರೋಗ್ಯ ಸಚಿವಾಲಯದ ಅಧಿಕಾರಿಗಳ ಪ್ರಕಾರ, ಗಾಜಾ ನಗರದ ದಕ್ಷಿಣ ಭಾಗದಲ್ಲಿ ಈ ಘಟನೆ ನಡೆದಿದೆ. ಜನರ ಗುಂಪು ಆಹಾರದ ನೆರವು ಸ್ವೀಕರಿಸಲು ಸೇರಿತ್ತು.

ಗುಂಡಿನ ದಾಳಿ ಬಳಿಕ ಜನರು ರಕ್ಷಣೆಗಾಗಿ ಓಡುತ್ತಿರುವುದು, ಕೆಲವರು ನೆರವಿನ ಬಾಕ್ಸ್‌ಗಳನ್ನು ಹಿಡಿದು ಧಾವಿಸುತ್ತಿರುವುದು, ಗಾಯಾಳುಗಳನ್ನು ಚಿಕಿತ್ಸೆಗಾಗಿ ಕತ್ತೆ, ಕುದುರೆ ಗಾಡಿಗಳ ಮೇಲೆ ಕರೆದೊಯ್ಯುತ್ತಿವ ದೃಶ್ಯಗಳಿರುವ ವಿಡಿಯೊಗಳು ಆನ್‌ಲೈನ್‌ನಲ್ಲಿ ಹರಿದಾಡುತ್ತಿವೆ. ಗಾಯಾಳುಗಳನ್ನು ಶಿಫಾ ಆಸ್ಪತ್ರೆಗೆ ದಾಖಲಿಸಲಾಗಿದೆ. 'ನಾವುಗಳು ಆಹಾರದ ಬಾಕ್ಸ್ ಪಡೆಯಲು ಕಾಯುತ್ತಿದ್ದಾಗ ಏಕಾಏಕಿ ಗುಂಡಿನ ದಾಳಿಯನ್ನು ನಡೆಸಲಾಯಿತು' ಎಂದು ಗಾಯಾಳು ಮೊಹಮ್ಮದ್ ಅಲ್ ರೀಫಿ ಅವರು ಪ್ರತಿಕ್ರಿಯಿಸಿದರು.

ಆರೋಗ್ಯ ಸಚಿವಾಲಯದ ವಕ್ತಾರ ಅಶ್ರಫ್ ಅಲ್ ಖಿದ್ರಾ ಅವರು, 'ಗುಂಡಿನ ದಾಳಿಯಿಂದ 20 ಜನರು ಸತ್ತಿದ್ದಾರೆ ಹಾಗೂ ಇತರೆ 150 ಜನರು ಗಾಯಗೊಂಡಿದ್ದಾರೆ' ಎಂದು ತಿಳಿಸಿದರು.

ಪ್ರಕರಣ ದಾಖಲಿಸಿದ್ದ ದಕ್ಷಿಣ ಆಫ್ರಿಕಾ, 'ಗಾಜಾದಲ್ಲಿ ಪ್ಯಾಲೆಸ್ಟೀನಿಯರ ರಕ್ಷಣೆಗೆ ತುರ್ತು ಕ್ರಮವಹಿಸಬೇಕು ಹಾಗೂ ಸೇನೆ ಕಾರ್ಯಾಚರಣೆ ಸ್ಥಗಿತಕ್ಕೆ ಆದೇಶಿಸಬೇಕು' ಎಂದು ಕೋರಿತ್ತು. ಹಾಗೂ ತುರ್ತು ಆದ್ಯತೆ ಮೇರೆಗೆ ವಿಚಾರಣೆ ನಡೆಸಬೇಕು' ಎಂದು ಮನವಿ ಮಾಡಿತ್ತು.

'ಉತ್ತರ ಪ್ರದೇಶದಲ್ಲಿ ಹೆಚ್ಚು ಕಾಲೇಜುಗಳು'

ನವದೆಹಲಿ (ಪಿಟಿಐ): ಉತ್ತರ ಪ್ರದೇಶವು ದೇಶದಲ್ಲಿಯೇ ಅತ್ಯಧಿಕ ಸಂಖ್ಯೆಯ ಕಾಲೇಜುಗಳನ್ನು ಹೊಂದಿರುವ ರಾಜ್ಯ ಎಂಬ ಹೆಗ್ಗಳಿಕೆ ಹೊಂದಿದೆ. ಇದರ ನಂತರ ಎರಡು ಸ್ಥಾನಗಳಲ್ಲಿ ಕ್ರಮವಾಗಿ ಮಹಾರಾಷ್ಟ್ರ ಮತ್ತು ಕರ್ನಾಟಕ ಇವೆ. ಪ್ರತಿ ಲಕ್ಷ ಜನಸಂಖ್ಯೆಗೆ ಅತಿ ಹೆಚ್ಚು ಕಾಲೇಜುಗಳಿರುವುದು ಕೂಡ ಕರ್ನಾಟಕ ದಲ್ಲಿಯೇ.

ಕೇಂದ್ರ ಶಿಕ್ಷಣ ಇಲಾಖೆಯು ಗುರುವಾರ ತಡರಾತ್ರಿ ಬಿಡುಗಡೆ ಮಾಡಿರುವ 2021–22ರ ಅಖಿಲ ಭಾರತ ಉನ್ನತ ಶಿಕ್ಷಣ ಸಮೀಕ್ಷೆಯ (ಎಐಎಸ್‌ಎಚ್‌ಇ) ವರದಿಯಲ್ಲಿ ಈ ಮಾಹಿತಿ ಇದೆ. ನಂತರದ 4ರಿಂದ 10 ಸ್ಥಾನಗಳಲ್ಲಿ ಕ್ರಮವಾಗಿ ರಾಜಸ್ಥಾನ, ತಮಿಳುನಾಡು, ಮಧ್ಯಪ್ರದೇಶ, ಆಂಧ್ರ ಪ್ರದೇಶ, ಗುಜರಾತ್, ತೆಲಂಗಾಣ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಿವೆ. ಈ ರಾಜ್ಯಗಳಲ್ಲಿ ಪ್ರತಿ ಲಕ್ಷ ಜನಸಂಖ್ಯೆಗೆ ಕನಿಷ್ಠ 30 ಅಥವಾ ಅದಕ್ಕೂ ಹೆಚ್ಚು ಕಾಲೇಜುಗಳಿವೆ. ಕರ್ನಾಟಕದಲ್ಲಿ ಅತ್ಯಧಿಕ ಅಂದರೆ ಪ್ರತಿ ಲಕ್ಷ ಜನಸಂಖ್ಯೆಗೆ 66 ಕಾಲೇಜುಗಳಿವೆ ಎಂದು ವರದಿ ಉಲ್ಲೇಖಿಸಿದೆ. ಉತ್ತರ ಪ್ರದೇಶದಲ್ಲಿ 8,375 ಕಾಲೇಜುಗಳಿದ್ದು, ಕಳೆದ ಬಾರಿ 8,114 ಕಾಲೇಜುಗಳನ್ನು ಹೊಂದಿತ್ತು. ಈ ರಾಜ್ಯದಲ್ಲಿ ಪ್ರತಿ ಲಕ್ಷ ಜನಸಂಖ್ಯೆಗೆ 30 ಕಾಲೇಜುಗಳಿವೆ. ಮಹಾರಾಷ್ಟ್ರದಲ್ಲಿ 4,692, ಕರ್ನಾಟಕದಲ್ಲಿ 4,430, ರಾಜಸ್ಥಾನದಲ್ಲಿ 3,934, ತಮಿಳುನಾಡಿನಲ್ಲಿ 2,829 ಕಾಲೇಜುಗಳಿವೆ.

ಮಾನ್ಯತೆ ಪಡೆದಿರುವ 328 ವಿಶ್ವವಿದ್ಯಾಲಯಗಳ 45,473 ಕಾಲೇಜುಗಳು ಎಐಎಸ್‌ಎಚ್‌ಇ ಅಡಿಯಲ್ಲಿ ನೋಂದಣಿ ಆಗಿವೆ. ಈ ಪೈಕಿ 42,825 ಕಾಲೇಜುಗಳು 2021–22ರ ಸಮೀಕ್ಷೆಯಲ್ಲಿ ಪ್ರತಿಕ್ರಿಯಿಸಿವೆ. ಪ್ರತಿಕ್ರಿಯಿಸಿರುವ ಕಾಲೇಜುಗಳ ಪೈಕಿ 14,197 ಕಾಲೇಜುಗಳು ಸ್ನಾತಕೋತ್ತರ ಕೋರ್ಸ್ ನಡೆಸುತ್ತಿವೆ, ಈ ಪೈಕಿ 1,063 ಕಾಲೇಜುಗಳಲ್ಲಿ ಪಿಎಚ್.ಡಿ ನೋಂದಣಿಗೆ ಅವಕಾಶವಿದೆ ಎಂದು ತಿಳಿಸಿದೆ.

ಮಂಗಳದಲ್ಲಿ ಹಾರಾಟ ನಿಲ್ಲಿಸಿದ ನಾಸಾದ 'ಇಂಜೆನ್ಯುಯಿಟಿ'

ಕೇಪ್ ಕ್ಯಾನವೆರಲ್, ಅಮೆರಿಕ (ಎ.ಪಿ): 'ನಾಸಾ'ದ ಪುಟಾಣಿ ಹೆಲಿಕಾಪ್ಟರ್ 'ಇಂಜೆನ್ಯುಯಿಟಿ' ಮಂಗಳ ಗ್ರಹದಲ್ಲಿ ತನ್ನ ಕಡೆಯ ಹಾರಾಟವನ್ನು ನಡೆಸಿದೆ. 1.8 ಕೆ.ಜಿ ತೂಕದ 'ಇಂಜೆನ್ಯುಯಿಟಿ' ಮತ್ತೆಂದೂ ಹಾರಾಟ ನಡೆಸುವುದಿಲ್ಲ ಎಂದು ನಾಸಾ ಗುರುವಾರ ಪ್ರಕಟಿಸಿದೆ.

ಇದರ ರೆಕ್ಕೆಗಳು ಜಖಂಗೊಂಡಿರುವುದು ಇದಕ್ಕೆಕಾರಣ. ಇದು, ಮಂಗಳದಲ್ಲಿಯೇ ಇರಲಿದ್ದು, ನಿಯಂತ್ರಣ ಕೊಠಡಿ ಜೊತೆ ಸಂಪರ್ಕದಲ್ಲಿರಲಿದೆ. ಈ ಮೂಲಕ ₹ 706 ಕೋಟಿ ವೆಚ್ಚದ (85 ಮಿಲಿಯನ್ ಡಾಲರ್) ಯೋಜನೆ ಅಂತ್ಯಗೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಅಲ್ಪಾವಧಿಯ ತಾಂತ್ರಿಕ ಪ್ರಾತ್ಯಕ್ಷಿಕೆ ಉದ್ದೇಶದ 'ಇಂಜೆನ್ಯುಯಿಟಿ', ಸಣ್ಣ ಗಾತ್ರದ ರೊಬೊಟಿಕ್ ಹೆಲಿಕಾಪ್ಟರ್ 2021ರಲ್ಲಿ ಮಂಗಳ ಗ್ರಹಕ್ಕೆ ಕಾಲಿಟ್ಟಿತ್ತು. ಮೂರು ವರ್ಷಗಳಲ್ಲಿ 72 ಬಾರಿ ಹಾರಾಟ ನಡೆಸಿದ್ದು, 19 ಕಿ.ಮೀ. ಕ್ರಮಿಸಿದೆ. ಇದು, ಉದ್ದೇಶಿತ ಯೋಜನೆಗಿಂತಲೂ 14 ಪಟ್ಟು ಅಧಿಕ. 24 ಮೀಟರ್ ಎತ್ತರದಲ್ಲಿ ಗಂಟೆಗೆ 36 ಕಿ.ಮೀ ವೇಗದಲ್ಲಿ ಈ ಹೆಲಿಕಾಪ್ಟರ್ ಕ್ರಮಿಸಿದೆ' ಎಂದು ನಾಸಾ ವಿವರಿಸಿದೆ.


ಮಂಗಳ ಗ್ರಹದಲ್ಲಿ ಕಾರ್ಯನಿರತ ನಾಸಾದ 'ಇಂಜೆನ್ಯುಯಿಟಿ' ಹೆಲಿಕಾಪ್ಟರ್ –ಎಎಫ್‌ಪಿ ಸಂಗ್ರಹ ಚಿತ್ರ

'ಈ ಅಸಾಧಾರಣ ಹೆಲಿಕಾಪ್ಟರ್ ನಿರೀಕ್ಷಿಸಿದ್ದಕ್ಕಿಂತಲೂ ಎತ್ತರದಲ್ಲಿ ಹಾರಾಟ ನಡೆಸಿದ್ದು, ಭಿನ್ನ ವಾತಾವರಣದಲ್ಲಿಯೂ ತನ್ನ ಸಾಮರ್ಥ್ಯ ನಿರೂಪಿಸಿತ್ತು' ಎಂದು ನಾಸಾದ ಆಡಳಿತಾಧಿಕಾರಿ ಬಿಲ್ ನೆಲ್ಸನ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕಳೆದ ವಾರ ಹಾರಾಟದ ಬಳಿಕ ಹೆಲಿಕಾಪ್ಟರ್ ಅನ್ನು ಇಳಿಸುವಾಗ ಅದರ ರೆಕ್ಕೆಗಳು ಜಖಂಗೊಂಡಿರುವುದು ಗೊತ್ತಾಯಿತು. ಈ ರೆಕ್ಕೆಗಳು ಬಳಕೆಗೆ ಸೂಕ್ತವಾಗಿರಲಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬರಲಿದೆ 'ಭಾರತ ರತ್ನ' ಕರ್ಪೂರಿ ಠಾಕೂರ್ ಪುಸ್ತಕ

ನವದೆಹಲಿ (ಪಿಟಿಐ): 'ಭಾರತ ರತ್ನ' ಪುರಸ್ಕಾರಕ್ಕೆ (ಮರಣೋತ್ತರ) ಭಾಜನರಾದ ಬಿಹಾರದ ಮಾಜಿ ಮುಖ್ಯಮಂತ್ರಿ ಕರ್ಪೂರಿ ಠಾಕೂರ್ ಅವರ ಜೀವನಕ್ಕೆ ಸಂಬಂಧಿಸಿದ ಪುಸ್ತಕವು ಮೇ ತಿಂಗಳಿನಲ್ಲಿ ಬಿಡುಗಡೆಯಾಗಲಿದೆ ಎಂದು ಪೆಂಗ್ವಿನ್ ರ‍್ಯಾಂಡಮ್ ಹೌಸ್ ಇಂಡಿಯಾ ತಿಳಿಸಿದೆ.

ಸಂತೋಷ್ ಸಿಂಗ್ ಮತ್ತು ಆದಿತ್ಯ ಅನ್ಮೋಲ್ ಬರೆದಿರುವ 'ದ ಜನನಾಯಕ ಕರ್ಪೂರಿ ಠಾಕೂರ್: ವಾಯ್ಸ್ ಆಫ್ ದಿ ವಾಯ್ಸ್‌ಲೆಸ್' ಪುಸ್ತಕವು ಅವರ ರಾಜಕೀಯ ಜೀವನದ ಮೇಲೆ ಬೆಳಕು ಚೆಲ್ಲಲಿದೆ. ಅಲ್ಲದೆ, ಒಳಮೀಸಲಾತಿ ಕುರಿತ ಅವರ ಪರಿಕಲ್ಪನೆಯ ಅಂಶವನ್ನೂ ಈ ಪುಸ್ತಕ ಒಳಗೊಂಡಿದೆ.

ಒಬಿಸಿ, ಆರ್ಥಿಕವಾಗಿ ಹಿಂದುಳಿದ ವರ್ಗಗಳು, ಆರ್ಥಿಕವಾಗಿ ದುರ್ಬಲವಾಗಿರುವ ವರ್ಗಗಳು ಮತ್ತು ಮಹಿಳಾ ಮೀಸಲಾತಿ– ಇವುಗಳನ್ನು ವಿಭಜಿಸಿ, ಜಾರಿಗೆ ತರುವುದರಲ್ಲಿ ಕರ್ಪೂರಿ ಬಹುಮುಖ್ಯವಾದ ಪಾತ್ರ ವಹಿಸಿದ್ದರು. ಈ ವಿಚಾರಗಳು ಮಂಡಲ್ ಆಯೋಗದ ಶಿಫಾರಸುಗಳ ಮೇಲೆ ಗಣನೀಯ ಪ್ರಭಾವ ಬೀರಿದ್ದವು.

'ಸಾಮಾಜಿಕ ದಂತಕಥೆಯಾದ ಬಿಹಾರದ ಮಾಜಿ ಮುಖ್ಯಮಂತ್ರಿ ಕರ್ಪೂರಿ ಠಾಕೂರ್ ಅವರ ಕುರಿತು ನಾವು ಬರೆದ ಪುಸ್ತಕವನ್ನು ಬಿಡುಗಡೆ ಮಾಡಲು ಪೆಂಗ್ವಿನ್ ಒಪ್ಪಿರುವುದು ಬಹಳ ಖುಷಿ ನೀಡಿದೆ. ಜೊತೆಗೆ ಠಾಕೂರ್ ಅವರಿಗೆ 'ಭಾರತ ರತ್ನ' ಘೋಷಿಸಿರುವುದು ನನ್ನ ಸಂತೋಷವನ್ನು ಇಮ್ಮಡಿಗೊಳಿಸಿದೆ. ಇತರೆ ಹಿಂದುಳಿದ ವರ್ಗಗಳಿಗೆ ಮೀಸಲಾತಿಗಾಗಿ ಹೋರಾಡಿದ ಮೊದಲಿಗರಷ್ಟೇ ಅಲ್ಲದೆ, ಎಲ್ಲರನ್ನೂ ಒಳಗೊಂಡ ಸಂಘಟನಾತ್ಮಕ ರಾಜಕೀಯಕ್ಕೂ ಒತ್ತು ನೀಡಿದ್ದರು' ಎಂದು ಸಂತೋಷ್ ಸಿಂಗ್ ಹೇಳಿದರು.







1. ಪಥಸಂಚಲನದಲ್ಲಿ ಮಧ್ಯಮ ವ್ಯಾಪ್ತಿಯ ಕ್ಷಿಪಣಿ ವ್ಯವಸ್ಥೆ (ಎಂಆರ್‌ಎಸ್‌ಎಎಂ) ಭಾಗಿಯಾಗಿತ್ತು 2. ಹಿಮಾಚಲ ಪ್ರದೇಶದ ಕುಲ್ಲು ಜಿಲ್ಲೆಯ ಕಲಾವಿದರು ನೃತ್ಯ ಪ್ರದರ್ಶನ ಮಾಡಿದರು 3. ಸಶಸ್ತ್ರ ಪಡೆಯ ವೈದ್ಯಕೀಯ ಸೇವೆಗಳ (ಎಎಫ್‌ಎಂಎಸ್) ವಿಭಾಗದ ಮಹಿಳಾ ಸಿಬ್ಬಂದಿ ಪಥ ಸಂಚಲನದಲ್ಲಿ ಪಾಲ್ಗೊಂಡರು —ಪಿಟಿಐ ಚಿತ್ರಗಳು

ಸೇನೆ ಸಾಮರ್ಥ್ಯ ಪ್ರದರ್ಶನಕ್ಕೆ ಸಾಕ್ಷಿಯಾದ ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್

ಪಥ ಸಂಚಲನಕ್ಕೆ ರಫೇಲ್ ಮೆರುಗು

ನವದೆಹಲಿ(ಪಿಟಿಐ): ಫ್ರಾನ್ಸ್ ನಿರ್ಮಿತ ಎರಡು ರಫೇಲ್ ಯುದ್ಧ ವಿಮಾನಗಳು ಚಿತ್ತಾರ ಮೂಡಿಸುತ್ತಾ ನೀಲಾಕಾಶದಲ್ಲಿ ಮಿಂಚಿಗಿಂತಲೂ ವೇಗವಾಗಿ ಹಾರಾಡಿದರೆ, ಬಹೂಪಯೋಗಿ ಟ್ಯಾಂಕ್ ಸಾಗಣೆ ಯುದ್ಧವಿಮಾನ ಇವುಗಳಿಗೆ ಸಾಥ್ ನೀಡಿತು...

ಇದು 75ನೇ ಗಣ ರಾಜ್ಯೋತ್ಸವದ ಅಂಗವಾಗಿ ಇಲ್ಲಿನ ಕರ್ತವ್ಯ ಪಥದಲ್ಲಿ ಶುಕ್ರವಾರ ನಡೆದ ಪಥಸಂಚಲನದ ವೇಳೆ ಕಂಡುಬಂದ ದೃಶ್ಯ.

ಭಾರತದ ಸಶಸ್ತ್ರ ಪಡೆಗಳು ತಮ್ಮ ರಕ್ಷಣಾ ವ್ಯವಸ್ಥೆಗಳಿಗೆ ಆಧುನಿಕ ಸ್ಪರ್ಶ ನೀಡುವ ಜೊತೆಗೆ ಸಾಮರ್ಥ್ಯ ಹೆಚ್ಚಿಸಿಕೊಂಡಿದ್ದನ್ನು ಅನಾವರಣಗೊಳಿಸುವುದಕ್ಕೆ ಗಣರಾಜ್ಯೋತ್ಸವ ಕಾರ್ಯಕ್ರಮ ವೇದಿಕೆಯಾಗಿದ್ದರೆ, ಮುಖ್ಯ ಅತಿಥಿ ಆಗಿದ್ದ ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಪ್ರದರ್ಶನಕ್ಕೆ ಸಾಕ್ಷಿಯಾದರು.

ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಕೇಂದ್ರ ಮಂತ್ರಿಗಳು, ಸೇನೆಯ ಉನ್ನತ ಅಧಿಕಾರಿಗಳು, ವಿವಿಧ ದೇಶಗಳ ರಾಜತಾಂತ್ರಿಕರು ಹಾಗೂ ಇಲಾಖೆಗಳ ಹಿರಿಯ ಅಧಿಕಾರಿಗಳು, ಯುದ್ಧ ವಿಮಾನಗಳ ಹಾರಾಟ ಸೇರಿದಂತೆ ಸೇನೆಯ ಸಾಮರ್ಥ್ಯ ಪ್ರದರ್ಶನವನ್ನು ಕಣ್ತುಂಬಿಕೊಂಡರು.

ಫ್ರಾನ್ಸ್ ಸೇನೆಯ 95 ಸೈನಿಕರು ಕರ್ತವ್ಯ ಪಥದಲ್ಲಿ ಸಾಗಿ ಬರುತ್ತಿದ್ದಂತೆಯೇ, ಅಬ್ಬರಿಸುತ್ತಾ ರಾಜಧಾನಿ ಆಗಸದಲ್ಲಿ ರಫೇಲ್ ಯುದ್ಧ ವಿಮಾನಗಳು ಹಾರಾಟ ನಡೆಸಿದವು. ಅಚ್ಚರಿಯಿಂದ ನೋಡುವ ಸರದಿ ಪ್ರೇಕ್ಷಕರದಾಗಿತ್ತು.

ಮೂವತ್ತು ಸದಸ್ಯರಿದ್ದ ಫ್ರಾನ್ಸ್ ಬ್ಯಾಂಡ್ ಮುದ ನೀಡಿತು. ಈ ಹಿಂದೆ, 2016ರಲ್ಲಿ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಫ್ರಾನ್ಸ್ ಪಡೆಗಳು ಪಾಲ್ಗೊಂಡಿದ್ದವು.

ಭಾರತೀಯ ಸೇನೆ ಶಕ್ತಿ ಪ್ರದರ್ಶನ: ಟಿ–90 ಭೀಷ್ಮ ಟ್ಯಾಂಕ್‌ಗಳು, ಎನ್‌ಎಜಿ ಕ್ಷಿಪಣಿ ವ್ಯವಸ್ಥೆಗಳು, ಸೈನಿಕರನ್ನು ಹೊತ್ತ ಭಾರಿ ವಾಹನಗಳು, ಎಲ್ಲ ರೀತಿಯ ಭೌಗೋಳಿಕ ಪ್ರದೇಶಗಳಲ್ಲಿ ಕಾರ್ಯಾಚರಣೆ ನಡೆಸಬಲ್ಲ ವಾಹನಗಳು 'ಕರ್ತವ್ಯ ಪಥ'ದಲ್ಲಿ ಸಾಗಿದಾಗ ಪ್ರೇಕ್ಷಕರು ಅಭಿಮಾನದಿಂದ ಕರತಾಡನ ಮಾಡಿದರು.

ಶತ್ರು ಪಾಳೆಯದ ಆಯುಧಗಳನ್ನು ಪತ್ತೆಹಚ್ಚಬಲ್ಲ ರಾಡಾರ್ ವ್ಯವಸ್ಥೆ 'ಸ್ವಾತಿ', ಡ್ರೋನ್‌ಗೆ ತಡೆ ಒಡ್ಡಬಲ್ಲ ವ್ಯವಸ್ಥೆ, ನೆಲದಿಂದ ಆಕಾಶಕ್ಕೆ ಚಿಮ್ಮಿ ಗುರಿ ನಾಶ ಪಡಿಸಬಲ್ಲ ಮಧ್ಯಮ ವ್ಯಾಪ್ತಿಯ ಕ್ಷಿಪಣಿಗಳು ಸಹ ಗಮನಸೆಳೆದವು.

ಸೇನೆಯ ಪೊಲೀಸ್ ವಿಭಾಗದ ಕ್ಯಾಪ್ಟನ್ ಸಂಧ್ಯಾ ನೇತೃತ್ವದಲ್ಲಿ ಮೂರು ಪಡೆಗಳ ಮಹಿಳೆಯರನ್ನು ಒಳಗೊಂಡ ತುಕಡಿ ಆಕರ್ಷಕ ಪಥಸಂಚಲನ ನಡೆಸಿತು. ಕ್ಯಾಪ್ಟನ್ ಶರಣ್ಯ ರಾವ್, ಸಬ್ ಲೆಫ್ಟಿನೆಂಟ್ ಅಂಶು ಯಾದವ್ ಹಾಗೂ ಫ್ಲೈಟ್ ಲೆಫ್ಟಿನೆಂಟ್ ಸೃಷ್ಟಿ ರಾವ್ ಅವರೂ ಪಥಸಂಚಲನದ ಭಾಗವಾಗಿದ್ದರು.

ಮದ್ರಾಸ್ ರೆಜಿಮೆಂಟ್, ಗ್ರೆನೇಡಿಯರ್ಸ್, ರಜಪೂತಾನ್ ರೈಫಲ್ಸ್, ಸಿಖ್ ರೆಜಿಮೆಂಟ್, ನೌಕಾಪಡೆಯ ತುಕಡಿಗಳು ಸಹ ಇದ್ದವು.

ದೇಶೀಯವಾಗಿ ತಯಾರಿಸಿರುವ ಯುದ್ಧವಿಮಾನ 'ತೇಜಸ್' ಪ್ರದರ್ಶನ ಪಥಸಂಚಲನದ ಮೆರುಗು ಹೆಚ್ಚಿಸಿತ್ತು.

ಕೇಂದ್ರದ ವಿರುದ್ಧ ಮಾನ್ ಕಿಡಿ

ಚಂಡೀಗಢ (ಪಿಟಿಐ): 'ತಾಯ್ನಾಡಿಗಾಗಿ ತ್ಯಾಗ ಮಾಡಿದ ಅಸಂಖ್ಯಾತರನ್ನು ಹೊಂದಿರುವ ರಾಜ್ಯದ ಸ್ತಬ್ಧಚಿತ್ರವು, ನವದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವದ ಪರೇಡ್‌ನಲ್ಲಿ ಇಲ್ಲದಿರುವುದನ್ನು ಕಲ್ಪಿಸಿಕೊಳ್ಳಲಾಗುತ್ತಿಲ್ಲ' ಎಂದು ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಬೇಸರಿಸಿದರು.

ಲೂಧಿಯಾನದಲ್ಲಿ ಶುಕ್ರವಾರ ನಡೆದ ಗಣರಾಜ್ಯೋತ್ಸವದಲ್ಲಿ ಮಾತನಾಡಿದ ಮುಖ್ಯಮಂತ್ರಿಯು, 'ಕೇಂದ್ರವು ತಿರಸ್ಕರಿಸಿದ ಸ್ತಬ್ಧಚಿತ್ರಗಳನ್ನು ರಾಜ್ಯದ ಪರೇಡ್‌ನಲ್ಲಿ ಪ್ರದರ್ಶಿಸಲಾಗಿದೆ' ಎಂದು ತಿಳಿಸಿದರು.

'ಫ್ರಾನ್ಸ್‌ನಲ್ಲಿ ಅಧ್ಯಯನ: ಭಾರತೀಯ ವಿದ್ಯಾರ್ಥಿಗಳಿಗೆ ಹೆಚ್ಚು ಅವಕಾಶ'

ನವದೆಹಲಿ: ಫ್ರಾನ್ಸ್‌ನಲ್ಲಿ ಅಧ್ಯಯನ ಕೈಗೊಳ್ಳುವುದಕ್ಕೆ ಅಧಿಕ ಸಂಖ್ಯೆಯ ಭಾರತೀಯ ವಿದ್ಯಾರ್ಥಿಗಳಿಗೆ ಅವಕಾಶ ನೀಡುವುದಾಗಿ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಶುಕ್ರವಾರ ಘೋಷಿಸಿದ್ದಾರೆ.

ಜೊತೆಗೆ, ಫ್ರಾನ್ಸ್‌ನಲ್ಲಿ ಅಧ್ಯಯನ ಪೂರ್ಣಗೊಳಿಸಿರುವ ಭಾರತೀಯ ವಿದ್ಯಾರ್ಥಿಗಳಿಗೆ ಸುಲಭವಾಗಿ ವೀಸಾ ಲಭಿಸುವಂತೆ ಕ್ರಮ ಕೈಗೊಳ್ಳಲಾಗುವುದು ಎಂದೂ ಅವರು ಹೇಳಿದ್ದಾರೆ.

ಈ ಕುರಿತು, ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು, '2030ರ



ಇಮ್ಯಾನುಯೆಲ್ ಮ್ಯಾಕ್ರನ್

ವೇಳೆಗೆ 30 ಸಾವಿರ ಭಾರತೀಯ ವಿದ್ಯಾರ್ಥಿಗಳು ಫ್ರಾನ್ಸ್‌ನಲ್ಲಿ ಅಧ್ಯಯನ ಕೈಗೊಳ್ಳುವಂತಾಗಬೇಕು ಎಂಬ ಮಹತ್ವಾಕಾಂಕ್ಷಿ ಗುರಿ ಹೊಂದಿದ್ದೇನೆ. ಈ ಗುರಿಯನ್ನು ನಿಶ್ಚಿತ ವಾಗಿಯೂ ಸಾಧಿಸುತ್ತೇನೆ' ಎಂದು ಹೇಳಿದ್ದಾರೆ. ಗಣ ರಾಜ್ಯೋತ್ಸವ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು.

ಕರ್ತವ್ಯಪಥದಲ್ಲಿ ನಾರಿಶಕ್ತಿ

ಎರಡನೇ ಮುಖಪುಟದಿಂದ...

ದೇಶದ ವಿವಿಧ ಭಾಗಗಳಲ್ಲಿ ಕಾಣಸಿಗುವ ಸಂಗೀತ ವಾದ್ಯಗಳ ಗೋಷ್ಠಿ 'ಆವಾಹನ'ದೊಂದಿಗೆ 'ನಾರಿ ಶಕ್ತಿ' ಪ್ರದರ್ಶನಕ್ಕೆ ಚಾಲನೆ ದೊರೆಯಿತು.

112 ಕಲಾವಿದೆಯರಿದ್ದ ತಂಡವು ಬುಡಕಟ್ಟು ವಾದ್ಯಗಳನ್ನು ಕೌಶಲಪೂರ್ಣವಾಗಿ ನುಡಿಸಿ ತಮ್ಮ ಶಕ್ತಿ ಮತ್ತು ಪರಿಣತಿಯನ್ನು ಪ್ರದರ್ಶಿಸಿತು. ಮಣಿಪುರ, ಮಧ್ಯಪ್ರದೇಶ, ರಾಜಸ್ಥಾನ, ಹರಿಯಾಣ, ಒಡಿಶಾ, ಜಾರ್ಖಂಡ್ ಮತ್ತು ಛತ್ತೀಸಗಡದ ಸ್ತಬ್ಧಚಿತ್ರಗಳು ಆಯಾ ಪ್ರದೇಶಗಳ ಮಹಿಳೆಯರ ಸಾಮರ್ಥ್ಯವನ್ನು ತೋರಿದವು.

ಕರಕುಶಲ ಕಲೆ, ಶಿಕ್ಷಣ, ನೃತ್ಯ, ಕ್ರೀಡೆಗಳಲ್ಲಿ ಮಹಿಳೆಯರ ಸಾಧನೆಯನ್ನು ಬಿಂಬಿಸುವ ಸ್ತಬ್ಧಚಿತ್ರಗಳಿಗೆ ಪ್ರೇಕ್ಷಕರು ಭಾರಿ ಚಪ್ಪಾಳೆಯೊಂದಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಸಶಸ್ತ್ರ ಪಡೆಗಳ ವೈದ್ಯಕೀಯ ಸೇವಾ ವಿಭಾಗದ ಎಲ್ಲ ಮಹಿಳೆಯರೇ ಇದ್ದ ತುಕಡಿಯು ಪಥಸಂಚಲನದಲ್ಲಿ ಭಾಗಿಯಾಗಿದ್ದು ಇದೇ ಮೊದಲು. ಗಡಿ ಕಾಯುವುದಷ್ಟೇ ಅಲ್ಲದೆ, ಆರೈಕೆ, ಗಾಯಾಳುಗಳ ತೆರವು, ಸಾರ್ವಜನಿಕ ಆರೋಗ್ಯ ರಕ್ಷಣೆಯಂತಹ ಕಾರ್ಯಗಳಲ್ಲಿಯೂ ತಾವು ಮುಂಚೂಣಿಯಲ್ಲಿದ್ದೇವೆ ಎಂಬ ಸಂದೇಶವನ್ನು ಈ ಪಥಸಂಚಲನವು ಸಾರಿತು.

1,500 ನೃತ್ಯಗಾರ್ತಿಯರ ಗುಂಪು 30 ಭಿನ್ನ ಜನಪದ ಶೈಲಿಯಲ್ಲಿ ನೃತ್ಯ ಮಾಡಿ ವೈವಿಧ್ಯದಲ್ಲಿ ಏಕತೆಯನ್ನು ಪ್ರದರ್ಶಿಸಿತು. ಕೂಚಿಪುಡಿ, ಕಥಕ್, ಭರತನಾಟ್ಯ, ಮೋಹಿನಿಯಾಟ್ಟಂ, ಮಣಿಪುರಿ ಶೈಲಿಯಲ್ಲಿಯೂ ತಂಡಗಳು ನೃತ್ಯ ಮಾಡಿದವು.

ಕೇಂದ್ರ ಸಶಸ್ತ್ರ ಪೊಲೀಸ್ ಪಡೆಯ ಮಹಿಳೆಯರು ಮಾತ್ರ ಇದ್ದ ತುಕಡಿಯು ಕರ್ತವ್ಯಪಥದಲ್ಲಿ ಪಥಸಂಚಲನ ನಡೆಸಿದ್ದು ಇದೇ ಮೊದಲು. ವೈಮಾನಿಕ ಸಾಹಸ ಪ್ರದರ್ಶನದಲ್ಲಿ ಭಾಗಿಯಾದ ಹೆಚ್ಚಿನ ವಿಮಾನಗಳ ಪೈಲಟ್‌ಗಳು ಕೂಡ ಮಹಿಳೆಯರೇ ಆಗಿದ್ದರು.

ಪಥಸಂಚಲನದ ವೈಶಿಷ್ಟ್ಯಗಳು

- ಬೈಕ್‌ಗಳಲ್ಲಿ ಸಾಹಸ ಮೆರೆದ 256 ಮಹಿಳೆಯರಿಂದ ಮೈನವಿರೇಳುವಂತಹ ಕಸರತ್ತು ಪ್ರದರ್ಶನ
- ಯೋಗ ಸೇರಿದಂತೆ ಭಾರತೀಯ ಮೌಲ್ಯಗಳು ಹಾಗೂ ಸಂಸ್ಕೃತಿಯ ಪ್ರದರ್ಶನ
- ನೌಕಾಪಡೆಯ ಎಲ್ಲ ಶ್ರೇಣಿಗಳಲ್ಲಿ ಮಹಿಳೆಯರಿಗೆ ಅವಕಾಶ ನೀಡಲಾಗಿದ್ದು, ಈ ಕುರಿತ ಸ್ತಬ್ಧಚಿತ್ರ ಗಮನ ಸೆಳೆಯಿತು
- ಎಸ್‌ಐ ಶ್ವೇತಾ ಸಿಂಗ್ ನೇತೃತ್ವದಲ್ಲಿ, ಮೊದಲ ಬಾರಿಗೆ ಬಿಎಸ್‌ಎಫ್ ಮಹಿಳಾ ಬ್ರಾಸ್ ಬ್ಯಾಂಡ್ ಪಥಸಂಚಲನದಲ್ಲಿ ಭಾಗಿ
- 144 'ಮಹಿಳಾ ಪ್ರಹಾರಿ'ಗಳಿದ್ದ ಬಿಎಸ್‌ಎಫ್‌ನ ಮಹಿಳಾ ತುಕಡಿಯಿಂದ ಕಸರತ್ತು ಪ್ರದರ್ಶನ
- ಕಾನ್‌ಸ್ಟೆಬಲ್ ಸೋಸಾ ಅಲ್ವಾಬೆನ್ ನೇತೃತ್ವದ ಸಿಆರ್‌ಪಿಎಫ್‌ನ ಬ್ಯಾಂಡ್‌ನಿಂದ 'ದೇಶ್ ಕೆ ಹಮ್ ಹೈ ರಕ್ಷಕ್' ಗೀತೆ ಪ್ರಸ್ತುತಿ
- * ಎಸ್‌ಐ ರುಯಾಂಗುನುವೊ ಕೆನ್ಸೆ ನೇತೃತ್ವದ, ದೆಹಲಿ ಪೊಲೀಸ್ ಇಲಾಖೆಯ ಮೊದಲ ಮಹಿಳಾ ಬ್ಯಾಂಡ್ ಭಾಗಿ
- 144 ಬಾಲಕಿಯರನ್ನು ಒಳಗೊಂಡ ಎನ್‌ಸಿಸಿಯ ಬ್ಯಾಂಡ್ ಭಾಗಿ
- ಯುದ್ಧವಿಮಾನಗಳ ಹಾರಾಟ ನಡೆಸಿ ಸಾಹಸ ಪ್ರದರ್ಶಿಸಿದ 15 ಮಹಿಳಾ ಪೈಲಟ್‌ಗಳು

ಫ್ರಾನ್ಸ್ ಪತ್ರಕರ್ತೆಗೆ ನೋಟಿಸ್: ವಿಷಯ ಪ್ರಸ್ತಾಪ

ನವದೆಹಲಿ (ಪಿಟಿಐ): ದೆಹಲಿಯಲ್ಲಿ ನೆಲೆಸಿರುವ ಫ್ರಾನ್ಸ್ ಮೂಲದ ಪತ್ರಕರ್ತೆಗೆ ನಿಯಮ ಉಲ್ಲಂಘನೆ ಆರೋಪದ ಮೇಲೆ ನೋಟಿಸ್ ನೀಡಿರುವ ವಿಷಯವನ್ನು ಫ್ರಾನ್ಸ್, ಭಾರತದೊಂದಿಗೆ ಪ್ರಸ್ತಾಪಿಸಿದೆ.

ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಅವರ ನವದೆಹಲಿ ಭೇಟಿ ವೇಳೆ ಈ ವಿಷಯದ ಬಗ್ಗೆ ಚರ್ಚೆ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಫ್ರಾನ್ಸ್ ಪತ್ರಕರ್ತೆ ವನೆಸ್ಸಾ ಡೊನಾಕ್ ಅವರಿಗೆ ವಿದೇಶಿಯರ ಪ್ರಾದೇಶಿಕ ನೋಂದಣಿ ಕಚೇರಿ (ಎಫ್‌ಆರ್‌ಆರ್‌ಒ) ಜ. 18ರಂದು ನೋಟಿಸ್ ಜಾರಿಗೊಳಿಸಿದ್ದು, ಉತ್ತರಿಸಲು 15 ದಿನ ಕಾಲಾವಕಾಶ ನೀಡಲಾಗಿದೆ.

'ಮ್ಯಾಕ್ರನ್ ಅವರ ಭೇಟಿಗೆ ಮುನ್ನ ಹಾಗೂ ಅವರು ಭಾರತಕ್ಕೆ ಬಂದಿಳಿದ ಬಳಿಕ ಫ್ರಾನ್ಸ್ ಅಧಿಕಾರಿಗಳು ಈ ವಿಷಯವನ್ನು ನಮ್ಮ ಜತೆ ಪ್ರಸ್ತಾಪಿಸಿದ್ದಾರೆ' ಎಂದು ವಿದೇಶಾಂಗ ಕಾರ್ಯದರ್ಶಿ ವಿನಯ್ ಕ್ವಾತ್ರಾ ಶುಕ್ರವಾರ ತಿಳಿಸಿದರು.

'ಅವರ ಪತ್ರಿಕೋದ್ಯಮ ವೃತ್ತಿಗೆ ಸಂಬಂಧಿಸಿ ನೀಡಿರುವ ನೋಟಿಸ್ ಇದಲ್ಲ ಎಂಬುದನ್ನು ಫ್ರಾನ್ಸ್‌ಗೆ ಮನವರಿಕೆ ಮಾಡಿಕೊಡಲಾಗಿದೆ' ಎಂದರು.

'ಮುಸ್ಲಿಮರು ಜ್ಞಾನವಾಪಿ ಜಾಗ ಹಸ್ತಾಂತರಿಸಲಿ'

ನವದೆಹಲಿ (ಪಿಟಿಐ/ ರಾಯಿಟರ್ಸ್): ವಾರಾಣಸಿಯ ಜ್ಞಾನವಾಪಿ ಮಸೀದಿಯ ಜಾಗವನ್ನು ಮುಸ್ಲಿಮರು ಹಿಂದೂಗಳಿಗೆ ಹಸ್ತಾಂತರಿಸಬೇಕು ಮತ್ತು ಕೋಮು ಸೌಹಾರ್ದಕ್ಕೆ ಧಕ್ಕೆ ಉಂಟುಮಾಡುವಂತಹ ಯಾವುದೇ ಹೇಳಿಕೆಗಳನ್ನು ನೀಡಬಾರದು ಎಂದು ಬಿಜೆಪಿ ನಾಯಕ, ಕೇಂದ್ರ ಸಚಿವ ಗಿರಿರಾಜ್ ಸಿಂಗ್ ಶುಕ್ರವಾರ ಹೇಳಿದ್ದಾರೆ.

ಜ್ಞಾನವಾಪಿ ಮಸೀದಿ ಸಂಕೀರ್ಣದಲ್ಲಿ ವೈಜ್ಞಾನಿಕ ಸಮೀಕ್ಷೆ ನಡೆಸಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್‌ಐ) ಸಿದ್ಧಪಡಿಸಿರುವ ವರದಿಯು ಬಹಿರಂಗವಾಗಿರುವ ಬೆನ್ನಲ್ಲೇ ಅವರ ಹೇಳಿಕೆ ಹೊರಬಿದ್ದಿದೆ.

ಆ ಜಾಗದಲ್ಲಿ ಮೊದಲೇ ಅಸ್ತಿತ್ವದಲ್ಲಿದ್ದ ದೇವಾಲಯದ ಅವಶೇಷಗಳ ಮೇಲೆ ಮಸೀದಿ ನಿರ್ಮಿಸಲಾಗಿದೆ ಎಂಬ ಅಂಶವು ವರದಿಯಲ್ಲಿದೆ ಎಂದು ಹಿಂದೂ ಅರ್ಜಿದಾರರ ಪರ ವಕೀಲ ವಿಷ್ಣು ಶಂಕರ್ ಜೈನ್ ಗುರುವಾರ ಹೇಳಿದ್ದರು.

'ಪ್ರಧಾನಿ ನರೇಂದ್ರ ಮೋದಿ ಅವರು ಅಯೋಧ್ಯೆ ರಾಮಮಂದಿರದಲ್ಲಿ ಬಾಲರಾಮನ ವಿಗ್ರಹದ ಪ್ರಾಣ ಪ್ರತಿಷ್ಠಾಪನೆ ಮಾಡಿದ್ದಾರೆ. ಸನಾತನಿಗಳು ಅದನ್ನು ಸ್ವಾಗತಿಸಿದ್ದಾರೆ. ಆದರೆ ನಮ್ಮ ಬೇಡಿಕೆ ಮೊದಲಿನಿಂದಲೂ ಅಯೋಧ್ಯೆ, ಕಾಶಿ ಮತ್ತು ಮಥುರಾ ಆಗಿದೆ' ಎಂದು ಗಿರಿರಾಜ್ ತಿಳಿಸಿದರು.

'ಎಲ್ಲ ಸಾಕ್ಷ್ಯಗಳೂ ಹೊರಬಂದಿರುವ ಕಾರಣ ಜ್ಞಾನವಾಪಿ ಮಸೀದಿಯ ಜಾಗವನ್ನು ಹಿಂದೂಗಳಿಗೆ ಒಪ್ಪಿಸುವಂತೆ ನಾನು ಮುಸ್ಲಿಂ ಸಹೋದರರಲ್ಲಿ ಮನವಿ ಮಾಡುತ್ತೇನೆ. ಹಾಗಾದಲ್ಲಿ ಕೋಮು ಸೌಹಾರ್ದ ಕಾಪಾಡಬಹುದು. ಸ್ವಾತಂತ್ರ್ಯದ ಬಳಿಕ ದೇಶದಲ್ಲಿ ನಾವು ಯಾವುದೇ ಮಸೀದಿಯನ್ನೂ ಕೆಡವಿಲ್ಲ. ಆದರೆ ಪಾಕಿಸ್ತಾನದಲ್ಲಿ ಒಂದೂ ದೇವಸ್ಥಾನ ಉಳಿದಿಲ್ಲ' ಎಂದು ನುಡಿದರು.

'ಕನ್ನಡ, ದೇವನಾಗರಿ ಶಾಸನ ಪತ್ತೆ'

ವಾರಾಣಸಿ: 'ಜ್ಞಾನವಾಪಿ ಮಸೀದಿಯಿರುವ ಜಾಗದಲ್ಲಿ ಹಲವು ಪ್ರಾಚೀನ ಶಾಸನಗಳು ಪತ್ತೆಯಾಗಿವೆ ಎಂಬ ವಿವರ ಎಎಸ್‌ಐ ವರದಿಯಲ್ಲಿದೆ. ಅವುಗಳಲ್ಲಿ ಕನ್ನಡ, ದೇವನಾಗರಿ ಮತ್ತು ತೆಲುಗು ಶಾಸನಗಳೂ ಇವೆ' ಎಂದು ಹಿಂದೂ ಅರ್ಜಿದಾರರ ಪರ ವಕೀಲ ವಿಷ್ಣು ಶಂಕರ್ ಜೈನ್ ಹೇಳಿದ್ದಾರೆ. ಅವರ ಹೇಳಿಕೆಯಂತೆ ವರದಿಯಲ್ಲಿರುವ ಕೆಲವು ಅಂಶಗಳು ಇಲ್ಲಿವೆ...

> ಹಿಂದೂ ಕಕ್ಷಿದಾರರು ಹೇಳುತ್ತಿರುವುದು ನಿಜವಲ್ಲ. ಎಎಸ್‌ಐ ವರದಿ ಸಂಪೂರ್ಣವಾಗಿ ಓದಿ ಪ್ರತಿಕ್ರಿಯೆ ನೀಡುತ್ತೇವೆ
> **ಅಖ್ಲಾಕ್ ಅಹ್ಮದ್,** ಮುಸ್ಲಿಂ ಅರ್ಜಿದಾರರ ಪರ ವಕೀಲ

- ಮೊಘಲ್ ದೊರೆ ಔರಂಗಜೇಬನ ಆಡಳಿತದಲ್ಲಿ 17ನೇ ಶತಮಾನದಲ್ಲಿ ದೇವಸ್ಥಾನದ ಒಂದು ಭಾಗ ಕೆಡವಿ ಮಸೀದಿ ನಿರ್ಮಿಸಲಾಗಿದೆ
- ಮಸೀದಿಯಿರುವ ಜಾಗದಲ್ಲಿ ಒಂದು ಕಡೆ 'ಮಹಾಮುಕ್ತಿ ಮಂಟಪ' ಎಂದು ಬರೆದಿರುವುದು ಪತ್ತೆಯಾಗಿದೆ. ಇಲ್ಲಿ ಈ ಹಿಂದೆ ದೇವಾಲಯವಿತ್ತು ಎಂಬುದಕ್ಕೆ ಇದು ಪ್ರಬಲ ಸಾಕ್ಷ್ಯವಾಗಿದೆ
- ರುದ್ರ, ಜನಾರ್ದನ ಹಾಗೂ ವಿಶ್ವೇಶ್ವರನ ಕುರಿತ ಶಾಸನಗಳು ದೊರೆತಿವೆ
- ಹಿಂದೆ ಕೆಡವಲಾದ ದೇವಸ್ಥಾನದ ಕಂಬಗಳನ್ನೇ ಬಳಸಿ ಮಸೀದಿ ನಿರ್ಮಾಣ
- ಮಸೀದಿಯ ಪಶ್ಚಿಮ ಭಾಗದ ಗೋಡೆಯು ಹಿಂದೂ ದೇವಾಲಯದ ಭಾಗವಾಗಿತ್ತು ಎಂಬುದನ್ನು ಸುಲಭವಾಗಿ ಗುರುತಿಸಬಹುದು
- ಮಸೀದಿಯ ತಳಮಹಡಿಯಲ್ಲಿ ಹಿಂದೂ ದೇವರ ವಿಗ್ರಹಗಳ ಅವಶೇಷಗಳು ಪತ್ತೆಯಾಗಿವೆ. ಗೋಡೆಯಲ್ಲಿ 'ಸ್ವಸ್ತಿಕ್' ಚಿಹ್ನೆ ಕೆತ್ತಿರುವುದು ಕಂಡುಬಂದಿದೆ

'ಭಾರತ–ಫ್ರಾನ್ಸ್ ಹಲವು ಒಪ್ಪಂದ'

ಸೇನೆ–ಕೈಗಾರಿಕೆಗಳಲ್ಲಿ ಬಳಸುವ ಹಾರ್ಡ್‌ವೇರ್, ತಂತ್ರಜ್ಞಾನ ಅಭಿವೃದ್ಧಿಗೆ ಸಮ್ಮತಿ

ನವದೆಹಲಿ (ಪಿಟಿಐ): ಸೇನೆ–ಕೈಗಾರಿಕೆಗಳಲ್ಲಿ ಬಳಸುವ ಹಾರ್ಡ್‌ವೇರ್ ಮತ್ತು ತಂತ್ರಜ್ಞಾನಗಳನ್ನು ಜಂಟಿಯಾಗಿ ಅಭಿವೃದ್ಧಿಪಡಿಸುವ ಹಾಗೂ ಉತ್ಪಾದನೆಯನ್ನು ಉತ್ತೇಜಿಸುವ ವಿಷಯದಲ್ಲಿ ಸಹಭಾಗಿತ್ವಕ್ಕೆ ಭಾರತ ಮತ್ತು ಫ್ರಾನ್ಸ್ ಸಮ್ಮತಿಸಿವೆ.

ಪ್ರಧಾನಿ ನರೇಂದ್ರ ಮೋದಿ ಮತ್ತು ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಅವರ ನಡುವೆ ಜೈಪುರದಲ್ಲಿ ಗುರುವಾರ ರಾತ್ರಿ ನಡೆದ ಸಭೆಯಲ್ಲಿ, ವಿವಿಧ ಕ್ಷೇತ್ರಗಳಲ್ಲಿ ಪಾಲುದಾರಿಕೆ ಸೇರಿದಂತೆ ಹಲವು ಮಹತ್ವದ ವಿಷಯಗಳ ಕುರಿತು ಚರ್ಚಿಸಲಾಯಿತು ಎಂದು ವಿದೇಶಾಂಗ ಕಾರ್ಯದರ್ಶಿ ವಿನಯ್ ಕ್ವಾತ್ರ ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

'ರಕ್ಷಣೆ ಮತ್ತು ಕೈಗಾರಿಕಾ ಕ್ಷೇತ್ರದಲ್ಲಿ ಪಾಲುದಾರಿಕೆ ಜೊತೆಗೆ, ಬಾಹ್ಯಾಕಾಶ, ಸೈಬರ್ ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಸಹಭಾಗಿತ್ವಕ್ಕೆ ಉಭಯ ನಾಯಕರು ಸಮ್ಮತಿಸಿದರು. ಇದೇ ವೇಳೆ, ಹಲವು ಒಪ್ಪಂದಗಳಿಗೂ ಸಹಿ ಹಾಕಲಾಯಿತು' ಎಂದು ಹೇಳಿದ್ದಾರೆ.



ವಿನಯ್ ಕ್ವಾತ್ರ

'ಟಾಟಾ ಸಮೂಹ ಹಾಗೂ 'ಏರ್‌ಬಸ್ ಹೆಲಿಕಾಪ್ಟರ್ಸ್' ಜಂಟಿಯಾಗಿ ಎಚ್–125 ಹೆಲಿಕಾಪ್ಟರ್‌ಗಳನ್ನು ತಯಾರಿಸುವ ಕುರಿತು ಒಪ್ಪಂದಕ್ಕೆ ಸಹಿ ಹಾಕಿದವು. ಈ ಹೆಲಿಕಾಪ್ಟರ್‌ಗಳ ತಯಾರಿಕೆಗೆ ಅಗತ್ಯವಿರುವ ಸಲಕರಣೆಗಳನ್ನು ದೇಶೀಯವಾಗಿಯೇ ತಯಾರಿಸಲಾಗುವುದು' ಎಂದು ಮಾಹಿತಿ ನೀಡಿದರು.

'ರೋಬೊಟಿಕ್ಸ್, ಸ್ವಯಂಚಾಲಿತ ವಾಹನಗಳ ತಯಾರಿಕೆ ಮತ್ತು ಸೈಬರ್ ರಕ್ಷಣಾ ವ್ಯವಸ್ಥೆ ಅಭಿವೃದ್ಧಿಯಲ್ಲಿ ಸಹಕಾರ ಹೆಚ್ಚಿಸಲು ಎರಡೂ ದೇಶಗಳು ಸಮ್ಮತಿಸಿದವು' ಎಂದರು.

'ಉಪಗ್ರಹಗಳ ಉಡ್ಡಯನದಲ್ಲಿ ಸಹಕಾರ ವಿಸ್ತರಿಸುವುದಕ್ಕೆ ಸಂಬಂಧಿಸಿ ಇಸ್ರೊ ಅಂಗಸಂಸ್ಥೆ ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್ ಹಾಗೂ ಫ್ರಾನ್ಸ್‌ನ ಏರಿಯನ್‌ಸ್ಪೇಸ್ ಸಂಸ್ಥೆ ಒಪ್ಪಂದಕ್ಕೆ ಸಹಿ ಹಾಕಿದವು' ಎಂದು ವಿವರಿಸಿದರು.

ಇಸ್ರೇಲ್ ಹಾಗೂ ಹಮಾಸ್ ಬಂಡುಕೋರರ ನಡುವಿನ ಸಂಘರ್ಷ, ವಿಶ್ವದ ಹಲವೆಡೆ ಕಂಡುಬರುತ್ತಿರುವ ಭಯೋತ್ಪಾದಕ ಕೃತ್ಯಗಳು, ಕೆಂಪು ಸಮುದ್ರ ಪ್ರದೇಶದಲ್ಲಿ ಭದ್ರತೆಗೆ ಎದುರಾಗಿರುವ ಸವಾಲುಗಳು ಸೇರಿದಂತೆ ಹಲವು ವಿದ್ಯಮಾನಗಳ ಕುರಿತು ಮೋದಿ ಮತ್ತು ಮ್ಯಾಕ್ರನ್ ಚರ್ಚಿಸಿದರು ಎಂದೂ ಅವರು ಮಾಹಿತಿ ನೀಡಿದರು.

ರಕ್ಷಣೆ, ವಾಯುಯಾನಕ್ಕೆ ಸಹಕಾರ ದೆಹಲಿಯಲ್ಲಿ ಥೇಲ್ಸ್ ಕಂಪನಿ ಘಟಕ

ನವದೆಹಲಿ(ಪಿಟಿಐ): ರಕ್ಷಣಾ ಸಾಧನಗಳ ತಯಾರಿಕೆಯಲ್ಲಿ ಮುಂಚೂಣಿಯಲ್ಲಿರುವ ಫ್ರಾನ್ಸ್‌ನ ಥೇಲ್ಸ್ ಕಂಪನಿಯು ವಾಯುಯಾನ ತಂತ್ರಜ್ಞಾನಕ್ಕೆ ಸಂಬಂಧಿಸಿದ 'ನಿರ್ವಹಣೆ, ದುರಸ್ತಿ ಹಾಗೂ ಕಾರ್ಯಾಚರಣೆ' (ಎಂಆರ್‌ಒ) ಘಟಕವನ್ನು ದೆಹಲಿಯಲ್ಲಿ ಸ್ಥಾಪಿಸಲಿದೆ.

'ಭಾರತದ ರಕ್ಷಣಾ ಮತ್ತು ವಾಯುಯಾನ ಕ್ಷೇತ್ರಕ್ಕೆ ವಿಶ್ವದರ್ಜೆಯ ಸೇವೆಗಳನ್ನು ಒದಗಿಸಬೇಕು ಹಾಗೂ ಈ ಕ್ಷೇತ್ರಗಳ ಆಧುನೀಕರಣಕ್ಕೆ ನೆರವು ಒದಗಿಸುವ ಉದ್ದೇಶದಿಂದ ಈ ಘಟಕವನ್ನು ಸ್ಥಾಪಿಸಲಾಗುತ್ತಿದೆ' ಎಂದು ಥೇಲ್ಸ್ ಇಂಡಿಯಾದ ಉಪಾಧ್ಯಕ್ಷ ಹಾಗೂ ನಿರ್ದೇಶಕ ಆಶಿಶ್ ಸರಾಫ್ ಹೇಳಿದ್ದಾರೆ.

'ನೌಕಾಪಡೆಗಾಗಿ ಭಾರತ 26 ರಫೇಲ್ ಯುದ್ಧ ವಿಮಾನಗಳು ಹಾಗೂ ಸ್ಕಾರ್ಪೀನ್ ಜಲಾಂತರ್ಗಾಮಿಗಳನ್ನು ಖರೀದಿಸುತ್ತಿದೆ. ಈ ಖರೀದಿಯು ರಕ್ಷಣಾ ಕ್ಷೇತ್ರದಲ್ಲಿ ಭಾರತ ಮತ್ತು ಫ್ರಾನ್ಸ್ ನಡುವಿನ ಸಹಕಾರವನ್ನು ಮತ್ತಷ್ಟು ಹೆಚ್ಚಿಸಲಿದೆಯೇ' ಎಂಬ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಸರಾಫ್, 'ರಫೇಲ್ ಉತ್ಪಾದಿಸುವ ತಂಡದ ಭಾಗವಾಗಿರುವುದಕ್ಕೆ ಥೇಲ್ಸ್‌ಗೆ ಹೆಮ್ಮೆ ಇದೆ' ಎಂದಷ್ಟೆ ಹೇಳಿದರು.

ಸಂಕ್ಷಿಪ್ತ ಸುದ್ದಿ

ಟಿಎಂಸಿ ಸಂಸದ ಒಬ್ರಯಾನ್ ಕ್ಷಮೆ ಕೋರಿದ ಅಧಿರ್

ನವದೆಹಲಿ (ಪಿಟಿಐ): ಕಾಂಗ್ರೆಸ್‌ನ ಹಿರಿಯ ಮುಖಂಡ ಅಧಿರ್ ರಂಜನ್ ಚೌಧರಿ ಅವರು, ತೃಣಮೂಲ ಕಾಂಗ್ರೆಸ್ ಸಂಸದ ಡೆರೆಕ್ ಒಬ್ರಯಾನ್ ಅವರನ್ನು ವಿದೇಶಿಗ ಎಂದು ಟೀಕಿಸಿದ್ದಕ್ಕೆ ಶುಕ್ರವಾರ ಕ್ಷಮೆ ಕೋರಿದ್ದಾರೆ.

'ಅಜಾಗರೂಕತೆಯಿಂದಾಗಿ ಒಬ್ರಯಾನ್ ಅವರನ್ನು ವಿದೇಶಿಗ ಎಂದು ಕರೆದಿದ್ದಕ್ಕಾಗಿ ನಾನು ವಿಷಾದ ವ್ಯಕ್ತಪಡಿಸಿದ್ದೇನೆ' ಎಂದು ಲೋಕಸಭೆಯಲ್ಲಿನ ಕಾಂಗ್ರೆಸ್ ನಾಯಕ 'ಎಕ್ಸ್' ವೇದಿಕೆಯಲ್ಲಿ ಹಂಚಿಕೊಂಡಿದ್ದಾರೆ. ಈ ಕ್ಷಮೆಯನ್ನು ಸ್ವೀಕರಿಸಿರುವುದಾಗಿ ಡೆರೆಕ್ ಹೇಳಿದ್ದಾರೆಂದು ಮೂಲಗಳು ತಿಳಿಸಿವೆ.

'ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ ಮತ್ತು ಟಿಎಂಸಿ ನಡುವೆ ಸೀಟು ಹಂಚಿಕೆ ಮಾತುಕತೆ ಸಾಧ್ಯವಾಗದಿರಲು ಮೂರು ಕಾರಣಗಳಿವೆ. ಅವುಗಳೆಂದರೆ, ಅಧಿರ್ ರಂಜನ್ ಚೌಧರಿ, ಅಧಿರ್ ರಂಜನ್ ಚೌಧರಿ ಮತ್ತು ಅಧಿರ್ ರಂಜನ್ ಚೌಧರಿ' ಎಂದು ಡೆರೆಕ್ ಒಬ್ರಯಾನ್ ಹೇಳಿದ್ದರು.

ಈ ಕುರಿತು ಗುರುವಾರ ರಾತ್ರಿ ಸಿಲಿಗುರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ್ದ ಚೌಧರಿ ಅವರು, 'ವಿದೇಶಿಗರಾದ ಡೆರೆಕ್ ಒಬ್ರಯಾನ್ ಅವರಿಗೆ ಎಲ್ಲವೂ ಗೊತ್ತಿದೆ, ಅವರನ್ನೇ ಕೇಳಿ' ಎಂದು ಹೇಳಿದ್ದರು.

ವಿದ್ಯುತ್ ಪ್ರವಹಿಸಿ ಹುಲಿ ಸಾವು: ತಂತಿ ಹಾಕಿದ್ದ ಐವರ ಸೆರೆ

ರಾಯಪುರ(ಛತ್ತೀಸಗಡ) (ಪಿಟಿಐ): ವಿದ್ಯುತ್ ಆಘಾತದಿಂದ ಹುಲಿಯೊಂದು ಮೃತಪಟ್ಟಿದ್ದು, ವಿದ್ಯುತ್ ಪ್ರವಹಿಸುತ್ತಿದ್ದ ತಂತಿಯನ್ನು ಇರಿಸಿ, ಹುಲಿ ಸಾವಿಗೆ ಕಾರಣರಾಗಿದ್ದಾರೆ ಎಂಬ ಆರೋಪದಡಿ ಐವರನ್ನು ಬಂಧಿಸಲಾಗಿದೆ ಎಂದು ಅರಣ್ಯ ಅಧಿಕಾರಿ ಶುಕ್ರವಾರ ತಿಳಿಸಿದ್ದಾರೆ.

ಸಾರಂಗಡ–ಬಿಲಾಯಿಗಡ ಜಿಲ್ಲೆಯ ಗೋಮರ್ಡಾ ವನ್ಯಜೀವಿಧಾಮದಲ್ಲಿ ಈ ಘಟನೆ ನಡೆದಿದೆ.

ಪ್ರಕರಣಕ್ಕೆ ಸಂಬಂಧಿಸಿ, ಅರಣ್ಯ ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ. ಇಬ್ಬರು ಅಧಿಕಾರಿಗಳಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆ ಎಂದು ತಿಳಿಸಿದ್ದಾರೆ.


'ಕರಡಿಯನ್ನು ಬೇಟೆಯಾಡುವುದಕ್ಕಾಗಿ ಘೋರ್ಗಂಟಿ ಗ್ರಾಮದ ಹೊರವಲಯದಲ್ಲಿ ವಿದ್ಯುತ್ ಪ್ರವಹಿಸುತ್ತಿದ್ದ ತಂತಿಯನ್ನು ಹಾಕಿದ್ದೆವು. ತಂತಿಯನ್ನು ಸ್ಪರ್ಶಿಸಿ ಹುಲಿ ಮೃತಪಟ್ಟಿತು. ನಂತರ ಕಳೇಬರವನ್ನು ಲಾಟ್ ನದಿ ಬಳಿಯ ಅರಣ್ಯ ಪ್ರದೇಶದಲ್ಲಿ ಹೂತಿದ್ದಾಗಿ ಬಂಧಿತರು ವಿಚಾರಣೆ ವೇಳೆ ತಿಳಿಸಿದ್ದಾರೆ. ಹುಲಿಯ ಕಳೇಬರವನ್ನು ಶುಕ್ರವಾರ ಹೊರ ತೆಗೆಯಲಾಗಿದೆ' ಎಂದು ತಿಳಿಸಿದ್ದಾರೆ.

ಜುಬೈರ್‌ಗೆ 'ಕೋಮು ಸೌಹಾರ್ದ' ಪ್ರಶಸ್ತಿ

ಚೆನ್ನೈ(ಪಿಟಿಐ): ತಮಿಳುನಾಡು ಸರ್ಕಾರ ಕೊಡಮಾಡುವ 'ಕೋಟ್ಟೈ ಅಮೀರ್ ಕೋಮು ಸೌಹಾರ್ದ ಪ್ರಶಸ್ತಿ'ಯನ್ನು ಫ್ಯಾಕ್ಟ್ ಚೆಕ್ಕರ್ ಮೊಹಮ್ಮದ್ ಜುಬೈರ್ ಅವರಿಗೆ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಶುಕ್ರವಾರ ಪ್ರದಾನ ಮಾಡಿದರು.

ತಮಿಳುನಾಡಿನಲ್ಲಿ ವಲಸೆ ಕಾರ್ಮಿಕರ ಮೇಲೆ ಹಲ್ಲೆ ನಡೆದಿದೆ ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ್ದ ವದಂತಿಯ ಹಿಂದಿನ ಸತ್ಯವನ್ನು ಬಯಲು ಮಾಡಿರುವುದಕ್ಕಾಗಿ ಜುಬೈರ್ ಅವರಿಗೆ ಈ ಪ್ರಶಸ್ತಿ ನೀಡಲಾಗಿದೆ ಎಂದು ಸರ್ಕಾರದ ಮೂಲಗಳು ಹೇಳಿವೆ.

'ಆಲ್ಟ್ ನ್ಯೂಸ್' ಸಹ ಸಂಸ್ಥಾಪಕರಾಗಿರುವ ಜುಬೈರ್ ಅವರಿಗೆ



ಮೊಹಮ್ಮದ್ ಜುಬೈರ್

ಸ್ಟಾಲಿನ್ ಅವರು ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಿದ್ದಾರೆ. ಪ್ರಶಸ್ತಿಯು ₹ 25 ಸಾವಿರ ನಗದನ್ನು ಒಳಗೊಂಡಿದೆ.

ವಲಸೆ ಕಾರ್ಮಿಕರ ಮೇಲೆ ಹಲ್ಲೆ ನಡೆದಿದೆ ಎಂದು ಬಿಂಬಿಸಿರುವ ವಿಡಿಯೊವೊಂದು ಕಳೆದ ಮಾರ್ಚ್‌ನಲ್ಲಿ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ವಿಡಿಯೊದ ಕುರಿತು ಫ್ಯಾಕ್ಟ್ ಚೆಕ್ ಮಾಡಿದ್ದ ಜುಬೈರ್, ಇದೊಂದು ನಕಲಿ ವಿಡಿಯೊ ಎಂದಿದ್ದರು.

ಕಲ್ಲಿದ್ದಲು ಗಣಿಯಲ್ಲಿ ದುರಂತ: 6 ಸಾವು

ಗುವಾಹಟಿ (ಪಿಟಿಐ): ನಾಗಾಲ್ಯಾಂಡ್‌ನ ವೋಖಾ ಜಿಲ್ಲೆಯಲ್ಲಿ ನಡೆಯುತ್ತಿರುವ 'ರ‍್ಯಾಟ್–ಹೋಲ್' ಕಲ್ಲಿದ್ದಲು ಗಣಿಗಾರಿಕೆ (ಕಿರಿದಾದ ಗುಂಡಿಗಳನ್ನು ತೋಡಿ ಮಾಡುವ ಗಣಿಗಾರಿಕೆ) ಘಟಕದಲ್ಲಿ ಸಂಭವಿಸಿದ ಬೆಂಕಿ ಅಪಘಾತದಲ್ಲಿ ನೆರೆಯ ಅಸ್ಸಾಂ ಮೂಲದ ಆರು ಮಂದಿ ಮೃತಪಟ್ಟಿದ್ದು, ಇತರ ನಾಲ್ವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ರಿಸಿಯಾನ್ ಗ್ರಾಮದಲ್ಲಿ ಗುರುವಾರ ಮಧ್ಯಾಹ್ನವೇ ಈ ಘಟನೆ ನಡೆದಿದ್ದು, ಶುಕ್ರವಾರ ಸಂಜೆ ವೇಳೆಗೆ ಗೊತ್ತಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಗಣರಾಜ್ಯೋತ್ಸವ ಅಂಗವಾಗಿ ಅಟ್ಟಾರಿ– ವಾಘಾ ಗಡಿಯಲ್ಲಿ ಗಡಿ ಭದ್ರತಾ ಪಡೆಯ ಮಹಿಳಾ ಸಿಬ್ಬಂದಿ 'ಬೀಟಿಂಗ್ ರಿಟ್ರೀಟ್' ಮಾಡಿದಾಗ ಕಂಡ ವೈಖರಿ –ಪಿಟಿಐ ಚಿತ್ರ

ಜೈತಾಪುರ ಅಣುಸ್ಥಾವರ: ಮಾತುಕತೆಗೆ ಚಾಲನೆ

ನವದೆಹಲಿ(ಪಿಟಿಐ): ಮಹತ್ವದ ಬೆಳವಣಿಗೆಯಲ್ಲಿ, ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಜೈತಾಪುರದಲ್ಲಿ 9,900 ಮೆಗಾವಾಟ್ ಸಾಮರ್ಥ್ಯದ ಅಣು ವಿದ್ಯುತ್ ಸ್ಥಾವರ ಸ್ಥಾಪಿಸುವುದಕ್ಕೆ ಸಂಬಂಧಿಸಿದಂತೆ ಭಾರತ ಮತ್ತು ಫ್ರಾನ್ಸ್ ನಡುವೆ ಮತ್ತೆ ಮಾತುಕತೆ ಶುರುವಾಗಿದೆ.

ಉದ್ದೇಶಿತ ಸ್ಥಾವರ ಸ್ಥಾಪನೆಗೆ ಯಾವ ರೀತಿ ಹಣಕಾಸು ನೆರವು ಒದಗಿಸಬೇಕು, ಯಾವ ವಿಷಯಗಳ ಬಗ್ಗೆ ಒಪ್ಪಂದ ಮಾಡಿಕೊಳ್ಳಬೇಕು ಎಂಬ ಬಗ್ಗೆ ಉಭಯ ದೇಶಗಳು 15 ವರ್ಷಗಳ ಬಳಿಕ ಚರ್ಚೆ ಆರಂಭಿಸಿವೆ.

'ಜೈತಾಪುರ ಅಣು ವಿದ್ಯುತ್ ಸ್ಥಾವರ ಸ್ಥಾಪನೆ ವಿಷಯವನ್ನು ಕೈಬಿಡಲಾಗಿದೆಯೇ' ಎಂಬ ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿರುವ ವಿದೇಶಾಂಗ ಕಾರ್ಯದರ್ಶಿ ವಿನಯ್ ಕ್ವಾತ್ರ, 'ಹಣಕಾಸು ನೆರವು, ಯಾವ ವಿಷಯಗಳು ಒಪ್ಪಂದದ ಭಾಗವಾಗಿರಬೇಕು ಎಂಬ ಬಗ್ಗೆ ಫ್ರಾನ್ಸ್‌ನ ಇಂಧನ ಸಂಸ್ಥೆ ಇಡಿಎಫ್ ಹಾಗೂ ಭಾರತೀಯ ಅಣುಶಕ್ತಿ ನಿಗಮ (ಎನ್‌ಪಿಸಿಐಎಲ್) ಚರ್ಚೆ ನಡೆಸುತ್ತಿವೆ' ಎಂದು ಹೇಳಿದ್ದಾರೆ. 'ಈ ಯೋಜನೆಯು ವೆಚ್ಚದ ದೃಷ್ಟಿಯಿಂದ ಕಾರ್ಯಸಾಧುವೇ ಎಂಬ ಬಗ್ಗೆ ಉಭಯ ಸಂಸ್ಥೆಗಳ ನಡುವೆ ಚರ್ಚೆ ನಡೆಯುತ್ತಿದೆ' ಎಂದೂ ಹೇಳಿದ್ದಾರೆ.

ಈ ಉದ್ದೇಶಿತ ಯೋಜನೆಗೆ ತಲಾ 1,650 ಮೆಗಾವಾಟ್ ಸಾಮರ್ಥ್ಯದ ಆರು ರಿಯಾಕ್ಟರ್‌ಗಳನ್ನು (ಯುರೋಪಿಯನ್ ಪ್ರೆಜರೈಸ್ಡ್ ರಿಯಾಕ್ಟರ್) ಪೂರೈಸಲು ಫ್ರಾನ್ಸ್ ಕಂಪನಿ ಇಡಿಎಫ್ ಇಂಗಿತ ವ್ಯಕ್ತಪಡಿಸಿದೆ. ಇವು ಅತ್ಯಾಧುನಿಕ ರಿಯಾಕ್ಟರ್‌ಗಳು ಎಂದೇ ಪರಿಗಣಿಸಲಾಗುತ್ತಿದೆ.

ಜೈತಾಪುರದಲ್ಲಿ ಈ ಸ್ಥಾವರ ಸ್ಥಾಪಿಸುವುದಕ್ಕೆ ಸಂಬಂಧಿಸಿ ಫ್ರಾನ್ಸ್ ಮೂಲದ ಕಂಪನಿ ಅರೆವಾ ಜೊತೆ ಮೊದಲ ಬಾರಿಗೆ 2009ರಲ್ಲಿ ಒಪ್ಪಂದಕ್ಕೆ ಸಹಿ ಹಾಕಲಾಗಿತ್ತು. ಆದರೆ, ಅರೆವಾ ಕಂಪನಿ ದಿವಾಳಿಯಾದ ಕಾರಣ ಯೋಜನೆಗೆ ಹಿನ್ನಡೆಯಾಗಿತ್ತು.

2016ರಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಸಮ್ಮುಖದಲ್ಲಿ ಇಡಿಎಫ್ ಮತ್ತು ಎನ್‌ಪಿಸಿಐಎಲ್, ಪರಿಷ್ಕೃತ ಒಪ್ಪಂದಕ್ಕೆ ಸಹಿ ಹಾಕಿದ್ದವು.


ತಂದೆ–ತಾಯಿ ಪಾಲನೆ ಮಗನ ಕರ್ತವ್ಯ: ಹೈಕೋರ್ಟ್

'ಆಕಾಶಕ್ಕಿಂತಲೂ ತಂದೆ ಎತ್ತರ'

ರಾಂಚಿ(ಜಾರ್ಖಂಡ್) (ಪಿಟಿಐ): ಕಿರಿಯ ಮಗನಿಂದ ಜೀವನ ನಿರ್ವಹಣಾ ವೆಚ್ಚ ಕೊಡಿಸುವಂತೆ ಕೋರಿ ವ್ಯಕ್ತಿಯೊಬ್ಬರು ಸಲ್ಲಿಸಿದ್ದ ಅರ್ಜಿ ಇತ್ಯರ್ಥಪಡಿಸಿರುವ ಜಾರ್ಖಂಡ್ ಹೈಕೋರ್ಟ್, 'ಆಕಾಶಕ್ಕಿಂತಲೂ ತಂದೆಯೇ ಎತ್ತರ' ಎಂಬ ಮಹಾಭಾರತದಲ್ಲಿನ ಮಾತನ್ನು ಉಲ್ಲೇಖಿಸಿ ಆದೇಶಿಸಿದ್ದಾರೆ.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸುಭಾಷ್ ಚಾಂದ್, 'ತನ್ನ ತಂದೆ–ತಾಯಿಯ ಯೋಗಕ್ಷೇಮ ನೋಡಿಕೊಳ್ಳುವುದು ಮಗನ ಕರ್ತವ್ಯ' ಎಂದು ತಿಳಿಹೇಳಿದ್ದಾರೆ. ಯಕ್ಷನ ಪ್ರಶ್ನೆಗಳಿಗೆ ಯುಧಿಷ್ಠಿರ ನೀಡಿದ ಉತ್ತರಗಳನ್ನು ನ್ಯಾಯಮೂರ್ತಿ ಚಾಂದ್ ತಮ್ಮ ಆದೇಶದಲ್ಲಿ ಉಲ್ಲೇಖಿಸಿದ್ದಾರೆ.

'ಭೂಮಿಗಿಂತ ಭಾರ ಯಾವುದು? ಆಕಾಶಕ್ಕಿಂತಲೂ ಎತ್ತರವಾದುದು ಯಾವುದು ಎಂದು ಯುಧಿಷ್ಠಿರನನ್ನು ಯಕ್ಷ ಕೇಳುತ್ತಾನೆ. ಆಗ ಯುಧಿಷ್ಠಿರ,



ತಾಯಿಯು ಭೂಮಿಗಿಂತ ಭಾರ ಹಾಗೂ ತಂದೆಯು ಆಕಾಶಕ್ಕಿಂತಲೂ ಎತ್ತರ ಎಂದು ಉತ್ತರಿಸುತ್ತಾನೆ' ಎಂಬ ಮಹಾಭಾರತದ ಪ್ರಸಂಗವನ್ನು ಉಲ್ಲೇಖಿಸಿದ್ದಾರೆ.

60 ವರ್ಷದ ದೇವಕಿ ಸಾವೊ ಎಂಬುವವರು, ತಮ್ಮ ಕಿರಿಯ ಮಗ ಮನೋಜ್ ಸಾವೊನಿಂದ ಜೀವನ ನಿರ್ವಹಣಾ ವೆಚ್ಚ ಕೊಡಿಸುವಂತೆ ಕೊಡರ್ಮಾದಲ್ಲಿನ ಕೌಟುಂಬಿಕ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ತಂದೆಯ ಜೀವನ ನಿರ್ವಹಣಾ ವೆಚ್ಚವಾಗಿ ಅಣ್ಣನಿಗೆ ಪ್ರತಿ ತಿಂಗಳು ₹3 ಸಾವಿರ ನೀಡುವಂತೆ ಕೌಟುಂಬಿಕ ನ್ಯಾಯಾಲಯವು ಮನೋಜ್ ಅವರಿಗೆ ನಿರ್ದೇಶನ ನೀಡಿತ್ತು. ಕೌಟುಂಬಿಕ ನ್ಯಾಯಾಲಯದ ಆದೇಶ ಪ್ರಶ್ನಿಸಿ ಮನೋಜ್, ಹೈಕೋರ್ಟ್‌ನಲ್ಲಿ ಮರುಪರಿಶೀಲನಾ ಅರ್ಜಿ ಸಲ್ಲಿಸಿದ್ದರು.

'ತಂದೆಯವರು ಹಿರಿಯ ಮಗನೊಂದಿಗೆ ವಾಸಿಸುತ್ತಿದ್ದು, ಹಲವು ಆದಾಯ ಮೂಲಗಳನ್ನು ಹೊಂದಿದ್ದಾರೆ. ಅವರಿಗೆ ಧನದಾಹವೂ ಹೆಚ್ಚು' ಎಂದು ಮನೋಜ್ ಅರ್ಜಿಯಲ್ಲಿ ತಿಳಿಸಿದ್ದರು.

ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ನ್ಯಾಯಮೂರ್ತಿ ಚಾಂದ್, 'ತಂದೆಗೆ ಬೇರೆ ಮೂಲಗಳಿಂದ ಆದಾಯ ಇದೆ ಎಂಬ ವಾದವನ್ನು ಒಪ್ಪಿದರೂ, ಇಳಿಗಾಲದಲ್ಲಿ ಅವರ ಜೀವನೋಪಾಯಕ್ಕಾಗಿ ಹಣಕಾಸು ನೆರವು ನೀಡುವುದು ಮಗನ ಕರ್ತವ್ಯ' ಎಂದು ಹೇಳಿದರು.

ಮನೋಜ್ ಅವರ ಅರ್ಜಿಯನ್ನು ವಜಾಗೊಳಿಸಿದ ಅವರು, ಕೌಟುಂಬಿಕ ನ್ಯಾಯಾಲಯದ ಆದೇಶವನ್ನು ಎತ್ತಿಹಿಡಿದು ಆದೇಶ ಹೊರಡಿಸಿದ್ದಾರೆ.

ರಾಹುಲ್, ಜಡೇಜ ಜೊತೆಯಾಟ

ಟೆಸ್ಟ್ ಕ್ರಿಕೆಟ್: ಮೊದಲ ಇನಿಂಗ್ಸ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಭಾರತಕ್ಕೆ ಮುನ್ನಡೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಕನ್ನಡಿಗ ಕೆ.ಎಲ್. ರಾಹುಲ್ ಮತ್ತು ರವೀಂದ್ರ ಜಡೇಜ ಅವರ ಅರ್ಧಶತಕಗಳ ಬಲದಿಂದ ಭಾರತ ತಂಡವು ಇಂಗ್ಲೆಂಡ್ ಎದುರಿನ ಪ್ರಥಮ ಟೆಸ್ಟ್ ಪಂದ್ಯದಲ್ಲಿ ಉತ್ತಮ ಮುನ್ನಡೆ ಸಾಧಿಸಿದೆ.

ಉಪ್ಪಳದ ರಾಜೀವಗಾಂಧಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಎರಡನೇ ದಿನವಾದ ಶುಕ್ರವಾರ ಭಾರತ ತಂಡವು 175 ರನ್‌ಗಳ ಮುನ್ನಡೆ ಸಾಧಿಸಿದೆ. ಇಂಗ್ಲೆಂಡ್ ತಂಡವು ಗಳಿಸಿದ್ದ 246 ರನ್‌ಗಳಿಗೆ ಉತ್ತರವಾಗಿ ಆತಿಥೇಯ ತಂಡವು 110 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 421 ರನ್ ಗಳಿಸಿದೆ. ಜಡೇಜ (ಬ್ಯಾಟಿಂಗ್ 81; 155ಎ, 4X7, 6X2) ಮತ್ತು ಅಕ್ಷರ್ ಪಟೇಲ್ (ಬ್ಯಾಟಿಂಗ್ 35; 62ಎ, 4X5, 6X1) ಕ್ರೀಸ್‌ನಲ್ಲಿದ್ದಾರೆ. ಮೂರು ಮಹತ್ವದ ಜೊತೆಯಾಟಗಳಲ್ಲಿ ಭಾಗಿಯಾದ ಜಡೇಜ, ತಂಡವು ಉತ್ತಮ ಸ್ಥಿತಿ ತಲುಪಲು ಕಾರಣರಾದರು. ಅವರು ಬೌಲಿಂಗ್‌ನಲ್ಲಿಯೂ ಮಿಂಚಿದ್ದರು.

ಪಂದ್ಯದ ಮೊದಲ ದಿನದಾಟವಾದ ಗುರುವಾರದ ಮುಕ್ತಾಯಕ್ಕೆ ಭಾರತ ತಂಡವು 1 ವಿಕೆಟ್‌ಗೆ 119 ರನ್ ಗಳಿಸಿತ್ತು. ಎರಡನೇ ದಿನ ಬೆಳಿಗ್ಗೆ ಆಟ ಮುಂದುವರಿಸಿದ ಯಶಸ್ವಿ ಜೈಸ್ವಾಲ್ ಅವರಿಗೆ ಶತಕ ಗಳಿಸುವ ಆಸೆ ಈಡೇರಲಿಲ್ಲ. 80 ರನ್ ಗಳಿಸಿದ ಅವರು ಜೋ ರೂಟ್ ಬೌಲಿಂಗ್‌ನಲ್ಲಿ ಔಟಾದರು. ಹತ್ತು ಓವರ್‌ಗಳ ನಂತರ ಶುಭಮನ್ ಗಿಲ್ ಕೂಡ ಔಟಾದರು.

ಈ ಸಂದರ್ಭದಲ್ಲಿ ಕ್ರೀಸ್‌ಗೆ ಬಂದ ಕೆ.ಎಲ್. ರಾಹುಲ್ (86; 123ಎ, 4X8, 6X2) ಮತ್ತು ಶ್ರೇಯಸ್ ಅಯ್ಯರ್ (35; 63ಎ) ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 64 ರನ್ ಸೇರಿಸಿದರು. ಅದರಲ್ಲೂ ರಾಹುಲ್ ಸುಂದರವಾದ ಹೊಡೆತಗಳ ಮೂಲಕ ಕಣ್ಮನ ಸೆಳೆದರು.

50ನೇ ಟೆಸ್ಟ್ ಆಡುತ್ತಿರುವ ರಾಹುಲ್ 14ನೇ ಅರ್ಧಶತಕವನ್ನು 72 ಎಸೆತಗಳಲ್ಲಿ ಪೂರೈಸಿದರು. ಊಟದ ವಿರಾಮದ ನಂತರ ಶ್ರೇಯಸ್ ವಿಕೆಟ್ ಗಳಿಸಿದ ರೆಹಾನ್ ಅಹಮದ್ ಜೊತೆಯಾಟವನ್ನು ಮುರಿದರು.

ರಾಹುಲ್ -ಜಡೇಜ ಜೊತೆಯಾಟ: ಶ್ರೇಯಸ್ ನಿರ್ಗಮನದ ನಂತರ ಕ್ರೀಸ್‌ಗೆ ಬಂದ ರವೀಂದ್ರ ಜಡೇಜ ತಾಳ್ಮೆಯಿಂದ ಬ್ಯಾಟಿಂಗ್ ಮಾಡಿದರು. ತಮ್ಮ ಎಂದಿನ ಆಕ್ರಮಣಶೈಲಿಗೆ ಕಡಿವಾಣ ಹಾಕಿ ರಾಹುಲ್ ಜೊತೆಗೆ ಇನಿಂಗ್ಸ್ ಬೆಳೆಸಿದರು. ಇದರಿಂದಾಗಿ ಐದನೇ ವಿಕೆಟ್ ಜೊತೆಯಾಟದಲ್ಲಿ 65 ರನ್‌ಗಳು ಸೇರಿದವು. ಶತಕದತ್ತ ಸಾಗಿದ್ದ ರಾಹುಲ್ ಅವರ ವಿಕೆಟ್ ಗಳಿಸಿದ ಟಾಮ್ ಹಾರ್ಟ್ಲಿ ಜೊತೆಯಾಟವನ್ನೂ ಮುರಿದರು. ಆದರೆ ಕ್ರೀಸ್‌ನಲ್ಲಿ ಗಟ್ಟಿಯಾಗಿದ್ದ ಜಡೇಜ ಮಾತ್ರ ಎಲ್ಲ ಬೌಲರ್‌ಗಳಿಗೂ ಕಠಿಣ ಸವಾಲೊಡ್ಡಿದರು. ಒಂದು ಹಂತದಲ್ಲಿ ಇಂಗ್ಲೆಂಡ್ ಬೌಲರ್‌ಗಳು ಜಡೇಜ ಅವರನ್ನು ಕಟ್ಟಿಹಾಕುವ ಯತ್ನದಲ್ಲಿ ಲೈನ್ ಮತ್ತು ಲೆಂಗ್ತ್ ಕೂಡ ಕಳೆದುಕೊಂಡು ಬಸವಳಿದರು.

ಆದರೆ ಶಾಂತಚಿತ್ತರಾಗಿ ಬ್ಯಾಟಿಂಗ್ ಮಾಡಿದ 35 ವರ್ಷದ ಆಲ್‌ರೌಂಡರ್ ಜಡೇಜ 84 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಅದರಲ್ಲಿ ಎರಡು ಸಿಕ್ಸರ್ ಮತ್ತು ಐದು ಬೌಂಡರಿ ಇದ್ದವು.

ಅವರು ಭರತ್ (35; 62ಎ) ಅವರೊಂದಿಗೆ ಜಡೇಜ ಆರನೇ ವಿಕೆಟ್ ಜೊತೆಯಾಟದಲ್ಲಿ 68 ರನ್‌ಗಳನ್ನು ಸೇರಿಸಿದರು. ಭರತ್ ವಿಕೆಟ್ ಗಳಿಸಿದ ರೂಟ್ ಜೊತೆಯಾಟವನ್ನು ಮುರಿದರು. ಆರ್. ಅಶ್ವಿನ್ ಕೇವಲ ಒಂದು ರನ್ ಗಳಿಸಿ ರನ್‌ಔಟ್ ಆದರು.

ಜಡೇಜ ಜೊತೆಗೂಡಿದ ಆಲ್‌ರೌಂಡರ್ ಅಕ್ಷರ್ ಅವರು ವಿಕೆಟ್ ಪತನ ತಡೆದರು. ಮುರಿಯದ ಎಂಟನೇ ವಿಕೆಟ್ ಜೊತೆಯಾಟದಲ್ಲಿ 63 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಇಂಗ್ಲೆಂಡ್: 64.3 ಓವರ್‌ಗಳಲ್ಲಿ 246. ಭಾರತ 110 ಓವರ್‌ಗಳಲ್ಲಿ 7 ವಿಕೆಟ್‌ಗೆ 421 (ಗುರುವಾರ 1 ವಿಕೆಟ್‌ಗೆ 119) (ಯಶಸ್ವಿ ಜೈಸ್ವಾಲ್ 80, ಶುಭಮನ್ ಗಿಲ್ 23, ಕೆ.ಎಲ್. ರಾಹುಲ್ 86, ಶ್ರೇಯಸ್ ಅಯ್ಯರ್ 35, ರವೀಂದ್ರ ಜಡೇಜ ಔಟಾಗದೆ 81, ಕೆ.ಎಸ್. ಭರತ್ 41, ಅಕ್ಷರ್ ಪಟೇಲ್ ಔಟಾಗದೆ 35; ಟಾಮ್ ಹಾರ್ಟ್ಲಿ 131ಕ್ಕೆ 2, ಜೋ ರೂಟ್ 77ಕ್ಕೆ 2)



ಭಾರತ ತಂಡದ ರವೀಂದ್ರ ಜಡೇಜ ಅವರು ಅರ್ಧಶತಕ ಗಳಿಸಿದ ನಂತರ ಬ್ಯಾಟ್ ಬೀಸಿ ಸಂಭ್ರಮಿಸಿದರು – ಪಿಟಿಐ ಚಿತ್ರ



ಭಾರತ ತಂಡದ ಕೆ.ಎಲ್. ರಾಹುಲ್ ಬ್ಯಾಟಿಂಗ್ ಸೊಬಗು –ಎಎಫ್‌ಪಿ ಚಿತ್ರ





ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಶುಕ್ರವಾರ ನಡೆದ ಚಳಿಗಾಲದ ಡರ್ಬಿ ರೇಸ್‌ನಲ್ಲಿ ಪ್ರಶಸ್ತಿ ಗೆದ್ದ (ಎಡದಿಂದ) ಜಮಾರಿ ಅಶ್ವದ ಜಾಕಿ ಟ್ರೆವರ್ ಪಟೇಲ್, ಬಿಟಿಸಿ ಅಧ್ಯಕ್ಷ ಅರವಿಂದ್ ರಾಘವನ್, ಕುದುರೆ ಮಾಲೀಕರಾದ ರಾಮಶೇಷು ಇಯುನಿ, ಅನಿತಾ ಜೆ ಕ್ಯಾಪ್ಟನ್ಸ್, ಕೆ.ಎನ್. ಧುಂಜಿಭಾಯ್, ಡಿ.ಆರ್. ಥಾಕರ್, ಸಿದ್ಧಾರ್ಥ್, ಟ್ರೇನರ್ ಪಿ. ಶ್ರಾಫ್ ಅವರು ಟ್ರೋಫಿಯೊಂದಿಗೆ ಇದ್ದಾರೆ (ಎಡಚಿತ್ರ). ಚಳಿಗಾಲದ ಡರ್ಬಿ ರೇಸ್ ವೀಕ್ಷಣೆಗೆ ಸೇರಿದ್ದ ಅಭಿಮಾನಿಗಳು –ಪ್ರಜಾವಾಣಿ ಚಿತ್ರಗಳು

ಜಮಾರಿ ಕುದುರೆಗೆ ಪ್ರಶಸ್ತಿ ಗರಿ

ಬಿಟಿಸಿಯಲ್ಲಿ ಚಳಿಗಾಲದ ಡರ್ಬಿ ರೇಸ್; ಪೈಪೋಟಿಯೊಡ್ಡಿದ ಮೇಡಮ್ ರಿಚ್

• ರವಿಕುಮಾರ್

ಬೆಂಗಳೂರು: ನಿರೀಕ್ಷೆಯಂತೆ ಜಮಾರಿ ಅಶ್ವವು ಶುಕ್ರವಾರ ನಡೆದ ವಿನ್‌ಫೇರ್ 247 ಚಳಿಗಾಲದ ಡರ್ಬಿ ರೇಸ್‌ನಲ್ಲಿ ಪ್ರಶಸ್ತಿ ಗೆದ್ದಿತು.

ಆದರೆ ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ನಡೆದ ಈ ರೇಸ್‌ನಲ್ಲಿ ಜಮಾರಿಗೆ ಗೆಲುವು ಸುಲಭವಾಗಿರಲಿಲ್ಲ. ಕೊನೆಯ ಕ್ಷಣದಲ್ಲಿ ಮೇಡಮ್ ರಿಚ್ ಕುದುರೆಯು ಒಡ್ಡಿದ ನಿಕಟ ಪೈಪೋಟಿಯನ್ನು ಮೀರಿ ನಿಲ್ಲಬೇಕಾಯಿತು. ಆದರೆ ಜಮಾರಿ ಅಶ್ವದ ಜಾಕಿ ಟ್ರೆವರ್ ಪಟೇಲ್ ಅವರ ಚಾಣಾಕ್ಷತೆಯೇ ಮೇಲುಗೈ ಸಾಧಿಸಿತು.

ಹತ್ತು ಸ್ಪರ್ಧಿಗಳು ಭಾಗವಹಿಸಿದ್ದ 2400 ಮೀಟರ್ಸ್ ದೂರದ ಡರ್ಬಿ ರೇಸ್‌ಗೆ ಚಾಲನೆ ದೊರೆತ ಕೂಡಲೇ ಸಮ್‌ಥಿಂಗ್ ರಾಯಲ್ ಮುನ್ನುಗ್ಗಿ ಲೀಡ್ ಪಡೆಯಿತು. 75/100 ಫೇವರಿಟ್ ಆಗಿದ್ದ ಜಮಾರಿ ಕೊನೆಯ 500 ಮೀಟರ್ಸ್ ತಿರುವಿನಲ್ಲಿ ತನ್ನ ಎರಡನೇ ಸ್ಥಾನದಿಂದ ಮುನ್ನುಗ್ಗಿ ಲೀಡ್ ಪಡೆದು ರೇಸ್‌ನ ಕೊನೆಯ 100 ಮೀಟರ್ಸ್‌ನಲ್ಲಿ ಭಾರಿ ಅಂತರದ ಸುಲಭ ಜಯ ಗಳಿಸುವ ಭರವಸೆ ಮೂಡಿಸಿತ್ತು.

ಆ ಕ್ಷಣದಲ್ಲಿ ಕೊನೆಯ ಸ್ಥಾನದಲ್ಲಿ ಓಡುತ್ತಿದ್ದ ಮೇಡಮ್ ರಿಚ್ ಬಿರುಗಾಳಿಯಂತೆ ಮುನ್ನುಗ್ಗಿತು. ಗ್ಯಾಲರಿಗಳಲ್ಲಿ ಕಿಕ್ಕಿರಿದು ಸೇರಿದ್ದ ಜನಸ್ತೋಮದಲ್ಲಿ ಮಿಂಚಿನ ಸಂಚಲನ ಮೂಡಿಸಿತು. ಈ ಹಂತದಲ್ಲಿ ಅನುಭವಿ ಜಾಕಿ ಟ್ರೆವರ್ ಪಟೇಲ್ ಜಮಾರಿಯ ವೇಗವನ್ನು ಹೆಚ್ಚಿಸಿ, 3/4 ಲೆಂತ್‌ಗಳಿಂದ ದಾಖಲೆಯ ಸಮಯದಲ್ಲಿ (2ನಿಮಿಷ, 28.20ಸೆಕೆಂಡು) ಗೆಲುವಿನ ಗೆರೆ ದಾಟಿಸಿದರು. ಹೋದ ವರ್ಷದ 2400 ಮೀಟರ್ಸ್ ದೂರದ ರೇಸ್‌ನಲ್ಲಿ ಜೂಲಿಯೆಟ್ (2ನಿ, 28.40 ನಿಮಿಷ) ಮಾಡಿದ್ದ ದಾಖಲೆಯನ್ನು ಜಮಾರಿ ಮೀರಿತು. ಪ್ರಥಮ ಬಹುಮಾನವಾದ ₹ 83.72 ಲಕ್ಷ ಮತ್ತು ಎರಡು ಲಕ್ಷ ರೂಪಾಯಿ ಮೌಲ್ಯದ ಸುಂದರ ಟ್ರೋಫಿಯನ್ನು ಜಮಾರಿ ಮಾಲೀಕರಿಗೆ ನೀಡಿ ನೀಡಲಾಯಿತು.

ಇಲ್ಲಿ ಪ್ರಾಣ ಅಶ್ವವು ಮೂರನೇ ಹಾಗೂ ತೆಹಾನಿ 4ನೇ ಸ್ಥಾನ ಪಡೆದವು.

ಮುಖ್ಯಾಂಶಗಳು

- 2400 ಮೀಟರ್ಸ್ ದೂರದ ಡರ್ಬಿ ರೇಸ್
- ಗ್ಯಾಲರಿಗಳಲ್ಲಿ ಕಿಕ್ಕಿರಿದು ಸೇರಿದ್ದ ಜನಸ್ತೋಮ
- ಜಮಾರಿ ಮಾಲೀಕರಿಗೆ ₹ 83.72 ಲಕ್ಷ ಬಹುಮಾನ ಮತ್ತು ಆಕರ್ಷಕ ಟ್ರೋಫಿ



ಗೆಲುವಿನ ಗುರಿಯತ್ತ ಜಮಾರಿ ಕುದುರೆಯನ್ನು ಮುನ್ನಡೆಸುತ್ತಿರುವ ಜಾಕಿ ಟ್ರೆವರ್ ಪಟೇಲ್ ಪ್ರಜಾವಾಣಿ ಚಿತ್ರ/ ಬಿ.ಎಚ್. ಶಿವಕುಮಾರ್

ವಿನ್‌ಫೇರ್247 ಬೆಂಗಳೂರು ಡರ್ಬಿಯ ಫಲಿತಾಂಶ

ಕುದುರೆ ಸಂಖ್ಯೆ	ಕುದುರೆ ಹೆಸರು	ತರಬೇತುದಾರ	ಸವಾರ	ಸಮಯ	ಪ್ರಶಸ್ತಿ ಮೊತ್ತ
6	ಜಮಾರಿ	ಪಿ.ಶ್ರಾಫ್	ಟ್ರೆವರ್ ಪಟೇಲ್	2ನಿ,28.20ಸೆ	₹83,72,504
7	ಮೇಡಮ್ ರಿಚ್	ಬಿ.ಪೃಥ್ವಿರಾಜ್	ಎಸ್.ಸಕ್ಸೈನ್	2ನಿ,28.31ಸೆ	₹27,90,835
1	ಪ್ರಾಣ	ಪ್ರಸನ್ನಕುಮಾರ್	ವಿವೇಕ್ ಜಿ	2ನಿ 29.0ಸೆ	₹13,95,417
10	ತೆಹಾನಿ	ಎಸ್.ಅತೋಲಾಹಿ	ಸೂರಜ್ ನರೇಡು	2ನಿ, 29.39ಸೆ	₹6,97,709

ಸಂಕ್ಷಿಪ್ತ ಸುದ್ದಿ

ತನ್ಮಯ್ ತ್ರಿಶತಕದ ವಿಶ್ವದಾಖಲೆ

ಹೈದರಾಬಾದ್ (ಪಿಟಿಐ): ಹೈದರಾಬಾದ್ ಕ್ರಿಕೆಟ್ ತಂಡದ ಆರಂಭಿಕ ಬ್ಯಾಟರ್ ತನ್ಮಯ್ ಅಗರವಾಲ್ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ವೇಗದ ತ್ರಿಶತಕ ಗಳಿಸಿ, ವಿಶ್ವದಾಖಲೆ ಬರೆದರು.



ಶುಕ್ರವಾರ ನಡೆದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಅವರು ಅರುಣಾಚಲ ಪ್ರದೇಶ ಎದುರು 147 ಎಸೆತಗಳಲ್ಲಿ 300 ರನ್‌ಗಳನ್ನು ಗಳಿಸಿದರು. ಈ ಹಿಂದೆ 191 ಎಸೆತಗಳಲ್ಲಿ ತ್ರಿಶತಕ ಬಾರಿಸಿದ್ದ ದಕ್ಷಿಣ ಆಫ್ರಿಕಾದ ಮಾರ್ಕೊ ಮರೈಸ್ ಅವರ ದಾಖಲೆಯನ್ನು ಮುರಿದರು.

ಅರುಣಾಚಲ ಪ್ರದೇಶ ತಂಡವು ಮೊದಲ ಇನಿಂಗ್ಸ್‌ನಲ್ಲಿ 39.4 ಓವರ್‌ಗಳಲ್ಲಿ 172 ರನ್‌ಗೆ ಕುಸಿದಿದೆ. ಹೈದರಾಬಾದ್ ತಂಡವು 48 ಓವರ್‌ಗಳಲ್ಲಿ 1 ವಿಕೆಟ್‌ಗೆ 529 ರನ್ ಕಲೆಹಾಕಿದೆ. ನಾಯಕ ರಾಹುಲ್ ಸಿಂಗ್ 185 ರನ್ ಗಳಿಸಿದರು.

ಆರ್‌ಸಿಬಿಗೆ ಹಾಂಗ್ಯೊ ಐಸ್‌ಕ್ರೀಮ್ ಸ್ವಾದ

ಮಂಗಳೂರು: ಕರಾವಳಿಯ ಹಾಂಗ್ಯೊ ಐಸ್‌ಕ್ರೀಮ್ ಕಂಪನಿಯು ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಆಡುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಐಸ್‌ಕ್ರೀಮ್ ಪಾಲುದಾರ ಆಗಿದೆ.

ಈ ಕುರಿತ ಒಡಂಬಡಿಕೆಗೆ ಬೆಂಗಳೂರಿನಲ್ಲಿ ಈಚೆಗೆ ಆರ್‌ಸಿಬಿ ಮತ್ತು ಹ್ಯಾಂಗ್ಯೊದ ಮುಖ್ಯಸ್ಥರು ಸಹಿ ಮಾಡಿದ್ದು ಈ ಬಾರಿ ಐಪಿಎಲ್ ಟೂರ್ನಿಯಲ್ಲಿ ಆರ್‌ಸಿಬಿಯ ಪ್ರತಿ ಪಂದ್ಯಗಳಲ್ಲೂ ಐಸ್‌ಕ್ರೀಮ್‌ನ ಸ್ವಾದ ಮೇಳೈಸಿ ಪ್ರೇಕ್ಷಕರಿಗೆ ಹೊಸ ಅನುಭೂತಿ ಸಿಗಲಿದೆ.

‘ಆರ್‌ಸಿಬಿ ಜೊತೆಯಲ್ಲಿ ರೋಮಾಂಚಕ ಪಯಣ ಆರಂಭವಾಗುತ್ತಿದ್ದು ಇದು ಐಸ್‌ಕ್ರೀಮ್ ಉದ್ಯಮಕ್ಕೆ ಹೊಸ ಭಾಷ್ಯ ಬರೆಯಲಿದೆ. ಕ್ರಿಕೆಟ್‌ನ ರೋಚಕತೆಯೊಂದಿಗೆ ಹಾಂಗ್ಯೊ ಐಸ್‌ಕ್ರೀಮ್‌ನ ಹಲವು ಬಗೆಯ ಐಸ್‌ಕ್ರೀಮ್‌ಗಳು ಕ್ರೀಡಾಂಗಣದಲ್ಲಿ ಸಂಭ್ರಮ ಹೆಚ್ಚಿಸಲಿವೆ’ ಎಂದು ಹಾಂಗ್ಯೊ ಪ್ರಕಟಣೆ ತಿಳಿಸಿದೆ.

ಮಹಿಳಾ ಹಾಕಿ ಫೈವ್ಸ್ ವಿಶ್ವಕಪ್: ಸೆಮಿಗೆ ಭಾರತ

ಮಸ್ಕತ್ (ಪಿಟಿಐ): ರುತಾಜಾ ದಾದಾಸೊ ಪಿಸಾಲ್ ಮತ್ತು ದೀಪಿಕಾ ಸೊರೆಂಗ್ ಅವರ ಅಮೋಘ ಆಟದ ನೆರವಿನಿಂದ ಭಾರತದ ತಂಡವು ಎಫ್‌ಐಎಚ್ ಮಹಿಳಾ ಹಾಕಿ ಫೈವ್ಸ್ ವಿಶ್ವಕಪ್ ಟೂರ್ನಿಯಲ್ಲಿ ಶುಕ್ರವಾರ ನ್ಯೂಜಿಲೆಂಡ್ ತಂಡವನ್ನು 11–1ರಿಂದ ಸುಲಭವಾಗಿ ಮಣಿಸಿ ಸೆಮಿಫೈನಲ್ ಪ್ರವೇಶಿಸಿತು.

ಚುರುಕಿನ ಆಟವಾಡಿದ ರುತುಜಾ ಮತ್ತು ದೀಪಿಕಾ ಕ್ರಮವಾಗಿ ನಾಲ್ಕು ಮತ್ತು ಮೂರು ಗೋಲು ಗಳಿಸಿದರು.

ಭಾರತ ಶನಿವಾರ ಸೆಮಿಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾವನ್ನು ಎದುರಿಸಲಿದೆ

ರಣಜಿ ಟ್ರೋಫಿ: ಮಯಂಕ್ ಅಗರವಾಲ್ ಅರ್ಧಶತಕ

ಕರ್ನಾಟಕಕ್ಕೆ ಕಿಶನ್, ವೈಶಾಖ ಆಸರೆ

ಅಗರ್ತಲಾ: ಪದಾರ್ಪಣೆ ಪಂದ್ಯದಲ್ಲಿ ಮಿಂಚಿದ ಕಿಶನ್ ಬೆದರೆ ಮತ್ತು ವೈಶಾಖ ವಿಜಯಕುಮಾರ್ ಅವರು ಇಲ್ಲಿ ತ್ರಿಪುರ ತಂಡದ ಎದುರು ಶುಕ್ರವಾರ ಆರಂಭವಾದ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯದಲ್ಲಿ ಕರ್ನಾಟಕ ತಂಡಕ್ಕೆ ಆಸರೆಯಾದರು.

ಸಿ ಗುಂಪಿನ ಪಂದ್ಯದಲ್ಲಿ ಟಾಸ್ ಗೆದ್ದ ತ್ರಿಪುರ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಕರ್ನಾಟಕ ತಂಡವು ದಿನದಾಟದ ಮುಕ್ತಾಯಕ್ಕೆ 78 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 241 ರನ್ ಗಳಿಸಿತು.

ನಾಯಕ ಮಯಂಕ್ ಅಗರವಾಲ್ (51; 100ಎ) , ಚೊಚ್ಚಲ ಪಂದ್ಯವಾಡಿದ ಕಿಶನ್ (62; 121ಎ) ಹಾಗೂ ಎಂಟನೇ ಕ್ರಮಾಂಕದ ಬ್ಯಾಟರ್ ವೈಶಾಖ (ಬ್ಯಾಟಿಂಗ್ 50) ಅವರ ಅರ್ಧಶತಕಗಳಿಂದಾಗಿ ಈ ಗೌರವಾರ್ಹ ಮೊತ್ತವು ಸೇರಿತು.

ತ್ರಿಪುರ ತಂಡದ ರಾಣಾ ದತ್ತಾ ಮತ್ತು ದೇವನಾಥ್ ಅವರ ಬೌಲಿಂಗ್ ಮುಂದೆ ಆರಂಭದಲ್ಲಿಯೇ ಕುಸಿತ ಕಂಡಿದ್ದ ತಂಡಕ್ಕೆ ಈ ಮೂವರ ಬ್ಯಾಟಿಂಗ್ ಮರುಜೀವ ನೀಡಿತು. ಕರ್ನಾಟಕ ತಂಡದ ಖಾತೆಗೆ 16 ರನ್‌ಗಳು ಸೇರುವಷ್ಟರಲ್ಲಿ ಮೂರು ವಿಕೆಟ್‌ಗಳು ಪತನವಾದವು.

ಅನುಭವಿ ಸಮರ್ಥ್, ಪದಾರ್ಪಣೆ ಮಾಡಿದ ಕೆ.ವಿ. ಅನೀಶ್ ಮತ್ತು ನಿಕಿನ್ ಜೋಸ್ ಅವರು ಔಟಾದರು. ಮನೀಷ್ ಪಾಂಡೆ, ದೇವದತ್ತ ಪಡಿಕ್ಕಲ್ ಅವರ ಗೈರುಹಾಜರಿಯಲ್ಲಿ ತಂಡವು ಅಲ್ಪಮೊತ್ತಕ್ಕೆ ಕುಸಿಯುವ ಆತಂಕ ಎದುರಾಗಿತ್ತು.

ಈ ಹಂತದಲ್ಲಿ ಗಟ್ಟಿಯಾಗಿ ನಿಂತ ಮಯಂಕ್ ಮತ್ತು ಕಿಶನ್ ತಾಳ್ಮೆಯ ಜೊತೆಯಾಟದಿಂದಾಗಿ ನಾಲ್ಕನೇ ವಿಕೆಟ್‌ಗೆ 87 ರನ್‌ಗಳು ಸೇರಿದವು. ಬೌಲರ್ ದೇವನಾಥ್ ಊಟದ ವಿರಾಮದ ನಂತರದಲ್ಲಿ ಮಯಂಕ್ ವಿಕೆಟ್ ಗಳಿಸಿ ಜೊತೆಯಾಟ ಮುರಿದರು.

ನೆಲಕಚ್ಚಿ ಆಡಿದ ಕಿಶನ್, ಶರತ್ ಶ್ರೀನಿವಾಸ್ (25 ರನ್) ಅವರೊಂದಿಗೆ 50 ರನ್‌ಗಳ ಜೊತೆಯಾಟಕ್ಕೆ ಕಾರಣವಾದರು. ಇದಕ್ಕಾಗಿ ಇಬ್ಬರೂ 122 ಎಸೆತಗಳನ್ನು ಆಡಿದರು. ಎ.ಕೆ. ಸರ್ಕಾರ್ ಬೌಲಿಂಗ್‌ನಲ್ಲಿ ಕಿಶನ್ ಔಟಾಗುವುದರೊಂದಿಗೆ ಜೊತೆಯಾಟ ಮುರಿಯಿತು. ನಂತರದ ಹತ್ತು ರನ್‌ಗಳ ಅಂತರದಲ್ಲಿ ಮತ್ತಿಬ್ಬರು ಬ್ಯಾಟರ್‌ಗಳಾದ ಶರತ್ ಮತ್ತು ಹಾರ್ದಿಕ್ ರಾಜ ಅವರೂ ಔಟಾದರು.

ಈ ಹಂತದಲ್ಲಿ ಕ್ರೀಸ್‌ಗೆ ಬಂದ ವೈಶಾಖ ಅವರು ಬೌಲರ್‌ಗಳನ್ನು ದಿಟ್ಟತನದಿಂದ ಎದುರಿಸಿದರು. ಅವರಿಗೆ ಕೆ. ಶಶಿಕುಮಾರ್ (19 ರನ್) ಉತ್ತಮ ಜೊತೆ ನೀಡಿದರು. ಇಬ್ಬರೂ ಎಂಟನೇ ವಿಕೆಟ್ ಜೊತೆಯಾಟದಲ್ಲಿ 60 ರನ್ ಸೇರಿಸಿದ್ದರಿಂದ ತಂಡದ ಮೊತ್ತವು 200ರ ಗಡಿ ದಾಟಿತು.

ತ್ರಿಪುರ ತಂಡದ ರಾಣಾ ದತ್ತಾ ಮೂರು, ಮುರಾಸಿಂಗ್ ಮತ್ತು ಸರ್ಕಾರ್ ತಲಾ ಎರಡು ವಿಕೆಟ್ ಗಳಿಸಿದರು.

ನಾಲ್ವರು ಆಟಗಾರರ ಪದಾರ್ಪಣೆ: ಅನುಭವಿ ಮನೀಷ್ ಪಾಂಡೆ ಗಾಯಗೊಂಡಿದ್ದಾರೆ. ದೇವದತ್ತ ಪಡಿಕ್ಕಲ್ ಅವರು ಭಾರತ ಎ ತಂಡದಲ್ಲಿ ಆಡಲು ತೆರಳಿದ್ದಾರೆ. ಆದ್ದರಿಂದ ಯುವ ಪ್ರತಿಭೆಗಳಿಗೆ ಅವಕಾಶ ಕೊಡುವುದು ಅಗತ್ಯವಾಗಿತ್ತು. ಈ ಪಂದ್ಯದಲ್ಲಿ ನಾಲ್ವರು ಆಟಗಾರರಾದ ಕಿಶನ್ ಬೆದರೆ, ಕೆ.ವಿ. ಅನಿಶ್, 17 ವರ್ಷದ ಹಾರ್ದಿಕ್ ರಾಜ್ ಮತ್ತು ಕೆ. ಶಶಿಕುಮಾರ್ ಅವರಿಗೆ ಪದಾರ್ಪಣೆ ಮಾಡಲು ಅವಕಾಶ ನೀಡಲಾಗಿದೆ’ ಎಂದು ಕರ್ನಾಟಕ ತಂಡದ ಮುಖ್ಯ ಕೋಚ್ ಪಿ.ವಿ. ಶಶಿಕಾಂತ್ ‘ಪ್ರಜಾವಾಣಿ‘ಗೆ ತಿಳಿಸಿದರು.

‘ಇನಿಂಗ್ಸ್‌ನಲ್ಲಿ ಬೇಗನೆ ವಿಕೆಟ್‌ಗಳು ಪತನವಾಗಿದ್ದರು. ಆದರೆ ನಾಯಕ ಮಯಂಕ್ ಜವಾಬ್ದಾರಿಯುತ ಇನಿಂಗ್ಸ್ ಆಡಿದರು. ಅವರೊಂದಿಗೆ ಕಿಶನ್, ವೈಶಾಖ ಮತ್ತು ಶಶಿಕುಮಾರ್ ಅವರೂ ಉತ್ತಮವಾಗಿ ಆಡಿದರು. ಇದರಿಂದಾಗಿ ದಿನದಾಟದಲ್ಲಿ ನಾವು ಚೇತರಿಸಿಕೊಂಡಿದ್ದೇವೆ. ಮುಂದಿನ ಹಂತದಲ್ಲಿ ಇನ್ನಷ್ಟು ಉತ್ತಮವಾಗಿ ಆಡಿ ಗೆಲ್ಲುವುದೇ ಗುರಿ’ ಎಂದೂ ಅವರು ಹೇಳಿದರು.



ಮಯಂಕ್ ಅಗರವಾಲ್

ಸ್ಕೋರ್ ಕಾರ್ಡ್

ಕರ್ನಾಟಕ 8ಕ್ಕೆ241 (78 ಓವರ್‌ಗಳಲ್ಲಿ)

ಸಮರ್ಥ್ ಸಿ ಸಹಾ ಬಿ ದತ್ತಾ 1 (14ಎ)
ಮಯಂಕ್ ಎಲ್‌ಬಿಡಬ್ಲ್ಯು ಬಿ ದೇವನಾಥ್ 51 (100ಎ, 4X10)
ಅನೀಶ್ ಬಿ ದತ್ತಾ 1 (11ಎ)
ನಿಕಿನ್ ಬಿ ಮುರಾಸಿಂಗ್ 4 (8ಎ, 4X1)
ಕಿಶನ್ ಸಿ ಸೇನ್ ಬಿ ಸರ್ಕಾರ್ 62 (121ಎ, 4X9)
ಶರತ್ ಸಿ ಸುದೀಪ್ ಬಿ ಸರ್ಕಾರ್ 25 (78ಎ, 4X4)
ಹಾರ್ದಿಕ್ ಎಲ್‌ಬಿಡಬ್ಲ್ಯು ದತ್ತಾ 9 (21ಎ, 4X2)
ವೈಶಾಖ ಬ್ಯಾಟಿಂಗ್ 50 (61ಎ, 4X7)
ಶಶಿಕುಮಾರ್ ಎಲ್‌ಬಿಡಬ್ಲ್ಯು ಮುರಾಸಿಂಗ್ 19 (50ಎ, 4X3)
ವಿದ್ವತ್ ಬ್ಯಾಟಿಂಗ್ 4 (4ಎ, 4X1)

ಇತರೆ: 15 (ಬೈ 2, ಲೆಗ್‌ಬೈ 13)

ವಿಕೆಟ್ ಪತನ: 1–0 (ಸಮರ್ಥ್; 5.1), 2–11 (ಅನೀಶ್; 7.6), 3–16 (ನಿಕಿನ್ ಜೋಸ್;10.6), 4–103 (ಮಯಂಕ್ ಅಗರವಾಲ್; 32.5), 5–153 (ಕಿಶನ್ ಎಸ್ ಬೆದರೆ; 53.1), 6–164 (ಶರತ್ ಶ್ರೀನಿವಾಸ್; 57.6), 7–164 (ಹಾರ್ದಿಕ್ ರಾಜ್; 58.5), 8–224 (ಕೆ.ಶಶಿಕುಮಾರ್; 76.3)

ಬೌಲಿಂಗ್: ಮಣಿಶಂಕರ್ ಮುರಾಸಿಂಗ್ 19–7–35–2, ರಾಣಾ ದತ್ತಾ 15–7–32–3, ಅಭಿಜಿತ್ ಸರ್ಕಾರ್ 14–3–55–2, ಬಿ.ಬಿ. ದೇವನಾಥ್ 13–3–50–1, ಪರ್ವೇಜ್ ಸುಲ್ತಾನ್ 17–3–54–0

ಆರೋಪ ನಿರಾಕರಿಸಿದ ಶೋಯೆಬ್



ಢಾಕಾ (ಪಿಟಿಐ): ಬಾಂಗ್ಲಾದೇಶ ಪ್ರೀಮಿಯರ್ ಲೀಗ್‌ನಲ್ಲಿ ಮ್ಯಾಚ್ ಫಿಕ್ಸಿಂಗ್ ಆರೋಪ ಹಾಗೂ ಫಾರ್ಚೂನ್ ಬರಿಶಾಲ್ ಜೊತೆಗಿನ ಒಪ್ಪಂದವನ್ನು ರದ್ದುಗೊಳಿಸಲಾಗಿದೆ ಎಂಬ ಆರೋಪವನ್ನು ಪಾಕಿಸ್ತಾನ ಕ್ರಿಕೆಟ್ ತಂಡದ ಮಾಜಿ ನಾಯಕ ಶೋಯೆಬ್ ಮಲಿಕ್ ನಿರಾಕರಿಸಿದ್ದಾರೆ.

ಜನವರಿ 22 ರಂದು ಖುಲ್ನಾ ಟೈಗರ್ಸ್ ವಿರುದ್ಧದ ಪಂದ್ಯದ ಆರಂಭಿಕ ಓವರ್‌ನಲ್ಲಿ ಅವರು ಮೂರು ನೋ ಬಾಲ್‌ಗಳನ್ನು ಎಸೆದ ನಂತರ ಈ ಊಹಾಪೋಹಗಳು ಹುಟ್ಟಿಕೊಂಡಿದ್ದವು. ಮ್ಯಾಚ್ ಫಿಕ್ಸಿಂಗ್‌ನ ಅನುಮಾನದ ಕಾರಣ ಫ್ರಾಂಚೈಸಿಯೊಂದಿಗೆ ಮಲಿಕ್ ಅವರ ಒಪ್ಪಂದವನ್ನು ಕೊನೆಗೊಳಿಸಲಾಗಿದೆ ಎಂದು ವದಂತಿಗಳು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡತೊಡಗಿವೆ. ಆರೋಪಗಳ ಹೊರತಾಗಿ ಯೂ, ಬಿಪಿಎಲ್ 2024ರ ಢಾಕಾ ಲೆಗ್ ಮುಗಿಯುವ ಮೊದಲು ಮಲಿಕ್ ಫ್ರಾಂಚೈಸಿಗಾಗಿ ಮತ್ತೊಂದು ಪಂದ್ಯ ಆಡಿದರು.

‘ವದಂತಿಗಳ ವಿಷಯಕ್ಕೆ ಬಂದಾಗ ಎಚ್ಚರಿಕೆ ವಹಿಸುವ ಮಹತ್ವವನ್ನು ಒತ್ತಿ ಹೇಳಲು ಬಯಸುತ್ತೇನೆ. ಈ ಆಧಾರರಹಿತ ವದಂತಿಗಳನ್ನು ಬಲವಾಗಿ ನಿರಾಕರಿಸುತ್ತೇನೆ. ಪ್ರತಿಯೊಬ್ಬರೂ ಮಾಹಿತಿಯನ್ನು ನಂಬುವ ಮತ್ತು ಹರಡುವ ಮೊದಲು ಅದನ್ನು ಪರಿಶೀಲಿಸುವುದು ಬಹಳ ಮುಖ್ಯ’ ಎಂದು ಮಲಿಕ್ ‘ಎಕ್ಸ್’ ನಲ್ಲಿ ಬರೆದಿದ್ದಾರೆ.

ಡೇವಿಸ್ ಕಪ್: ಪ್ರಜ್ವಲ್‌ಗೆ ಪಾಕ್ ವೀಸಾ ನಿರಾಕರಣೆ

ನವದೆಹಲಿ (ಪಿಟಿಐ): ಭಾರತದ ಡೇವಿಸ್ ಕಪ್ ತಂಡವು ಪಾಕಿಸ್ತಾನ ತೆರಳಲು ಸಿದ್ಧತೆ ನಡೆಸುತ್ತಿರುವ ಬೆನ್ನಲ್ಲೇ ತಂಡದ ಆಟಗಾರ ಪ್ರಜ್ವಲ್ ಅವರಿಗೆ ಪಾಕ್‌ನ ವೀಸಾ ನಿರಾಕರಿಸಲಾಗಿದೆ. ಉಳಿದ ಆಟಗಾರರಿಗೆ ಗುರುವಾರ ವೀಸಾ ನೀಡಲಾಗಿದೆ.

ಇಸ್ಲಾಮಾಬಾದ್‌ನಲ್ಲಿ ಫೆ.3 ಮತ್ತು 4ರಂದು ಪಂದ್ಯಗಳು ನಡೆಯಲಿದ್ದು, ಭಾನುವಾರ ಭಾರತ ತಂಡವು ಅಲ್ಲಿಗೆ ತೆರಳಲು ಸಿದ್ಧತೆ ನಡೆಸಿದೆ. ಈ ಮಧ್ಯೆ ಪ್ರಜ್ವಲ್ ಅವರಿಗೆ ವೀಸಾ ನಿರಾಕರಿಸಿರುವುದು ತಂಡವನ್ನು ಚಿಂತೆಗೆ ಎಡೆಮಾಡಿದೆ. ಯಾಕೆಂದರೆ ಪಂದ್ಯದ ವೇಳೆ ಯಾರಾದರೂ ಗಾಯಗೊಂಡರೆ ಆಟಗಾರರ ಕೊರತೆ ಎದುರಾಗಲಿದೆ.

‘ತಂಡದಲ್ಲಿ ಪ್ರಜ್ವಲ್ ಅಗತ್ಯವಿದೆ. ಮತ್ತೊಮ್ಮೆ ನಾವು ಹೈಕಮಿಷನ್‌ಗೆ ಕಳುಹಿಸುತ್ತಿದ್ದೇವೆ. ಕಾರಣ ವಿಲ್ಲದೆ ವೀಸಾ ನಿರಾಕರಿಸಿದ್ದಾರೆ’ ಎಂದು ತಂಡದ ನಾಯಕ ರೋಹಿತ್ ರಾಜ್‌ಪಾಲ್ ತಿಳಿಸಿದರು.

ಪಟ್ನಾ ಪೈರೇಟ್ಸ್‌ಗೆ ಮಣಿದ ಬೆಂಗಾಲ್

ಪಟ್ನಾ (ಪಿಟಿಐ): ಮಂಜಿತ್ ಹಾಗೂ ಸಚಿನ್ ಅವರ ಚುರುಕಿನ ದಾಳಿಯ ನೆರವಿನಿಂದ ಪಟ್ನಾ ಪೈರೇಟ್ಸ್ ತಂಡವು ಶುಕ್ರವಾರ ಪ್ರೊ ಕಬಡ್ಡಿ ಲೀಗ್‌ನ ಹತ್ತನೇ ಆವೃತ್ತಿಯ ಪಂದ್ಯದಲ್ಲಿ 44–28ರಿಂದ ಬೆಂಗಾಲ್ ವಾರಿಯರ್ಸ್ ವಿರುದ್ಧ ಸುಲಭ ಗೆಲುವು ಸಾಧಿಸಿತು.

ಇಲ್ಲಿನ ಪಾಟಲಿ ಪುತ್ರ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಆರಂಭದಿಂದಲೇ ಪಾರಮ್ಯ ಸಾಧಿಸಿದ ಪೈರೇಟ್ಸ್ ತಂಡ ವಿರಾಮದ ವೇಳೆಗೆ ಮುನ್ನಡೆಯಲ್ಲಿತ್ತು. ಉತ್ತರಾರ್ಧದಲ್ಲೂ ಸಾಂಘಿಕ ಪ್ರದರ್ಶನ ನೀಡಿದ ತಂಡವು 16 ಪಾಯಿಂಟ್ಸ್ ಅಂತರದಿಂದ ಎದುರಾಳಿ ತಂಡವನ್ನು ಮಣಿಸಿತು.

ಪೈರೇಟ್ಸ್‌ನ ಮಂಜಿತ್ ರೈಡಿಂಗ್ ಮೂಲಕ 10 ಅಂಕಗಳೊಂದಿಗೆ ‘ಸೂಪರ್ ಟೆನ್’ ಸಾಧನೆ ಮಾಡಿದರು. ಮಯೂರ್ ಕದಮ್ ಟ್ಯಾಕಲ್‌ನಲ್ಲಿ 6 ಅಂಕವನ್ನು ತಂಡಕ್ಕೆ ಒದಗಿಸಿಕೊಟ್ಟರು. ವಾರಿಯರ್ಸ್ ಪರ ನಿತಿನ್ ಕುಮಾರ್ 10 ಪಾಯಿಂಟ್ಸ್ ಕಲೆ ಹಾಕಿದರು.

ಈ ಗೆಲುವಿನ ಮೂಲಕ ಪಟ್ನಾ ಪೈರೇಟ್ಸ್ ತಂಡವು ಪಾಯಿಂಟ್ಸ್ ಪಟ್ಟಿಯಲ್ಲಿ ಆರನೇ ಸ್ಥಾನದಲ್ಲಿದೆ. ಬೆಂಗಾಲ್ ವಾರಿಯರ್ಸ್ ಎಂಟನೇ ಸ್ಥಾನದಲ್ಲಿದೆ.

ಜೈಂಟ್ಸ್‌ಗೆ ಜಯ: ಮತ್ತೊಂದು ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ತಂಡವು 44–35 ರಿಂದ ಯು. ಮುಂಬಾ ತಂಡವನ್ನು ಸೋಲಿಸಿತು. ಜೈಂಟ್ಸ್ ತಂಡದ ಪರ ಪಾರ್ಟಿಕ್ ದಹಿಯಾ 12 ಪಾಯಿಂಟ್ಸ್ ಸಂಪಾದಿಸಿದರು. ಮುಂಬಾ ಪರ ಗುಮನ್ ಸಿಂಗ್ ‘ಸೂಪರ್ ಟೆನ್’ ಸಾಧನೆ ಮಾಡಿದರು.

11ನೇ ಸಲ ಆಸ್ಟ್ರೇಲಿಯಾ ಓಪನ್ ಕಿರೀಟದ ಆಸೆ ಅಂತ್ಯ

ಸಿನ್ನರ್‌ಗೆ ಮಣಿದ ಜೊಕೊವಿಚ್


ಮೆಲ್ಬರ್ನ್ (ಎಎಫ್‌ಪಿ): ಮೆಲ್ಬರ್ನ್ ಪಾರ್ಕ್‌ನಲ್ಲಿ 11ನೇ ಸಲ ಕಿರೀಟ ಧರಿಸುವ ಸರ್ಬಿಯಾದ ಸೂಪರ್ ಸ್ಟಾರ್ ನೊವಾಕ್ ಜೊಕೊವಿಚ್ ಅವರ ಆಸೆ ಈಡೇರಲಿಲ್ಲ.

ರಾಡ್ ಲೇವರ್ ಅರೇನಾದಲ್ಲಿ ಶುಕ್ರವಾರ ನಡೆದ ಸೆಮಿಫೈನಲ್‌ನಲ್ಲಿ ನಾಲ್ಕನೇ ಶ್ರೇಯಾಂಕದ ಯಾನಿಕ್ ಸಿನ್ನರ್ 6–1, 6–2, 6–7 (6–8), 6–3 ರಿಂದ ಜೊಕೊವಿಚ್ ಅವರನ್ನು ಸೋಲಿಸಿ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯತ್ತ ದಿಟ್ಟ ಹೆಜ್ಜೆ ಇಟ್ಟರು. ಹಾಲಿ ಚಾಂಪಿಯನ್ ಜೊಕೊವಿಚ್ ಅವರು 25ನೇ ಗ್ರ್ಯಾನ್ ಸ್ಲಾಮ್ ಪ್ರಶಸ್ತಿ ಗೆಲ್ಲುವ ಕನಸು ಕಮರಿತು.

ಸಿನ್ನರ್ ಅವರು ಫೈನಲ್‌ನಲ್ಲಿ ವಿಶ್ವದ 3ನೇ ಕ್ರಮಾಂಕದ ಆಟಗಾರ ಡೇನಿಯಲ್ ಮೆಡ್ವೆಡೇವ್‌ರನ್ನು ಎದುರಿಸಲಿದ್ದಾರೆ. ಮೆಡ್ವೆಡೇವ್ ಅವರು ಮತ್ತೊಂದು ಸೆಮಿಫೈನಲ್‌ನಲ್ಲಿ 5-7 3-6 7-6(7-4) 7-6(7-5) 6-3ರಿಂದ 6ನೇ ಕ್ರಮಾಂಕದ ಅಲೆಕ್ಸಾಂಡರ್ ಜ್ವರೇವ್ (ಜರ್ಮನಿ) ಅವರನ್ನು ಮಣಿಸಿದರು. 4 ಗಂಟೆ 18 ನಿಮಿಷ ನಡೆದ ಮ್ಯಾರಥಾನ್‌ನಲ್ಲಿ ಆರಂಭದ ಸೆಟ್ ಜ್ವರೇವ್ ಗೆದ್ದರೂ ನಂತರ ಮುಗ್ಗರಿಸಿದರು.

‘ಇದು ತುಂಬಾ ಕಠಿಣ ಪಂದ್ಯ ವಾಗಿತ್ತು. ನಾನು ಉತ್ತಮವಾಗಿ ಪ್ರಾರಂಭಿಸಿದೆ. ಅವರು ಮೊದಲ ಎರಡು ಸೆಟ್ ಸೋತರು. ನಂತರ ಮೂರನೇ ಸೆಟ್‌ನಲ್ಲಿ ಮ್ಯಾಚ್ ಪಾಯಿಂಟ್ ಗಳಿಸಿದ್ದೆ. ಕಳೆದ ವರ್ಷ ವಿಂಬಲ್ಡನ್ ಸೆಮಿಫೈನಲ್‌ನಲ್ಲಿ ಜೊಕೊವಿಚ್ ವಿರುದ್ಧ ಅನುಭವಿಸಿದ್ದ ಸೋಲಿನಿಂದ ಪಾಠ ಕಲಿತಿದ್ದೆ’ ಎಂದು ಇಟಲಿಯ 22 ವರ್ಷದ ಸಿನ್ನರ್ ಹೇಳಿದರು.

2018ರಿಂದ ಇಲ್ಲಿ ಜೊಕೊವಿಚ್ ಸೋತಿರಲಿಲ್ಲ.



ಯಾನಿಕ್ ಸಿನ್ನರ್ ಅವರನ್ನು ಅಭಿನಂದಿಸಿದ ಜೊಕೊವಿಚ್ –ಎಪಿ/ಪಿಟಿಐ ಚಿತ್ರ

‘ಮೊದಲ 2 ಸೆಟ್‌ಗಳಲ್ಲಿ ನಾನು ಚೆನ್ನಾಗಿ ಆಡಲಿಲ್ಲ. ಇದು ನಾನು ಆಡಿದ ಕೆಟ್ಟ ಗ್ರ್ಯಾನ್ ಸ್ಲಾಮ್ ಪಂದ್ಯಗಳಲ್ಲಿ ಒಂದಾಗಿದೆ ಇದು ‘ಅಂತ್ಯದ ಆರಂಭ’ ಅಲ್ಲ. ಮುಂದಿನ ವರ್ಷ ಮರಳುತ್ತೇನೆ’ ಎಂದು ಜೊಕೊವಿಚ್ ಹೇಳಿದರು.

ಡಬಲ್ಸ್ ಫೈನಲ್ ಇಂದು: ಭಾರತದ ರೋಹನ್ ಬೋಪಣ್ಣ ಮತ್ತು ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್ ಜೋಡಿಯು ಶನಿವಾರ (ಮಧ್ಯಾಹ್ನ 3.15) ಫೈನಲ್‌ನಲ್ಲಿ ಇಟಲಿಯ ಸಿಮೋನೆ ಬೊಲೆಲ್ಲಿ ಮತ್ತು ಆಂಡ್ರಿಯಾ ವವಸ್ಸೋರಿ ಜೋಡಿಯನ್ನು ಎದುರಿಸಲಿದೆ.

ಸೌರಭ್‌ಗೆ 5 ವಿಕೆಟ್: ಗೆಲುವಿನ ಸನಿಹ ಭಾರತ ‘ಎ’

ಅಹಮದಾಬಾದ್ (ಪಿಟಿಐ): ಎಡಗೈ ಸ್ಪಿನ್ನರ್ ಸೌರಭ್ ಕುಮಾರ್ ತಮ್ಮ ವೃತ್ತಿಜೀವನದಲ್ಲಿ 22ನೇ ಬಾರಿ ಐದು ವಿಕೆಟ್ ಗೊಂಚಲು ಗಳಿಕೆಯೊಂದಿಗೆ ಭಾರತ ‘ಎ’ ತಂಡದ ಪರ ಯಶಸ್ಸಿನ ಓಟ ಮುಂದುವರಿಸಿದರು.

ಇಲ್ಲಿ ನಡೆಯುತ್ತಿರುವ ಎರಡನೇ ಅನೌಪಚಾರಿಕ ಟೆಸ್ಟ್‌ನ ಮೂರನೇ ದಿನದಾಟಕ್ಕೆ ಭಾರತ ‘ಎ’ ತಂಡ ಮೇಲುಗೈ ಸಾಧಿಸಿದ್ದು, ಗೆಲುವಿನ ಸನಿಹದಲ್ಲಿದೆ.

341 ರನ್‌ಗಳ ಹಿನ್ನಡೆಯೊಂದಿಗೆ ಎರಡನೇ ಇನಿಂಗ್ಸ್ ಆರಂಭಿಸಿದ ಲಯನ್ಸ್ ತಂಡವು 85 ಓವರ್‌ಗಳಲ್ಲಿ 8 ವಿಕೆಟ್‌ಗೆ 304 ರನ್ ಗಳಿಸಿದೆ. ಇನಿಂಗ್ಸ್ ಸೋಲು ತಪ್ಪಿಸಲು ಇನ್ನೂ 37 ರನ್ ಅಗತ್ಯವಿದೆ. ಸೌರಭ್ 104ಕ್ಕೆ 5 ವಿಕೆಟ್ ಪಡೆದು ಮಿಂಚಿದರು.

ಇಂಗ್ಲೆಂಡ್ ಲಯನ್ಸ್ ಮೊದಲ ಇನ್ನಿಂಗ್ಸ್‌ನಲ್ಲಿ 52.4 ಓವರ್‌ಗಳಲ್ಲಿ 152 ರನ್‌ಗೆ ಕುಸಿದಿತ್ತು. ಭಾರತ ಎ ತಂಡವು ಸರ್ಫರಾಜ್ ಖಾನ್ (161) ಮತ್ತು ದೇವದತ್ತ ಪಡಿಕ್ಕಲ್ (105) ಅವರ ಶತಕದ ಬಲದಿಂದ111.1 ಓವರ್‌ಗಳಲ್ಲಿ 493 ರನ್ ಕಲೆಹಾಕಿತ್ತು.

ಬೆಂಗಳೂರು ಇಂಟರ್‌ನ್ಯಾಷನಲ್ ಗ್ರ್ಯಾಂಡ್ ಮಾಸ್ಟರ್ಸ್ ಚೆಸ್

ಮಿತ್ರಬಾ ಗುಹಾ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮ ಬಂಗಾಳದ ಗ್ರ್ಯಾಂಡ್ ಮಾಸ್ಟರ್ ಮಿತ್ರಬಾ ಗುಹಾ ಅವರು ಬೆಂಗಳೂರು ಇಂಟರ್‌ನ್ಯಾಷನಲ್ ಗ್ರ್ಯಾಂಡ್ ಮಾಸ್ಟರ್ಸ್ ಚೆಸ್ ಟೂರ್ನಿಯ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.

ರಾಷ್ಟ್ರೀಯ ಚಾಂಪಿಯನ್ ಎಸ್.ಪಿ.ಸೇತುರಾಮನ್ ಹಾಗೂ ಇಂಗ್ಲೆಂಡ್‌ನ ನೈಜೆಲ್ ಶಾರ್ಟ್ ಕ್ರಮವಾಗಿ ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದರು.

ಟೂರ್ನಿಯ ಅಂತಿಮ 10ನೇ ಸುತ್ತಿನಲ್ಲಿ ಮಿತ್ರಬಾ ಗುಹಾ ಅವರು ಜಿ.ಎಂ ಶ್ಯಾಮ್ ಸುಂದರ್ (ತಮಿಳುನಾಡು) ವಿರುದ್ಧ ಗೆದ್ದು ಪ್ರಶಸ್ತಿ ಸನಿಹ ಬಂದರು. ಈ ಮಧ್ಯೆ ಎಸ್. ಪಿ. ಸೇತುರಾಮನ್ ಅವರು ಸಹ ಅಂತಿಮ ಸುತ್ತಿನಲ್ಲಿ ಜಿ.ಎಂ. ದೀಪ್ತಾಯನ ಘೋಷ್ ಎದುರು ಡ್ರಾ ಸಾಧಿಸಿದರು.

ಇದರೊಂದಿಗೆ ಸೇತುರಾಮನ್ ಮತ್ತು ಗುಹಾ ತಲಾ 8 ಅಂಕ ಗಳಿಸಿದರು. ನಂತರ ನಡೆದ ಟೈ ಬ್ರೇಕ್ ಕಟ್-ಆಫ್ ಗಳಲ್ಲಿ ಗುಹಾ ಅವರು ಹೆಚ್ಚು ಅಂಕ ಪಡೆದು ಪ್ರಶಸ್ತಿ ಗೆದ್ದರು.

ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಬೆಂಗಳೂರು ನಗರ ಜಿಲ್ಲಾ ಚೆಸ್ ಸಂಸ್ಥೆ ಆಶ್ರಯದಲ್ಲಿ ನಡೆದ ಟೂರ್ನಿಯಲ್ಲಿ ಮಿತ್ರಬಾ ಅವರು ಟ್ರೋಫಿ ಜತೆ ₹4.50 ಲಕ್ಷ ನಗದು ಬಹುಮಾನ ಪಡೆದರು. ತಮಿಳುನಾಡಿನ ಸೇತುರಾಮನ್ ಹಾಗೂ ಇಂಗ್ಲೆಂಡ್‌ನ ನೈಜೆಲ್ ಶಾರ್ಟ್ ಅವರು ಟ್ರೋಫಿಗಳ ಜತೆಗೆ ಕ್ರಮವಾಗಿ ₹3 ಲಕ್ಷ ಹಾಗೂ ₹2.50 ಲಕ್ಷ ಬಹುಮಾನ ಜೇಬಿಗಿಳಿಸಿದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ವಿಜೇತರಿಗೆ ಬಹುಮಾನ ವಿತರಿಸಿದರು.

ಶಾರ್ಟ್, ಪ್ರಣವ್ ಆನಂದ್, ಅರೋಣ್ಯಕ್ ಘೋಷ್, ನೀಲೇಶ್ ಸಹಾ, ಸಂದೀಪನ್ ಚಂದಾ, ದೀಪ್ತಾಯನ ಘೋಷ್, ನೀಲೋತ್ಪಲ್ ದಾಸ್ ಮತ್ತು ಎಲ್.ಆರ್.ಶ್ರೀಹರಿ ತಲಾ 7.5 ಅಂಕ ಗಳಿಸಿದ್ದರು. ಹಾಗಾಗಿ 2 ಮತ್ತು 8ರವರೆಗಿನ ಸ್ಥಾನಕ್ಕಾಗಿ ಈ ಆಟಗಾರರ ಮಧ್ಯೆ ಟೈಬ್ರೇಕರ್ ನಡೆಯಿತು.

ಯುವ ಆಟಗಾರ ಶ್ರೀಹರಿ ಅವರು ಶಾರ್ಟ್ ವಿರುದ್ಧ ಡ್ರಾ ಸಾಧಿಸಿದರೆ, ನೀಲೋತ್ಪಲ್ ಅವರು ಪಿ. ಇನಿಯನ್ ಅವರನ್ನು ಹಾಗೂ ಪ್ರಣವ್ ಆನಂದ್ ಅವರು ಅಮೇಯಾ ಆಡಿ ಅವರನ್ನು ಮಣಿಸಿದರು. ಸೇತುರಾಮನ್ ಮತ್ತು ಘೋಷ್ ನಡುವಿನ ಪಂದ್ಯ 30 ನಡೆಗಳ ನಂತರ ಡ್ರಾದಲ್ಲಿ ಕೊನೆಗೊಂಡಿತು.

ನೀಲೇಶ್ ಸಹಾ ಅವರು ಇಂಟರ್‌ನ್ಯಾಷನಲ್ ನಾರ್ಮ್ ಗಳಿಸಿದರೆ, ಪುಷ್ಕರ್ ಡೆರೆ, ಕೇರಳದ ನಿತಿನ್ ಬಾಬು, ದಾಯೆವಿಕ್ ವಾಧವನ್ ಮತ್ತು ಸಾತ್ವಿಕ್ ಅಡಿಗ ಅವರು ಇಂಟರ್‌ನ್ಯಾಷನಲ್ ಮಾಸ್ಟರ್ ಬಿರುದು ಗಳಿಸಿದರು. ಮಹಿಳಾ ವಿಭಾಗದಲ್ಲಿ ಜಿ. ಲಾಸ್ಯ ವುಮೆನ್ ಇಂಟರ್ ನ್ಯಾಷನಲ್ ಮಾಸ್ಟರ್ ನಾರ್ಮ್ ಗಳಿಸಿದರು.

₹ 55 ಲಕ್ಷ ಮೊತ್ತದ ಈ ಟೂರ್ನಿಯಲ್ಲಿ 32 ಗ್ರ್ಯಾಂಡ್ ಮಾಸ್ಟರ್‌ಗಳ ಜೊತೆಗೆ ಒಬ್ಬರು ಡಬ್ಲ್ಯುಜಿಎಂ, 28 ಇಂಟರ್‌ನ್ಯಾಷನಲ್ ಮಾಸ್ಟರ್ಸ್ ಸೇರಿದಂತೆ 16 ದೇಶಗಳ 476 ಆಟಗಾರರು ಕಣದಲ್ಲಿದ್ದರು.



ಬೆಂಗಳೂರು ಇಂಟರ್‌ನ್ಯಾಷನಲ್ ಗ್ರ್ಯಾಂಡ್ ಮಾಸ್ಟರ್ಸ್ ಚೆಸ್ ಟೂರ್ನಿಯಲ್ಲಿ ಪ್ರಥಮ ಸ್ಥಾನ ಪಡೆದ ಮಿತ್ರಬಾ ಗುಹಾ (ಮಧ್ಯದಲ್ಲಿರುವವರು), ನೈಜೆಲ್ ಶಾರ್ಟ್ (ಎಡ) ಮತ್ತು ಎಸ್.ಪಿ.ಸೇತುರಾಮನ್ (ಬಲ) –ಪ್ರಜಾವಾಣಿ ಚಿತ್ರ



ಹಸಿರ ಹಾದಿಗಿವೆ ಹಲವು ಕವಲು

ಸುಕೃತ ಎಸ್.

ಗಿಡಗಳೊಂದಿಗೆ ಸಮಯ ಕಳೆಯುವುದು ನಿತ್ಯವೂ ನೂತನವಾಗಿರುತ್ತವೆ. ಗಿಡಗಳ ಹಸಿರಿಗೆ ಮನುಷ್ಯನನ್ನು ಮನುಷ್ಯನನ್ನಾಗಿಸುವ ಶಕ್ತಿ ಇರುತ್ತವೆ. ಗಿಡಗಳನ್ನು ನೆಡುವುದು, ಬೆಳೆಸುವುದು, ಅವುಗಳನ್ನು ಆರೈಕೆ ಮಾಡುವುದು ಎಲ್ಲವೂ ನಿತ್ಯದ ಭಾಗವಾದರೆ, ದಿನವೆಲ್ಲಾ ಉಲ್ಲಸಿತರಾಗಿರಬಹುದು. ಗ್ರಾಮೀಣರಿಗೆ ಮನೆಯ ಸುತ್ತಮುತ್ತ ಗಿಡಗಳು ಇರುವುದು ಹೊಸತೇನಲ್ಲ. ಆದರೆ, ದೊಡ್ಡ ದೊಡ್ಡ ನಗರಗಳಲ್ಲಿ ಜನರಿಗೆ ಇಂಥ ಅವಕಾಶ ಸಿಗುವುದಿಲ್ಲ.

ಮನೆಯೊಳಗೆ ತಮ್ಮಿಷ್ಟದ ಗಿಡಗಳನ್ನು ಬೆಳೆಸುವ ಹವ್ಯಾಸವನ್ನು ಕೆಲವರು ಬೆಳೆಸಿಕೊಂಡಿದ್ದಾರೆ. ಕೆಲವರು, ತರಕಾರಿ ಬೆಳೆಸಿದರೆ, ಕೆಲವರು ದೇವರ ಪೂಜೆಗೆಂದು, ಮುಡಿಯಲೂ ಹೂ ಗಿಡಗಳನ್ನು ಬೆಳೆಸುತ್ತಾರೆ. ಇನ್ನೂ ಕೆಲವರು ಮನೆಯಲ್ಲಿ ಸಕಾರಾತ್ಮಕ ಶಕ್ತಿ ನೆಲೆಸಿರಲಿ ಎಂದು ವಿವಿಧ ರೀತಿಯ ಗಿಡಗಳನ್ನು ಬೆಳೆಸುತ್ತಾರೆ.

ಈಗೇನಿದ್ದರೂ ವ್ಲಾಗಿಂಗ್ ಕಾಲ. ಕೋವಿಡ್‌ನ 'ಜೈಲು' ಕಾಲದಲ್ಲಿ ಹೊರಗಿನ ಜಗತ್ತಿನೊಂದಿಗೆ ಸಂಪರ್ಕ ಇಟ್ಟುಕೊಳ್ಳುವುದನ್ನು ವ್ಲಾಗಿಂಗ್ ಸಾಧ್ಯವಾಗಿಸಿತ್ತು. ಅದು ಈಗ ಉದ್ಯಮವೂ ಆಗಿದೆ. ಬೇರೆ ಬೇರೆ ವಿಷಯಗಳಿಗೆ ಸಂಬಂಧಿಸಿ ವ್ಲಾಗಿಂಗ್ ಮಾಡಲಾಗುತ್ತದೆ. ಅದರಲ್ಲಿ ಅಡುಗೆಗೆ ಸಂಬಂಧಿಸಿದ ವ್ಲಾಗಿಂಗ್ ವ್ಯಾಪಕ ಪ್ರಚಾರ ಪಡೆದುಕೊಂಡಿದೆ. ಕೆಲವರು ವಿಡಿಯೊ ಮಾಡಿ ಹಾಕುತ್ತಾರೆ, ಕೆಲವರು ವ್ಲಾಗಿಂಗ್ ಮಾಡುತ್ತಾರೆ. ಯಾವುದೇ ಇರಲಿ, ಮನೆಯಲ್ಲಿ ಬೆಳೆದ ತರಕಾರಿಗಳನ್ನು ಬಳಸಿಕೊಂಡು ಮಾಡುವ ಅಡುಗೆಗೆ ಒಂದು ಲೈಕು ಜಾಸ್ತಿಯೇ ಬೀಳುತ್ತದೆ.

ಹಸಿರು ಹೊನ್ನು

ವಿಡಿಯೊ ಮಾಡುವ ಅಥವಾ ವ್ಲಾಗಿಂಗ್ ಮಾಡುವ ಸಂದರ್ಭದಲ್ಲಿ, ಇದು ಮನೆಯ ಬಾಲ್ಕನಿಯಲ್ಲಿ ಅಥವಾ ಮನೆಯ ಪುಟ್ಟ ಹಿತ್ತಲಲ್ಲೇ ಪಾಟುಗಳಲ್ಲಿ ಬೆಳೆಯುವ ತರಕಾರಿಗಳು ಎಂದು ಬಹಳ ಇಷ್ಟದಿಂದ ಹೇಳಿಕೊಳ್ಳಲಾಗುತ್ತದೆ. ಜೊತೆಗೆ, ಗಿಡಗಳಿಂದ ತರಕಾರಿಗಳನ್ನು ಕೀಳುವ ದೃಶ್ಯಗಳನ್ನೂ ವಿಡಿಯೊಗಳಲ್ಲಿ ಹಾಕುತ್ತಾರೆ. ಗಿಡ ಬೆಳೆಸುವ ಬಗ್ಗೆ ಟಿಪ್ಸ್‌ಗಳನ್ನೂ ನೀಡುತ್ತಾರೆ. ಮೆಣಸಿನಕಾಯಿ, ಕೊತ್ತಂಬರಿ ಸೊಪ್ಪು, ಪುದೀನ, ಬೆಂಡೆಕಾಯಿ, ಬದನೆಕಾಯಿ... ಹೀಗೆ ವಿವಿಧ ತರಕಾರಿಗಳನ್ನು ಬೆಳೆಯುತ್ತಾರೆ. ಇನ್ನು ನಗರ ಪ್ರದೇಶದಿಂದ ತುಸು ಹೊರ ವಲಯದಲ್ಲಿ ಇರುವವರು, ಸ್ವಂತ ಭೂಮಿ ಇರುವವರು, ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ತರಕಾರಿಗಳನ್ನು ಬೆಳೆದುಕೊಳ್ಳುತ್ತಾರೆ. ತಮ್ಮ ಫಾರ್ಮ್‌ನ ವಿಡಿಯೊಗಳನ್ನು, ಗಿಡ ಬೆಳೆಯುತ್ತಿರುವ, ಫಲ ನೀಡುತ್ತಿರುವ ಖುಷಿಗಳನ್ನು ಇಲ್ಲಿ ಹಂಚಿಕೊಳ್ಳುತ್ತಾರೆ. ಇದು ಒಂದು ತೆರನದ್ದು.

ಅದರಲ್ಲೂ ಮಲೆನಾಡಿನ ಪ್ರದೇಶಗಳಿಂದ ಹೊಗೆ ತುಂಬಿದ ನಗರ ಪ್ರದೇಶಗಳಿಗೆ ಉದ್ಯೋಗ ನಿಮಿತ್ತ ಬಂದು ಸೇರುವ ಮಂದಿಗಂತು ಗಿಡಗಂಟೆಗಳೊಂದಿನ ಪ್ರೀತಿ ತೊರೆಯುವುದು ಅಸಾಧ್ಯವೇ ಸರಿ. ಪುಟ್ಟ ಮನೆಯಾದರೂ ಸರಿ, ಊರಿನಿಂದ ತೆಗೆದುಕೊಂಡ ಬಂದ ಗಿಡಗಳನ್ನು ಮನೆಯ ಮುಂದೆ ಅಥವಾ ಬಾಲ್ಕನಿ ಇದ್ದರೆ ಅಲ್ಲಿ, ಪುಟ್ಟ ಪುಟ್ಟ ಪಾಟ್‌ಗಳಲ್ಲಿ ಊರುತ್ತಾರೆ. ಇವರು ತರಕಾರಿ ಗಿಡಗಳನ್ನೂ ಬೆಳೆಸುತ್ತಾರೆ. ಜೊತೆಗೆ, ಗುಲಾಬಿ, ಸೇವಂತಿಗೆ, ಮಲ್ಲಿಗೆ, ದಾಸವಾಳ ಹೀಗೆ... ಕೆಲವು ಗಿಡಗಳನ್ನು ಪೋಷಿಸುತ್ತಾರೆ. ಔಷಧೀಯ ಗುಣಗಳಿರುವ ಲೋಳೆಸರ (ಅಲೊವೆರಾ) ಬೆಳೆಸುವ ಕ್ರಮವೂ ಇದೆ. ಮನೆಯೊಳಗೆ ಮನೆಯ ಅಂದ ಹೆಚ್ಚಿಸಲು, ದೊಡ್ಡ ದೊಡ್ಡ ಗಾತ್ರದ ಶೋ ಗಿಡಗಳನ್ನು ಬೆಳೆಸುತ್ತಾರೆ. ಟಿ.ವಿ ಬಳಿ, ಟೇಬಲ್ ಮೇಲೆ ಪ್ಲಾಸ್ಟಿಕ್ ಗಿಡಗಳನ್ನೂ ಇಡಲಾಗುತ್ತಿದೆ. ಇದು ಹೆಚ್ಚಿನ ಬಾರಿ, ಪುಟ್ಟು ಪುಟ್ಟ ಗಿಡಗಳಾಗಿರುತ್ತವೆ.

ಅದೃಷ್ಟ ತರಿಸುವ ಗಿಡಗಳು!: ಮನೆಯ ಜನರ ಮೇಲೆ ಅದೃಷ್ಟ ಅಥವಾ ಸಕಾರಾತ್ಮಕ ಶಕ್ತಿ ಸದಾ ಇರಲಿ ಎನ್ನುವ ಕಾರಣಕ್ಕೂ ಜನರು ಕೆಲವು ಗಿಡಗಳನ್ನು ಬೆಳೆಸುತ್ತಾರೆ. ಮನಿಪ್ಲಾಂಟ್, ಲಕ್ಕಿಬ್ಯಾಂಬು ಮುಂತಾದವುಗಳನ್ನು ಇಡುತ್ತಾರೆ.



ಆಕರ್ಷಣೆಯಲ್ಲಿ ಒಂದಕ್ಕಿಂತ ಒಂದು ಹೆಚ್ಚು. ನೋಡಿದಾಕ್ಷಣ ಇದೊಂದು ಕಳ್ಳಿ ಗಿಡ ಎನ್ನುವುದೇ ಮರೆತು ಹೋಗುವಷ್ಟು ಮುದ್ದಾಗಿರುವ ಈ ಗಿಡಗಳನ್ನು ಮನಸಿದ್ದರೆ ಇಂದೇ ಮನೆಗೆ ತನ್ನಿ.

ಕಳ್ಳಿಗಿಡ ಮನೆಯೊಳಗಿರಬೇಕೇ?

ಮಾಳವಿಕ

ಗಿಡ-ಬಳ್ಳಿಗಳು ಮನೆಯೊಳಗಿದ್ದರೆ ಏನೊ ಸೊಗಸು. ಮನೆಯ ಅಂದಕ್ಕೂ, ಮನೆಯವರ ಆರೋಗ್ಯಕ್ಕೂ, ನೆಮ್ಮದಿಗೂ ಈ ಗಿಡ-ಬಳ್ಳಿಗಳು ನೆರವಾಗುತ್ತವೆ. ಆದರೆ ಯಾವೆಲ್ಲಾ ಗಿಡಗಳನ್ನು ಮನೆಯಲ್ಲಿ ನೆಡಬಹುದು, ಯಾವುದಲ್ಲ ಎನ್ನುವ ಬಗ್ಗೆ ಕೆಲವು ನಂಬಿಕೆಗಳು ಚಾಲ್ತಿಯಲ್ಲಿವೆ. ವಾಸ್ತು ದೋಷಗಳು ನಿವಾರಣೆಯಾಗಿ ಮನೆಯಲ್ಲಿ ಧನಾತ್ಮಕ ಶಕ್ತಿ ನೆಲೆಸುವಂತಾಗಲು ಯಾವ ದಿಕ್ಕಿಗೆ ಯಾವ ಗಿಡ ನೆಡಬೇಕು; ಮನೆಯ ಯಾವ ಮೂಲೆಗೆ ಯಾವ ಗಿಡ ಇಟ್ಟರೆ ಒಳಿತು, ಹಾಗೆಯೇ ಆರೋಗ್ಯಕ್ಕೆ ಯಾವ ಗಿಡ, ಐಶ್ವರ್ಯಕ್ಕೆ ಯಾವ ಗಿಡ ಅಂತನ್ನುವುದರ ಬಗೆಗೂ ವಾಸ್ತು ತಜ್ಞರು ಸಾಲುಸಾಲು ಉತ್ತರಗಳಗನ್ನು ಸೂಚಿಸಿದ್ದಾರೆ. ಆದರೆ ಮನೆಯಲ್ಲಿ ಮುಳ್ಳಿನ ಗಿಡ, ಕಳ್ಳಿ ಗಿಡ ಬೇಡ ಎನ್ನುವುದೇ ಬಹುತೇಕ ವಾಸ್ತು ತಜ್ಞರ ಅಭಿಮತ. ಕ್ಯಾಕ್ಟಸ್ ಜಾತಿಗೆ ಸೇರಿದ ಈ ಕಳ್ಳಿ ಗಿಡ ಅಥವಾ ಮುಳ್ಳಿನ ಗಿಡಗಳನ್ನು ಮನೆಯೊಳಗೆ ಇಟ್ಟರೆ ಮನೆಯಲ್ಲಿ ನಕಾರಾತ್ಮಕ ಶಕ್ತಿ ಹರಡುತ್ತದೆ, ಕಳ್ಳಿಯ ಚೂಪಾದ ಮತ್ತು ಮುಳ್ಳಿನ ಎಲೆಗಳು ಮನೆಯಲ್ಲಿಡುವುದು ತರವಲ್ಲ ಎನ್ನುತ್ತದೆ ವಾಸ್ತುಶಾಸ್ತ್ರ.

ಮನೆಯಲ್ಲಿ ಮುಳ್ಳಿನ ಗಿಡಗಳನ್ನು ಇಟ್ಟರೆ ಮನಸು ವ್ಯಗ್ರವಾಗುತ್ತದೆ ಎನ್ನುವುದು ಕೆಲವರ ವಾದ, ಕಳ್ಳಿಯ ಗಿಡಗಳು ಮನೆಮಂದಿಯ ನಡುವಿನ ಬಾಂಧವ್ಯದ ಮೇಲೆ ಪರಿಣಾಮ ಬೀರುತ್ತದೆ ಅಂತಲೂ ನಂಬಿಕೆ ಇದೆ. ಅದು ಮನೆಯ ಸಂತೋಷ ಮತ್ತು ಸಮೃದ್ಧಿಯನ್ನು ಸಹ ಹಾಳುಮಾಡುತ್ತದೆ ಅಂತಲೂ ನಂಬುವವರಿದ್ದಾರೆ. ಒಂದು ವೇಳೆ ಈ ಜಾತಿಯ ಗಿಡಗಳನ್ನು ಇಡಬೇಕೆಂದಿದ್ದರೆ ಕಂಪೌಂಡ್ ಅಥವಾ ತಾರಸಿ ಮೇಲೆ ಇಡಬಹುದು.

ಅಂದಹಾಗೆ ಈ ಪಾಪಾಸು ಕಳ್ಳಿ ಸಾಮಾನ್ಯದ್ದಲ್ಲ. ಕ್ಯಾಕ್ಟಸ್ ವರ್ಗಕ್ಕೆ ಸೇರಿದ ಈ ಪ್ರಕಾರದಲ್ಲಿ ಸುಮಾರು 400 ಜಾತಿಯ ಸುಮಾರು 1700 ಪ್ರಭೇದಗಳಿವೆ. ರಸವತ್ತಾದ ದಪ್ಪ ಎಲೆ, ದಪ್ಪ ಕಾಂಡಗಳನ್ನು ಹೊಂದಿರುವ ಈ ಗಿಡಗಳು ಬರಡುಭೂಮಿಯಲ್ಲಿಯೂ ಬೆಳೆಯಬಹುದು. ಹೆಚ್ಚಿನ ಆರೈಕೆಯ ಅಗತ್ಯವಿಲ್ಲ ಎನ್ನುವ ಕಾರಣಕ್ಕೆ ಈ ಗಿಡಗಳನ್ನು ಬೆಳೆಯಲು ಹೆಚ್ಚಿನ ಜನ ಇಚ್ಚಿಸುತ್ತಾರೆ. ಆದರೆ ಇದರ ಜಾಗ ಮನೆಯ ಬಾಗಿಲ ಹೊರಗೇ, ಒಳಗಲ್ಲ ಎನ್ನುವ ನಂಬಿಕೆಯೂ ಅಷ್ಟೇ ಗಾಢವಾಗಿ ಬೇರೂರಿದೆ.

ಬದಲಾಗಿದೆ ಟ್ರೆಂಡ್

ಇತ್ತೀಚೆಗೆ ಆಕರ್ಷಕವಾದ, ಅಂದದ ಕಳ್ಳಿ ಗಿಡಗಳನ್ನು ಉಡುಗರೆಯಾಗಿ ಕೊಡುವ ಟ್ರೆಂಡ್ ಹೆಚ್ಚಿದೆ. ಕಾರ್ಯಕ್ರಮಗಳಲ್ಲಿ, ಹುಟ್ಟುಹಬ್ಬಕ್ಕೆಲ್ಲಾ ಉಡುಗರೆಯಾಗಿ ಕೊಡುವ ಟ್ರೆಂಡ್ ಹೆಚ್ಚಿದೆ. ಅದರಲ್ಲಿ ಕ್ರಿಸ್‌ಮಸ್ ಕಳ್ಳಿ, ನಕ್ಷತ್ರ ಕಳ್ಳಿ, ಸಾಗುರೊ ಕಳ್ಳಿ, ಥಿಂಬಲ್ ಕ್ಯಾಕ್ಟಸ್, ಗೋಲ್ಡನ್ ಬ್ಯಾರೆಲ್ ಕ್ಯಾಕ್ಟಸ್, ಪೀನಟ್ ಕ್ಯಾಕ್ಟಸ್, ಮಿಸ್ಟೆಲ್ಟೊ ಕ್ಯಾಕ್ಟಸ್, ಓಲ್ಡ್ ಲೇಡಿ ಕ್ಯಾಕ್ಟಸ್, ಬನ್ನಿ ಇಯರ್ ಕ್ಯಾಕ್ಟಸ್, ಮೂನ್ ಕ್ಯಾಕ್ಟಸ್ ಅಂತ ಹಲವಾರು ಬಗೆಯ ಗಿಡಗಳಿದ್ದು, ಅಂದದಲ್ಲಿ, ಆಕರ್ಷಣೆಯಲ್ಲಿ ಒಂದಕ್ಕಿಂತ ಒಂದು ಹೆಚ್ಚು. ನೋಡಿದಾಕ್ಷಣ ಇದೊಂದು ಕಳ್ಳಿ ಗಿಡ ಎನ್ನುವುದೇ ಮರೆತು ಹೋಗುವಷ್ಟು ಮುದ್ದಾಗಿರುವ ಈ ಗಿಡಗಳನ್ನು ಮನಸಿದ್ದರೆ ಇಂದೇ ಮನೆಗೆ ತನ್ನಿ. ಅಷ್ಟಕ್ಕೂ ಈ ಗಿಡಗಳನ್ನು ಒಳಾಂಗಣದಲ್ಲಿ ಇಡಬಾರದು ಎನ್ನುವ ಪರಿಕಲ್ಪನೆಯ ಹಿಂದೆ ಇರಬಹುದಾದ ವೈಜ್ಞಾನಿಕ ಕಾರಣವನ್ನು ಗಮನಿಸುವುದು ಮುಖ್ಯ.

ಈ ಗಿಡಗಳು ಮುಳ್ಳುಗಳನ್ನು ಹೊಂದಿರುವ ಕಾರಣ ಮಕ್ಕಳಿರುವ ಮನೆಗಳಿಗಂತೂ ಒಳಾಂಗಣಕ್ಕೆ ಒಳ್ಳೆಯದಲ್ಲ ಅಂತ ಮಾತ್ರ ಹೇಳಬಹುದು. ಇನ್ನುಳಿದಂತೆ ಮನೆಯಲ್ಲಿ ಸರಿಯಾಗಿ ಗಾಳಿ-ಬೆಳಕು ಹರಿದಾಡದೇ ಇದ್ದರೂ ಹೂಗಿಡಗಳನ್ನೂ ನಾಚಿಸುವಷ್ಟು ಅಂದದ ವಿಧಗಳಲ್ಲಿ ಲಭ್ಯ ಇರುವ ಈ ಗಿಡಗಳನ್ನು ಮನಸಿರುವವರು ಧಾರಾಳವಾಗಿ ಮನೆಯೊಳಗೆ ಬೆಳೆಸಬಹುದು.

ಮೂಗಿನಿಂದ ರಕ್ತ ಬರುತ್ತಿದೆಯೇ?



ಸಾಮಾನ್ಯವಾಗಿ 3 ರಿಂದ 8ವರ್ಷ ವಯೋಮಿತಿಯೊಳಗಿನ ಮಕ್ಕಳಲ್ಲಿ ಈ ಸಮಸ್ಯೆ ಕಂಡುಬರುತ್ತದೆ. ಈ ಸಮಸ್ಯೆಯಿಂದ ಕೆಲವು ಬಾರಿ ಜೀವಕ್ಕೆ ಅಪಾಯವಾಗುವ ಸಾಧ್ಯತೆಯೂ ಇರುತ್ತದೆ.

ಸಂಜನಾ, ಶಾಲೆಯಿಂದ ಬರುವಾಗಲೇ ಮೂಗು ಹಿಡಿದುಕೊಂಡು ಬಂದಿದ್ದಳು. ಕರವಸ್ತ್ರಕ್ಕೆ ರಕ್ತದ ಕಲೆಯಾಗಿತ್ತು. ಹೀಗೆ ಇದ್ದಕ್ಕಿದ್ದಂತೆ ಮಗುವಿನ ಮೂಗಿನಿಂದ ರಕ್ತಸ್ರಾವವಾಗಲು ಕಾರಣವೇನು? ಆಗ ಯಾವ ಎಚ್ಚರಿಕೆ ವಹಿಸಬೇಕು ಎಂದು ಕಿಂಡರ್ ಆಸ್ಪತ್ರೆಯ ಹಿರಿಯ ತಜ್ಞ ಡಾ.ಸುನಿತಾ ಮಾಧವನ್ ಇಲ್ಲಿ ತಿಳಿಸಿದ್ದಾರೆ.

ಇತ್ತೀಚೆಗೆ ಮಕ್ಕಳ ಮೂಗಿನಲ್ಲಿ ರಕ್ತಸ್ರಾವ ಕಂಡುಬರುವ ಪ್ರಕರಣಗಳು ವರದಿಯಾಗುತ್ತಿದೆ. ಮೂಗು ಸೂಕ್ಷ್ಮ ಅಂಗವಾಗಿದ್ದು, ಹೆಚ್ಚು ರಕ್ತನಾಳಗಳನ್ನು ಹೊಂದಿರುತ್ತದೆ. ಆ ಮೂಲಕ ಅಧಿಕ ರಕ್ತ ಪೂರೈಕೆಯಾಗುವ ಅಂಗವಾಗಿದೆ ಎನ್ನುತ್ತಾರೆ ವೈದ್ಯೆ ಸುನಿತಾ.

ಸಾಮಾನ್ಯವಾಗಿ 3 ರಿಂದ 8ವರ್ಷ ವಯೋಮಿತಿಯೊಳಗಿನ ಮಕ್ಕಳಲ್ಲಿ ಈ ಸಮಸ್ಯೆ ಕಂಡುಬರುತ್ತದೆ. ಮೂಗಿನ ಮುಂಭಾಗ ಅಥವಾ ಹಿಂಭಾಗದಲ್ಲಿ ಈ ರೀತಿಯ ರಕ್ತಸ್ರಾವ ಕಂಡುಬರುತ್ತದೆ. ಈ ಸಮಸ್ಯೆಯಿಂದ ಕೆಲವು ಬಾರಿ ಜೀವಕ್ಕೆ ಅಪಾಯವಾಗುವ ಸಾಧ್ಯತೆಯೂ ಇರುತ್ತದೆ. ಈ ಸಮಸ್ಯೆಯಿರುವ ಶೇ 70ರಿಂದ 80ರಷ್ಟು ಪ್ರಕರಣಗಳಲ್ಲಿ ಯಾವುದೇ ನಿಖರ ಕಾರಣಗಳು ಇರುವುದಿಲ್ಲ, ಆದರೆ ಇದೊಂದು ಪ್ರಾಥಮಿಕ ಲಕ್ಷಣವಾಗಿದೆ. ಚಳಿಗಾಲದಲ್ಲಿನ ತಂಪಾದ ಒಣ ಗಾಳಿಯಿಂದಾಗಿ ಮೂಗಿನ ಒಳಭಾಗದಲ್ಲಿ ತೇವಾಂಶ ಕಡಿಮೆಯಾಗುತ್ತದೆ, ಇದರಿಂದ ಮೂಗು ಒಣಗಟ್ಟಿ ರಕ್ತಸ್ರಾವ ಉಂಟಾಗುತ್ತದೆ. ಅಲ್ಲದೆ ಚಳಿಗಾಲದಲ್ಲಿ ವೈರಲ್ ಸೋಂಕುಗಳು ಹರಡುವ ಸಾಧ್ಯತೆಯೂ ಹೆಚ್ಚಾಗಿರುತ್ತದೆ ಎಂದು ಡಾ. ಸುನಿತಾ ತಿಳಿಸಿದ್ದಾರೆ.

ಮೂಗಿನಲ್ಲಿ ಪದೇ ಪದೇ ಕೈ ಹಾಕುವುದು, ಅಲರ್ಜಿಯಿಂದಾಗಿ ಮೂಗನ್ನು ಉಜ್ಜುವುದು ಮತ್ತು ಇತರೆ ಕಾರಣಗಳಿಂದಲೂ ಮೂಗಿನಲ್ಲಿ ರಕ್ತಸ್ರಾವ ಕಂಡುಬರುವುದು ಸಾಮಾನ್ಯ. ಆದರೆ ಉಸಿರಾಟದ ಸೋಂಕು, ಸೈನಸಿಟಸ್, ವ್ಯಾಸ್ಕುಲೈಟಿಸ್, ಅಸಹಜ ಮೂಗಿನ ಆಕಾರ ಹಾಗೂ ಪಾಲಿಪ್ಸ್ ಸೋಂಕಿನಿಂದಾಗಿ ಮೂಗಿನಲ್ಲಿ ರಕ್ತಸ್ರಾವ ಕಂಡುಬರುತ್ತದೆ ಎಂದು ವೈದ್ಯೆ ಸುನಿತಾ ಉಲ್ಲೇಖಿಸಿದ್ದಾರೆ.

ಮಕ್ಕಳು ತಮಗೆ ತಿಳಿದೋ ಅಥವಾ ತಿಳಿಯದೆಯೋ ಮೂಗಿನೊಳಗೆ ವಸ್ತುಗಳನ್ನು ಹಾಕಿಕೊಂಡಿರುತ್ತಾರೆ. ಆದರೆ ಮಕ್ಕಳು ಅದರ ಬಗ್ಗೆ ಯಾರಿಗೂ ಹೇಳಿಕೊಂಡಿರುವುದಿಲ್ಲ. ಅದರ ಪರಿಣಾಮವಾಗಿ ಕೆಲ ಸಮಯದ ಬಳಿಕ ಮೂಗಿನಲ್ಲಿ ಹಳದಿ ಸ್ರಾವ ಅಥವಾ ರಕ್ತಸ್ರಾವವಾಗಬಹುದು. ಮಕ್ಕಳು ತಮ್ಮ ಮೂಗಿನಲ್ಲಿ ಬ್ಯಾಟರಿಗಳಂತಹ ಹಾನಿಕಾರಕ ವಸ್ತುಗಳನ್ನು ಹಾಕಿಕೊಂಡಿರುವ ಉದಾಹರಣೆಗಳಿವೆ. ಆಂಜಿಯೋಮಾ ಮತ್ತು ಆಂಜಿಯೋ ಫೈಬ್ರೊಮಾದಂತಹ ಸಾಮಾನ್ಯವಲ್ಲದ ಗಾಯಗಳು ಉಂಟಾದ ಸಂದರ್ಭದಲ್ಲಿಯೂ ಮೂಗಿನಲ್ಲಿ ರಕ್ತಸ್ರಾವ ಕಂಡುಬರುತ್ತದೆ ಎಂದು ಹೇಳುತ್ತಾರೆ.

ದೀರ್ಘಾವಧಿಯಲ್ಲಿ ಮೂಗಿನ ಮೂಲಕ ಸ್ಟೀರಾಯ್ಡ್‌ಗಳ ಬಳಕೆಯಿಂದಲೂ ರಕ್ತಸ್ರಾವವಾಗಬಹುದು. ರಕ್ತಹೀನತೆ, ರಕ್ತಸ್ರಾವದ ಸಮಸ್ಯೆ, ಪ್ಲೇಟ್ಲೆಟ್ ಸಮಸ್ಯೆ, ಲ್ಯುಕೇಮಿಯಾ, ವ್ಯಾಸ್ಕುಲಾರ್‌ನಲ್ಲಿನ ಅಸಹಜತೆಗಳು, ಯಕೃತ್ತಿನ ಕಾಯಿಲೆ ಮತ್ತು ಹೆಮರಾಜಿಕ್ ಸೋಂಕುಗಳಂತಹ ಡೆಂಗಿ ಕಾರಣಗಳಿಂದಾಗಿಯೂ ಮೂಗಿನಲ್ಲಿ ರಕ್ತಸ್ರಾವ ಕಾಣಿಸಿಕೊಳ್ಳಬಹುದು. ಇಂತಹ ಸಂದರ್ಭಗಳಲ್ಲಿ ವೈದ್ಯರ ಸಲಹೆ ಪಡೆಯುವುದು ಸೂಕ್ತ.

ಮೂಗಿನಲ್ಲಿ ರಕ್ತಸ್ರಾವ ಕಂಡುಬಂದರೆ

- ಮೂಗಿನಲ್ಲಿ ಸಣ್ಣಪ್ರಮಾಣದಲ್ಲಿ ರಕ್ತ ಕಂಡುಬಂದಾಗ ಕೂಡಲೇ ವಿಶ್ರಾಂತಿ ತೆಗೆದುಕೊಳ್ಳಿ.
- ಆರಾಮದಾಯಕವಾಗಿ ಕುಳಿತು ಯಾವುದೇ ಅಡಚಣೆಯಿಲ್ಲದೆ ಉಸಿರಾಡಿ.
- ಮೂಗಿನಲ್ಲಿ ಕಿರಿಕಿರಿಯಾದಾಗ ಮೂಗಿನ ಡ್ರಾಪ್ಸ್ ಮತ್ತು ನಂಜುನಿರೋಧಕ ಕ್ರೀಮ್‌ಗಳನ್ನು ಬಳಸಿ.
- ತೀವ್ರ ರಕ್ತಸ್ರಾವ ಕಂಡುಬಂದಲ್ಲಿ ತಕ್ಷಣವೇ ವೈದ್ಯರನ್ನು ಸಂಪರ್ಕಿಸಿ.
- ಈ ಸಂದರ್ಭದಲ್ಲಿ ಬಾಯಿಯ ಮೂಲಕ ಉಸಿರಾಡಿ.
- ಕಬ್ಬಿಣಾಂಶವುಳ್ಳ ಆಹಾರ ಸೇವನೆಯಿಂದ ರಕ್ತಹೀನತೆಯನ್ನು ಸರಿಪಡಿಸಿಕೊಳ್ಳಬಹುದು.
- ಕೂಡಲೇ ವೈದ್ಯಕೀಯ ಚಿಕಿತ್ಸೆ ಪಡೆಯಿರಿ.

ಈ ಚಟುವಟಿಕೆಗಳನ್ನು ಮಾಡದಿರಿ


- ಮೂಗಿನಲ್ಲಿ ಕೈ ಹಾಕುವುದನ್ನು ತಪ್ಪಿಸಿ.
- ರಕ್ತಸ್ರಾವವು ದೇಹದ ಒಳಗೆ ಸೇರುವುದನ್ನು ತಪ್ಪಿಸಲು ಕೂಡಲೇ ಮಲಗದಿರಿ.
- ರಕ್ತವನ್ನು ನುಂಗಬೇಡಿ.



ಪಾದಗಳನ್ನು ಪ್ರೀತಿಸಿ

ನಮ್ಮ ಇಡೀ ದೇಹದ ತೂಕವನ್ನು ಹೊತ್ತಿರುವ ಪಾದಗಳನ್ನು ನಾವು ಪ್ರೀತಿಸದಿದ್ದರೆ ನಮ್ಮನ್ನೇ ನಾವು ನಿರ್ಲಕ್ಷಿಸಿದಂತೆ. ಪಾದಗಳಿಗೆ ಚಪ್ಪಲಿ ಕೊಳ್ಳುವುದನ್ನು ಬಿಟ್ಟರೆ ಹೆಚ್ಚಿನ ಆರೈಕೆ ಅಥವಾ ಕಾಳಜಿ ಮಾಡುವುದೇ ಕಡಿಮೆ. ನಮ್ಮ ದೇಹದ ಎಲ್ಲ ಅಂಗಗಳಲ್ಲಿ ಅತಿ ನಿರ್ಲಕ್ಷಿತ ಅಂಗವಿದ್ದರೆ ಪಾದವೆಂದೇ ಹೇಳಬಹುದು.

ಆದರೆ ದೇಹದ ಭಾರವನ್ನು ಹೊರುವ ಪಾದಗಳ ಆರೈಕೆ ಆಗಾಗ ಮಾಡುತ್ತಿದ್ದರೆ ನಿಮ್ಮ ಆರೋಗ್ಯ ಸುರಕ್ಷಿತವಾಗಿರುತ್ತದೆ. ಪಾದದ ಆರೈಕೆಗೆ ಮೊದಲಿಗೆ ಮಾಡಬೇಕಿರುವುದು, ನಾವು ಕೊಳ್ಳುತ್ತಿರುವ ಚಪ್ಪಲಿ ಮೆತ್ತಗಿವೆಯೇ ಎಂಬುದನ್ನು ಪರಿಶೀಲಿಸಬೇಕು.



ತಲೆಗೆ ತಲೆದಿಂಬು ಮೆತ್ತಗಿರುವಂತೆ, ಪಾದಗಳಿಗೂ ಮೆದುವಾದ ಮೆದೆ ಇರುವ ಚಪ್ಪಲಿಗಳನ್ನೇ ಕೊಳ್ಳಬೇಕು. ದೇಹದ ಭಾರ ಊರಿದಾಗ ಅವುಗಳಿಗೆ ಹೆಚ್ಚಿನ ತೊಂದರೆ ಆಗುವುದಿಲ್ಲ. ಪ್ರತಿದಿನವೂ ಪಾದಗಳನ್ನು ತೊಳೆದ ನಂತರ ತೇವಾಂಶ ಉಳಿಯದಂತೆ ಒರೆಸಿಕೊಳ್ಳಬೇಕು. ಕೈಗಳಿಗೆ ಎಟಕುವುದಿಲ್ಲವೆಂದೋ, ಬಾಗಲು ಆಗದು ಎಂದೋ ಕೆಲವೊಮ್ಮೆ ಪಾದಗಳನ್ನು ಒರೆಸಿಕೊಳ್ಳುವುದೇ ಇಲ್ಲ. ಇದರಿಂದಾಗಿಯೇ ಬೆರಳುಗಳ ನಡುವೆ ತುರಿಕೆ ಖಂಡು ಬರುತ್ತದೆ.

ರಾತ್ರಿ ಮಲಗುವ ಮುನ್ನ ಪಾದಗಳಿಗೆ ಒಂಚೂರು ಕೊಬ್ಬರಿ ಎಣ್ಣೆಯಿಂದ ಮಸಾಜು ಮಾಡಿಕೊಂಡರೆ, ಮರುದಿನದ ಬೆಳಗು ನಿಮ್ಮನ್ನು ಹುಮ್ಮಸ್ಸಿನಿಂದ ಎದುರುಗೊಳ್ಳುತ್ತದೆ. ಪ್ರತಿದಿನವೂ ಪಾದ, ಹಿಮ್ಮಡಿಯನ್ನು ಪರಿಶೀಲಿಸಿಕೊಳ್ಳಿ. ಒಡೆದ ಪಾದಗಳಿದ್ದರೆ ಹೆಚ್ಚಿನ ಆರೈಕೆ ಬೇಕು. ಆ ಬಿರುಕುಗಳಲ್ಲಿ ದೂಳು ಕೂರದಂತೆ, ತೇವ ಉಳಿಯದಂತೆಯೂ ಎಚ್ಚರಿಕೆವಹಿಸಬೇಕು. ಪ್ರತಿದಿನವೂ ಸಾಕ್ಸುಗಳನ್ನು ಬದಲಿಸಿ. ನೀವು ನೇಲ್‌ಪ ಆಲಿಶ್ ಬಳಸುವಂತಿದ್ದರೆ, ಬಣ್ಣ ಬದಲಿಸುವಾಗ ಒಂದು ದಿನವಾದರೂ ಉಗುರುಗಳಿಗೆ ವಿಶ್ರಾಂತಿ ನೀಡಿ. ಉಗುರು ಬೆಚ್ಚನೆಯ ನೀರಿನಲ್ಲಿ ಪ್ರತಿದಿನವೂ ಆರೇಳು ನಿಮಿಷಗಳ ಕಾಲ ಪಾದ ನೆನಸಿಟ್ಟರೆ ದಿನದ ದಣಿವು ಓಡಿ ಹೋಗುವುದು.

ವಾರಕ್ಕೆ ಒಮ್ಮೆಯಾದರೂ ಪಾದಗಳನ್ನು ನೀರಿನಲ್ಲಿ ನೆನೆಸಿಟ್ಟು, ಬ್ರಷ್‌ನಿಂದ ಉಜ್ಜಿ ಸ್ವಚ್ಛಗೊಳಿಸಿ. ನಂತರ ಮಾಯಿಶ್ಚರೈಸರ್ ಲೇಪಿಸುವುದು ಮರೆಯದಿರಿ.

ಸಮೀಪ ದೃಷ್ಟಿದೋಷ ಇದೆಯೇ?

ಗ್ಲಾಕೊಮಾ ಬಗ್ಗೆ ಎಚ್ಚರ



ಗ್ಲಾಕೊಮಾ ದೀರ್ಘಕಾಲೀನ ಕಣ್ಣಿನ ರೋಗವಾಗಿದ್ದು, ಆಪ್ಟಿಕ್ ನರದ ಹಾನಿಯಿಂದ ಕಂಡುಬರುತ್ತದೆ.

ಆರೋಗ್ಯ

ಮಯೋಪಿಯಾ ಹೊಂದಿರುವವರಲ್ಲಿ ಗ್ಲಾಕೊಮಾ ಕಾಣಿಸಿಕೊಳ್ಳುವ ಸಾಧ್ಯತೆ ಮೂರು ಪಟ್ಟು ಹೆಚ್ಚಿರುತ್ತದೆ

ಸಮೀಪ ದೃಷ್ಟಿ ದೋಷ ಎಂದೂ ಕರೆಯಲಾಗುವ ಮಯೋಪಿಯಾ ಸಾಮಾನ್ಯ ಸಮಸ್ಯೆಯಾಗಿದ್ದು, ಇದರಲ್ಲಿ ಸಮೀಪದ ವಸ್ತುಗಳು ಸ್ಪಷ್ಟವಾಗಿ ಕಾಣಿಸುತ್ತವೆ. ಆದರೆ, ದೂರದ ವಸ್ತುಗಳು ಮಂದವಾಗಿ ಕಾಣಿಸುತ್ತವೆ. ದೇಶದ ಜನಸಂಖ್ಯೆಯಲ್ಲಿ ಶೇ 10 ರಿಂದ 20ರಷ್ಟು ಮಂದಿ ಈ ಸಮಸ್ಯೆಯಿಂದ ಬಳಲುತ್ತಿದ್ದಾರೆ.

ಮಯೋಪಿಯಾ ಮತ್ತು ಗ್ಲಾಕೊಮಾ ಮಧ್ಯೆ ಇರುವ ಸಂಬಂಧವನ್ನು ಪರಿಗಣಿಸಿ, ಹಲವು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವುದು ಅಗತ್ಯ. ಓದುವುದು, ಕಂಪ್ಯೂಟರ್ ಬಳಕೆ, ವಿಡಿಯೊ ಗೇಮ್ ಆಡುವುದು ಮತ್ತು ಸಮೀಪದಿಂದ ಟಿ.ವಿ ವೀಕ್ಷಣೆ ಇತ್ಯಾದಿ ಚಟುವಟಿಕೆಗಳನ್ನು ಕಡಿಮೆ ಮಾಡುವ ಮೂಲಕ ಮಕ್ಕಳಲ್ಲಿ ಮಯೋಪಿಯಾವನ್ನು ನಿಯಂತ್ರಿಸಬಹುದು. ಈ ಎಲ್ಲ ಚಟುವಟಿಕೆಗಳಿಂದ ಮಕ್ಕಳ ದೃಷ್ಟಿಯ ಸಾಮರ್ಥ್ಯದ ಮೇಲೆ ಒತ್ತಡ ಬೀಳುತ್ತದೆ. ದೈಹಿಕ ಚಟುವಟಿಕೆಯಲ್ಲಿ ಪಾಲ್ಗೊಳ್ಳುವಂತೆ ಮಕ್ಕಳನ್ನು ಪ್ರೇರೇಪಿಸಬೇಕು.

ಮಯೋಪಿಯಾ ಹೊಂದಿರುವವರು ವರ್ಷಕ್ಕೆ ಎರಡು ಬಾರಿ ಕಣ್ಣಿನ ತಪಾಸಣೆ ಮಾಡಿಸಿಕೊಳ್ಳಬೇಕು. ಜಾಗೃತಿ ಕೊರತೆ, ಪತ್ತೆ ಸಾಧನಗಳ ಸೀಮಿತ ಲಭ್ಯತೆ, ಕಾಲಕಾಲಕ್ಕೆ ಕಣ್ಣಿನ ತಪಾಸಣೆ ಮಾಡದೇ ಇರುವುದು ಗ್ಲಾಕೊಮಾ ಮತ್ತು ಮಯೋಪಿಯಾವನ್ನು ಆರಂಭಿಕ ಹಂತದಲ್ಲಿ ಪತ್ತೆ ಮಾಡುವಲ್ಲಿ ಇರುವ ಅಡಚಣೆಗಳು ಎನ್ನುತ್ತಾರೆ ಡಾ. ಅಗರವಾಲ್ಸ್ ಐ ಆಸ್ಪತ್ರೆಯ ನೇತ್ರತಜ್ಞೆ ಡಾ.ಪಿ.ಸುನೀತಾ.

ದೃಷ್ಟಿಮಾಂದ್ಯತೆಗೆ ಗ್ಲಾಕೊಮಾ ಮೂರನೇ ಪ್ರಮುಖ ಕಾರಣವಾಗಿದೆ. ಅಧಿಕ ಪ್ರಮಾಣದ ಮಯೋಪಿಯಾ ಹೊಂದಿರುವವರನ್ನು ಗ್ಲಾಕೊಮಾ ಕಾಣಿಸಿಕೊಳ್ಳುವ ಅಪಾಯ ಮೂರರಿಂದ ನಾಲ್ಕು ಪಟ್ಟು ಹೆಚ್ಚು. ತೆಳ್ಳನೆಯ ಕಾರ್ನಿಯಾ, ಅಧಿಕ ಮಯೋಪಿಯಾ , ಕುಟುಂಬದ ಇತಿಹಾಸವು ಗ್ಲಾಕೊಮಾ ಬರಲು ಕಾರಣ ಎನ್ನುತ್ತಾರೆ ಡಾ.ರಾಮ್ ಎಸ್. ಮಿರ್ಲೆ.

ಕೋಲಾರದಲ್ಲಿನ ಶಾಲೆಯಲ್ಲಿ 6-16 ವಯೋಮಿತಿಯಲ್ಲಿರುವವರಿಗೆ 2012ರಲ್ಲಿ ನಡೆಸಿದ ಕಣ್ಣಿನ ತಪಾಸಣೆಯಲ್ಲಿ ಶೇ 11.5ರಷ್ಟು ಮಂದಿಗೆ ಮಯೋಪಿಯಾ ಇರುವುದು ಕಂಡುಬಂದಿದೆ. 2016ರಲ್ಲಿ ಉಡುಪಿಯಲ್ಲಿ ನಡೆಸಿದ ಸಮೀಕ್ಷೆಯಲ್ಲಿ ಶೇ 4 ಮಯೋಪಿಯಾ ಇರುವುದು ಪತ್ತೆಯಾಗಿದೆ ಎನ್ನುವ ಮಾಹಿತಿ ಮಿರ್ಲೆ ಅವರದ್ದು.

ಗ್ಲಾಕೊಮಾ ದೀರ್ಘಕಾಲೀನ ಕಣ್ಣಿನ ರೋಗವಾಗಿದ್ದು, ಆಪ್ಟಿಕ್ ನರದ ಹಾನಿಯಿಂದ ಕಂಡುಬರುತ್ತದೆ. ಇದು ನಿಧಾನವಾಗಿ ದೃಷ್ಟಿ ನಷ್ಟಕ್ಕೆ ಕಾರಣವಾಗುತ್ತದೆ. ಮೊದಲ ಹೊರ ಮೇಲ್ಮೈ ದೃಷ್ಟಿಗೆ ಇದು ಬಾಧಿಸುತ್ತದೆ. ಔಷಧ ಅಥವಾ ಲೇಸರ್ ಸರ್ಜರಿ ಮೂಲಕ ಇಂಟ್ರಾಕ್ಯುಲರ್ ಒತ್ತಡ (ಕಣ್ಣಿನ ದ್ರವ ಒತ್ತಡ) ಕಡಿಮೆ ಮಾಡುವ ವಿಧಾನವನ್ನು ಚಿಕಿತ್ಸೆಯು ಒಳಗೊಂಡಿರುತ್ತದೆ ಎಂದು ಡಾ. ಅಗರ್ವಾಲ್ಸ್ ಐ ಹಾಸ್ಪಿಟಲ್‌ನ ಕ್ಲಿನಿಕಲ್ ಸೇವೆಗಳ ಪ್ರಾದೇಶಿಕ ಮುಖ್ಯಸ್ಥ ಡಾ. ಅರ್ಚನಾ ಮಾಹಿತಿ ನೀಡುತ್ತಾರೆ.



ಕಪ್ಪಾಗಿದೆಯೇ ಕಣ್ಣ ಸುತ್ತ...

ಕಾಳಜಿ

ದೀಪದ ಅಡಿಗೆ ಕತ್ತಲೆ ಇದ್ದಂತೆ, ಒಂದು ವಯಸ್ಸಿನ ನಂತರ ಫಳಫಳ ಹೊಳೆಯುವ ಕಣ್ಣುಗಳ ಕೆಳಗೆ ಕಪ್ಪುವರ್ತುಲಗಳು ಕಾಣಿಸಿಕೊಳ್ಳತೊಡಗುತ್ತವೆ.

ಮರದ ಆಯಸ್ಸು ಅದರ ವರ್ತುಲದಿಂದ ಹೇಳುವಂತೆ ಕೆಲವೊಮ್ಮೆ ಈ ವರ್ತುಲಗಳಿಂದ ನಾವು ಹೆಚ್ಚು ವಯಸ್ಸಾದವರಂತೆ ಕಾಣತೊಡಗುತ್ತೇವೆ.

ವಿಪರೀತದ ಒತ್ತಡ, ಖಿನ್ನತೆ, ನಿದ್ರಾಹೀನತೆ ಕಣ್ಣ ಕೆಳಗಿನ ಕಪ್ಪುಕಲೆಗೆ ಮೂಲ ಕಾರಣ. ಕೆಲವೊಮ್ಮೆ ದಿಂಬು ನೆನೆಸುವಂತೆ ಅಳುತ್ತ ಮಲಗುವುದೂ ಕಂಗಳ ಕಾಂತಿಯನ್ನು ಹೀನಗೊಳಿಸುತ್ತವೆ.

ಕಪ್ಪುವರ್ತುಲಗಳು ಕೇವಲ ನಿಮ್ಮ ಮುಖದ ಕಾಂತಿಯನ್ನು, ಕಣ್ಣ ಕಾಂತಿಯನ್ನು ಕಡಿಮೆಗೊಳಿಸುವುದರೊಂದಿಗೆ ಕಂಗಳನ್ನೂ ಶುಷ್ಕಗೊಳಿಸುತ್ತವೆ. ಚರ್ಮದ ತೇವಾಂಶವೂ ಕಡಿಮೆಯಾದಂತೆ ಕಾಣತೊಡಗುತ್ತದೆ.

ಹುಳಿಮೊಸರಿಗೆ ಕಡಲೆಹಿಟ್ಟು, ಅರಿಷಿಣ ಬೆರೆಸಿದ ಲೇಪವನ್ನು ಹಚ್ಚಿ ಹತ್ತುನಿಮಿಷದ ನಂತರ ತೊಳೆದರೂ ಕಣ್ಣಿನ ಕಪ್ಪು ವರ್ತುಲ ತಿಳಿಗೊಳಿಸಬಹುದಾಗಿದೆ. ವಾರಕ್ಕೆ ಒಮ್ಮೆ ಲೋಳೆಸರವನ್ನು ಹಚ್ಚಬಹುದು. ದಣಿವೆನಿಸಿದಾಗಲೆಲ್ಲ ಹತ್ತಿಯ ಬಿಲ್ಲೆಗಳನ್ನು ಗುಲಾಬಿಜಲ (ರೋಸ್ ವಾಟರ್, ಪನ್ನೀರು)ದಲ್ಲಿ ಅದ್ದಿ ಕಣ್ಣಿನ ಮೇಲಿರಿಸಿಕೊಳ್ಳಬೇಕು. ಸೌತೆಕಾಯಿಯ ಬಿಲ್ಲೆಗಳನ್ನೂ ಹೀಗೆ ಇರಿಸಿಕೊಳ್ಳುವುದರಿಂದ ಕಣ್ಣಿಗೆ ವಿಶ್ರಾಂತಿ ದೊರೆಯುವುದರೊಂದಿಗೆ ತೇವಾಂಶವನ್ನೂ ಕಾಪಾಡಿದಂತಾಗುತ್ತದೆ. ವಾರಕ್ಕೆ ಒಮ್ಮೆಯಾದರೂ ಆಲೂಗಡ್ಡೆಯನ್ನು ತುರಿದು, ಕಣ್ಣ ಸುತ್ತ ಹಚ್ಚಿಕೊಳ್ಳಬೇಕು. ಹದಿನೈದು ನಿಮಿಷಗಳ ನಂತರ ಮುಖ ತೊಳೆದು, ಮಾಯಿಶ್ಚರೈಸರ್ ಹಾಕಿದರೂ ಆಗುತ್ತದೆ.

ಇವೆಲ್ಲವೂ ತಾತ್ಕಾಲಿಕ ಶಮನಗಳು ಎಂಬುದು ನೆನಪಿರಲಿ. ಸರಿಯಾದ ಸಮಯಕ್ಕೆ ನಿದ್ದೆ ಮತ್ತು ನೆಮ್ಮದಿ ಇದ್ದರೆ ಯಾವ ವಿಷವರ್ತುಲಗಳೂ ನಿಮ್ಮನ್ನು ಕಾಡುವುದಿಲ್ಲ ಎಂಬುದೂ ಅಷ್ಟೇ ಸತ್ಯ.

ನಖಾಲಂಕಾರ ಮಿಂಚು ಬಂಗಾರ


ಉಗುರುಗಳಿಗೆ ಬಳಸುವ ಬಣ್ಣಗಳಿಗೆ ಅಲಂಕಾರ ಮಾಡಿಕೊಳ್ಳಲು, ಸರಳವಾದ ಉಪಾಯ, ಬಂಗಾರದ ಅಂಚನ್ನು ನೀಡುವುದು.


ನೇಲ್ ಆರ್ಟ್ ನಖ ಕಲೆಗೆ ಎರಡು ಬಣ್ಣಗಳ ಸಂಯೋಜನೆ ಅತಿ ಮುಖ್ಯವಾಗಿದೆ. ಉಗುರು ಬಣ್ಣಗಳನ್ನು ನಿಮ್ಮ ಸೀರೆ ಅಥವಾ ಸಲ್ವಾರ್‌ಗಳ ವರ್ಣಸಂಯೋಜನೆಗೆ ತಕ್ಕಂತೆ ಲೇಪಿಸಿಕೊಳ್ಳುವುದು ಸದ್ಯದ ಟ್ರೆಂಡ್ ಆಗಿದೆ. ಉಗುರು ಆರಂಭವಾಗುವಲ್ಲಿ ಬರುವ ಅರ್ಧ ವೃತ್ತಾಕಾರದಲ್ಲಿ ಚಿನ್ನದ ಬಣ್ಣದ ನೇಲ್ ಪಾಲಿಷ್ ಹಚ್ಚಿಕೊಳ್ಳುವುದರಿಂದ ಸಾಮಾನ್ಯವಾದ ಬಣ್ಣವೂ ಎದ್ದು ಕಾಣುತ್ತದೆ.

ಉಗುರು ಉದ್ದ ಬೆಳೆಸಿದ್ದರೆ ಉಗುರಿನ ಮುಂಭಾಗದಲ್ಲಿಯೂ ತುದಿಗೆ ಟೆಂಪಲ್ ಬಾರ್ಡರ್‌ನಂತೆಯೂ ಈ ಹೊಂಬಣ್ಣದ ಪಾಲಿಷ್ ಬಳಸಬಹುದು. ಸಾಂಪ್ರದಾಯಿಕ ಉಡುಗೆ, ಕಾಂಜೀವರಂ ಸೀರೆ, ನಾರಾಯಣಪೇಟ್ ಸೀರೆಗಳನ್ನು ಉಡುವಾಗ ಈ ರೀತಿಯ ನೇಲ್ ಪಾಲಿಷ್ ಬಳಕೆ ಮಾಡಬಹುದು.

ನಿಮ್ಮಲ್ಲಿ ಮಿಂಚುವ ಮಿನುಗುವ ನೇಲ್ ಪಾಲಿಷ್‌ಗಳಿದ್ದರೆ ಅವನ್ನು ಇನ್ನು ಯಾವುದೇ ಬಣ್ಣಗಳೊಡನೆ ವರ್ಣಸಂಯೋಜನೆ ಮಾಡಿಕೊಂಡು ಬಳಸಬಹುದಾಗಿದೆ. ಬೆರಳಿನ ತುದಿ, ತುದಿಯಿಂದ ಅಡ್ಡಡ್ಡವಾಗಿ, ಉದ್ದುದ್ದವಾಗಿ ಗೆರೆಗಳನ್ನು ಎಳೆದುಕೊಂಡೂ ವರ್ಣವಿನ್ಯಾಸ ಮಾಡಬಹುದಾಗಿದೆ.

ನಿಮ್ಮ ಬೆರಳು ಉದ್ದುದ್ದ ಇದ್ದು, ಉಗುರು ಬೆಳೆಸಿಕೊಂಡಿದ್ದರೆ ಉಗುರಿನುದ್ದಕ್ಕೂ ಟೆಂಪಲ್ ಬಾರ್ಡರ್‌ನಂತೆ ಎಳೆಯಬಹುದು. ಚೌಕಾಕಾರದ ಉಗುರು ನಿಮ್ಮದಾಗಿದ್ದರೆ ತ್ರಿಕೋನಾಕಾರದಲ್ಲಿ ಬಣ್ಣವನ್ನು ಬಳಸಿಕೊಳ್ಳಬಹುದು.





ಚಂದದ ನಗೆಗೆ...

ಈ ಬೇಸಿಗೆ ಆರಂಭವಾಗುವ ಹೊತ್ತಿನಲ್ಲಿ ನಗೆಯೇ ಮಾಯವಾಗಿರುತ್ತದೆ. ಒಂದು ಸೆಕೆ, ಇನ್ನೊಂದು ಕಾರಣ, ತುಟಿ ಬಿಗಿದು, ಬಿರುಕು ಬಿಡುಜ1ತ್ತಿರುತ್ತವೆ. ಶುಷ್ಕ ತುಟಿಗಳಿಂದಾಗಿ ನಗೆಯೇ ಮಾಯವಾಗಿರುತ್ತದೆ.

ಚಂದದ ನಗೆಗೆ ತೇವಾಂಶವಿರುವ ಮೃದುಕೋಮಲ ತುಟಿಗಳಿರುವುದು ಅತ್ಯಗತ್ಯ. ಚಳಿಗಾಲದಲ್ಲಿ ತುಟಿಯ ಆರೈಕೆ ಮಾಡಿದಂತೆಯೇ ಬೇಸಿಗೆಯ ಆರಂಭದಲ್ಲಿಯೂ ಅಕ್ಕರೆಯ ಆರೈಕೆ ಅತ್ಯಗತ್ಯವಾಗಿರುತ್ತದೆ.

ಚಂದದ ನಗೆಯರಳಿಸಲು, ತುಟಿನಾವಿಯಾಕಾರವಾಗಲು ಸಾಕಷ್ಟು ನೀರು ಕುಡಿಯಬೇಕು. ಪ್ರತಿದಿನವೂ ಮೂರು ಲೀಟರ್ ನೀರನ್ನಾದರೂ ಸೇವಿಸಲೇಬೇಕು. ರಾತ್ರಿ ಮಲಗುವ ಮೊದಲು ತುಟಿಗೆ ತುಪ್ಪವನ್ನು ಸವರಿಕೊಳ್ಳಬೇಕು. ಹೊರಗೆ ಹೋಗುವಾಗ ಲಿಪ್‌ಬಾಮ್ ಬಳಸಬೇಕು. ಸಕ್ಕರೆ ಮತ್ತು ಕೊಬ್ಬಿನ ಪದಾರ್ಥಗಳ ಸೇವನೆ ಕಡಿಮೆ ಆಗಬೇಕು. ತುಟಿ ಬಣ್ಣ ಹಚ್ಚುವ ಅಭ್ಯಾಸ ಇದ್ದಲ್ಲಿ, ಮಲಗುವ ಮುನ್ನ ತಿಳಿಹಾಲು ಅಥವಾ ತಣ್ಣನೆಯ ನೀರಿನಿಂದ ತುಟಿ ಸ್ವಚ್ಛಗೊಳಿಸುವುದನ್ನು ಮರೆಯಬೇಡಿ.

ಅಧರಗಳು ಅಗಲಿದರೆ ನಗುವೊಂದೇ ಅರಳುವಂತಾಗಬೇಕು.

ಪ್ರಯೋಗಗಳ ತಾಣ ವಿಶ್ವೇಶ್ವರಯ್ಯ ಮ್ಯೂಸಿಯಂ



ನಾಸಾದ ಮಾರ್ಸ್ ರೋವರ್ ಆಪರ್ಚುನಿಟಿಯ ಪೂರ್ಣ ಪ್ರಮಾಣದ ಪ್ರತಿಕೃತಿ

ಗಂಜಿ ಆದಿಶೇಷ ಡಿ.ಹಿರೇಹಾಳು

ವಿಜ್ಞಾನ, ತಂತ್ರಜ್ಞಾನ, ಬಾಹ್ಯಾಕಾಶದಂತಹ ಕ್ಷೇತ್ರಗಳ ಮೇಲೆ ಪ್ರತಿಯೊಬ್ಬರಿಗೂ ಆಸಕ್ತಿ. ಚಂದ್ರಯಾನ 3 ಯಶಸ್ವಿ ನಂತರ ಈ ವಿಚಾರಗಳ ಕುರಿತು ಹೆಚ್ಚೆಚ್ಚು ತಿಳಿದುಕೊಳ್ಳಬೇಕೆಂಬ ಕುತೂಹಲ ಪ್ರತಿಯೊಬ್ಬರಲ್ಲೂ ತುಸು ಹೆಚ್ಚಾಗಿದೆ. ಮಕ್ಕಳಲ್ಲಂತೂ ಈ ಕುತೂಹಲ ಇನ್ನೂ ಹೆಚ್ಚು. ಪಠ್ಯಗಳಲ್ಲಿ ಬರುವ ವಿಜ್ಞಾನದ ಪ್ರಯೋಗಗಳನ್ನು, ಪ್ರಯೋಗದ ಮೂಲಕ ಮಾಡಿ ತಿಳಿದುಕೊಳ್ಳಬೇಕೆಂಬ ವಿದ್ಯಾರ್ಥಿಗಳಿಗೆ, ಶಾಲಾ-ಕಾಲೇಜುಗಳಲ್ಲಿ ಪ್ರಯೋಗಾಲಯಗಳ ಕೊರತೆ, ಉಪಕರಣಗಳ ಅಲಭ್ಯತೆಯಿಂದಾಗಿ ಕಲಿಕೆಯೆಂಬುದೇ ಪೂರ್ಣಗೊಂಡಿರುವುದಿಲ್ಲ. ಇಂತಹ ವಿದ್ಯಾರ್ಥಿಗಳ ಕಲಿಕೆಯನ್ನು ಪ್ರಯೋಗದ ಮೂಲಕ ಪರಿಪೂರ್ಣ ಮಾಡಲು ಇರುವುದೇ ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯ (ವಿಐಟಿಎಂ).

ಸಂಗ್ರಹಾಲಯದಲ್ಲಿ ಏನಿವೆ?: ರಾಜಧಾನಿ ಬೆಂಗಳೂರಿನ ಕಬ್ಬನ್ ಪಾರ್ಕ್ ಬಳಿ ಇರುವ ಈ ಮ್ಯೂಸಿಯಂ ದಕ್ಷಿಣ ಭಾರತದಲ್ಲೇ ಅತಿ ದೊಡ್ಡ ವಿಜ್ಞಾನ ಸಂಗ್ರಹಾಲಯವಾಗಿದೆ. ಈ ಸಂಗ್ರಹಾಲಯದಲ್ಲಿ ಬಾಹ್ಯಾಕಾಶ ತಂತ್ರಜ್ಞಾನ (ಸ್ಪೇಸ್ ಟೆಕ್ನಾಲಜಿ), ಜೈವಿಕ ತಂತ್ರಜ್ಞಾನ (ಬಯೋ ಟೆಕ್ನಾಲಜಿ), ಎಂಜಿನ್ ಹಾಲ್ (ಯಾಂತ್ರಿಕ ಕೈಸಾಲೆ), ಮನೋರಂಜನಾ ವಿಜ್ಞಾನ (ಫನ್ ಸೈನ್ಸ್), ವಿದ್ಯುತ್ ತಾಂತ್ರಿಕ (ಎಲೆಕ್ಟ್ರಾನಿಕ್ ಟೆಕ್ನಿಕ್), ಬಿಇಎಲ್ ಹಾಲ್ ಆಫ್ ಎಲೆಕ್ಟ್ರಾನಿಕ್ಸ್ ಮತ್ತು ಸೈನ್ಸ್ ಫಾರ್ ಕಿಡ್ಸ್ ಒಟ್ಟು 7 ಗ್ಯಾಲರಿಗಳಿದ್ದು, 400ಕ್ಕೂ ಹೆಚ್ಚು ಪ್ರದರ್ಶನದ ವಸ್ತುಗಳಿವೆ. ವಿಶೇಷತೆಯೆಂದರೆ ಅವೆಲ್ಲವುಗಳನ್ನು ನಾವು ಸ್ಪರ್ಶಿಸಿ, ಪ್ರಯೋಗಗಳನ್ನು ಮಾಡಿ ತಿಳಿದುಕೊಳ್ಳಬಹುದು. ಇಸ್ರೊ ಇತ್ತೀಚೆಗೆ ಉಡಾವಣೆ ಮಾಡಿದ ಚಂದ್ರಯಾನ -3ರ ಮಾದರಿಯನ್ನು (ಅದೇ ಗಾತ್ರ, ಆಕಾರ) ಮ್ಯೂಸಿಯಂಗೆ ನೀಡಿದ್ದು, ಅದನ್ನು ವೀಕ್ಷಿಸಬಹುದಾಗಿದೆ. ನಾಸಾದ ಮಾರ್ಸ್ ರೋವರ್ ಆಪರ್ಚುನಿಟಿಯ ಪೂರ್ಣ ಪ್ರಮಾಣದ ಪ್ರತಿಕೃತಿ, ನ್ಯೂಮ್ಯಾಟಿಕ್ ಚಾಲಿತ ವಿಧಾನದಿಂದ ಕಾರ್ಯನಿರ್ವಹಿಸುವ ಡೈನೋಸಾರ್, ರೈಟ್ ಸಹೋದರರ ವಿಮಾನ (ಫ್ಲೈಟ್ ಸಿಮ್ಯುಲೇಟರ್) ನಂತಹ ಕೆಲವು ವಿಶೇಷವಾದ (unique) ವಸ್ತುಗಳಿವೆ.



ಮ್ಯೂಸಿಯಂ ಆವರಣದಲ್ಲಿರುವ ಮೀಟರ್‌ಗೇಜ್‌ನ ಎಂ.ಜಿ ಉಗಿಬಂಡಿ


ಸಂಗ್ರಹಾಲಯದಲ್ಲಿ ವಿವಿಧ ರೀತಿಯ ರೀತಿಯ ಎಂಜಿನ್‌ಗಳು, ಶಿವನಸಮುದ್ರ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್, ಸೌರ, ಪವನ, ಥರ್ಮಲ್ ಹಾಗೂ ಭೂ ಅಂತರಾಲದಿಂದ ವಿದ್ಯುತ್ ಉತ್ಪಾದಿಸುವುದು ಹೇಗೆ ಎಂಬುದರ ಸ್ಥಾವರದ ಮಾದರಿ, ರಾಕೆಟ್‌ಗಳ ಮಾದರಿ, ಇಸ್ರೊದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದ ಮಾದರಿ (ಲಾಂಚ್ ಕಾಂಪ್ಲೆಕ್ಸ್), 2ನೇ ತಲೆಮಾರಿನ ಕಂಪ್ಯೂಟರ್‌ಗಳು, ಗಾಳಿಯಲ್ಲಿ ಧ್ವನಿ, ತೇಲುವ ಚೆಂಡು, ದೇಹದಲ್ಲಿ ನೀರಿನ ಪ್ರಮಾಣ, ಬಾಲ್ ಪಾಯಿಂಟ್ ಪೆನ್ನು ಕಾರ್ಯನಿರ್ವಹಿಸುವುದು ಹೇಗೆ, ಅಂದಿನ ಕಾಲದ ಮಾನವರ ಆಹಾರ ಪದ್ಧತಿ, ದೇಹದಲ್ಲಿನ ಇನ್ಸುಲಿನ್‌ನ ಪಾತ್ರ, ಡಿಎನ್‌ಎ, ಸೀಡ್ಸ್ ಆಫ್ ಕಲ್ಚರ್, ಟೆಲಿಫೋನ್‌ಗಳು, ಕೊಲಂಬಿಯನ್, 3ಡಿ ಚಿತ್ರ ಮಂದಿರ, ತಾರಾ ಮಂಡಲ, ಮುದ್ರಣ ಯಂತ್ರಗಳು, ಕೈಗಾರಿಕಾ ಉತ್ಪನ್ನಗಳು, ವೈಜ್ಞಾನಿಕ ಮಾದರಿಗಳು ಸೇರಿದಂತೆ ನೂರಾರು ವಸ್ತುಗಳು ಇವೆ. ಈ ಸಂಗ್ರಹಾಲಯ ದಲ್ಲಿನ ಎಲ್ಲ ವಸ್ತುಗಳನ್ನು ಸಂಪೂರ್ಣವಾಗಿ ವೀಕ್ಷಿಸಲು ಕನಿಷ್ಠ 4 ತಾಸು ಸಮಯ ವಾದರೂ ಬೇಕು.

ವಸ್ತು ಸಂಗ್ರಹಾಲಯದ ಆರಂಭ

ಈ ವಸ್ತು ಸಂಗ್ರಹಾಲಯಕ್ಕೆ ಅಡಿಪಾಯ ಹಾಕಿದ್ದು 1958 ಸೆಪ್ಟೆಂಬರ್ 15ರಂದು ಅಂದಿನ ಮೈಸೂರು ರಾಜ್ಯದ ಮುಖ್ಯಮಂತ್ರಿ ಬಿ.ಡಿ. ಜತ್ತಿ. ಇದನ್ನು ಉದ್ಘಾಟಿಸಿದ್ದು 1962ರ ಜುಲೈ 14ರಂದು ಅಂದಿನ ಪ್ರಧಾನಮಂತ್ರಿ ಜವಹಾರ್‌ಲಾಲ್ ನೆಹರು. ವಾರ್ಷಿಕ 10 ಲಕ್ಷ ವೀಕ್ಷಕರು ಈ ಸಂಗ್ರಹಾಲಯಕ್ಕೆ ಭೇಟಿ ನೀಡುತ್ತಿದ್ದು, ಅದರಲ್ಲಿ ವಿದ್ಯಾರ್ಥಿಗಳೇ ಹೆಚ್ಚು. ಸರ್ಕಾರಿ ಶಾಲಾ ಮಕ್ಕಳಿಗೆ ₹10, ನೋಂದಾಯಿತ ಹಾಗೂ ಖಾಸಗಿ ಶಾಲೆಗಳು, ಕಾಲೇಜು ವಿದ್ಯಾರ್ಥಿಗಳಿಗೆ ₹30, ಸಾಮಾನ್ಯರಿಗೆ ₹85 ಪ್ರವೇಶ ಶುಲ್ಕವಿದ್ದರೆ, ಅಂಗವಿಕಲರು, ರಕ್ಷಣಾ ಸಿಬ್ಬಂದಿ ಹಾಗೂ ಮಕ್ಕಳಿಗೆ ಉಚಿತ ಪ್ರವೇಶವಿದೆ. ಈ ಸಂಗ್ರಹಾಲಯದಲ್ಲಿ ವರ್ಷಪೂರ್ತಿ ವೈಜ್ಞಾನಿಕ ಚಟುವಟಿಕೆ ಕಾರ್ಯಕ್ರಮಗಳು (ಸೆಮಿನಾರ್, ಕ್ವಿಜ್, ವಿಜ್ಞಾನದ ನಾಟಕಗಳು ಇತರೆ) ನಡೆಯುತ್ತಲೇ ಇರುತ್ತವೆ.

ಕೇಂದ್ರ ಸಂಸ್ಕೃತಿ ಸಚಿವಾಲಯದಡಿ ಬರುವ ಈ ಮ್ಯೂಸಿಯಂ, ಸ್ವಾಯತ್ತ ಸಂಸ್ಥೆಯಾಗಿದ್ದು, ಈ ಮ್ಯೂಸಿಯಂ ಅಡಿಯಲ್ಲಿ ಜಿಲ್ಲಾ ವಿಜ್ಞಾನ ಕೇಂದ್ರ ಕಲಬುರ್ಗಿ, ಜಿಲ್ಲಾ ವಿಜ್ಞಾನ ಕೇಂದ್ರ ತಿರುವನೇಲಿ, ಪ್ರಾದೇಶಿಕ ವಿಜ್ಞಾನ ಕೇಂದ್ರ ತಿರುಪತಿ ಮತ್ತು ಪ್ರಾದೇಶಿಕ ವಿಜ್ಞಾನ ಕೇಂದ್ರ ಆ್ಯಂಡ್ ಪ್ಲಾನಿಟೋರಿಯಂ ಕಾಲಿಕಟ್ ಬರುತ್ತವೆ. ಸಂಗ್ರಹಾಲಯದಲ್ಲಿರುವ ಕೆಲವು ವಸ್ತುಗಳನ್ನು ನಾವೇ ತಯಾರಿಸಿದ್ದೇವೆ. ಇನ್ನು ಕೆಲವನ್ನು ಹಲವು ಸಂಸ್ಥೆಗಳು ನೀಡಿವೆ. ಮಕ್ಕಳಿಗೆ ಇಂಟರ್ಯಾಕ್ಟಿವ್ ಕಲಿಕೆಗೆ ಸಂಗ್ರಹಾಲಯ ಅನುಕೂಲವಾಗಿದ್ದು, ಇಲ್ಲಿನ ವಸ್ತುಗಳನ್ನು ಪ್ರಯೋಗದ ಮೂಲಕ ತಿಳಿದುಕೊಳ್ಳಬಹುದಾಗಿದೆ. ಗಣೇಶ ಚತುರ್ಥಿ ಮತ್ತು ದೀಪಾವಳಿ ಹಬ್ಬದ ದಿನ ಹೊರತುಪಡಿಸಿದರೆ, ವರ್ಷದ ಎಲ್ಲ ದಿನವೂ ಮ್ಯೂಸಿಯಂ ತೆರೆದಿರುತ್ತದೆ. 2023ರ ಡಿಸೆಂಬರ್ 28ರಂದು ಬಿಇಎಲ್ ಹಾಲ್ ಆಫ್ ಎಲೆಕ್ಟ್ರಾನಿಕ್ಸ್ ಗ್ಯಾಲರಿಯನ್ನು ನವೀಕೃತಗೊಳಿಸಲಾಗಿದೆ ಎಂದು ಹೇಳುತ್ತಾರೆ ಸಂಗ್ರಹಾಲಯದ ಅಧಿಕಾರಿಗಳಾದ ಗೋಪಾಲಕೃಷ್ಣ, ವೆಂಕಟೇಶ್ ಮತ್ತು ಬಿಸ್ವಾಲ್.


ಸಂಗ್ರಹಾಲಯದ ಆವರಣದಲ್ಲಿ 1888ರಲ್ಲಿ ದಕ್ಷಿಣ ಮರಾಠ ರೈಲ್ವೆಗೆ, ಇಂಗ್ಲೆಂಡಿನ ಗ್ಲಾಸೋ ನಗರದ ಡಬ್ಸ್ ಆ್ಯಂಡ್ ಕಂಪನಿಯವರು ಸರಬರಾಜು ಮಾಡಿದ ಮೀಟರ್‌ಗೇಜ್‌ನ ಎಂ.ಜಿ ಉಗಿಬಂಡಿ ಇದೆ. ಇದು ಈಗಲೂ ಸಂಚರಿಸುವ ಸ್ಥಿತಿಯಲ್ಲಿರುವುದು ವಿಶೇಷತೆ. ಮಾರುತ್ ಯುದ್ಧ ವಿಮಾನ, ಉಗಿಚಾಲಿತ ಎಂಜಿನ್, ಲಘು ಉಗಿಬಂಡಿಗಳೂ ಸಹ ಈ ಆವರಣದಲ್ಲಿವೆ.



ತಬೂಬಿಯಾ ತಬ್ಬಿದಳಲ್ಲ ಇಳೆಯಾ

ಪಿಕ್ಚರ್ ಪ್ಯಾಲೆಸ್





ಗಂಟೆಹೂವಿನ ಗೊಂಚಲು, ಗಗನಾಭಿಮುಖವಾಗಿ ಅರಳಿ ನಿಂತಾಗ ಚಳಿಗಾಲದ ಆಗಮನವೆಂದು ಹೇಳಲಾಗುತ್ತದೆ. ತಿಳಿಗುಲಾಬಿ, ಹಳದಿ ಬಣ್ಣದ ಈ ಹೂಗಳು ನಮ್ಮ ಬೆಂಗಳೂರಿನ ಕಬ್ಬನ್ ಉದ್ಯಾನದ ಗುರುತುಗಳೆಂದೇ ಹೇಳಬಹುದು.

ತಬೂಬಿಯಾ ರೋಸಿಯಾ ಎಂಬ ಆಕರ್ಷಕ ಹೆಸರಿನ ಈ ಸುಂದರಿ ತನ್ನ ತವರೂರು ಮಧ್ಯ ಅಮೆರಿಕಾದಿಂದ ಭಾರತಕ್ಕೆ ಬಂದಿದ್ದೇ ಒಂದು ರೋಚಕ ಕತೆ. ವಸಾಹತು ಶಾಹಿ ಕಾಲದಲ್ಲಿ ತಬೂಬಿಯಾ ಸಸಿ ರೂಪದಲ್ಲಿ ಬೆಂಗಳೂರಿಗೆ ಬಂದವು. ಜ್ವರ ಇಳಿಸುವ ಗುಣ ಈ ಗಿಡಕ್ಕೆ ಇದೆ ಎಂದು ಹೇಳಲಾಗುತ್ತದೆ. ತನ್ನ ಔಷಧೀಯ ಗುಣಗಳಿಂದಲೇ ತಬೂಬಿಯಾ ಎಲ್ಲೆಡೆಯೂ ವಲಸೆ ಹೊರಡುವಂತಾಯಿತು.

ಬಾನಗಲ ಅರಳಿ, ನೆಲಹಾಸಿನಂತೆ ಕೆಳಗಿಳಿದು, ಮೂರು ತಿಂಗಳೂ ಹೂಗಳಿಂದಲೇ ಮೈದುಂಬಿಕೊಂಡು ಕುಸುಮಬಾಲೆ ಆಗುವ ತಬೂಬಿಯಾ ಭೂಮಿ ತಬ್ಬಿದಾಗಲೇ ಸಂಕ್ರಮಣ ಕಾಲ ಹತ್ತಿರವಾಗಿರುತ್ತದೆ.

ದೇವಲೋಕದ ಶಾಪಗ್ರಸ್ತ ಅಪ್ಸರೆಯೊಬ್ಬಳು ಸ್ವರ್ಗದೆಡೆ ತೋಳು ಚಾಚಿ ಕರೆದುಕೊ ನಿನ್ನ ಮಡಿಲಿಗೆ ಎಂದು ಕರೆಯುತ್ತಿರುವಂತೆ ಕಾಣುವ ಈ ಗಿಡಗಳೀಗ ನೆಚ್ಚಿನ ಸೆಲ್ಫಿ ತಾಣಗಳಾಗಿ ಬದಲಾಗಿವೆ. ಬೆಂಗಳೂರಿನ ಕಬ್ಬನ್ ಪಾರ್ಕ್, ಹೈಕೋರ್ಟ್ ಸುತ್ತಲಿನ ಈ ಆಕರ್ಷಕ ಚಿತ್ರಗಳನ್ನು ಪ್ರಜಾವಾಣಿ ಎಚ್.ಜಿ. ಪ್ರಶಾಂತ್ ಹಾಗೂ ಕಿಶೋರ್ ಬೋಳಾರ ಸೆರೆ ಹಿಡಿದಿದ್ದಾರೆ.



ತಬೂಬಿಯಾ ಹೂವುಗಳು

ಬೇಕ್ ಬೇಕೆನಿಸುವ ಕೇಕು ಕಲೆ



ಕೇಕಾಲಜಿ ಉತ್ಸವದಲ್ಲಿ ಪ್ರಾಚಿ ಧಬಲ್ ದೇವ್

ಉತ್ಸವ

ಬೇಕ್ ಮಾಡುವುದು ವಿಜ್ಞಾನದಷ್ಟೇ ಕಲೆಯೂ ಹೌದು. ನನಗೆ ಬೇಕ್ ಮಾಡುವುದೆಂದರೆ ಪಕ್ವವಾಗುವುದು. ಮೃದು ಆಗುವುದು. ಒಳಹೊರಗನ್ನು ಕೋಮಲವಾಗಿಸುತ್ತಲೇ ಬದುಕನ್ನು ಸವಿಯಾಗಿಸುವುದು'

ಎನ್ನುತ್ತ ಮಾತಿಗೆ ಇಳಿದವರು ಪ್ರಾಚಿ ಧಬಲ್ ದೇವ್. ಅಂತರರಾಷ್ಟ್ರೀಯ ಕೇಕ್ ಕಲಾವಿದೆ ಎಂಬ ಖ್ಯಾತಿಯ ಪ್ರಾಚಿ, ಈಚೆಗೆ ಬೆಂಗಳೂರಿಗೆ ಭೇಟಿ ನೀಡಿದ್ದರು. ಕೇಕಾಲಜಿ ಉತ್ಸವಕ್ಕೆ ತೀರ್ಪುಗಾರರಾಗಿ ಬಂದಿದ್ದರು.

ಪುಣೆಯಲ್ಲಿ ವಾಸವಾಗಿರುವ ಪ್ರಾಚಿ ಈಗಾಗಲೇ ಐಸಿಂಗ್ ಮತ್ತು ಬೇಕಿಂಗ್ ವಿಭಾಗದಲ್ಲಿ ಮೂರು ಅಂತರರಾಷ್ಟ್ರೀಯ ದಾಖಲೆಗಳನ್ನು ಮಾಡಿದ್ದಾರೆ. ಐಸಿಂಗ್ ಕಲೆಯಲ್ಲಿ ತಮ್ಮದೇ ಆದ ಬ್ರಾಂಡ್ ಅನ್ನೂ ಆರಂಭಿಸಿದ್ದಾರೆ. ಮಧ್ಯಪ್ರದೇಶ ಮೂಲದ ಪ್ರಾಚಿ ಬೇಕಿಂಗ್ ಕಲೆಯನ್ನು ಹವ್ಯಾಸವಾಗಿ ಆರಂಭಿಸಿದರೂ ಮುಂದೆ ಹೆಚ್ಚಿನ ಶಿಕ್ಷಣವನ್ನು ಪಡೆದರು. ಗಿನ್ನೆಸ್ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಬೃಹದಾಕಾರದ ಐಸಿಂಗ್ ಕಲೆಗಾಗಿ ದಾಖಲೆ ಸೃಷ್ಟಿಸಿದ್ದಾರೆ.

ಬೆಂಗಳೂರಿನ ಕೇಕಾಲಜಿ ಉತ್ಸವದಲ್ಲಿ ಮಾತನಾಡಿದ ಅವರು, ಪ್ರತಿಯೊಂದು ಕೇಕು ಕೇವಲ ತಿನ್ನುವ ಖಾದ್ಯ ಮಾತ್ರವಲ್ಲ, ನಮ್ಮೊಳಗಿನ ಕಲಾವಿದರ ಕಲಾಕೃತಿಯೂ ಆಗಿರುತ್ತದೆ. ಇದೊಂದೇ ಆಹಾರ ಖಾದ್ಯದಲ್ಲಿ ನಾವು ನಮಗೆ ಬೇಕಿದ್ದಂತಹ ಆಕಾರ, ಗಾತ್ರಗಳಿಗೆ ಮಣಿಸಬಹುದಾಗಿದೆ. ಪ್ರತಿ ಆಕಾರ, ಗಾತ್ರಗಳಲ್ಲಿಯೂ ಕಂಗೊಳಿಸಬಹುದಾದ ಕೇಕಿನಂತೆಯೇ ನಾವೂ ಇರಬೇಕು ಎನ್ನುತ್ತಾರೆ.

ಪ್ರತಿಯೊಂದು ಕೇಕಿನ ಹಿಂದೆ ಒಂದು ಕತೆ ಇದ್ದೇ ಇರುತ್ತದೆ. ಆ ಕತೆ ಅಭಿವ್ಯಕ್ತಿ ಆಗುವ ರೀತಿಯಲ್ಲಿಯೇ ನಾವದನ್ನು ಸವಿನೆನಪಾಗಿ ಉಳಿಸಬಲ್ಲೆವು. ಸಿಹಿ ರುಚಿ, ಸವಿ ನೆನಪು ಎರಡನ್ನೂ ಕಟ್ಟಿಕೊಡುವ ಕೆಲಸವನ್ನು ಕೇಕ್ ಮಾಡುತ್ತದೆ. ಬೆಂಗಳೂರಿನ ಈ ಕೇಕಾಲಜಿ ಉತ್ಸವದಲ್ಲಿ ಸಾಕಷ್ಟು ಕಲಾವಿದೆಯರನ್ನು ಭೇಟಿ ಮಾಡಿದ ಸಂತಸ ಇದೆ ಎಂದೂ ಹೇಳಿದರು.

ಐಸಿಂಗ್‌ನ ಹಲವು ಸಲಹೆಗಳನ್ನು ಹಂಚಿಕೊಂಡ ಪ್ರಾಚಿ, ಅಡುಗೆ ಮತ್ತು ಬೇಕಿಂಗ್ ಎರಡಕ್ಕೂ ಪರಿಶುದ್ಧವಾದ ಮನಸಿರಬೇಕು. ಆಗಲೇ ರುಚಿರುಚಿಯಾದ ಅಡುಗೆಗಳನ್ನು ತಯಾರಿಸಬಹುದಾಗಿದೆ. ಬೆಂಗಳೂರು ನನ್ನ ಹೃದಯದಲ್ಲಿರುವ ನಗರವಾಗಿದೆ ಎಂದೂ ಶ್ಲಾಘಿಸಿದರು.

ನನ್ನೊಳಗಿನ ಸಂತೆ: ಮೆಟ್ರೊ

ರಶ್ಮಿ ಎಸ್

ಲಹರಿ

ಕಾಲಿಡಲು ಜಾಗವಿಲ್ಲದ, ಮೆಟ್ರೊದೊಳಗೆ, ಹಿಂದಿನವರು ನೂಕಿದಂತೆ ಚೂರೆ ಚೂರು ಜಾಗವಾದಾಗ... ಎಲ್ಲ ಪ್ರಾಣಿಗಳನ್ನೂ ನಮ್ಮಲ್ಲಿ ಆವಾಹಿಸಿಕೊಂಡಿರುತ್ತೇವೆ. ಇಲಿಯಂತೆ ಜಾಗ ಮಾಡಿಕೊಳ್ಳುವುದು, ಜಿರಾಫ್‌ನಂತೆ ಕತ್ತು ಮುಂದೆ ಚಾಚಿ ಜಾಗವಿದೆಯೇ ನೋಡುವುದು, ಬಾವಲಿಯಂತೆ ಎತ್ತರದ ಹಿಡಿಕೆ ಹಿಡಿದು ಜೋತಾಡುವುದು, ಕುಳಿತವರು ಉಡದಂತೆ ತಮ್ಮ ಜಾಗದೊಂದಿಗೆ ಒಂಚೂರು ರಾಜಿ ಮಾಡಿಕೊಳ್ಳದವರು, ಹದ್ದಿನಂತೆ ಕಣ್ಣಲ್ಲೇ ಜಾಗವಿದೆಯೇ, ಯಾರು ಯಾವ ನಿಲ್ದಾಣದಲ್ಲಿ ಇಳಿಯಬಹುದು ಎಂದು ಅಂದಾಜಿಸುವವರು.. ಹೀಗೆ ಇನ್ನೂ ಏನೆಲ್ಲ ಆಗ್ತಿರ್ತಾರೆ. ಪಟ್ಟಿ ಮುಂದುವರೆಯಲಿ.. ನೀವು ನೋಡಿದ್ದರೆ ಬರೀತಾ ಹೋಗಿ.

ಆದರೆ ಕಾಲಿರಿಸಿದಾಗ ಮೂಗಿಗೆ ಮಾತ್ರ ವಿವಿಧ ಬಗೆಯ ವಾಸನಾಪ್ರಪಂಚಕ್ಕೆ ಕಾಲಿರಿಸಿದಂತಾಗುತ್ತದೆ. ದಟ್ಟವಾದ ಬೆವರಿನ ವಾಸನೆ ಮೂಗಿಗೆ ರಾಚುವಾಗ, ತಂಗಾಳಿಯಂತೆ ತಿಳಿಯಾದ ಇತ್ತರಿನ ಘಮವೂ ಅಡರುತ್ತದೆ. ಮುಂದೆ ನಿಂತ ಹುಡುಗಿಯ ಕೇಶರಾಶಿಯಿಂದ ಘಮ್ಮೆನ್ನುವ ಶಾಂಪೂ ವಾಸನೆಯೂ.. ಮೂಗೆಂಬುದು ಗೊಂದಲ ಗೂಡಾದಂತೆ ಆ ಕ್ಷಣಕ್ಕೆ ಹೊಂದಿಕೊಳ್ಳುತ್ತಿರುತ್ತದೆ. ನೆತ್ತರ ಸುಟ್ಟು ದುಡಿದು, ಬಸವಳಿದು ಬಂದವರ ವಾಸನೆಯೊಂದೆ ಸ್ಥಾಯಿಯಾಗಿ ಉಳಿಯುತ್ತದೆ.

ಇಂಥದ್ದರಲ್ಲಿ ಮಾತಾಡು ಮಾತಾಡು ಮಲ್ಲಿಗಿ.. ಹಾಡು ನೆನಪಿಸುವಂತೆ ಜೋತಾಡು ಜೋತಾಡು ಮಲ್ಲಿಗಿ ಅಂತ ಹಾಡುತ್ತ, ಜೋತಾಡುವಾಗ, ಅಲ್ಲೊಂದು ಹೊಸ ಜಗತ್ತು ತೆರೆದುಕೊಂಡಿರುತ್ತದೆ.

ಕೆಲವರು ಸಾಕಾಗಿ, ಜಾಗ ಸಿಕ್ಕ ಆನಂದದೊಳಗೆ ಕಣ್ಮುಚ್ಚಿ ಆ ದಿನದ ಧ್ಯಾನದಲ್ಲಿರುತ್ತಾರೆ. ಇನ್ನಷ್ಟು ಜನ ಮಹಿಳೆಯರು ರಾತ್ರಿ ಊಟ, ಬೆಳಗಿನ ತಿಂಡಿಯ ಪ್ಲ್ಯಾನಿನ ನಡುವೆ ಗಿರಕಿ ಹೊಡೆಯುತ್ತಿರುತ್ತಾರೆ. ಒಂದಷ್ಟು ಮಂದಿ, ತಾವಿಲ್ಲದಾಗ, ರೀಲ್ಸಿನ ಜಗತ್ತಿನೊಳಗೆ ಏನೆಲ್ಲ ಆಗಿಹೋಯಿತೋ ಎಂದು ಕಂಗಳನ್ನು ಅರಳಿಸಿ, ತೋರು ಬೆರಳಿನಿಂದ ಫೋನಿನ ಸ್ಕ್ರೀನ್ ಮೇಲೆ ಹಾದಿ ಸವೆಸುತ್ತಿರ್ತಾರೆ. ಇನ್ನಷ್ಟು ಜನ, ಕಿವಿಯೊಳಗೆ ಕೇಳುಮೊಗ್ಗುಗಳನ್ನಿರಿಸಿಕೊಂಡು, ಹಾಡು ಕೇಳುವಾಗ ಕಿರುನಗೆ ಸೂಸುತ್ತ, ಸಂಭಾಷಣೆಯನ್ನು ಕೇಳುವಾಗ ಹಣೆಗೆ ಗಂಟಿಕ್ಕುತ್ತ, ತಮ್ಮ ಲೋಕದೊಳಗೆ ಮೈಮರೆತಿರುತ್ತಾರೆ.

ತುಟಿ ಕೊಂಕಿಸುವ, ತುಟಿಕಚ್ಚಿಕೊಳ್ಳುವ, ಕೆನ್ನೆಯಿಂದ ಗದ್ದಕ್ಕೆ ತಮ್ಮ ಕೈ ಸಾಗಿಸುವ ಹುಡುಗಿಯರನ್ನು ನೋಡಿದಾಗ ನಮ್ಮ ಮುಖದೊಳಗೂ ನಗೆ ಮೂಡಿ ಮಾಯವಾಗುತ್ತದೆ.

'ನ್ನಷ್ಟು ಯುವತಿಯರು, ಅದೆಷ್ಟು ಖುಷಿಯಾಗಿದ್ದಾರಲ್ಲ ತಮ್ಮ ಲೋಕದಲ್ಲಿ ಎಂಬಂತೆ.. ಕಲಕಲ ಮಾತಾಡುತ್ತ, ಗಲಗಲ ನಗುತ್ತ (ಸೋಡಾ ಬಾಟಲಿಯೊಳಗಿನ ಗೋಲಿ ಅಲುಗಾಡಿದಾಗ ಬರುವ ಸದ್ದಿನಂಥ ನಗು ಅದು). ನಗುವಿನಲೆಯನ್ನು ಹರಡಿಸುತ್ತಿದ್ದರೆ, ಇನ್ನಷ್ಟು ಜನ, ಇವರದ್ದೇನು ಈ ಸಂಭ್ರಮ ಎಂಬಂತೆ ಒಂದು ನೋಟ ಎಸೆದು ಸುಮ್ಮನಾಗುತ್ತಾರೆ.

ಈ ಹುಡುಗಿಯರ ಗುಂಪಿನಲ್ಲಿ ಕಂಗಳಲ್ಲಿ ಸಣ್ಣದೊಂದು ಮುನಿಸು, ತುಂಟತನ, ಉಡಾಫೆ ಎಲ್ಲವೂ ಒಂದು ಹದದೊಳಗೆ, ಜಗತ್ತಿನ ಜವ್ವನವೆಲ್ಲ ಈ ಹುಡುಗಿಯರ ಮಾತಿನಲ್ಲಿ ಕಂಡು ಬರುತ್ತವೆ. ಇಷ್ಟೇ ಖುಷಿ, ಇವರ ಬದುಕಿನಲ್ಲಿರಲಿ, ಹೆಚ್ಚಾದರಾಗಲಿ, ಕಡಿಮೆಯಂತೂ ಆಗದಿರಲಿ ಎಂದು ಪ್ರಾರ್ಥಿಸುವಂತಾಗುತ್ತದೆ.

ಮೆಟ್ರೊ ಮುಂದೆಮುಂದೆ ಹೊರಟಂತೆಲ್ಲ, ನಮ್ಮ ನೆನಪುಗಳ ಯಾನ ಹಿಂದೆಹಿಂದೆ ಜರಗುತ್ತದೆ. ಪ್ರತಿ ಪ್ರಯಾಣವೂ ಎರಡು ವ್ಯತಿರಿಕ್ತ ದಿಕ್ಕುಗಳಲ್ಲಿ ಸಾಗುತ್ತಿರುತ್ತವೆ. ಆದರೆ ಆ ಕ್ಷಣವೊಂದೇ ಸತ್ಯ. ಅದನ್ನು ಬಿಟ್ಟರೆ ಮತ್ತೇನಿಲ್ಲ ಎಂಬಂತೆ ಬದುಕುವ ಜೀವಿಗಳೂ ಇಲ್ಲಿ ಸಹಪಯಣಿಗರು. ಜೋಡಿಗಳು ಸಂಗಾತಿಯ ಹೆಗಲಿಗಾನಿ ನಿಂತಿರ್ತಾರೆ. ಇನ್ನೇನು ಮುಂದಿನ ನಿಲ್ದಾಣದಲ್ಲಿಳಿಯಬೇಕು ಎಂದಾಗಲೇ ಕೈ ಬಿಡಿಸಿಕೊಳ್ಳದಷ್ಟು ಬಿಗಿಯಾಗಿ ಹೆಣೆಯಲಾಗಿರುತ್ತದೆ. ತೀರ ಬದುಕಬೇಕೆಂಬ ಮೋಹ, ಸಾವಿನಂಥ ಅನಿವಾರ್ಯದ ವಿದಾಯದ ರೂಪಕವಿದ್ದಂತೆ. ಅವೆರಡರ ನಡುವೆ ಜೀಕುವ ಪ್ರೀತಿಯಂತೆ.

ಜಗತ್ತಿನ ಪ್ರೀತಿಯನ್ನೆಲ್ಲ ತನ್ನ ಕಂಗಳಲ್ಲಿ ತುಂಬಿಕೊಂಡು, ಈ ಹಿಡಿತದಲ್ಲಿ ನೀ ಸುರಕ್ಷಿತ ಎಂಬ ಭಾವ ಕಟ್ಟುಕೊಡುತ್ತಿದ್ದರೆ, ಈ ಸಾಂಗತ್ಯ ಇಲ್ಲಿ ಕೊನೆಗೊಂಡು ಸುದೀರ್ಘರಾತ್ರಿ ಕಳೆಯಬೇಕಲ್ಲೆ ಎಂಬ ಚಿರವಿರಹಿಯ ಆತಂಕ ತುಂಬಿಕೊಳ್ಳುವ ಯುವತಿ. ಜಗತ್ತಿನೊಳು ಹಗಲುಗಳಾಗುವುದೇ ತಾವು ಭೇಟಿಯಾಗಲು, ರಾತ್ರಿ ಬರುವುದೇ ದೂರ ಮಾಡಲು ಎಂಬಂತೆ ಇಳಿದು ಹೋಗುತ್ತಾರೆ. ಇನ್ನೂ ಕೆಲವರು, ಏನಾದರಾಗಲಿ, ಈಗ ಸಿಗುವ ಹೊತ್ತಿನಲ್ಲಿ ಒಂದಷ್ಟು ಪುಟಗಳನ್ನು ಕಣ್ಣಾಡಿಸುವ ಎಂದು ಓದಲು ಆರಂಭಿಸುತ್ತಾರೆ. ಎರಡೆರಡು ಲೋಕಗಳು ಇಲ್ಲಿ ಮೆಟ್ರೊ ಹಳಿಯಂತೆಯೇ ಸಾಗುತ್ತಿರುತ್ತವೆ. ಒಂದಕ್ಕೆ ಒಂದು ಜೊತೆಯಾಗಿದ್ದರೂ ದೂರದೂರ ಸಾಗುವಂತೆ. ಪ್ರತಿ ಸ್ಟೇಷನ್ ಬಂದಾಗಲೂ ಚೂರು ತಮ್ಮ ಲೋಕದಿಂದಾಚೆ ಬಂದು ನೋಡುತ್ತಾರೆ, ತಾವಿಳಿಯುವ ನಿಲ್ದಾಣ ಬಂದಿತೆ.. ಅಥವಾ ಬಂದು ಹೋಯಿತೆ ಎಂಬ ಆತಂಕ ಮತ್ತು ನಿರೀಕ್ಷೆ ಇರುವ ಆ ಕಂಗಳು ನೋಡುವುದೇ ಒಂದು ಚಂದ.

ಮೆಟ್ರೊ ಹೊರಗಿನ ಸದ್ದಿಲ್ಲದಿದ್ದರೂ ನಮ್ಮೊಳಗಿನ ಸಂತೆಗೆ ತಾವು ಕೊಡುವ ಪಯಣವದು ಎಂದೆನಿಸುವುದೇ ಇಂಥ ಕ್ಷಣಗಳಲ್ಲಿ.



ಸಂಪಿಗೆ ರಸ್ತೆ ಮೆಟ್ರೊ ನಿಲ್ದಾಣದಲ್ಲಿ ಜನಜಂಗುಳಿ ಚಿತ್ರ: ಬಿ.ಕೆ.ಜನಾರ್ದನ



ಕನಸುಗಳ ಬೆನ್ನಟ್ಟಿ..

ಕನಸು ಕಾಣಲು, ಅವುಗಳನ್ನು ಬೆನ್ನಟ್ಟಲು, ನನಸಾಗಿಸಿಕೊಳ್ಳಲು ಮತ್ತು ಕಲಿಯಲು ಯಾವುದಕ್ಕೂ ವಯಸ್ಸು ಅಡ್ಡಿಯಾಗುವುದಿಲ್ಲ ಎಂದು ಹೇಳುತ್ತಲೇ ಟ್ವಿಂಕಲ್ ಖನ್ನಾ ತಮ್ಮ 50ನೇ ವಯಸ್ಸಿನಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ.

ಲಂಡನ್‌ನ 'ಗೋಲ್ಡ್‌ಸ್ಮಿತ್' ವಿಶ್ವವಿದ್ಯಾಲಯದಿಂದ ಸೃಜನಾತ್ಮಕ ಬರವಣಿಗೆಯ ವಿಷಯದಲ್ಲಿ ಸ್ನಾತಕೋತ್ತರ ಪಡೆದಿರುವ ಟ್ವಿಂಕಲ್ ಕಾದಂಬರಿಗಳನ್ನು ಬರೆಯಲು ಸಜ್ಜಾಗಿರುವೆ ಎಂದು ಹೇಳಿದ್ದಾರೆ. ಸದಾ ಬರವಣಿಗೆಯಲ್ಲಿ ತೊಡಗಿಸಿಕೊಂಡಿರುವ ಟ್ವಿಂಕಲ್ ಖನ್ನಾ ಬಗ್ಗೆ ಅವರ ಪತಿ ಅಕ್ಷಯ್ ಕುಮಾರ್ ಸಹ ಮೆಚ್ಚುಗೆಯ ಮಾತಾಡಿದ್ದಾರೆ. ಮನೆಯನ್ನು, ಮಕ್ಕಳನ್ನು ಹಾಗೂ ನನ್ನನ್ನೂ ಸೇರಿದಂತೆ ವ್ಯವಹಾರಗಳನ್ನೂ ಟ್ವಿಂಕಲ್ ಅಚ್ಚುಕಟ್ಟಾಗಿ ನಿರ್ವಹಿಸುತ್ತಾಳೆ. ಅದರ ಜೊತೆಗೆ ತನ್ನ ಕನಸನ್ನು ಗುರಿಯನ್ನು ತಲುಪಲು ತನ್ನ ಸಮಯವನ್ನೂ ನಿಭಾಯಿಸಿದ್ದಾಳೆ. ಇಂಥ ಹೆಮ್ಮೆಯ ಹೆಣ್ಣುಮಗಳು ನನ್ನ ಜೀವನದಲ್ಲಿರುವುದೇ ಹೆಮ್ಮೆ ಎಂದು ಮುಕ್ತಮನಸಿನಿಂದ ಹೊಗಳಿದ್ದಾರೆ.

ಟ್ವಿಂಕಲ್ ತಿಳಿಹಸಿರು ಬಣ್ಣದ ಸೀರೆಯುಟ್ಟು, ಸ್ನಾತಕ ಪದವಿ ಪಡೆದಿರುವ ಗೌನು ಮತ್ತು ಹ್ಯಾಟು ಧರಿಸಿರುವ ಚಿತ್ರವನ್ನು ಟ್ವೀಟ್ ಮಾಡಿದ್ದು, ಮಾಸ್ಟರ್ ರಾಜು ಅವರ ಹೆಂಡ್ತಿಯಾಗಿ ಮಾಸ್ಟರ್ ಟ್ವಿಂಕಲ್ ಎಂದು ಈಗ ನಿರಾತಂಕವಾಗಿ ಕರೆಯಬಹುದಾಗಿದೆ ಎಂದೂ ಹೇಳಿಕೊಂಡಿದ್ದಾರೆ.

ಟ್ವಿಂಕಲ್ ಖನ್ನಾ

ಉದ್ವಿಗ್ನತೆ ಅನುಭವಿಸುತ್ತೆ...

ಹೊಸದಾಗಿ ತಾಯ್ತನದ ಹೊಸ್ತಿಲಲ್ಲಿರುವವರು ಪ್ರಸವಾನಂತರದ ಒತ್ತಡ, ಖಿನ್ನತೆ ಮತ್ತು ಉದ್ವಿಗ್ನತೆಯನ್ನು ಅನುಭವಿಸುತ್ತಾರೆ. ಇದೀಗ ಇಲಿಯಾನಾ ಡಿಕ್ರೂಸ್ ಸಹ ಅಂಥದ್ದೇ ಪ್ರಸವಾನಂತರ ಮಾನಸಿಕ ಒತ್ತಡವನ್ನು ಅನುಭವಿಸುವ ಕುರಿತು ಹೇಳಿಕೊಂಡಿದ್ದಾರೆ.

ತಾಯ್ತನ ಒಂದು ಸುಂದರ ಅನುಭವ ಆಗಿದೆ. ಆದರೆ ಜೊತೆಗೆ ನಿದ್ದೆಗೆಡಬೇಕಾಗುತ್ತದೆ. ಮಾನಸಿಕವಾಗಿ ಒತ್ತಡ ಅನುಭವಿಸುತ್ತಿರುವೆ. ಖಿನ್ನತೆಗೆ ಜಾರುತ್ತಿರುವೆ. ಆಗಾಗ ಕಾರಣವಿಲ್ಲದೇ ಅಳು ಬರುತ್ತದೆ. ಸಿಡಿಮಿಡಿಗೊಳ್ಳುತ್ತೇನೆ. ಯಾವುದರಲ್ಲೂ ಆಸಕ್ತಿ ಉಳಿದಿಲ್ಲ ಎಂದೆಲ್ಲ ಹೇಳಿಕೊಂಡಿದ್ದಾರೆ. ತಮ್ಮ ಸಂಗಾತಿ ಮೈಕೆಲ್ ಡೋಲನ್ ಅವರಿಂದ ಗಂಡು ಮಗುವಿನ ತಾಯಿಯಾಗಿದ್ದಾರೆ. ಇಲಿಯಾನಾ ಅನುಭವಿಸುತ್ತಿರುವ ಮೂಡು ಸ್ವಿಂಗುಗಳ ಕುರಿತು ಮೈಕೆಲ್ ಅವರೇ ಇತ್ತೀಚೆಗೆ ಸಂದರ್ಶನವೊಂದರಲ್ಲಿ ಹೇಳಿದ್ದರು.

ತಾವು ಒಂದು ವರ್ಷದಿಂದಲೂ ತಾಯ್ತನದೊಂದಿಗೆ ಈ ಮಾನಸಿಕ ಸಮಸ್ಯೆಗಳನ್ನೂ ಎದುರಿಸುತ್ತಿರುವುದಾಗಿ ಇಲಿಯಾನಾ ಒಪ್ಪಿಕೊಂಡಿದ್ದಾರೆ. ಪ್ರಸವಪೂರ್ವ ಮತ್ತು ಪ್ರಸವದ ನಂತರ ಮಾನಸಿಕ ಸಮಸ್ಯೆಗಳಿಂದ ಕೆಲವೊಬ್ಬ ಹೆಣ್ಣುಮಕ್ಕಳು ಬಳಲುತ್ತಾರೆ. ಸೂಕ್ತ ಸಮಯದಲ್ಲಿ ಆಪ್ತ ಸಮಾಲೋಚನೆ, ಚಿಕಿತ್ಸೆಯ ಅಗತ್ಯವೂ ಬೀಳಬಹುದು. ತಾಯ್ತನವೆಂಬುದು ಸುಂದರ ಪ್ರಯಾಣವಿದ್ದಂತೆ. ಅದನ್ನು ಸುಖಕರವಾಗಿಸಬೇಕೆಂದರೆ ಸಾಕಷ್ಟು ಕಾಳಜಿ ಮಾಡಿಕೊಳ್ಳಬೇಕು. ಅಗತ್ಯವಿದ್ದಾಗ ಮನೋವೈದ್ಯರನ್ನು, ಸಮಾಲೋಚಕರನ್ನು ಕಾಣಬೇಕು ಎಂದೂ ಇಲಿಯಾನಾ ಹೇಳಿದ್ದಾರೆ.

ಅಮ್ಮನಾಗಿದ್ದು, ಅಪರಾಧಿ ಪ್ರಜ್ಞೆ ಅನುಭವಿಸುವುದು ಅತಿ ಸಹಜವಾಗಿದ್ದರೂ ಅದು ತೀವ್ರತರನಾದ ಬೇಸರ ಹುಟ್ಟಿಸುತ್ತದೆ. ಒಮ್ಮೆ ನನ್ನ ಸಂಗಾತಿಯೊಡನೆ ಇದ್ದಾಗ, ಇನ್ನೊಂದು ರೂಮಿನಲ್ಲಿ ಮಗು ಮಲಗಿತ್ತು. ಆ ಮಗು ಒಂದನ್ನೇ ರೂಮಿನಲ್ಲಿ ಬಿಟ್ಟಿರುವ ಕುರಿತು ಬೇಜಾರಾಗಿದೆ ಮತ್ತು ಈಗಾಗಲೇ ನಾನು ಮಗುವನ್ನು ಮಿಸ್ ಮಾಡಿಕೊಳ್ಳುತ್ತಿದ್ದೆ.. ಈ ವಿಷಯವನ್ನು ಹೇಳಿದರೆ ಲಘುವಾಗಿ ಎಲ್ಲರೂ ನಕ್ಕುಬಿಡಬಹುದು. ಆದರೆ ನನಗೆ ಆ ಕ್ಷಣದಲ್ಲಿ ಅಳು ಬಂದಿತ್ತು. ಮತ್ತು ಮೈಕೆಲ್ ಅದನ್ನು ಕಾಳಜಿ ಮಾಡುತ್ತಲೇ ನಿಭಾಯಿಸಿದರು ಎಂದೂ ತಮ್ಮ ಸಂಗಾತಿಯ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



ಇಲಿಯಾನ

ಬಾಲಿವುಡ್ ಬಿಟ್ಸ್

20 ಕೆ.ಜಿ ತೂಕ ಇಳಿಸಿದ ಸೋನಮ್



ಸೋನಮ್ ಕಪೂರ್

ಬೆಂಗಳೂರು: ಬಾಲಿವುಡ್ ನಟಿ ಸೋನಮ್ ಕಪೂರ್ ಅವರು ಬರೋಬ್ಬರಿ 20 ಕೆ.ಜಿ ತೂಕ ಇಳಿಸಿಕೊಂಡು ಗಮನ ಸೆಳೆದಿದ್ದಾರೆ.

ಈ ಕುರಿತು ಅವರು ತಮ್ಮ ಇನ್‌ಸ್ಟಾಗ್ರಾಂನಲ್ಲಿ ವಿಡಿಯೊ ಹಂಚಿಕೊಂಡಿದ್ದು, "What a wow...20 kgs down...6 more to go" ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

ಇನ್ನೂ 6 ಕೆ.ಜಿ ತೂಕ ಇಳಿಸಿಕೊಳ್ಳುವ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದ್ದಾರೆ.

2018 ರಲ್ಲಿ ಸೋನಮ್ ಕಪೂರ್ ಆನಂದ್ ಅಹುಜಾ ಅವರನ್ನು ಮದುವೆಯಾಗಿದ್ದರು. ಈ ದಂಪತಿಗೆ 2022 ಆಗಸ್ಟ್ 20 ರಂದು ಗಂಡು ಮಗು ಜನಿಸಿತ್ತು.

ಮಗು ಜನನದ ನಂತರ ಸ್ಥೂಲಕಾಯವಾಗಿದ್ದ ಸೋನಂ, ಇದೀಗ ಗಮನಾರ್ಹವಾಗಿ ತೂಕ ಇಳಿಸಿಕೊಂಡಿದ್ದಾರೆ.

'ಇದಕ್ಕಾಗಿ ನಾನು 16 ತಿಂಗಳು ತೆಗೆದುಕೊಂಡೆ. ಯಾವುದೇ ಅನಾಹುತಕಾರಿ ಡಯಟ್ ಮಾಡದೇ, ಹುಚ್ಚು ವ್ಯಾಯಾಮಗಳು ಇಲ್ಲದೇ ಕೇವಲ ಶಿಸ್ತಿನ ಡಯಟ್ ಹಾಗೂ ನಿಗದಿತ ವ್ಯಾಯಾಮ, ಯೋಗದ ಮೂಲಕ ಇದನ್ನು ಸಾಧಿಸಿದೆ. ಈಗ ನಾನು ಮೊದಲಿನಂತೆ ಕಾಣುತ್ತಿದ್ದೇನೆ' ಎಂದು ಕೆಲ ಫೋಟೊಗಳೊಂದಿಗೆ ಸಂತಸ ಹಂಚಿಕೊಂಡಿದ್ದಾರೆ.

2020 ರಲ್ಲಿ 'AK vs AK' ಸಿನಿಮಾದ ನಂತರ ಚಿತ್ರರಂಗದಿಂದ ದೂರವಿದ್ದ ಸೋನಮ್, 2023 ರಲ್ಲಿ ಅವರ 'Blind' ಎಂಬ ಒಂದೇ ಚಿತ್ರ ತೆರೆ ಕಂಡಿತ್ತು. ಸದ್ಯ ಅವರ ಯಾವುದೇ ಚಿತ್ರಗಳು ಘೋಷಣೆಯಾಗಿಲ್ಲ. ತೂಕ ಇಳಿಕೆಯೊಂದಿಗೆ ಅವರು ಮತ್ತೆ ಬಾಲಿವುಡ್‌ನಲ್ಲಿ ಮಿಂಚುವ ಕನಸು ಕಂಡಿದ್ದಾರೆ.

ತಾರೆ ಜಮೀನ್ ಪರ್‌ನ ಇಶಾನ್ ಈಗ ಹೇಗಿದ್ದಾರೆ?

ಬಾಲಿವುಡ್ ಸಿನಿಮಾಗಳಲ್ಲಿ ಇಂದಿಗೂ ಹಲವರ ಮೆಚ್ಚಿನ ಚಿತ್ರ ತಾರೆ ಜಮೀನ್ ಪರ್ (Taare Zameen Par). ಅಮೀರ್ ಖಾನ್ ಹಾಗೂ ಬಾಲ ನಟನಾಗಿ ದರ್ಶೀಲ್ ಸಫಾರಿ (ಇಶಾನ್ ಅವಸ್ಥಿ ಪಾತ್ರದಲ್ಲಿನ ಬಾಲಕ) ಅವರ ನಟನೆ ಸಿನಿ ಪ್ರಿಯರ ಮನ ಗೆದ್ದಿತ್ತು. 2007ರಲ್ಲಿ ಈ ಚಿತ್ರ ಬಿಡುಗಡೆಯಾಗಿತ್ತು.

ಬಾಲನಟನಾಗಿ ನಟಿಸಿದ್ದ ದರ್ಶೀಲ್ ಅವರು ಹಲವು ವರ್ಷಗಳ ಬಳಿಕ ಕ್ಯಾಮೆರಾ ಮುಂದೆ ಕಾಣಿಸಿಕೊಂಡಿದ್ದಾರೆ. ಅಮೀರ್ ಖಾನ್ ಮಗಳು ಇರಾ ಖಾನ್ ಅವರ ಮದುವೆಯ ರಿಸೆಪ್ಶನ್ ಇತ್ತೀಚೆಗೆ ನಡೆದಿದೆ. ಈ ಕಾರ್ಯಕ್ರಮದಲ್ಲಿ ದರ್ಶೀಲ್ ಭಾಗಿಯಾಗಿದ್ದರು.

15 ವರ್ಷದ ಬಳಿಕ ದರ್ಶೀಲ್ ಅವರ ಹ್ಯಾಂಡ್‌ಸಮ್ ಲುಕ್ ನೋಡಿ ನೆಟ್ಟಿಗರು ಬೆರಗಾಗಿದ್ದಾರೆ. ದರ್ಶೀಲ್ ಅವರೊಂದಿಗಿನ ಫೋಟೊವನ್ನು ನಟಿ ಟಿಸ್ಕಾ ಚೋಪ್ರಾ ಅವರು ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಹಂಚಿಕೊಂಡಿದ್ದಾರೆ. ಅಂದ ಹಾಗೆ ಟಿಸ್ಕಾ ಚೋಪ್ರಾ ಅವರು ತಾರೆ ಜಮೀನ್ ಪರ್ ಚಿತ್ರದಲ್ಲಿ ದರ್ಶೀಲ್ ಅವರ ತಾಯಿಯಾಗಿ ನಟಿಸಿದ್ದರು. ದರ್ಶೀಲ್ ಅವರನ್ನು ನೋಡಿ ಹಲವರು, 'ನೆಚ್ಚಿನ ಶಿಕ್ಷಕನ ಮಗಳ ಮದುವೆಗೆ ಶಿಷ್ಯ ಬರದೇ ಇರಲು ಹೇಗೆ ಸಾಧ್ಯ' ಎಂದು ಕಾಮೆಂಟ್ ಮಾಡಿದ್ದಾರೆ.



ಟಿಸ್ಕಾ ಚೋಪ್ರಾ ಜತೆ ದರ್ಶೀಲ್

'ತಂಗಲಾನ್' ಏಪ್ರಿಲ್‌ಗೆ ತೆರೆಗೆ



ತಂಗಲಾನ್ ಚಿತ್ರ

ಪಾ. ರಂಜಿತ್ ನಿರ್ದೇಶಸಿರುವ, ನಟ ವಿಕ್ರಮ್ ಅಭಿನಯನದ ತಂಗಲಾನ್ ಚಿತ್ರ ಇದೇ ಏಪ್ರಿಲ್‌ನಲ್ಲಿ ವಿಶ್ವದಾದ್ಯಂತ ಬಿಡುಗಡೆಯಾಗಲಿದೆ ಎಂದು ಚಿತ್ರತಂಡ ಚೆನ್ನೈನಲ್ಲಿ ತಿಳಿಸಿದೆ. ಈ ಸಂಬಂಧ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ ನಿರ್ಮಾಣ ಸಂಸ್ಥೆ ಸ್ಟುಡಿಯೋ ಗ್ರೀನ್, 'ಇತಿಹಾಸವು ತನ್ನನ್ನು ರಕ್ತ ಹಾಗೂ ಸುವರ್ಣಾಕ್ಷರಗಳಲ್ಲಿ ಬರೆಯಲು ಕಾತುರವಾಗಿದೆ'ಎಂದು ಪೋಸ್ಟ್‌ನಲ್ಲಿ ತಿಳಿಸಿದೆ.

19ನೇ ಶತಮಾನ ಬ್ರಿಟಿಷ್ ಆಳ್ವಿಕೆ ಕಾಲದ ಕಥೆಯಾಗಿದ್ದು, ಕರ್ನಾಟಕದ ಕೋಲಾರದಲ್ಲಿನ ಪೂರ್ವಕುಡಿ ಸಮುದಾಯ ಬಗೆಗಿನ ಚಿತ್ರವಾಗಿದೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ಚಿನ್ನದ ಗಣಿಯಲ್ಲಿ ಕೆಲಸ ಮಾಡುತ್ತಿದ್ದ ತಮಿಳಿನ ಹಿಂದುಳಿದ ಸಮುದಾಯದ ನಾಯಕನಾಗಿ ವಿಕ್ರಮ್ ಕಾಣಿಸಿಕೊಳ್ಳಲಿದ್ದಾರೆ ಎನ್ನಲಾಗಿದೆ. ಪಾರ್ವತಿ, ಮಾಳವಿಕಾ ಮೋಹನ್ ಹಾಗೂ ಹಾಲಿವುಡ್ ನಟ ಡೇನಿಯಲ್ ಕ್ಯಾಲ್ಟಗಿರೋನ್ ನಟಿಸಿದ್ದಾರೆ. ಈ ಚಿತ್ರ ಹಿಂದಿ, ತಮಿಳು, ತೆಲುಗು, ಕನ್ನಡ ಹಾಗೂ ಮಲಯಾಳಂ ಭಾಷೆಗಳಲ್ಲಿ ಬಿಡುಗಡೆಯಾಗಲಿದೆ.

ಜಿ.ವಿ. ಪ್ರಕಾಶ್ ಸಂಗೀತ ಚಿತ್ರಕ್ಕಿದೆ. ಸ್ಟುಡಿಯೋ ಗ್ರೀನ್ ಮತ್ತು ನೀಲಂ ನಿರ್ಮಾಣ ಸಂಸ್ಥೆ ಚಿತ್ರವನ್ನು ನಿರ್ಮಿಸುತ್ತಿದೆ.


'ಹನುಮಾನ್' ₹100 ಕೋಟಿ ಗಳಿಕೆ

ತೆಲುಗು ಚಿತ್ರರಂಗದಲ್ಲಿ ಇತ್ತೀಚೆಗೆ ಸಖತ್ ಸುದ್ದಿ ಮಾಡುತ್ತಿರುವ ಚಿತ್ರ ಹನುಮ್ಯಾನ್ (HanuMan). ತೇಜ್ ಸಜ್ಜಾ ನಟನೆಯ ಈ ಸಿನಿಮಾ ಜ.12 ಬಿಡುಗಡೆಯಾಗಿದ್ದು, ಬಾಕ್ಸಾಫೀಸಿನಲ್ಲಿ ಸದ್ದು ಮಾಡುತ್ತಿದೆ.

ಈ ಚಿತ್ರದ ಕಥೆ ಅಂಜನಾದ್ರಿ ಎನ್ನುವ ಪುಟ್ಟ ಹಳ್ಳಿಯಲ್ಲಿ ಸಾಗುತ್ತದೆ. ಹನುಮಂತನ ರಕ್ತದ ಹನಿಯೊಂದು ಮಣಿಯಾಗಿ ಪರಿವರ್ತನೆಗೊಂಡು ಸಮುದ್ರದ ಆಳದಲ್ಲಿ ಭದ್ರವಾಗಿರುತ್ತದೆ. ಅದು ನಾಯಕನಿಗೆ ಸಿಕ್ಕಾಗ, ಆತನಲ್ಲಿ ಏನೆಲ್ಲಾ ಬದಲಾವಣೆಗಳಾಗುತ್ತವೆ, ಸೂಪರ್‌ಮ್ಯಾನ್ ಆಗಬೇಕೆಂದು ಆ ಮಣಿಯನ್ನು ಕದಿಯಲು ಬಂದ ಖಳನಾಯಕನಿಂದ ಸ್ವಂತ ಊರು ಮತ್ತು ಮಣಿಯನ್ನು ನಾಯಕ ಹೇಗೆ ರಕ್ಷಿಸುತ್ತಾನೆ ಎನ್ನುವುದು ಕಥೆಯ ಸಣ್ಣ ಸಾರ.

ಕಾಡಿನ ಮಧ್ಯೆ ಇರುವ ಅಂಜನಾದ್ರಿ ಊರು ಹಾಗೂ ಹನುಮಂತನ ಬೃಹತ್ ಮೂರ್ತಿಯ ಗ್ರಾಫಿಕ್ಸ್ ನೋಡುಗರನ್ನು ಸೆಳೆಯುತ್ತಿದೆ.

ಪ್ರಶಾಂತ್ ವರ್ಮಾ ನಿರ್ದೇಶನದಲ್ಲಿ ಮೂಡಿಬಂದ ಈ ಚಿತ್ರ ಸಿನಿಪ್ರಿಯರ ಮನಗೆಲ್ಲುವಲ್ಲಿ ಯಶಸ್ವಿಯಾಗಿದೆ. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿರುವ ಪ್ರೊಡಕ್ಷನ್ ಹೌಸ್ ಪ್ರೈಮ್ ಶೋ ಎಂಟರ್‌ಟೈನ್ಮೆಂಟ್, 'ಸಣ್ಣ ಚಿತ್ರ - ಪ್ರೇಕ್ಷಕರಿಂದ ದೊಡ್ಡ ನ್ಯಾಯ. ಗಲ್ಲಾಪೆಟ್ಟಿಗೆಯಲ್ಲಿ ಹನುಮಾನ್‌ನ ಘರ್ಜನೆ ಪ್ರತಿಧ್ವನಿಸಿದೆ. ಸೀಮಿತ ಥಿಯೇಟರ್‌ಗಳಲ್ಲಿ ಪ್ರದರ್ಶನ ಮತ್ತು ಕನಿಷ್ಠ ಟಿಕೆಟ್ ದರಗಳೊಂದಿಗೆ ಕೇವಲ 4 ದಿನಗಳಲ್ಲಿ ವಿಶ್ವದಾದ್ಯಂತ ₹100 ಕೋಟಿ ಗಳಿಕೆ ಕಂಡಿದ್ದು, ಖುಷಿ ತಂದಿದೆ ಎಂದೂ ಅವರು ಹೇಳಿದ್ದಾರೆ.



ಹನುಮಾನ್ ಚಿತ್ರ ಪೋಸ್ಟರ್

ಫ್ಯಾಷನ್

ಆರಾಮದಾಯಕ ಈ ಕಫ್ತಾನು



ಉದ್ದಾನುದ್ದ ನಿಲುವಂಗಿ, ಎರಡೂ ಕಸೆ ಚಿಟ್ಟೆಯ ರೆಕ್ಕೆಗಳಂತೆ ಬಿಟ್ಟಿರುವ ವಸ್ತ್ರ. ಮಡಕೆ ಮಾಡಲು ಬಲು ಸುಲಭ. ಆಯತಾಕಾರದಲ್ಲಿರುವುದನ್ನು ನಾಲ್ಕುಮೂಲೆಗಳನ್ನು ಹಿಡಿದು ಮಡಿಚಿದರೆ ಕರವಸ್ತ್ರದಂತೆಯೇ ಒಪ್ಪಾಗಿ ಇಡಬಹುದು.

ಮೂಲತಃ ರೇಷ್ಮೆಯಲ್ಲಿ ಸಿದ್ಧಪಡಿಸುವ ಈ ಕಫ್ತಾನ್ ಇರಾನ್ ಮೂಲದ್ದು. ದೇಹವನ್ನಿಡೀ ಮುಚ್ಚಿಡುತ್ತದೆ. ತೋಳುಗಳಿಗೆ ಸಾಕಷ್ಟು ಸ್ವಾತಂತ್ರ್ಯ ನೀಡುತ್ತದೆ. ಮೈಕಟ್ಟು ಗೊತ್ತಾಗುವುದಿಲ್ಲ ಎಂಬ ಕಾರಣದಿಂದಲೇ ಜನಪ್ರಿಯವಾಗಿದ್ದು. ಹೆಚ್ಚು ಆಕರ್ಷಣೆಗಳಿಸಿದ್ದು, ಪರ್ಷಿಯಾದ ವಿನ್ಯಾಸಗಳಿರುವುದರಿಂದ ಮತ್ತು ಉಡಲೂ ಹಿತವಾಗಿರುವುದರಿಂದ. ಪ್ರಯಾಣದಲ್ಲಿ ಹೆಚ್ಚು ಜಾಗ ತೆಗೆದುಕೊಳ್ಳದೇ ಇರುವುದರಿಂದ. ಒಟೊಮನ್ ಸಾಮ್ರಾಜ್ಯದ ಅವಧಿಯಲ್ಲಿ ರಾಜತಾಂತ್ರಿಕರಿಗೆ ಈ ಉಡುಗೆಯನ್ನು ನೀಡಲಾಗುತ್ತಿತ್ತು. ಪರ್ಷಿಯಾ, ಇರಾನ್ ನಿಂದ ಈ ಉಡುಗೆ ಮೊರೊಕ್ಕೊ ದೇಶಕ್ಕೆ ಪಯಣ ಬೆಳೆಸಿತು. ಅಲ್ಲಿಂದ ಜನಪ್ರಿಯತೆಯ ಉತ್ತುಂಗಕ್ಕೆ ಏರಿತು. ಮಹಿಳೆಯರು ಪುರುಷರು ಇಬ್ಬರೂ ಧರಿಸಬಹುದಾದ ವಿನ್ಯಾಸವಿದು. ಸೊಂಟಪಟ್ಟಿಯಲ್ಲೊಂದು ಕಸಿ ಇರುವುದರಿಂದ ಉಟ್ಟವರ ನಿಲುವು ಆಕರ್ಷಕವಾಗಿ ಕಾಣುತ್ತದೆ. ದೊಡ್ಡ ಹೂಗಳಿರುವ, ಬಿಳಿಯ ಹಿನ್ನೆಲೆಯಲ್ಲಿರುವ ಕಫ್ತಾನುಗಳಿಗೆ ಈಗಲೂ ಹೆಚ್ಚಿನ ಬೇಡಿಕೆ ಇರುತ್ತದೆ.

ಭಾರತದಲ್ಲಿ ಕಫ್ತಾನಿನ ಫ್ಯಾಷನ್ನು ಬೀಚುವೇರುಗಳಿಗೂ, ನೈಟ್ ವೇರುಗಳಿಗೂ ಸೀಮಿತವಾಗಿದ್ದ ಕಾಲವೊಂದಿತ್ತು. ಆದರೀಗ ಮತ್ತೆ ಟ್ರೆಂಡ್ ಬದಲಾಗಿದೆ. ಟ್ಯುನಿಕ್‌ಗಳೊಂದಿಗೆ ಕಫ್ತಾನುಗಳು ಸ್ಪರ್ಧೆಗೆ ಇಳಿಯುವಷ್ಟು ಯುವಜನರ ಮೆಚ್ಚುಗೆ ಗಳಿಸಿವೆ. ತಿಳಿವರ್ಣದ ಬದಲಿಗೆ ಇದೀಗ ಎಲ್ಲ ಗಾಢ ವರ್ಣಗಳಲ್ಲಿಯೂ, ತಿಳಿ ಬಣ್ಣಗಳಲ್ಲಿಯೂ ಕಫ್ತಾನುಗಳು ಸಿದ್ಧವಾಗುತ್ತಿವೆ. ಈಗಲೂ ರೇಷ್ಮೆ ವಸ್ತ್ರದ ಕಫ್ತಾನುಗಳಿಗೆ ಹೆಚ್ಚಿನ ಬೇಡಿಕೆ ಇದೆ. ಸ್ಪನ್ ವಸ್ತ್ರಗಳಲ್ಲಿಯೂ ಸಿದ್ಧಪಡಿಸಿರುವ ಕಫ್ತಾನುಗಳೂ ಲಭ್ಯ ಇವೆ. ಭಾರತದಲ್ಲಿ ಕಾಶ್ಮೀರಿ ಕಫ್ತಾನುಗಳು ಹೆಚ್ಚು ಜನಪ್ರಿಯವಾಗಿದೆ. ಸಣ್ಣ, ಮೊಣಕಾಲುದ್ದದ ಮತ್ತು ಪಾದ ಸ್ಪರ್ಶಿಸುವ ಉದ್ದದ ಕಫ್ತಾನುಗಳು ದೊರೆಯುತ್ತವೆ. ಕಫ್ತಾನಿನ ದಂಡೆಗಳಿಗೆ, ಕೊರಳಿನ ಸುತ್ತ ಹೂಬಳ್ಳಿಗಳ ಕಸೂತಿ ಹಾಕುವುದರಿಂದ ಅವು ಇನ್ನೂ ಹೆಚ್ಚು ಜನಪ್ರಿಯವಾಗಿವೆ. ಕಪ್ಪು, ಕೆಂಪು ಹಾಗೂ ಗಾಢ ನೀಲಿ ಮತ್ತು ದಟ್ಟವಾದ ಹಸಿರು ಬಣ್ಣದ ಕಫ್ತಾನುಗಳು ಗಾಢ ಬಣ್ಣದಲ್ಲಿ ಥಾಳಾಗಿ ಕಾಣಿಸುತ್ತವೆ. ತಿಳಿ ಬಣ್ಣದಲ್ಲಿ ಬಿಳಿ ಬಣ್ಣದ ಹಿನ್ನೆಲೆಯೇ ಹೆಚ್ಚಾಗಿರುತ್ತದೆ. ಹುಡುಗಿಯರಿಗಾಗಿ ನಿಂಬೆ ಹಳದಿ, ನಿಂಬೆ ಹಸಿರು, ಮಾವಿನ ಹಳದಿ, ತಿಳಿನೀಲಿ, ತಿಳಿಗುಲಾಬಿ, ಕಡುಗುಲಾಬಿ ಬಣ್ಣಗಳಲ್ಲಿಯೂ ಲಭ್ಯ ಇರುತ್ತವೆ. ಏಷ್ಯಾ ಮೂಲದ ವಿನ್ಯಾಸ ಇರುವ ಕಫ್ತಾನು, ರಾಜ ಉಡುಗೆ ಎಂಬ ಪಟ್ಟವನ್ನೂ ಪಡೆದಿದೆ.



ಪೊಂಚೊ

ಈ ಸಮಯ ಪೋಂಚೊಮಯ

ಚಳಿಗಾಲ ಬಂದಾಗ ಮೈಮೇಲೊಂದು ಚೌಕಾಕಾರದ ದಟ್ಟಿ ಹಾಕಿಕೊಳ್ಳುವ ಟ್ರೆಂಡ್ ಶುರುವಾಗಿದೆ. ಆದರೆ ಈ ವಸ್ತ್ರಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಚೌಕಾಕಾರದ ವಸ್ತ್ರಕ್ಕೆ ತಲೆಹಾಕಲು ನಡುವೆ ಕೊರೆದಿರಲಾಗುತ್ತದೆ. ಕೊರಳು ತೂರಿಸಿದರೆ ಸಾಕು. ಈ ವಸ್ತ್ರ ನಿಮ್ಮನ್ನು ಆವರಿಸಿಕೊಳ್ಳುತ್ತದೆ. ಎದೆಬಿಸಿಯಿಡಲು ಮತ್ತು ಸಾಮಾಜಿಕ ಅಂತಸ್ತು ಪ್ರದರ್ಶಿಸಲೂ ಈ ವಸ್ತ್ರವನ್ನು ಧರಿಸುತ್ತಿದ್ದರಂತೆ.

ಇದರ ಹೆಸರೇ ಪೊಂಚೊ. ಭಾರತೀಯ ವಸ್ತ್ರವೈವಿಧ್ಯಮಯ ಪರಂಪರೆಯಲ್ಲಿಯೂ ಪೊಂಚೊಗೆ ವಿಶೇಷ ಸ್ಥಾನವಿದೆ. ನಮ್ಮ ಈಶಾನ್ಯ ಸುಂದರಿಯರ ರಾಜ್ಯದಲ್ಲಿ, ಚಳಿ ಹೆಚ್ಚಿರುವ ಹಿಮಾಚಲ ಪ್ರದೇಶದಲ್ಲಿಯೂ ಪೊಂಚೊ ಸಾಮಾನ್ಯ ಉಡುಗೆಯಾಗಿದೆ.ಪೆರು ಮೂಲದ ಈ ಉಡುಗೆ ಇದೀಗ ಹೆಚ್ಚು ಪ್ರವರ್ಧಮಾನಕ್ಕೆ ಬರಲು ಕಾರಣ, ಇದನ್ನು ಧರಿಸುವುದೂ ಸುಲಭ. ಮತ್ತೆ ಬಿಚ್ಚಿ, ಮಡಚಿಟ್ಟುಕೊಳ್ಳುವುದೂ ಸುಲಭ ಎಂಬ ಕಾರಣಕ್ಕೆ.

ಈ ಪೊಂಚೊ ಧರಿಸಿದಾಗ, ನಿಮ್ಮ ಮೂಲ ಉಡುಗೆಯ ತೋಳು, ಕೊರಳುಗಳನ್ನು ಏರಿಸಬೇಕಾಗಿಲ್ಲ. ಮುದುರಬೇಕಾಗಿಲ್ಲ. ಕತ್ತಿನಿಂದ ಇಳಿಬಿಟ್ಟರೆ ಸಾಕು. ಪಾರಂಪರಿಕವಾಗಿ ಈ ಉಡುಗೆಯ ಕೊನೆಗೆ ಬರುವ ಗೊಂಡೆಗಳಿಂದ ಸಾಮಾಜಿಕ ಅಂತಸ್ತನ್ನು ಅಳೆಯಲಾಗುತ್ತಿತ್ತು ಎಂದು ಹೇಳಲಾಗುತ್ತದೆ. ಕೊನೆಗೆ ಬರುವ ಗೊಂಡೆಗಳಿಗೆ, ಚಿನ್ನದ ಜುಮಕಿ, ಮುತ್ತಿನಲಂಕಾರ, ಆನದಂತದ ಅಲಂಕಾರವನ್ನು ಹೆಣೆಯಲಾಗುತ್ತಿತ್ತು.

ಕೈಮಗ್ಗದಲ್ಲಿಯೂ ಇವನ್ನು ಹೆಣೆಯಲಾಗುತ್ತಿತ್ತು. ಉಲನ್‌ನಲ್ಲಿಯೂ ಹೆಣೆದು ಧರಿಸಲಾಗುತ್ತದೆ. ಕಾಶ್ಮೀರಿನಲ್ಲಿ ಈಗಲೂ ಚೌಕಾಕಾರದ ಬಟ್ಟೆಗೆ ಅಂದದ ಪೊಂಚೋ ಸಿದ್ಧಗೊಳ್ಳೂತ್ತದೆ.

ಪ್ರಜಾವಾಣಿ ಶನಿವಾರ • ಜನವರಿ 27, 2024

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

REAL ESTATE SELLING

Sites

Anjananagar

SALE BDA Anjanapura 5th Block 30x40 south Facing 80 lakh also 20x30 East facing 2nd Block 55 lakh 9620041313/ 9945373839

Banashankari

BANASHANKARI 6TH STAGE-ANJANAPURA BDA-Available/ Wanted 20x30 30x40 40x60, 50x80 Sites BRINDAVAN ASSOCIATES-9980863245

AUCTION SITE, SALE Banashankari 6th Stage 10th Block N/E Corner 1034 sqft 10500/-`Owner Meeting: 9880611211.

BANASHANKARI 6TH Stage, 7th Block 30x43, East Facing,10000/- Negotiable Owner Meeting Contact: 6366599555.

Ramanagar

RESIDENTIAL CONVERTED and Approved Site For Sale Near Ramanagar 10000Sqft Developed Area 1650/- P.Sqft. Owner- 9900115519

Hennur

BRAND NEW G.F 1 BHK, 1st, 2nd floor 2 BHK Each Semi-Furnished house with Borewell and 2 Carparks on 700 Sft site 2100 Built-up off Narayanapura road Anjanappa layout :9845184220

Jakkur

MCECHS LAYOUT Brand New Triplex Architect Designed 4 BHK ON 30 Feet Road Semi-Furnished with Fittings and Fixtures on 600 Sft Site 1900 Built-up: 9845184220

MCECHS LAYOUT Excellent Location, 700 Sft Site on 30 Feet Road for Sale. Call: 9845184220

Jayanagar

AVAILABLE PRIME Property for sale 2400 sqft near Madhavan Park, South Facing immediate Possession Brokers Excuse Contact - 7760110114

Nagarabhavi

FOR SALE

Residential vacant Site bearing No.56, developed by BDA situated at 1st Block, NAGARABHAVI 2nd Stage, measuring East to west: 60 feet, North to South : 40 feet. In all measuring 2,400 sq.ft. West facing Road, Road width is 60 ft. Interested parties can contact : **98451 83505**

Kanakapura Road

NARAYANA NAGAR 1ST Block 30x40 E/F, 35x60 S/F 60ft Road Near Doddakalsandra Metro Station: 9964627255

Kempegowda Layout

KEMPEGOWDA LAYOUT, BDA SITE FOR SALE 20X30, 30X40, 40X60, 50X80 CONTACT KUMAR: 9945119449

Rajarajeshwari Nagar

SITE FOR SALE @ 9000/- GATTIGERE SUDARSHAN LAYOUT RAJA RAJESHWARI NAGAR CALL: 9900036544/ 9740252729

Sanjaynagar

"GANGANAGAR 3850.SQFT-SITE corner suits to-build Flats or for semi Commercial use 6.25crore, Sanjaynagar RMV 2nd-Stage Commercial 7.68crore. "Sri.Ganesh Estates" 9845286505"

Vishweshwariah Layout

NADAPARBU KEMPEGOWDA Layout 1st-Block K-Sector 30×40 SF 6250/- SMV Layout 20×30 WF 1st Block: 9880440582

SMVLAYOUT BDA 5th Block 30x40 EF Near KLE LAW College Good Location Immediate Construction: 6360050356

VISVESWARAIAH LAYOUT BDA 3rd Block 40x60 on 40ft Road AND 6th Block 30x40 (East): 9964971895

AVAILABLE 20X30 BDA Site Vishveshwariah Layout 2nd Block, Builder Location 45 Lacks Contact Buyers: 9844603127

Chikkaballapura

JP DEVELOPERS Offers Fully Developed E Khata Plots for Sale, ready for construction. CUDA Approved off DC Office Road, Chickballapur. (M): 9845522622.

Yelahanka

DC CONVERSATION SITES AVAILABLE COMMERCIAL AND RESIDENTIAL READY TO CONSTRUCT CONTACT: 6366232222/ 6366242222

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331



REAL ESTATE SELLING

Sites

Vishweshwariah Layout

AVAILABLE BDA Site 30X40 West Face 6th Block Vishveshwariah Layout 7500/-Psft Contact Buyers: 9844603127

VISHVESHWARAIAH LAYOUT 4th Block South 30X40 No. 1319 Rate 5500/- Call: 9448045601/ 9535811626

Hassan

SALE 40X60, Corner Site 39, Arsikere, Subhashnagar (Shivananda Colony) Near Government General Hospital. 9739443843/ 9845359578

Flat

Shivajinagar

FLATS FOR Sale, Infantry Road, 2 & 3 BHK, 2000/ 2600 Sft, 3.5Cr/ 4.5Cr. 9686113614/ 9980565991.

Basavanagudi

SALE BASAVANAGUDI PRIME LOCATION 3 BHK DUPLEX FLAT FOR VEGETARIAN OR NON VEGETARIAN CALL: 9886019240

Jayanagar

JAYANAGAR 4TH T" Block 3BHK Flat 1780Sft,North / Banashankari 3rd Stage,30x40,S/E,Corner Site For Sale:9148736555

Rajajinagar

PURVA BLUEBELLE Adjacent to Magadi Road Metro Station (Purple lane) Rajajinagar 3 Bedroom Jodi units 5 Bedroom + Servant room with all Luxurious Amenities. Direct metro from here to ITPL (Whitefield)/ KR Puram/ Byyappanahalli. Very good Convenience those who are working above Areas. Only Few units left for Sale. Contact: Owner 9844027560

DNR HIGHLINE @ Okalipuram near LULU Mall Rajajinagar 3 & 4 BHK FLATS with 7 Star Luxurious Amenities. Only Few Flats available for Sale. for details Contact: Owner 9844027560.

Uttarahalli

3/4 BHK New Luxurious Flats Sale, Italian Vitrified, Cauvery, Security, Car Parking, Near Vasanthaswamy Temple.70L/90L. 6360501159 9844394444

POORNAPRAGNA LAYOUT Sale 3 BHK Deluxe Flats 2250sft 2`Carpark & 1850sft 1`Carpark. Lift`& Generator Back-up, All Amenities. 9620249988.

House

Banashankari

SALE 20X30,30X40 Thriplex & Rented House's BSK 6th Stage Anjanapura Fully furnished Granite Flooring With Lift Call:8722777999 9449812176.

Bannerghatta Road

VIJAYABANK LAYOUT, 2100 sft. Northwest 40 feet Road 16K. 40x60/ 30x40 Sites/ Houses. 'VASAVI' 98453-76147

Cambridge Layout

ARCHITECT DESIGNED, West facing, semi furnished, well maintained independent double storied house with all amenities for SALE near Jogupalaya Community Hall, Halasuru. 1600 sq feet, 3 BHK + study. Price 3.75 crore negotiable. Contact owner: 9980148941. Brokers excuse. Genuine buyers only.

Nagarabhavi

NAGARABAVI 12TH Block Good Location 30X40 South 2 Bedroom Ground Floor Sale 13500/- 9448045601/ 9535811626

Rajarajeshwari Nagar

"RR.NAGAR_BEML" near RNS College Dwarkanagar 20X30 BBMP Approved 4BHK Furnished Dream House sale.₹1.52cr, negotiable. Contact:9448331100

Agricultural Land

Out-Station

YEDIYUR HOBLI Kunigal Taluk Thattekere Grama 35 Gunta Sale Borewell, 45 Coconut Trees, Full Drip Water Total Land Fencing Rate 55,00,000/- Lakhs 3km From Highway Road Owner: 9844603127

Commercial Land

Vidyaranyapura

"COMMERCIAL SITE very-busy Road_51x81 Facing-North Near Vidhyaranyapura Bus_Stand, 12500/-P.Sqft negotiable."AVM REAL ESTATE" 9945783334/ 9513666788"

Commerical

Basavanagudi

EAT-STREET PRIME location, Semi Commercial Corner 462sqft Sale. Rental Income 98,000/- 1.75cr negotiable. owner: 9448357757.

Kempegowda Layout

COMMERCIAL SITE-FOR-**SALE,** KEMPEGOWDA LAYOUT 8TH BLOCK,SIZE:163X100, WEST FACE, BDA, NOC, NNA, CONVERSIONLAND, LEGAL DOCUMENTS,PRICE:4500/-SQ.FT.,PH:9448793428

Industrial & Factory

Tumkur

2.25 ACRE INDUSTRIAL LAND SALE, NH-48 Service Road, Antharasanahalli 1st Phase Industrial Area Government Value.19.00Cr, Negotiable. Owner: 9448311478.

Magadi Road

INDUSTRY FOR SALE, Machohalli Industrial Area, Magadi Main Road, Bangalore. Fabrication Industrial 7000 sqft. East Face. Contact: 9880328845



Farm House/ Land/ Resorts

Multiple Locations

NANDI HILLS rd 1/2 acre converted eKhata 15 furnished AC rooms rental income 7 Lacs Rs.9Cr (non-nego) Ph:7019346409

Magadi Road

MINI RESORT/ Farmhouse Sale 27000sqft developed, 5km from Tavarekere towards Magadi, near thippagondanahalli lake. 2.25cr negotiable. Call: 9448357757.

Commercial Building

Malleshwaram

FULLY FURNISHED 16,000Sft.A/C Showroom For Rent/Sale On Prime Busy Commercial Area,8th Cross, Malleshwaram. Contact: 9663001940/ 9845358544

RENTAL PROPERTIES

Accommodation Available

House

RENT: HANUMANTHNAGAR 2BHK- DH GF, with amenities, Corporation Water. Ready occupation. Contact: Owner: 78925-30410/ 94488-09902

Flats

AVAILABLE 3BHK Apartment Flat with Parking, Mysore Road For LEASE RUPEES TWENTY TWO LAKHS: 9738223432

Commercial

12000 SQFT +Terrace, Commercial space available for Rent/ Lease. Opp MEI Yeshwanthpur Industrial Area. Call: 9886881218.

Accommodation Wanted

Flat

REQUIRE 3BR Flat or House in Jayanagar 4th, 4th 'T', 5th Block for RENT/ LEASE. Contact: 'NAGARAJU'- 9880202470/ 8884327849

REAL ESTATE BUYING

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha, JP.Nagar 8 & 9 phase immediate settlement, genuine Sellers Contact: 9902038118, 9449060605

Banashankari

BDA SITE'S Wanted Arkavathy, Anjanapura Banashankari 6th Stage Vishweshwaraiah Kempegowda Any BDA Layout. Contact: 9845062822, 8660751654

WANTED BANASHANKARI 6th Stage Anjanapura JP Nagar, Kanakapura Road Any Measurement Immediate Settlement: 9964627255

Multiple Locations

WANTED BDA SITES Anjanapura- Arkavathi Banashankari 6th Stage, Vishweswaraiah, Kempegowda, Dr.Shivaramkaranth Layout. Contact: SAPTHAGIRI, 9900268073 9448068073

Nagarabhavi

WANTED SITE 20x30, 30x40, 40x60, 50x80, Nagarabhavi, Rajajinagar Housing Co-operative Society, Vishweswaraiah, ITI, MPM. 8105688602.

Vishweshwariah Layout

BUYING/ SELLING 20x30,30x40,40x60 50x80 BDA sites at Vishveshwaraiah Layout, BSK 6th-stage. Contact: 9844533371, 9341733480

URGENTLY REQUIRED BDA 30x40 Site or 60x40 Site in Vishweshwaraiah Layout (any block). Brokers Excuse. Contact: 9448018447.

General

General

WANTED LAND Residential/ Commercial Yelahanka, international airport, Devanahalli IVC Road, Nandihills surrounding, chikaballapura, 1acre to 50acres, Immediate settlement. 9380586105.

South

WANTED RESIDENTIAL Commercial Sites PG-Buildings/Warehouse 5 to 20Cr. With Rental Income. In South Bangalore. All Measurement- 9900399006

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd. Bengaluru



BUILDERS ESSENTIAL

Building Contractors

WE CONSTRUCT your house @ 1600/ sqft. timely completion, good quality material. Contact: 9481183707

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

JOB OPPORTUNITIES

Multiple Vacancy

ಮೆ. ವಿಸ್ಡಂ ಸೆಕ್ಯೂರಿಟಿ ಸರ್ವೀಸಸ್

ನಂ. 106, 1ನೇ ಮಹಡಿ, 40 ಅಡಿ ರಸ್ತೆ, ಮಂಜುನಾಥನಗರ, ವೆಸ್ಟ್ ಆಫ್ ಕಾರ್ಡ್ ರಸ್ತೆ, ಬೆಂಗಳೂರು–560010.

ಹೊರಗುತ್ತಿಗೆ ಆಧಾರದ ಮೇಲೆ ಅರ್ಜಿ ಆಹ್ವಾನ

ಸಂಜೀವಿನಿ–ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಯಡಿಯಲ್ಲಿ ಖಾಲಿಯಿರುವ ಈ ಕೆಳಕಂಡ ಹುದ್ದೆಗಳಿಗೆ ಹೊರ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು M/s. Wisdom Security Services ಸಂಸ್ಥೆಯಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ:

State Programme Manager – (IT & Biometrics), State Programme Manager - (Finance & Proposal Examination), State Programme Manager (Pedagogy & Learning Management), State Programme Manager - (PIA Co-ordination and Development), SPM (Inspection, Quality Assurance & Branding), State Programme Manager (Co-ordination), DDU-GKY-Thematic Staff, MIS Expert /MIS Co-Ordinator, Multi Tasking Officer, HR & Admin Assistant, Data Entry Operator, Project Executive (Farm Livelihood), Project Executive (Finance), Project Executive (Human Resource), Value Addition-Processing and Agri Marketing Expert, Law and Accounts Expert, IT/MIS expert, FPO Co-ordinator.

ಮೇಲಿನ ಹುದ್ದೆಗಳಿಗೆ ಆಸಕ್ತಿಯಿರುವ ಅರ್ಹ ಅಭ್ಯರ್ಥಿಗಳು ದಿನಾಂಕ 04.02.2024 ರಂದು ಸಂಜೆ 5.00 ಘಂಟೆಯೊಳಗೆ ಸಂಸ್ಥೆಯ Google Link : https://jobs.wisdomsecurity.in ಮೂಲಕ ಎಲ್ಲಾ ವಿವರಗಳೊಂದಿಗೆ ವಿದ್ಯಾರ್ಹತೆ ಪ್ರಮಾಣ ಪತ್ರ, ಅನುಭವ ಪ್ರಮಾಣ, ಕಲ್ಯಾಣ ಕರ್ನಾಟಕ, ವರ್ಗ ಇತ್ಯಾದಿ ದಾಖಲೆಗಳೊಂದಿಗೆ ಸಲ್ಲಿಸಲು ತಿಳಿಸಿದೆ. ಅಪೂರ್ಣ ಮಾಹಿತಿ ಸಲ್ಲಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ Ph. : 9945230204, 9945230206, 9945230210 ರ ಮೂಲಕ ಸಂಪರ್ಕಿಸಲು ತಿಳಿಸಿದೆ.

WANTED EXPERIENCED 1)Advocate with strong knowledge in civil conveyance with legal Opinion,Minimum 3years of Experience 2)Sales Executives Fresher/Experience Candidates Equinox Global Shelters Office @ Jakkur, Attractive salary 8217482988, egsadm159@gmail.com

General

REQUIRED B.COM/ M.Com Graduates for Auditors office at Jayanagar. Preferable 1-2 years' experience. Contact: 8050131627

BUSINESS

Business to Business

Business

BEST-INVESTMENT FOR Returns`Invest 5`to`50Lacs For`Petrol Bank`and Restaurant, 1.33%`to`1.5% Per Month With TDS 100% Genuine Along With PDC Call:9845558882

Business Offers

Finance

NRI'S INVESTMENTS and Finance through Banking Available On-low interest against Properties,Land&Buildi ng,Sites,Flat also take over Loans NPA cases from Any Banks:7204995189

OTHERS

Medical

NEW MODERN NABH Ready 50 Bed Hospital South Bangalore for Longterm Rental Partnership WhatsApp: 00447868727506

PERSONAL

Change of Name

I, VENKATARAMU C.R S/o.Late Ramanna R/a Chamanahalli Grama,Kasaba Hobli Maddur Taluk,Mandya District. Declare`that VENKATARAMU C.R and BABU C.R both names are refer to one and`the same person i.e.myself only. Vide`affidavit dated:25.1.2024 before`Notary S.T. Thippeswamy Bengaluru

MY NAME before marriage was FARZANA D/o.AHMAD ABASEER GULBARGA After`my marriage I have changed`my name FARZANA to SHARIKA W/o NOORAHAMAD DONUR as per`Court Decree in O.S.No.47/2021. I may be called as SHARIKA W/o NOORAHAMAD DONUR

I, MRS. Amulya.S, W/o Chethan Kumar.B aged 32 years, R/o Block-C-102 Cauvery Serenity 10/1-1 Raghavendra Extension Tumkur Road Yeshwanthpur, Bengaluru- 560022, have changed my name from Amulya to Amulya.S vide Affidavit dated 20.01.2024 sworn before Notary Manohar Jeerige, Bengaluru.

SANDEEPA M. #92, Gopasandra Muthanallur, Bengaluru-99, have changed my name to SANDEEP M vide affidavit dated- 23/01/24



email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

|| ವಿಶ್ವ ವಿದ್ಯಾಪೀಠ ||

celebrates

26 January Republic Day

प्रजातन्त्रम्

ನನ್ನ ಸಮಾಜ ನನ್ನ ಜವಾಬ್ದಾರಿ

HIGHLIGHTS OF THE PROGRAM

"Nanna Samaaja, Nanna Jawaabdaari!" is a program by Vishwa Vidyapeeth. Students are on wheels creating awareness among public in a powerful way to engage with the community and promote social awareness. The earlier show on 13th January 2024 at Dr. Ambedkar Udhyanavana Amphitheatre was a witness to cultural renaissance wherein the audience were spell-bound by the performance of little champs. The event had transcended norms, seamlessly blending 'nukkad natak,' 'hari katha,' and musical drama into an immersive, continuous narrative. Departing from conventional performances, it had crafted a captivating flow, engaging audiences with relatable street plays addressing societal issues, enriching tales via 'hari katha,' and weaving a musical tapestry that united diverse acts. Vishwa Vidyapeeth is contributing to the development of socially responsible and empathetic individuals.

We invite parents and children to be a part of Prajathantram and watch these tales being narrated once again for our next show at Yelahanka and Varthur, Bangalore.

YELAHANKA
4:00 p.m.
to
5:00 p.m.
Dr. Ambedkar Amphitheatre

VARTHUR
3:00 p.m.
to
4:00 p.m.
Forum Mall Whitefield



ADMISSION OPEN FOR ACADEMIC YEAR 2024-25

FOR MORE DETAILS CONTACT US ON

Yelahanka - 7022009731 / 54
Varthur - 7022009757

WEBSITE